ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ನವರಾತ್ರಿಗೆ ಸಿದ್ಧತೆ...
ಪಶ್ಚಿಮ ಬಂಗಾಳದ ಮಾಲ್ಡಾದಲ್ಲಿ ದುರ್ಗಾ ಪೂಜಾ ಉತ್ಸವಕ್ಕಾಗಿ ದುರ್ಗಾ ಮಾತೆಯ ಮೂರ್ತಿಗೆ ಕಲಾವಿದ ಅಂತಿಮ ಸ್ಪರ್ಶ ನೀಡಿದರು.





ಬೃಹತ್ ನೀರಾವರಿ ಯೋಜನೆಯಲ್ಲಿ ಅಕ್ರಮ ● ಸತ್ಯಶೋಧನಾ ತಂಡದ ಶೋಧ

‘ದೋಷ’ಕ್ಕೆ ಸಮಾಲೋಚಕರು ಕಾರಣ!

● ರಾಜೇಶ್ ರೈ ಚಟ್ಲ

ಬೆಂಗಳೂರು: ನೂರಾರು ಕೋಟಿ ರೂಪಾಯಿ ವೆಚ್ಚದಲ್ಲಿ ಜಲಸಂಪನ್ಮೂಲ ಇಲಾಖೆ ಅನುಷ್ಠಾನಗೊಳಿಸುವ ಬೃಹತ್ ನೀರಾವರಿ ಯೋಜನೆಗಳಲ್ಲಿ ಅಕ್ರಮ, ಭ್ರಷ್ಟಾಚಾರಗಳಿಗೆ, ಈ ಯೋಜನೆಗಳ ದೋಷಪೂರಿತ ಅಂದಾಜು ಪಟ್ಟಿ ತಯಾರಿಸುವ ‘ಖಾಸಗಿ ಸಮಾಲೋಚಕರು(ಕನ್ಸಲ್ಟಂಟ್)’ ಕಾರಣವೇ ಹೊರತು ಅಧಿಕಾರಿಗಳು ಅಲ್ಲ!

ಡಿ.ವೈ. ಉಪ್ಪಾರ್ ಸಹಭಾಗಿತ್ವದ ‘ಎಡಿಯು ಇನ್ಫ್ರಾ’ ಎಂಬ ಕಂಪನಿ ಗುತ್ತಿಗೆ ವಹಿಸಿದ್ದ ₹ 17,685 ಕೋಟಿಗೂ ಹೆಚ್ಚು ಮೊತ್ತದ ಎಂಟು ಬೃಹತ್ ಯೋಜನೆಗಳಲ್ಲಿ ನಡೆದಿದೆ ಎನ್ನಲಾದ ಅಕ್ರಮ ಆರೋಪಗಳ ವಿಚಾರಣೆ ನಡೆಸಲು ರಾಜ್ಯ ಸರ್ಕಾರ ರಚಿಸಿದ ಸತ್ಯಶೋಧನಾ ತಂಡದ ಶೋಧನೆಯಿದು!

ಇಲಾಖೆಯ ನಿವೃತ್ತ ಕಾರ್ಯದರ್ಶಿ ಎಸ್.ಜೆ. ಚನ್ನಬಸಪ್ಪ ಮತ್ತು ಎಚ್.ಡಿ. ಕುಮಾರಸ್ವಾಮಿ ಮುಖ್ಯಮಂತ್ರಿ ಆಗಿದ್ದಾಗ ತಾಂತ್ರಿಕ ಸಲಹೆಗಾರರಾಗಿದ್ದ ಎಂ.ಕೆ. ವೆಂಕಟರಾಮ್ ಅವರು ಈ ತಂಡದ ಸದಸ್ಯರು.

‘ಕಾಮಗಾರಿ ಕೈಗೊಳ್ಳುವ ಕ್ಷೇತ್ರದ ಸಮೀಕ್ಷೆ ಮತ್ತು ವಿಸ್ತೃತ ಯೋಜನಾ ವರದಿ (ಡಿಪಿಆರ್) ತಯಾರಿಸಿ, ಅಂದಾಜು ಪಟ್ಟಿ ತಯಾರಿಸುವ ಕೆಲಸವನ್ನು ಖಾಸಗಿ ಕನ್ಸಲ್ಟಂಟ್‌ಗಳಿಗೆ ನಿಗಮಗಳು ವಹಿಸುತ್ತಿವೆ. ಹೀಗಾಗಿ, ಯೋಜನೆಗಳ ಅನುಷ್ಠಾನದಲ್ಲಿ ಲೋಪವಾದರೆ ಅಥವಾ ನೈಜ ಟೆಂಡರ್ ದರಕ್ಕಿಂತ ಒಟ್ಟು ಮೊತ್ತ ಹೆಚ್ಚಳವಾದರೆ ನೀರಾವರಿ ನಿಗಮಗಳ ಅಧಿಕಾರಿಗಳನ್ನು ಹೊಣೆ ಮಾಡುವುದು ಸರಿಯಲ್ಲ’ ಎಂದು ಸರ್ಕಾರಕ್ಕೆ ಸಲ್ಲಿಸಿದ ವರದಿಯ ಉಲ್ಲೇಖಿಸಿದೆ.

ಆ ಮೂಲಕ, ನಿಗಮಗಳ ವ್ಯವಸ್ಥಾಪಕ ನಿರ್ದೇಶಕರು, ಮುಖ್ಯ ಎಂಜಿನಿಯರ್‌ಗಳು, ಸೂಪರಿಟೆಂಡೆಂಟ್ ಎಂಜಿನಿಯರ್‌ಗಳು ಸೇರಿದಂತೆ ಹಿರಿಯ ಅಧಿಕಾರಿಗಳನ್ನು ಎಲ್ಲ ಆಪಾದನೆಗಳಿಂದ ಸತ್ಯ ಶೋಧನಾ ತಂಡ ಮುಕ್ತಗೊಳಿಸಿದೆ. ಅಲ್ಲದೆ, ಇನ್ನು ಮುಂದೆ ಅಂದಾಜು ಪಟ್ಟಿ ಮತ್ತು ಡಿಪಿಆರ್ ತಯಾರಿಸುವ ಕೆಲಸಕ್ಕೆ ಖಾಸಗಿ ಕನ್ಸಲ್ಟಂಟ್‌ಗಳನ್ನು ನಿಯೋಜಿಸಬಾರದು ಎಂದೂ ಶಿಫಾರಸು ಮಾಡಿದೆ.

ತಂಡದ ಈ ಶಿಫಾರಸ್ಸಿನ ಬಗ್ಗೆ ನೀರಾವರಿ ನಿಗಮಗಳ ಕೆಲವು ಅಧಿಕಾರಿಗಳು ಆಕ್ಷೇಪ ವ್ಯಕ್ತಪಡಿಸಿದ್ದಾರೆ. ‘ಖಾಸಗಿ ಕನ್ಸಲ್ಟಂಟ್‌ಗಳು, ನಿಗಮಗಳ ವ್ಯವಸ್ಥಾಪಕ ನಿರ್ದೇಶಕರು ಮತ್ತು ಕಾಮಗಾರಿ ವಹಿಸಿಕೊಳ್ಳುವ ಗುತ್ತಿಗೆದಾರರ ನಡುವೆ ‘ಹೊಂದಾಣಿಕೆ’ ಇದೆ. ಗುತ್ತಿಗೆದಾರರು ಸೂಚಿಸಿದ ಕನ್ಸಲ್ಟಂಟ್‌ಗಳ ಮೂಲಕ ನಿಗಮದ ಅಧಿಕಾರಿಗಳು ಡಿಪಿಆರ್ ಮಾಡಿಸಿಕೊಳ್ಳುತ್ತಾರೆ’ ಎಂದು ಹೆಸರು ಬಹಿರಂಗಪಡಿಸಲು ಬಯಸದ ಅಧಿಕಾರಿಯೊಬ್ಬರು ವಿವರಿಸಿದರು.

ಪ್ರಜಾವಾಣಿ ವಿಶೇಷ

ಮಣ್ಣು ಸುರಿದು ‘ಕೋಟಿ’ ಗುಳುಂ!

‘ನೂರಾರು ಕೋಟಿ ಮೊತ್ತದ ಅಂದಾಜು ಪಟ್ಟಿಗಳನ್ನು ಸೂಕ್ತ ರೀತಿಯಲ್ಲಿ ಪರಿಶೀಲಿಸಲು ಅಂದಾಜು ಪರಿಶೀಲನಾ ಸಮಿತಿ ವಿಫಲವಾಗಿದೆ. ಕೆಲವು ಯೋಜನೆಗಳಲ್ಲಿ ಕಾಲುವೆ ತೋಡುವಾಗ ತೆಗೆದ ಮಣ್ಣಿನ ಮರು ಬಳಕೆಗೆ ಅಂದಾಜು ಪಟ್ಟಿಯಲ್ಲಿ ಅವಕಾಶ ಕಲ್ಪಿಸಿಲ್ಲ. ಹೀಗಾಗಿ, ಹೆಚ್ಚಿನ ಯೋಜನೆಗಳಲ್ಲಿ ಭಾರಿ ಪ್ರಮಾಣದಲ್ಲಿ ಮಣ್ಣು ಬೇರೆ ಕಡೆಯಿಂದ ಪಡೆದು ಬಳಸಲಾಗಿದೆ. ಅದಕ್ಕೆ ನೂರಾರು ಕೋಟಿ ರೂಪಾಯಿ ವೆಚ್ಚವಾಗಿದೆ. ಕಾಮಗಾರಿಯೊಂದರಲ್ಲಿ 1,064 ಕಿ.ಮೀ ವರೆಗಿನ ಅಂದಾಜು ಪಟ್ಟಿಗೆ ಅಂದಾಜು ಪರಿಶೀಲನಾ ಸಮಿತಿ ಒಪ್ಪಿಗೆ ನೀಡಿರುವುದು ಅಕ್ರಮಕ್ಕೆ ದಾರಿ ಮಾಡಿಕೊಟ್ಟಿದೆ’ ಎಂದು ಸತ್ಯಶೋಧನಾ ತಂಡ ಹೇಳಿದೆ.

‘ಖಾಸಗಿ ಕನ್ಸಲ್ಟಂಟ್‌ಗಳು ತಯಾರಿಸಿದ ಅಂದಾಜು ಪಟ್ಟಿಯನ್ನು ನಿವೃತ್ತ ಎಂಜಿನಿಯರ್ ಇನ್ ಚೀಫ್ ಮತ್ತು ನಿವೃತ್ತ ಮುಖ್ಯ ಎಂಜಿನಿಯರ್‌ಗಳನ್ನು ಒಳಗೊಂಡ ‘ಅಂದಾಜು ಪರಿಶೀಲನಾ ಸಮಿತಿ’ ಪರಿಶೀಲಿಸಿ ಅಂತಿಮಗೊಳಿಸುತ್ತದೆ. ಈ ಸಮಿತಿ ಅಂದಾಜು ಪಟ್ಟಿಯನ್ನು ಸಮರ್ಪಕವಾಗಿ ಪರಿಶೀಲಿಸದೇ ಇರುವುದು ಕೂಡಾ ಲೋಪಗಳಿಗೆ ಕಾರಣವಾಗಿದೆ. ಯಾವುದೇ ಕಾಮಗಾರಿಯ ಅನುಷ್ಠಾನದಲ್ಲಿ ಅಧಿಕಾರಿಗಳ ಕಾರಣಕ್ಕೆ ಟೆಂಡರ್ ಮೊತ್ತ ಹೆಚ್ಚಳ ಆಗಿಲ್ಲ. ಹೀಗಾಗಿ, ಮೊತ್ತ ಹೆಚ್ಚಿಸಿ ಅಕ್ರಮಗಳಲ್ಲಿ ಅಧಿಕಾರಿಗಳು ಭಾಗಿಯಾಗಿದ್ದಾರೆ ಎಂದು ಹೇಳಲು ಸಾಧ್ಯ ಇಲ್ಲ’ ಎಂದೂ ತಂಡ ಸಲ್ಲಿಸಿದ ವಿಚಾರಣಾ ವರದಿಯಲ್ಲಿದೆ.

‘ನಾಲೆಗಳ ನಿರ್ಮಾಣ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಖಾಸಗಿ ಕನ್ಸಲ್ಟಂಟ್‌ಗಳು ಅಸಮರ್ಪಕ ಮತ್ತು ಅನುಚಿತವಾಗಿ ಸಮೀಕ್ಷೆ ನಡೆಸಿವೆ. ಒಂದು ಕಡೆ ಅಗೆದ ಮಣ್ಣು ಮತ್ತು ಮತ್ತೊಂದು ಕಡೆ ತುಂಬ ಬೇಕಾದ ಭಾರಿ ಪ್ರಮಾಣದ ಮಣ್ಣನ್ನು ಲೆಕ್ಕ ಹಾಕುವ ಸಂದರ್ಭದಲ್ಲಿ ತಪ್ಪುಗಳಾಗಿವೆ. ಅಗೆದ ಮಣ್ಣು ಮರು ಬಳಕೆ ಮಾಡುವ ಬಗ್ಗೆ ಅಂದಾಜು ಪಟ್ಟಿಯಲ್ಲಿ ಪ್ರಸ್ತಾವವೇ ಇಲ್ಲ. ಹೀಗಾಗಿ, ಅಂದಾಜು ಪಟ್ಟಿಗಳೇ ದೋಷಪೂರಿತವಾಗಿವೆ’ ಎಂದೂ ವರದಿಯಲ್ಲಿ ಟೀಕಿಸಲಾಗಿದೆ.

‘ಹೀಗೆ ದೋಷಪೂರಿತ ಅಂದಾಜು ಪಟ್ಟಿಯಿಂದ ಕಾಮಗಾರಿಯ ಮೊತ್ತ ಹೆಚ್ಚಳವಾದರೆ ಅದಕ್ಕೆ ಖಾಸಗಿ ಕನ್ಸಲ್ಟಂಟ್‌ಗಳನ್ನು ಉತ್ತರದಾಯಿ ಮಾಡಲು ಅವಕಾಶ ಇಲ್ಲ. ಆದರೆ, ಲೆಕ್ಕ ಪರಿಶೋಧನೆಯ ಆಕ್ಷೇಪಗಳಿಗೆ ನಿಗಮಗಳ ಅಧಿಕಾರಿಗಳೇ ಉತ್ತರಿಸಬೇಕಾಗುತ್ತದೆ. ಅಲ್ಲದೆ, ದೋಷಪೂರಿತ ಅಂದಾಜು ಪಟ್ಟಿಯಿಂದ ಟೆಂಡರ್ ಮೊತ್ತದಲ್ಲಿ ಭಾರಿ ಹೆಚ್ಚಳವಾದರೆ ವಿಧಾನ ಮಂಡಲದ ಸಾರ್ವಜನಿಕ ಉದ್ದಿಮೆಗಳ ಸಮಿತಿಯ ಪ್ರಶ್ನೆಗಳಿಗೆ ಅಧಿಕಾರಿಗಳು ಉತ್ತರಿಸಬೇಕಾಗುತ್ತದೆ’ ಎಂದೂ ವರದಿಯಲ್ಲಿದೆ.

ಸುದ್ದಿ 2 ನಿಮಿಷ

‘ಅಲ್ಪಸಂಖ್ಯಾತರ ಮತಗಳಿಗೆ ಜೊಲ್ಲು ಸುರಿಸುವ ಕಾಂಗ್ರೆಸ್’

ಉಡುಪಿ: ಅಲ್ಪಸಂಖ್ಯಾತರ ಮತಗಳಿಗೆ ಜೊಲ್ಲು ಸುರಿಸುವ ಕಾಂಗ್ರೆಸ್ ನಾಯಕರು ಆರ್‌ಎಸ್‌ಎಸ್ ಬಗ್ಗೆ ಮಾತನಾಡುತ್ತಾರೆ. ಆರ್‌ಎಸ್‌ಎಸ್ ಟೀಕಿಸಲು ಕಾಂಗ್ರೆಸ್‌ನಲ್ಲಿ ಸ್ಪರ್ಧೆ ಏರ್ಪಟ್ಟಿದೆ ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಹೇಳಿದರು.

ಶನಿವಾರ ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ರಾಷ್ಟ್ರಪತಿ, ಉಪ ರಾಷ್ಟ್ರಪತಿ ಹಾಗೂ ಪ್ರಧಾನಿ ಸಂಘದಿಂದ ಬಂದವರು. ನಾನೂ ಸಂಘದಿಂದಲೇ ಸಂಸ್ಕಾರ ಕಲಿತಿದ್ದು, ಸಂಘದ ಸಿದ್ಧಾಂತಗಳಿಗೆ ಬದ್ಧವಾಗಿ ಕಾರ್ಯ ನಿರ್ವಹಿಸುತ್ತಿದ್ದೇನೆ’ ಎಂದರು.



252 ಎಫ್‌ಎಸ್‌ಎಲ್ ತಜ್ಞರ ನೇಮಕ: ಹಿಂದೆ, ಅಪರಾಧ ಕೃತ್ಯಗಳು ನಡೆದ ಸ್ಥಳಕ್ಕೆ ಪೊಲೀಸರು ಮಾತ್ರ ಹೋಗುತ್ತಿದ್ದರು. ಇನ್ಮುಂದೆ, ಎಫ್‌ಎಸ್‌ಎಲ್ ತಜ್ಞರು ತೆರಳಿ ಸಾಕ್ಷ್ಯಗಳನ್ನು ಸಂಗ್ರಹಿಸಲಿದ್ದಾರೆ. ಶೀಘ್ರವೇ 252 ಎಫ್‌ಎಸ್‌ಎಲ್ ತಜ್ಞರನ್ನು ನೇಮಕಾತಿ ಮಾಡಿಕೊಳ್ಳಲಾಗುವುದು. ಜತೆಗೆ ಪ್ರತಿವರ್ಷ 4 ಸಾವಿರ ಪೊಲೀಸರ ನೇಮಕಾತಿ ಮೂಲಕ ಸಿಬ್ಬಂದಿ ಸಮಸ್ಯೆ ಪರಿಹರಿಸಲಾಗುವುದು ಎಂದರು.

ಸೈಬರ್ ಅಪರಾಧಗಳ ತಡೆಗೆ ಸೈಬರ್ ಕ್ರೈಂ ವಿಭಾಗಕ್ಕೆ ಕಾಯಕಲ್ಪ ನೀಡಲಾಗುವುದು. ಸೈಬರ್ ಠಾಣೆಯ ಅಧಿಕಾರಿಗಳಿಗೆ ಗುಜರಾತ್‌ನಲ್ಲಿ ತರಬೇತಿ ಕೊಡಿಸಲು ಒಪ್ಪಂದ ಮಾಡಿಕೊಳ್ಳಲಾಗಿದೆ ಎಂದು ಹೇಳಿದರು.

‘ಹುದ್ದೆ ಆಮಿಷ ಒಡ್ಡಿದರೆ ದೂರು ನೀಡಿ’

ಬೆಂಗಳೂರು: ‘ಪೊಲೀಸ್ ಇಲಾಖೆಯಲ್ಲಿ ಹುದ್ದೆ ಕೊಡಿಸುವುದಾಗಿ ಯಾರಾದರೂ ಆಮಿಷ ಒಡ್ಡಿದರೆ, ಅಭ್ಯರ್ಥಿಗಳು ಅಥವಾ ಅವರ ಪೋಷಕರು ನೇರವಾಗಿ ಪೊಲೀಸರಿಗೆ ಮಾಹಿತಿ ನೀಡಬೇಕು’ ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಹೇಳಿದರು.


‘ಸದ್ಯ 947 ಸಬ್ ಇನ್‌ಸ್ಪೆಕ್ಟರ್‌ಗಳು ಹಾಗೂ 4,000 ಕಾನ್‌ಸ್ಟೆಬಲ್ ಹುದ್ದೆಗಳಿಗೆ ನೇಮಕಾತಿ ನಡೆಯುತ್ತಿದೆ. ನೇಮಕಾತಿ ಪ್ರಕ್ರಿಯೆಗಳ ಭಾಗವಾಗಿ ನಡೆಯುತ್ತಿರುವ ದೈಹಿಕ ಸಾಮರ್ಥ್ಯ ಪರೀಕ್ಷೆ ಹಾಗೂ ಲಿಖಿತ ಪರೀಕ್ಷೆಗಳು ಪಾರದರ್ಶಕವಾಗಿ ನಡೆಯಲಿವೆ. ಇದರಲ್ಲಿ ಪಡೆಯುವ ಅಂಕಗಳೇ ಅಭ್ಯರ್ಥಿಗಳ ಆಯ್ಕೆಗೆ ಮಾನದಂಡ’ ಎಂದೂ ಅವರು ಸ್ಪಷ್ಟಪಡಿಸಿದ್ದಾರೆ.

‘ನೇಮಕಾತಿಯನ್ನು ಪಾರದರ್ಶಕವಾಗಿ ಮತ್ತು ನಿಯಮಗಳ ಅನುಸಾರ ನಡೆಸಲಾಗುತ್ತಿದೆ. ಹೀಗಾಗಿ, ಅಭ್ಯರ್ಥಿಗಳು ಹಾಗೂ ಅವರ ಪೋಷಕರು ಯಾವುದೇ ರೀತಿಯ ವದಂತಿಗಳಿಗೆ ಕಿವಿಗೊಡಬೇಡಿ’ ಎಂದು ತಿಳಿಸಿದ್ದಾರೆ.

‘ಡಿಕೆಶಿ ಮಾತು ಅಪ್ಪಟ ಸುಳ್ಳು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜೆಡಿಎಸ್ ಶಾಸಕರಾಗಿದ್ದ ಎಂ.ಸಿ. ಮನಗೂಳಿ ಅವರು ತಮ್ಮನ್ನು ಭೇಟಿಮಾಡಿ ಮಗನನ್ನು ಕಾಂಗ್ರೆಸ್ ಪಕ್ಷಕ್ಕೆ ಸೇರಿಸಿಕೊಳ್ಳುವಂತೆ ಮನವಿ ಮಾಡಿದ್ದರು ಎಂಬ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿಕೆ ಅಪ್ಪಟ ಸುಳ್ಳು ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಹೇಳಿದ್ದಾರೆ.



ಕುಮಾರಸ್ವಾಮಿ

ಶಿವಕುಮಾರ್ ಹೇಳಿಕೆಗೆ ಶನಿವಾರ ಸರಣಿ ಟ್ವೀಟ್ ಮೂಲಕ ಪ್ರತಿಕ್ರಿಯಿಸಿರುವ ಅವರು, ‘ಜನವರಿ 9ರಂದು ಅಪೋಲೊ ಆಸ್ಪತ್ರೆಗೆ ದಾಖಲಾದ ಮನಗೂಳಿ ಜ.28ರಂದು ಅಲ್ಲಿಯೇ ನಿಧನರಾದರು. ಅದಕ್ಕೂ ಮೊದಲು ಒಂದೂವರೆ ತಿಂಗಳ ಕಾಲ ವಿಜಯಪುರ ಆಸ್ಪತ್ರೆಯಲ್ಲಿದ್ದರು. ತೀವ್ರನಿಗಾ ಘಟಕದಲ್ಲಿದ್ದ ಅವರನ್ನು ನೋಡಲು ಅವರ ಮಕ್ಕಳು, ನನಗೆ ಕೂಡ ಅವಕಾಶ ಸಿಕ್ಕಿರಲಿಲ್ಲ’ ಎಂದಿದ್ದಾರೆ.

‘ಕೋವಿಡ್‌ನಿಂದ ಜೀವನ್ಮರಣದ ಹೋರಾಟ ನಡೆಸುತ್ತಿದ್ದ ಮನಗೂಳಿ ಅವರು 19 ದಿನಗಳ ಕಾಲ ಅಪೋಲೊ ಆಸ್ಪತ್ರೆಯಲ್ಲಿದ್ದರು. ಶಿವಕುಮಾರ್ ಮನೆಗೆ ಹೋಗಿದ್ದು ಯಾವಾಗ? ನಿಧನರಾಗುವ 16 ದಿನಗಳ ಮೊದಲು ಹೋಗಿ ಮಗನನ್ನು ನಿಮ್ಮ ಮಡಿಲಿಗೆ ಹಾಕುತ್ತಿದ್ದೇನೆ ಎಂದು ಹೇಳಿದ್ದು ಯಾವತ್ತು?’ ಎಂದು ಅವರು ಪ್ರಶ್ನಿಸಿದ್ದಾರೆ.

ಸುಳ್ಳು ಹೇಳುವುದಕ್ಕೂ ಮಿತಿ ಇರಬೇಕು. ವ್ಯಕ್ತಿ ನಿಧನರಾದ ಬಳಿಕ ಅವರ ಬಗ್ಗೆ ಜನರಲ್ಲಿ ತಪ್ಪು ಅಭಿಪ್ರಾಯ ಮೂಡಿಸುವುದು ಅನೈತಿಕ. ಶಿವಕುಮಾರ್ ಸುಳ್ಳು ಹೇಳುವ ಮೂಲಕ ಮನಗೂಳಿ ಅವರಿಗೆ ಅಪಚಾರ ಮಾಡಿದ್ದಾರೆ. ಹಸಿ ಸುಳ್ಳುಗಳು ಅಸಹ್ಯ ಹುಟ್ಟಿಸುವಂತಿವೆ. ಜೆಡಿಎಸ್ ಅಭ್ಯರ್ಥಿಯನ್ನು ಕರೆದೊಯ್ದಿದ್ದಲ್ಲದೇ ಈಗ ಸುಳ್ಳುಗಳ ಸರಮಾಲೆ ಹೆಣೆಯುತ್ತಾ ಜನರಿಗೆ ಟೋಪಿ ಹಾಕಲು ಹೊರಟಿದ್ದಾರೆ ಎಂದು ಟೀಕಿಸಿದ್ದಾರೆ.

ಕುಮಾರಣ್ಣ ನೋವಿನ ಮಾತು: ಡಿಕೆಶಿ



‘ತಮ್ಮ ಪಕ್ಷದಲ್ಲಿದ್ದವರು ಕಾಂಗ್ರೆಸ್‌ಗೆ ಹೋಗಿದ್ದಾರಲ್ಲ ಎಂಬ ನೋವು ಕುಮಾರಣ್ಣ ಅವರಿಗಿದೆ. ಆ ನೋವಿನಿಂದ ಮಾತನಾಡಿದ್ದಾರೆ’ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

ಕುಮಾರಸ್ವಾಮಿ ಮಾಡಿರುವ ಟ್ವೀಟ್‌ಗೆ ಪ್ರತಿಕ್ರಿಯಿಸಿದ ಅವರು, 'ರಾಜಕಾರಣ ನಿಂತ ನೀರಲ್ಲ ಎಂದು ಕುಮಾರಣ್ಣ ಅವರೇ ಹೇಳಿದ್ದಾರೆ. ಕೆಲವರು ಬಿಜೆಪಿಗೆ ಹೋಗಲು ಸಿದ್ಧರಿರುತ್ತಾರೆ. 17 ಜನ ಸಂಸದರು ಗೆದ್ದು, ದೇವೇಗೌಡರು ದೇಶದ ಪ್ರಧಾನಿ ಆದಾಗ, ನಾವು ಅವರನ್ನು ಹೈಜಾಕ್ ಮಾಡಿ ಕರೆದುಕೊಂಡು ಬಂದಿದ್ದೆವಾ? ಒಂದಲ್ಲ ಒಂದು ಕಾರಣದಿಂದ ಬರುವವರು ಬರುತ್ತಾರೆ. ಈ ಹಿಂದೆ ಅನೇಕ ನಾಯಕರು ಕೂಡ ಅವರ ಜತೆ ರಾಜಕೀಯ ಭಿನ್ನಾಭಿಪ್ರಾಯದಿಂದ ಕಾಂಗ್ರೆಸ್‌ಗೆ ಬಂದಿದ್ದರು’ ಎಂದರು.

‘ಎಂ.ಸಿ. ಮನಗೂಳಿ ಅವರು ನಮ್ಮನ್ನು ಬಂದು ಭೇಟಿ ಮಾಡಿದ್ದು ನಿಜ. ಈ ವಿಚಾರದಲ್ಲಿ ಸುಳ್ಳು ಹೇಳುವ ಅಗತ್ಯ ನನಗಿಲ್ಲ. ಬೇರೆ ಪಕ್ಷಗಳ ಅಭ್ಯರ್ಥಿಯನ್ನು ಹೈಜಾಕ್ ಮಾಡುವ ಸ್ಥಿತಿ ಕಾಂಗ್ರೆಸ್‌ಗೆ ಬಂದಿಲ್ಲ. ಪಕ್ಷದ ಸಿದ್ಧಾಂತ ಒಪ್ಪಿ ಬರುವವರನ್ನು ನಾವು ಬೇಡ ಎನ್ನುವುದಿಲ್ಲ’ ಎಂದರು.

ಅಲಹಾಬಾದ್ ಹೈಕೋರ್ಟ್‌ನಿಂದ ಕರ್ನಾಟಕಕ್ಕೆ

ಋತುರಾಜ್ ಅವಸ್ಥಿ ರಾಜ್ಯ ಹೈಕೋರ್ಟ್ ಸಿ.ಜೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಅಲಹಾಬಾದ್ ಹೈಕೋರ್ಟ್ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ಅವರನ್ನು ಕರ್ನಾಟಕ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯನ್ನಾಗಿ ನೇಮಿಸಿ ಕೇಂದ್ರ ಸರ್ಕಾರ ಶನಿವಾರ ಅಧಿಸೂಚನೆ ಹೊರಡಿಸಿದೆ.



ಇದೇ ವೇಳೆ, ಇತರ ಏಳು ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಗಳ ನೇಮಕ ಹಾಗೂ ಐದು ಹೈಕೋರ್ಟ್‌ಗಳ ಮುಖ್ಯ ನ್ಯಾಯಮೂರ್ತಿಗಳನ್ನು ವರ್ಗಾವಣೆ ಮಾಡಲಾಗಿದೆ. ಕರ್ನಾಟಕ ಹೈಕೋರ್ಟ್‌ನ ನ್ಯಾಯಮೂರ್ತಿಯಾಗಿದ್ದ ಅರವಿಂದ ಕುಮಾರ್ ಅವರನ್ನು ಗುಜರಾತ್ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಯನ್ನಾಗಿ ಹಾಗೂ ಹಿಮಾಚಲ ಪ್ರದೇಶ ಹೈಕೋರ್ಟ್‌ನ ಹಂಗಾಮಿ ಮುಖ್ಯ ನ್ಯಾಯಮೂರ್ತಿಯಾಗಿ ಸೇವೆ ಸಲ್ಲಿಸಲ್ಲಿಸುತ್ತಿದ್ದ ಆರ್.ವಿ. ಮಳಿಮಠ ಅವರನ್ನು ಮಧ್ಯಪ್ರದೇಶ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಯನ್ನಾಗಿ ನೇಮಿಸಲಾಗಿದೆ.

ಕರ್ನಾಟಕ ಹೈಕೋರ್ಟ್‌ನ ಹಂಗಾಮಿ ಮುಖ್ಯ ನ್ಯಾಯಮೂರ್ತಿಯಾಗಿದ್ದ ಸತೀಶಚಂದ್ರ ಶರ್ಮಾ ಅವರನ್ನು ತೆಲಂಗಾಣ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಯನ್ನಾಗಿ, ಕಲ್ಕತ್ತಾ ಹೈಕೋರ್ಟ್‌ನ ಹಂಗಾಮಿ ಮುಖ್ಯ ನ್ಯಾಯಮೂರ್ತಿ ರಾಜೇಶ್ ಬಿಂದಾಲ್ ಅವರನ್ನು ಅಲಹಾಬಾದ್ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಯಾಗಿ ವರ್ಗಾಯಿಸಲಾಗಿದೆ.

ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಎನ್.ವಿ. ರಮಣ ನೇತೃತ್ವದ ಕೊಲಿಜಿಯಂ, ಸೆಪ್ಟೆಂಬರ್ 16ರಂದು ಇವರೆಲ್ಲರ ಹೆಸರುಗಳನ್ನು ಶಿಫಾರಸು ಮಾಡಿರುವ ಹಿನ್ನೆಲೆಯಲ್ಲಿ ನ್ಯಾಯಾಂಗ ಇಲಾಖೆಯು ರಾಷ್ಟ್ರಪತಿಯವರ ಅನುಮೋದನೆಯೊಂದಿಗೆ ಅಧಿಸೂಚನೆ ಹೊರಡಿಸಿದೆ.

ಲಖನೌ ಪೀಠದಿಂದ ಕರ್ನಾಟಕಕ್ಕೆ

ಕರ್ನಾಟಕ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಯಾಗಿ ನೇಮಕಗೊಂಡಿರುವ ಋತುರಾಜ್ ಅವಸ್ಥಿ ಅಲಹಾಬಾದ್ ಹೈಕೋರ್ಟ್‌ನ ಲಖನೌ ಪೀಠದಲ್ಲಿ ಹಿರಿಯ ನ್ಯಾಯಮೂರ್ತಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ.

1960ರಲ್ಲಿ ಜನಿಸಿರುವ ನ್ಯಾಯಮೂರ್ತಿ ಅವಸ್ಥಿ, ಲಖನೌ ವಿಶ್ವವಿದ್ಯಾಲಯದಿಂದ ಕಾನೂನು ಪದವಿ ಪಡೆದು, 1987ರಲ್ಲಿ ವಕೀಲ ವೃತ್ತಿ ಆರಂಭಿಸಿದ್ದರು. ಸಹಾಯಕ ಸಾಲಿಸಿಟರ್ ಜನರಲ್ ಆಗಿ ಸೇವೆ ಸಲ್ಲಿಸಿದ್ದ ಅವರು, 2009ರ ಏಪ್ರಿಲ್ 13ರಂದು ಅಲಹಾಬಾದ್ ಹೈಕೋರ್ಟ್‌ನ ಲಖನೌ ಪೀಠದ ನ್ಯಾಯಮೂರ್ತಿಯಾಗಿ ನೇಮಕಗೊಂಡರು. 2010ರ ಡಿಸೆಂಬರ್ 24ರಂದು ಖಾಯಂ ನ್ಯಾಯಮೂರ್ತಿಯಾಗಿ ಅಧಿಕಾರ ವಹಿಸಿಕೊಂಡಿದ್ದರು.

ಶಿವಮೊಗ್ಗದಲ್ಲೂ ಅನೈತಿಕ ಪೊಲೀಸ್‌ಗಿರಿ: ಇಬ್ಬರು ವಶಕ್ಕೆ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ಮುಸ್ಲಿಂ ಯುವತಿಯನ್ನು ದ್ವಿಚಕ್ರವಾಹನದಲ್ಲಿ ಕರೆದುಕೊಂಡು ಬಂದ ಹಿಂದೂ ಯುವಕನನ್ನು ಶನಿವಾರ ನಗರದ ಟ್ಯಾಂಕ್ ಮೊಹಲ್ಲಾ ಯುವಕರು ಥಳಿಸಿದ್ದಾರೆ.

ಅನೈತಿಕ ಪೊಲೀಸ್‌ಗಿರಿ ನಡೆಸಿದ ಆರೋಪದ ಮೇಲೆ ಸುಹೇಲ್, ಶೋಯೇಬ್ ಅವರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ಇಬ್ರಾಹಿಂ ಪರಾರಿಯಾಗಿದ್ದಾನೆ.

ಶಿವಮೊಗ್ಗ ಸಮೀಪದ ಮಜ್ಜಿಗೆಹಳ್ಳಿಯ ಯುವತಿ ಕೆಲಸಕ್ಕೆ ಹೋಗಲು ತಡವಾಗಿದ್ದ ಕಾರಣ ಶಿವಮೊಗ್ಗದ ಗಾಂಧಿ ಬಜಾರ್‌ವರೆಗೆ ಬಿಡುವಂತೆ ಅದೇ ಮಾರ್ಗದಲ್ಲಿ ಹೊರಟಿದ್ದ ಗ್ರಾಮದ ಯುವಕನನ್ನು ವಿನಂತಿಸಿದ್ದಾರೆ. ಆ ಯುವಕ ಗಾಂಧಿ ಬಜಾರ್‌ನಲ್ಲಿ ಇಳಿಸಿ ಹಿಂದಿರುಗುವಾಗ ಸ್ಥಳದಲ್ಲೇ ಇದ್ದ ಮುಸ್ಲಿಂ ಯುವಕರು ಥಳಿಸಿದ್ದಾರೆ. ತಕ್ಷಣ ಅಲ್ಲೇ ಇದ್ದ ಹಿಂದೂ ಯುವಕರು ಹೊಡೆದಾಟಕ್ಕೆ ಮುಂದಾಗಿದ್ದಾರೆ. ಪೊಲೀಸರು ಪರಿಸ್ಥಿತಿ ನಿಯಂತ್ರಿಸಿದ್ದಾರೆ.

ಕುಟುಂಬ ರಾಜಕಾರಣಕ್ಕೆ ಮನ್ನಣೆ ನೀಡದ ಬಿಜೆಪಿ: ಭಿನ್ನಮತ ಶಮನಗೊಳಿಸಿದ ಕಾಂಗ್ರೆಸ್

ಹೊರಗಿನವರಿಗೆ ಮಣೆ, ಸ್ಥಳೀಯರಿಗಿಲ್ಲ ಹೊಣೆ

● ಸಿದ್ದು ಆರ್.ಜಿ.ಹಳ್ಳಿ

ಪ್ರಜಾ ಮತ ಜನತಂತ್ರದ ಹಬ್ಬ 2021

ಹಾವೇರಿ: ಹಾನಗಲ್ ವಿಧಾನಸಭಾ ಕ್ಷೇತ್ರದ ಉಪಚುನಾವಣಾ ಕಣ ದಿನದಿಂದ ದಿನಕ್ಕೆ ರಂಗೇರುತ್ತಿದೆ. ಬಿಜೆಪಿ, ಕಾಂಗ್ರೆಸ್ ಮತ್ತು ಜೆಡಿಎಸ್ ಈ ಮೂರೂ ಪಕ್ಷಗಳು ಕ್ಷೇತ್ರದ ಹೊರಗಿನ ಅಭ್ಯರ್ಥಿಗಳಿಗೆ ಮಣೆ ಹಾಕಿರುವುದು ಈ ಬಾರಿಯ ವಿಶೇಷ.

ಬಿಜೆಪಿ ಅಭ್ಯರ್ಥಿ ಶಿವರಾಜ ಸಜ್ಜನರ, ಕಾಂಗ್ರೆಸ್ ಅಭ್ಯರ್ಥಿ ಶ್ರೀನಿವಾಸ ಮಾನೆ ಮತ್ತು ಜೆಡಿಎಸ್ ಅಭ್ಯರ್ಥಿ ನಿಯಾಜ್ ಶೇಖ್ ಈ ಮೂವರು ಮೂಲತಃ ಹಾನಗಲ್ ಕ್ಷೇತ್ರದವರಲ್ಲ.

ಬಿಜೆಪಿ ಅಭ್ಯರ್ಥಿ ಶಿವರಾಜ ಸಜ್ಜನರ ಹಾವೇರಿ ತಾಲ್ಲೂಕಿನ ದೇವಗಿರಿ ಗ್ರಾಮದವರು. 2004ರಲ್ಲಿ ಹಾವೇರಿ ಕ್ಷೇತ್ರದಿಂದ ಶಾಸಕರಾಗಿ, 2009ರಲ್ಲಿ ವಿಧಾನಪರಿಷತ್ ಸದಸ್ಯರಾಗಿ ಆಯ್ಕೆಯಾಗಿದ್ದರು. 2016ರಿಂದ ಮೂರು ವರ್ಷ ಬಿಜೆಪಿ ಜಿಲ್ಲಾ ಘಟಕದ ಅಧ್ಯಕ್ಷರಾಗಿ ಕೆಲಸ ಮಾಡಿದ್ದಾರೆ. ಸಿ.ಎಂ.ಉದಾಸಿ ಅವರ ಕುಟುಂಬಕ್ಕೆ ಆಪ್ತರು ಎಂಬುದೇ ಹಾನಗಲ್ ಕ್ಷೇತ್ರಕ್ಕೆ ಇವರಿಗಿರುವ ನಂಟಾಗಿದೆ.

ಅಲ್ಪ ಮತಗಳಿಂದ ಸೋಲು: ಕಾಂಗ್ರೆಸ್ ಅಭ್ಯರ್ಥಿ ಶ್ರೀನಿವಾಸ ಮಾನೆ ಮೂಲತಃ ಹುಬ್ಬಳ್ಳಿಯವರು. 2009 ಮತ್ತು 2015ರಲ್ಲಿ ಎರಡು ಬಾರಿ ವಿಧಾನ ಪರಿಷತ್ ಸದಸ್ಯರಾಗಿ ಆಯ್ಕೆಯಾಗಿದ್ದರು. ಎಐಸಿಸಿ ಮತ್ತು ಕೆಪಿಸಿಸಿಯ ವಿವಿಧ ಹುದ್ದೆಗಳಲ್ಲಿ ಕೆಲಸ ಮಾಡಿರುವ ಅನುಭವವಿದೆ. 2018ರ ವಿಧಾನಸಭಾ ಚುನಾವಣೆಯಲ್ಲಿ ಹಾನಗಲ್ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿ, ಬಿಜೆಪಿ ಅಭ್ಯರ್ಥಿ ಸಿ.ಎಂ.ಉದಾಸಿ ವಿರುದ್ಧ ಅಲ್ಪ ಮತಗಳ ಅಂತರದಿಂದ ಸೋತಿದ್ದರು.



ಶ್ರೀನಿವಾಸ ಮಾನೆ ಕಾಂಗ್ರೆಸ್ ಅಭ್ಯರ್ಥಿ



ಶಿವರಾಜ ಸಜ್ಜನರ ಬಿಜೆಪಿ ಅಭ್ಯರ್ಥಿ



ನಿಯಾಜ್ ಶೇಖ್ ಜೆಡಿಎಸ್ ಅಭ್ಯರ್ಥಿ

ಸೋಲಿನ ನಂತರವೂ ಕ್ಷೇತ್ರವನ್ನು ತೊರೆಯದೆ, ಹಾನಗಲ್ ತಾಲ್ಲೂಕಿನ ಗೆಜ್ಜೆಹಳ್ಳಿ ಗ್ರಾಮದಲ್ಲಿ ಮೂರು ವರ್ಷಗಳಿಂದ ಬಾಡಿಗೆ ಮನೆಯಲ್ಲಿ ವಾಸವಿದ್ದರು. ಇತ್ತೀಚೆಗೆ ಹಾನಗಲ್ ಪಟ್ಟಣದಲ್ಲಿ 10 ಗುಂಟೆ ಜಮೀನು ಖರೀದಿಸಿ, ಮನೆ ಕಟ್ಟಿಸುತ್ತಿದ್ದಾರೆ. ಅದರ ಪಕ್ಕದ ಕಟ್ಟಡದಲ್ಲೇ ಸದ್ಯಕ್ಕೆ ವಾಸವಿದ್ದಾರೆ. ಹಾನಗಲ್ ಮತದಾರರ ಜತೆ ನಿಕಟ ಸಂಪರ್ಕ ಹೊಂದಿದ್ದಾರೆ.

ಕಾಂಗ್ರೆಸ್ ಸಂಘಟನೆ- ಜೆಡಿಎಸ್ ಟಿಕೆಟ್!: ಜೆಡಿಎಸ್ ಅಭ್ಯರ್ಥಿ ನಿಯಾಜ್ ಶೇಖ್ ಮೂಲತಃ ಶಿವಮೊಗ್ಗ ಜಿಲ್ಲೆ, ಸಾಗರ ತಾಲ್ಲೂಕಿನ ಜಡೆ ಗ್ರಾಮದವರು. ಮೂರ್ನಾಲ್ಕು ವರ್ಷಗಳ ಹಿಂದೆ ಹಾನಗಲ್ ಕ್ಷೇತ್ರಕ್ಕೆ ಬಂದು ಜಿಲ್ಲಾ ಕಾಂಗ್ರೆಸ್ ಕಾರ್ಮಿಕ ಘಟಕದ ಅಧ್ಯಕ್ಷರಾಗಿ ಕೆಲಸ ಮಾಡಿದ್ದರು. ಬದಲಾದ ರಾಜಕೀಯ ಸನ್ನಿವೇಶದಲ್ಲಿ, ಉಪಚುನಾವಣೆ ದಿನಾಂಕ ಘೋಷಣೆಯಾಗುವ ಮೂರು ತಿಂಗಳು ಮುನ್ನವೇ ಜೆಡಿಎಸ್‌ನಿಂದ ಟಿಕೆಟ್ ಪಡೆದು ಮತದಾರರಲ್ಲಿ ಅಚ್ಚರಿ ಮೂಡಿಸಿದ್ದರು.

ಶ್ರೀನಿವಾಸ ಮಾನೆ ಮತ್ತು ನಿಯಾಜ್‌ಶೇಖ್ ಅವರು ಪ್ರಸ್ತುತ ಹಾನಗಲ್ ಪಟ್ಟಣದ ನಿವಾಸಿಗಳಾಗಿದ್ದು, ಮತದಾರರ ಪಟ್ಟಿಯಲ್ಲಿ ಹೆಸರನ್ನು ನೋಂದಣಿ ಮಾಡಿಸಿದ್ದಾರೆ. ಆದರೆ, ಶಿವರಾಜ ಸಜ್ಜನರ ಇಂದಿಗೂ ಹಾವೇರಿ ಪಟ್ಟಣದ ನಿವಾಸಿಯಾಗಿದ್ದಾರೆ.

ಸ್ಥಳೀಯರ ಅಸಮಾಧಾನ: ‘ಪಕ್ಷಕ್ಕಾಗಿ ದುಡಿದ ಸ್ಥಳೀಯ ಮುಖಂಡರಿಗೆ ಉಪಚುನಾವಣೆಯಲ್ಲಿ ಟಿಕೆಟ್ ನೀಡುವ ಮೂಲಕ ಹೊಸ ನಾಯಕರನ್ನು ಬೆಳೆಸಬಹುದಿತ್ತು. ಆದರೆ, ಮೂರು ಪಕ್ಷಗಳು ಹೊರಗಿನವರಿಗೆ ಆದ್ಯತೆ ನೀಡಿ ಸ್ಥಳೀಯರನ್ನು ಕಡೆಗಣಿಸಿದ್ದಾರೆ’ ಎಂಬ ಅಸಮಾಧಾನ ಪಕ್ಷಗಳ ಕಾರ್ಯಕರ್ತರಲ್ಲಿದೆ.

ಒಟ್ಟು 29 ಅಭ್ಯರ್ಥಿಗಳಿಂದ 45 ನಾಮಪತ್ರಗಳು ಸಲ್ಲಿಕೆಯಾಗಿವೆ. ಅ.11ರಂದು ನಾಮಪತ್ರ ಪರಿಶೀಲನೆ ನಡೆಯಲಿದ್ದು, ಅ.13ರಂದು ನಾಮಪತ್ರ ಹಿಂಪಡೆಯಲು ಕೊನೆಯ ದಿನವಾಗಿದೆ.

ರಾಷ್ಟ್ರೀಯ ಪಕ್ಷಗಳಲ್ಲಿ ತಗ್ಗಿದ ಅಪಸ್ವರ

ಬಿಜೆಪಿ ಮತ್ತು ಕಾಂಗ್ರೆಸ್ ಎರಡೂ ಪಕ್ಷಗಳಲ್ಲಿದ್ದ ಅಸಮಾಧಾನ, ಭಿನ್ನಮತ ಮೇಲ್ನೋಟಕ್ಕೆ ಶಮನಗೊಂಡಂತೆ ಕಾಣುತ್ತಿದೆ.

‘ಹೊರಗಿನವರು’ ಮತ್ತು ‘ಒಳಗಿನವರು’ ಎಂಬ ಭಿನ್ನಮತ ಕಾಂಗ್ರೆಸ್‌ನಲ್ಲಿ ಭುಗಿಲೆದ್ದು, ಮಾಜಿ ಸಚಿವ ಮನೋಹರ ತಹಶೀಲ್ದಾರ್ ಮತ್ತು ವಿಧಾನ ಪರಿಷತ್ ಸದಸ್ಯ ಶ್ರೀನಿವಾಸ್ ಮಾನೆ ಎರಡು ಬಣಗಳ ನಡುವೆ ಟಿಕೆಟ್‌ಗಾಗಿ ತೀವ್ರ ಜಿದ್ದಾಜಿದ್ದಿ ನಡೆದಿತ್ತು. ತಹಶೀಲ್ದಾರ್ ಅವರಿಗೆ ಸೂಕ್ತ ರಾಜಕೀಯ ಸ್ಥಾನಮಾನ ನೀಡುವುದಾಗಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹಾನಗಲ್‌ನಲ್ಲಿ ಭರವಸೆ ಕೊಡುವ ಮೂಲಕ ಅಸಮಾಧಾನವನ್ನು ಶಮನಗೊಳಿಸಿದ್ದಾರೆ.

ಕೊನೆಯ ಕ್ಷಣದವರೆಗೂ, ಸಂಸದ ಶಿವಕುಮಾರ ಉದಾಸಿ ಅವರ ಪತ್ನಿ ರೇವತಿ ಉದಾಸಿ ಅವರಿಗೆ ಬಿಜೆಪಿಯಿಂದ ಟಿಕೆಟ್ ಸಿಗುತ್ತದೆ ಎಂದು ನಿರೀಕ್ಷಿಸಲಾಗಿತ್ತು. ಆದರೆ, ಬಿಜೆಪಿ ವರಿಷ್ಠರು ಶಿವರಾಜ ಸಜ್ಜನರ ಅವರಿಗೆ ಟಿಕೆಟ್ ನೀಡುವ ಮೂಲಕ ಕುಟುಂಬ ರಾಜಕಾರಣಕ್ಕೆ ಮಣೆ ಹಾಕುವುದಿಲ್ಲ ಎಂಬ ಸಂದೇಶ ನೀಡಿದ್ದಾರೆ. ಉದಾಸಿ ಕುಟುಂಬಕ್ಕೆ ಟಿಕೆಟ್ ಕೈತಪ್ಪಿದ್ದಕ್ಕೆ ಅಸಮಾಧಾನಗೊಂಡು ಪ್ರತಿಭಟನೆ ನಡೆಸಿದವರನ್ನು ಸ್ವತಃ ಶಿವಕುಮಾರ ಉದಾಸಿ ಅವರೇ ಮನವೊಲಿಸಿದ್ದಾರೆ.

ರಾಜ್ಯಕ್ಕೆ ಹೆಚ್ಚುವರಿ 4 ರೇಕ್ ಕಲ್ಲಿದ್ದಲು: ಬೊಮ್ಮಾಯಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯಕ್ಕೆ ಈಗ ಪೂರೈಕೆಯಾಗುತ್ತಿರುವ 10 ರೇಕ್ ಕಲ್ಲಿದ್ದಲಿನ ಪ್ರಮಾಣವನ್ನು 14 ರೇಕ್‌ಗಳಿಗೆ ಹೆಚ್ಚಿಸಲು ಕೇಂದ್ರ ಕಲ್ಲಿದ್ದಲು ಖಾತೆ ಸಚಿವ ಪ್ರಲ್ಹಾದ ಜೋಶಿ ಒಪ್ಪಿಗೆ ಕೊಟ್ಟಿದ್ದಾರೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ನವದೆಹಲಿ ಪ್ರವಾಸ ಮುಗಿಸಿ ರಾಜ್ಯಕ್ಕೆ ಶನಿವಾರ ವಾಪಸ್ ಆದ ಬೊಮ್ಮಾಯಿ ಸುದ್ದಿಗಾರರ ಜತೆ ಮಾತನಾಡಿದರು.

‘ನಾನಾ ಕಾರಣಗಳಿಂದ ಕಲ್ಲಿದ್ದಲು ಕೊರತೆ ಇಡೀ ಜಗತ್ತನ್ನು ಬಾಧಿಸುತ್ತಿದೆ. ಕರ್ನಾಟಕದಲ್ಲಿ ವಿದ್ಯುತ್ ಉತ್ಪಾದನೆಗೆ ಅಗತ್ಯವಾದ ಕಲ್ಲಿದ್ದಲು ಸಂಗ್ರಹ ಕಡಿಮೆಯಾಗಬಾರದು ಎಂಬ ಕಾರಣಕ್ಕೆ ಜೋಶಿ ಅವರನ್ನು ಭೇಟಿ ಮಾಡಿ ಮನವಿ ಮಾಡಲಾಗಿದೆ. ಕರ್ನಾಟಕಕ್ಕೆ ಪೂರೈಸುವ ಪ್ರಮಾಣವನ್ನು ಹೆಚ್ಚಿಸುವಂತೆ ಸಚಿವರು, ಅಧಿಕಾರಿಗಳಿಗೆ ಸೂಚನೆ ನೀಡಿದರು’ ಎಂದರು.

‘ಕೇಂದ್ರ ಆರೋಗ್ಯ ಹಾಗೂ ರಸಗೊಬ್ಬರ ಸಚಿವ ಮನಸುಖ್ ಮಾಂಡವೀಯ ಅವರನ್ನು ಭೇಟಿಯಾಗಿ ಡಿಎಪಿ ಮತ್ತು ಎಂಒಪಿ ರಸಗೊಬ್ಬರ ಸರಬರಾಜು ಮಾಡಲು ಮನವಿ ಮಾಡಿದ್ದೇನೆ. ಇನ್ನು ಒಂದು ವಾರದಲ್ಲಿ ಸೂಕ್ತ ವ್ಯವಸ್ಥೆ ಮಾಡುವುದಾಗಿ ಅವರು ಭರವಸೆ ನೀಡಿದ್ದಾರೆ’ ಎಂದರು.

‘ಕರ್ನಾಟಕದಲ್ಲಿ ಅರ್ಹತೆ ಪಡೆದ ಜನರ ಪೈಕಿ ಶೇ 81ರಷ್ಟು ಜನರಿಗೆ ಮೊದಲ ಡೋಸ್ ಕೋವಿಡ್ ಲಸಿಕೆ ನೀಡಲಾಗಿದೆ. ಡಿಸೆಂಬರ್ ಅಂತ್ಯದೊಳಗೆ ಈ ಪ್ರಮಾಣವನ್ನು ಶೇ 90ಕ್ಕೆ ಹೆಚ್ಚಿಸುವ ಗುರಿ ಹಾಕಿಕೊಳ್ಳಲಾಗಿದೆ’ ಎಂದೂ ಬೊಮ್ಮಾಯಿ ಹೇಳಿದರು.

‘ಸಂಪುಟ ವಿಸ್ತರಣೆ ಚರ್ಚೆ ನಡೆದಿಲ್ಲ’

‘ಈ ಬಾರಿ ನವದೆಹಲಿ ಪ್ರವಾಸದ ವೇಳೆ ಸಚಿವ ಸಂಪುಟ ವಿಸ್ತರಣೆ ಕುರಿತು ಯಾವುದೇ ಚರ್ಚೆ ನಡೆದಿಲ್ಲ’ ಎಂದು ಬೊಮ್ಮಾಯಿ ಹೇಳಿದರು.

ಸುದ್ದಿಗಾರರ ಪ್ರಶ್ನೆಯೊಂದಕ್ಕೆ ಉತ್ತರಿಸಿದ ಅವರು, ‘ಪಕ್ಷದ ಅಧ್ಯಕ್ಷರಾದ ಜೆ.ಪಿ ನಡ್ಡಾ ಅವರನ್ನು ಭೇಟಿಯಾಗಲು ಪ್ರಯತ್ನಿಸಿದೆ. ಅವರು ಬೇರೆ ಕಾರ್ಯಕ್ರಮಗಳಲ್ಲಿ ನಿರತರಾಗಿದ್ದರಿಂದ ಭೇಟಿ ಸಾಧ್ಯವಾಗಲಿಲ್ಲ. ಸಚಿವ ಸಂಪುಟ ವಿಸ್ತರಣೆ ಕುರಿತು ಯಾವುದೇ ಚರ್ಚೆ ನಡೆಸಲು ಆಗಿಲ್ಲ’ ಎಂದು ತಿಳಿಸಿದರು.

ದಸರಾ: ಹೆಚ್ಚುವರಿ ಬೋಗಿಗಳ ಜೋಡಣೆ

ಹುಬ್ಬಳ್ಳಿ: ದಸರಾ ಹಬ್ಬದ ಅಂಗವಾಗಿ ಪ್ರಯಾಣಿಕರ ಅನುಕೂಲಕ್ಕಾಗಿ ನೈರುತ್ಯ ರೈಲ್ವೆ ವಲಯವು ಹಲವು ರೈಲುಗಳಿಗೆ ಹೆಚ್ಚುವರಿಯಾಗಿ ಎರಡು ಬೋಗಿಗಳನ್ನು ಜೋಡಿಸುತ್ತಿದೆ.

ಮೈಸೂರು–ಹುಬ್ಬಳ್ಳಿ (ರೈಲು ಸಂಖ್ಯೆ 06582), ಮೈಸೂರು–ಸೊಲ್ಲಾಪುರ (06535), ಮೈಸೂರು–ಶಿವಮೊಗ್ಗ (06227) ಹಾಗೂ ಬೆಂಗಳೂರು–ಹುಬ್ಬಳ್ಳಿ (06241) ರೈಲುಗಳಿಗೆ ಅ.13 ಹಾಗೂ 14 ರಂದು ಹೆಚ್ಚುವರಿ ಬೋಗಿಗಳಿರಲಿವೆ.

ಹುಬ್ಬಳ್ಳಿ–ಮೈಸೂರು (96581), ಹುಬ್ಬಳ್ಳಿ–ಬೆಂಗಳೂರು (06242) ಅ.17 ರಂದು, ಬೆಂಗಳೂರು–ಮೀರಜ್ (06589), ಬೆಂಗಳೂರು–ಬೆಳಗಾವಿ (06549) ಅ.13 ರಿಂದ 16ರವರೆಗೆ, ಮೀರಜ್–ಬೆಂಗಳೂರು (06590), ಬೆಳಗಾವಿ–ಬೆಂಗಳೂರು (06550) ಅ.14 ರಿಂದ 17ರವರೆಗೆ, ಬೆಂಗಳೂರು–ಹುಬ್ಬಳ್ಳಿ (02079), ಹುಬ್ಬಳ್ಳಿ–ಬೆಂಗಳೂರು (02080) ಅ.13 ರಿಂದ 17ರವರೆಗೆ ಹೆಚ್ಚುವರಿ ಬೋಗಿಗಳನ್ನು ಜೋಡಿಸಲಾಗಿದೆ ಎಂದು ನೈರುತ್ಯ ರೈಲ್ವೆ ವಲಯದ ಪ್ರಕಟಣೆ ತಿಳಿಸಿದೆ.

‘ಹಿಂಸೆಗೆ ಪ್ರಚೋದಿಸಿದ ಸಚಿವ ನಾಗೇಶ್’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಶಾಲಾ ಪಠ್ಯ ಪುಸ್ತಕಗಳ ಪರಿಷ್ಕರಣೆ ಕುರಿತು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಖಾತೆ ಸಚಿವ ಬಿ.ಸಿ. ನಾಗೇಶ್ ನೀಡಿರುವ ಹೇಳಿಕೆ ಹಿಂಸೆಗೆ ಪ್ರಚೋದನೆ ನೀಡುವುದಾಗಿದೆ. ಈ ಹೇಳಿಕೆಯನ್ನು ಅವರು ವಾಪಸ್ ಪಡೆಯಬೇಕು’ ಎಂದು ಸಾಹಿತಿ ಪ್ರೊ. ಬರಗೂರು ರಾಮಚಂದ್ರಪ್ಪ ಒತ್ತಾಯಿಸಿದ್ದಾರೆ.



ಬರಗೂರು ರಾಮಚಂದ್ರಪ್ಪ

‘ಪಠ್ಯಪುಸ್ತಕಗಳಲ್ಲಿನ ದೋಷಗಳನ್ನು ಸಾರ್ವಜನಿಕರು ಗಂಭೀರವಾಗಿ ಗಮನಿಸಿದ್ದರೆ ಸಂಬಂಧಿಸಿದವರ ಮೇಲೆ ಹಲ್ಲೆ ಮಾಡುತ್ತಿದ್ದರು ಎಂದು ಶಿಕ್ಷಣ ಸಚಿವರು ಹೇಳಿಕೆ ನೀಡಿದ್ದಾರೆ. ಪ್ರಜಾಸತ್ತಾತ್ಮಕ ಮೌಲ್ಯಗಳಲ್ಲಿ ನಂಬಿಕೆ ಇದ್ದರೆ ಸಚಿವರು ಇಂತಹ ಹೇಳಿಕೆ ನೀಡುತ್ತಿರಲಿಲ್ಲ. ಪಠ್ಯ ಪುಸ್ತಕ ಪರಿಷ್ಕರಣೆ ಕುರಿತು ಕೆಲವು ಸುಳ್ಳುಗಳನ್ನು ಹಬ್ಬಿಸುತ್ತ ಬಂದವರ ಸಾಲಿಗೆ ಸಚಿವರೂ ಸೇರಿಕೊಂಡಿದ್ದು ವಿಷಾದನೀಯ’ ಎಂದು ಹೇಳಿಕೆಯಲ್ಲಿ ತಿಳಿಸಿದ್ದಾರೆ.

‘ಪಠ್ಯಪುಸ್ತಕಗಳು ಪಕ್ಷ ಪುಸ್ತಕಗಳಲ್ಲ ಎಂದು ಎಲ್ಲ ಪಕ್ಷಗಳ ಸರ್ಕಾರಕ್ಕೂ ಹೇಳುತ್ತ ಬಂದಿದ್ದು, ಈಗಲೂ ಪಕ್ಷ ಪೂರ್ವಾಗ್ರಹವನ್ನು ವಿರೋಧಿಸುತ್ತೇನೆ. ಸುಳ್ಳು ಸುದ್ದಿಗೆ ಸಚಿವರೇ ಶಾಮೀಲಾಗುವುದನ್ನು ವಿರೋಧಿಸುತ್ತೇನೆ’ ಎಂದು ಹೇಳಿದ್ದಾರೆ.

‘ಸಚಿವರು ಹೇಳಿದಂತೆ ಕುವೆಂಪು ಅವರ ರಚನೆಯನ್ನು ಕೈಬಿಟ್ಟಿಲ್ಲ. ಏಳನೇ ತರಗತಿಯ ಪಠ್ಯದಲ್ಲಿ ದೇಶಭಕ್ತಿಗೆ ಬದ್ಧವಾದ ಕುವೆಂಪು ಅವರ ‘ಭರತ ಭೂಮಿ ನಮ್ಮ ತಾಯಿ’ ಪದ್ಯವನ್ನು ಸೇರಿಸಲಾಗಿದೆ. ಪ್ರೌಢಶಾಲೆ ಹಂತದಲ್ಲೂ ಒಂದು ರಚನೆ ಇದೆ. ಕನ್ನಡ ಪಠ್ಯಗಳ ರಕ್ಷಾ ಪುಟದ ಒಳಬದಿಯಲ್ಲಿ ನಾಡಗೀತೆಯನ್ನು ಕೊಡಲಾಗಿದೆ. ಇನ್ನು ಕೆಲವರು ಅಪಪ್ರಚಾರ ಮಾಡಿದಂತೆ ಕೆಂಪೇಗೌಡರ ವಿವರಗಳನ್ನು ಕೈಬಿಟ್ಟಿಲ್ಲ. ಏಳನೇ ತರಗತಿ ಸಮಾಜ ವಿಜ್ಞಾನದಲ್ಲಿ ಕೊಡಲಾಗಿದೆ. ಹಿಂದೆ ವಿವೇಕಾನಂದರ ಕುರಿತು ಪಾಠ ಇರಲಿಲ್ಲ. ಅದನ್ನು ಸೇರಿಸಲಾಗಿದೆ’ ಎಂದು ತಿಳಿಸಿದ್ದಾರೆ.

‘ಪಠ್ಯ ಪುಸ್ತಕ ಪರಿಷ್ಕರಣೆಗೆ ರಚಿಸಲಾಗಿದ್ದ ನನ್ನ ಸರ್ವಾಧ್ಯಕ್ಷತೆಯ 27 ಸಮಿತಿಗಳು ರಾಷ್ಟ್ರೀಯ ಪಠ್ಯಕ್ರಮದ ಚೌಕಟ್ಟಿನಲ್ಲೇ ಕೆಲಸ ಮಾಡಿವೆ. ಈಗಿರುವ ಪಠ್ಯಗಳಲ್ಲಿ ತಪ್ಪುಗಳಿದ್ದರೆ ಆಯಾ ವಿಷಯ ತಜ್ಞರು ಪರಿಶೀಲಿಸಿ ಸರಿಪಡಿಸಲಿ. ಆದರೆ, ಸಕಾರಣಕ್ಕೆ ಪರಿಶೀಲಿಸುವ ಬದಲು ಕುವೆಂಪು, ಕೆಂಪೇಗೌಡರು, ವಾಲ್ಮೀಕಿ ಮುಂತಾದವರನ್ನು ಉದ್ದೇಶಪೂರ್ವಕವಾಗಿ ಉಲ್ಲೇಖಿಸಿ ಸುಳ್ಳಿನ ಬೆಳೆ ಬೆಳೆಯಿಸಿಕೊಳ್ಳಲಾಗುತ್ತಿದೆ’ ಎಂದು ಬರಗೂರು ಆಕ್ಷೇಪಿಸಿದ್ದಾರೆ.

ನಾಗೇಶ್ ಕ್ಷಮೆ ಕೇಳಲಿ: ಸಂಘಟನೆಗಳ ಒತ್ತಾಯ

ಶಾಲಾ ಪಠ್ಯ ಪುಸ್ತಕ ಪರಿಷ್ಕರಣೆ ಕುರಿತು ಹಿಂಸೆ ಪ್ರಚೋದಿಸುವ ಹೇಳಿಕೆ ನೀಡಿರುವ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಅವರು ತಮ್ಮ ಹೇಳಿಕೆಯನ್ನು ವಾಪಸ್ ಪಡೆದು ಕ್ಷಮೆಯಾಚಿಸಬೇಕು ಎಂದು ಸಾಹಿತಿಗಳು, ದಲಿತ ಸಂಘಟನೆಗಳು, ವಿದ್ಯಾರ್ಥಿ ಯುವ ಜನ ಸಂಘಟನೆಗಳು, ರೈತ–ಕಾರ್ಮಿಕ ಸಂಘಟನೆಗಳು, ಸಮುದಾಯ ಕರ್ನಾಟಕ, ಬಂಡಾಯ ಸಾಹಿತ್ಯ ಸಂಘಟನೆಗಳ ಮುಖಂಡರು ಒತ್ತಾಯಿಸಿದ್ದಾರೆ.

ಪಠ್ಯ ಪುಸ್ತಕಗಳಲ್ಲಿ ದೋಷಗಳಿದ್ದರೆ ತಜ್ಞರು ಪರಿಶೀಲಿಸಲಿ. ಆದರೆ, ಪೂರ್ವಾಗ್ರಹದಿಂದ ಅಪಪ್ರಚಾರ ಮಾಡುತ್ತಿರುವ ಮಿಥ್ಯಾರೋಪಗಳಿಗೆ ವಿರೋಧವಿದೆ ಎಂದು ಜಿ. ರಾಮಕೃಷ್ಣ, ಕೆ. ಮರುಳಸಿದ್ದಪ್ಪ, ಎಲ್. ಹನುಮಂತಯ್ಯ, ಟಿ.ಆರ್. ಚಂದ್ರಶೇಖರ್, ಎಸ್.ಜಿ. ಸಿದ್ದರಾಮಯ್ಯ, ರಹಮತ್ ತರೀಕೆರೆ, ಲಕ್ಷ್ಮೀನಾರಾಯಣ ನಾಗವಾರ, ಇಂದೂಧರ ಹೊನ್ನಾಪುರ, ಸಿದ್ದನಗೌಡ ಪಾಟೀಲ, ಕೆ.ಎಸ್. ವಿಮಲಾ, ಜಿ.ಎನ್. ನಾಗರಾಜ್, ಬಂಜಗೆರೆ ಜಯಪ್ರಕಾಶ್, ಭಾನು ಮುಸ್ತಾಕ್, ಕೋಡಿಹಳ್ಳಿ ಚಂದ್ರಶೇಖರ್, ಬಿ. ರಾಜಶೇಖರಮೂರ್ತಿ ಸೇರಿದಂತೆ 30 ಜನರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

14 ಭಾಷೆಗಳಿಗೆ ಭಾಷಾಂತರಿಸುವ ಯೋಜನೆ: ಎಚ್.ಎಂ. ರೇವಣ್ಣ

ಕುರುಬರ ಸಂಸ್ಕೃತಿ ದರ್ಶನ: 13 ಗ್ರಂಥ ಬಿಡುಗಡೆ

ಪ್ರಜಾವಾಣಿ ವಾರ್ತೆ

ರಾಯಚೂರು: ಕುರುಬರ ಸಂಸ್ಕೃತಿ ದರ್ಶನ ಮಾಲಿಕೆಯ 13 ಗ್ರಂಥಗಳನ್ನು ಕಾಂಗ್ರೆಸ್ ಮುಖಂಡ ಎಚ್.ಎಂ.ರೇವಣ್ಣ ಅವರು ಶನಿವಾರ ಇಲ್ಲಿ ಬಿಡುಗಡೆಗೊಳಿಸಿದರು.

ನಗರದ ಪಂಡಿತ ಸಿದ್ಧರಾಮ ಜಂಬಲದಿನ್ನಿ ರಂಗಮಂದಿರದಲ್ಲಿ ಕುರುಬರ ಸಾಂಸ್ಕೃತಿಕ ಪರಿಷತ್ ಅಭಿಮಾನಿಗಳ ವತಿಯಿಂದ ಸಮಾರಂಭ ಆಯೋಜಿಸಲಾಗಿತ್ತು.

‘ಕುರುಬ ಸಮಾಜ ವಿಶಿಷ್ಟ ಐತಿಹಾಸಿಕ ಹಿನ್ನೆಲೆ ಹೊಂದಿದೆ. ಸಮಾಜದ ಇತಿಹಾಸ, ಸಂಸ್ಕೃತಿಯನ್ನು ಪ್ರತಿಯೊಬ್ಬರಿಗೂ ತಿಳಿಸುವ ಉದ್ದೇಶವಿದೆ. ಸಮಾಜದ ಮುಖಂಡರು ಮುಂದಿನ ಪೀಳಿಗೆಗೆ ಸಂಸ್ಕೃತಿ ರವಾನಿಸಲು ಜಾಗೃತಿ ಮೂಡಿಸಬೇಕು. ಈ ಗ್ರಂಥಗಳನ್ನು 14 ಭಾಷೆಗಳಿಗೆ ಭಾಷಾಂತರಿಸುವ ಯೋಜನೆಯೂ ಇದೆ’ ಎಂದು ರೇವಣ್ಣ ಹೇಳಿದರು.

ಕುರುಬ ಸಮಾಜದ ಮುಖಂಡ ಬಿ.ಕೆ. ರವಿ ಮಾತನಾಡಿ, ಸಮಾಜದ ಇತಿಹಾಸವನ್ನು ವೈಜ್ಞಾನಿಕವಾಗಿ ದಾಖಲು ಮಾಡಿದ ಪ್ರಥಮ ಸಮಾಜ ಕುರುಬರದ್ದು. ಅಪಾರ ಶ್ರಮವಹಿಸಿ ಕುರುಬ ಸಮುದಾಯದ ಸಾಂಸ್ಕೃತಿಕ ಹಿನ್ನೆಲೆ ದಾಖಲೀಕರಿಸಲಾಗಿದೆ ಎಂದು ತಿಳಿಸಿದರು.

ಲೇಖಕ ಲಿಂಗದಹಳ್ಳಿ ಹಾಲಪ್ಪ ಅವರು ಬರೆದ ‘ಇತಿಹಾಸ ಭಾಗ–1, 2’ ‘ಧರ್ಮ ಭಾಗ–1,2,3’, ‘ಸಾಂಸ್ಕೃತಿಕ ಪದಕೋಶ’, ಎಸ್.ಜಿ.ಸಿದ್ದರಾಮಯ್ಯ ಅವರು ಬರೆದ ‘ಪುರಾಣ’, ಬಿದರಿ ಚಂದ್ರಕಲಾ ಅವರು ಬರೆದ ‘ಸಾಹಿತ್ಯ’, ಚಂದ್ರಕಾಂತ ಬಿಜ್ಜರಗಿ ಮತ್ತು ಚಿಕ್ಕಣ್ಣ ಎಣ್ಣೆಕಟ್ಟೆ ಅವರು ಬರೆದ ‘ಕಲೆ ಮತ್ತು ಕ್ರೀಡೆ’, ಆರ್.ಸುನಂದಮ್ಮ ಅವರು ಬರೆದ ‘ಮಹಿಳೆ’, ಒಡೆಯರ್ ಡಿ.ಹೆಗ್ಗಡೆ ಅವರು ಬರೆದ ‘ಸಮಜೋ ಆರ್ಥಿಕ’, ಬಿ.ಕೆ.ರವಿ ಅವರು ಬರೆದ ‘ಆಧುನಿಕತೆ’, ಕಾ.ತ.ಚಿಕ್ಕಣ್ಣ ಅವರು ಬರೆದ ‘ಚಿತ್ರಕೋಶ’ ಗ್ರಂಥಗಳನ್ನು ಲೋಕಾರ್ಪಣೆ ಮಾಡಲಾಯಿತು.



ಕುರುಬರ ಸಂಸ್ಕೃತಿ ದರ್ಶನ 13 ಗ್ರಂಥಗಳನ್ನು ಕಾಂಗ್ರೆಸ್ ಮುಖಂಡ ಎಚ್.ಎಂ.ರೇವಣ್ಣ ಅವರು ಲೋಕಾರ್ಪಣೆಗೊಳಿಸಿದರು. ಕರ್ನಾಟಕ ರಾಜ್ಯ ಪ್ರದೇಶ ಕುರುಬರ ಸಂಘದ ನಿರ್ದೇಶಕ ಎಂ.ಈರಣ್ಣ, ಕೆ.ಪಂಪಾಪತಿ, ಕರಿಯಪ್ಪ, ಬಿ.ಜಿ.ಹುಲಿ, ಆರ್.ಕೆ. ವಚನಾ, ಅಹಲ್ಯಾಬಾಯಿ, ನಾಗವೇಣಿ ಎಸ್.ಪಾಟೀಲ, ವೇಣುಗೋಪಾಲ, ಲಕ್ಷ್ಮೀ ದೇವಿ, ಕೆ.ಬಸವಂತಪ್ಪ ಇದ್ದರು

ಭಾನುವಾರ, ಅಕ್ಟೋಬರ್ 10, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 282 | ಪುಟ 22

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಒಳ ಪುಟಗಳು



ಚಿನಕುರಳಿ

ಪ್ರಕಾಶ್ ಶೆಟ್ಟಿ



ಇ.ವಿ: ಗುರಿ ಈಡೇರೀತೇ?

• ವಿಜಯ್ ಜೋಷಿ

ಬೆಂಗಳೂರು: ದೇಶದ ವಾಹನ ಮಾರುಕಟ್ಟೆಯಲ್ಲಿ 2030ರ ವೇಳೆಗೆ ವಿದ್ಯುತ್ ಚಾಲಿತ ವಾಹನಗಳ ಪ್ರಾಬಲ್ಯ ಇರಬೇಕು ಎಂಬ ಮಹತ್ವಾಕಾಂಕ್ಷೆಯನ್ನು 'ನೀತಿ ಆಯೋಗ' ಹೊಂದಿದೆ. ಆದರೆ, ವಿದ್ಯುತ್ ಚಾಲಿತ (ಇ.ವಿ.) ವಾಹನಗಳಿಗೆ ಸಂಬಂಧಿಸಿದಂತೆ ಈಗ ಇರುವ ನೀತಿಗಳು, ಮಾರುಕಟ್ಟೆ ಪರಿಸ್ಥಿತಿ ಹಾಗೂ ಮೂಲಸೌಕರ್ಯ ಇದರ ಈಡೇರಿಕೆಗೆ ಪೂರಕವಾಗಿ ಇವೆಯೇ?

'ಕೇಂದ್ರ ಸರ್ಕಾರವು ತನ್ನ ಕಡೆಯಿಂದ ಸಾಧ್ಯವಿರುವ ಬಹುತೇಕ ಕೆಲಸಗಳನ್ನು ಮಾಡುತ್ತಿದೆ, ಅಗತ್ಯ ಸಬ್ಸಿಡಿ ನೀಡುತ್ತಿದೆ. ಆದರೆ ಇಷ್ಟೇ ಸಾಕಾಗದು. ಇ.ವಿ.ಗಳತ್ತ ಗ್ರಾಹಕರು ಹೆಚ್ಚು ಆಸಕ್ತಿ ತೋರಿಸಬೇಕು, ಒಳ್ಳೆಯ ಉತ್ಪನ್ನಗಳು ಮಾರುಕಟ್ಟೆಗೆ ಬರಬೇಕು, ಚಾರ್ಜಿಂಗ್ ಮೂಲಸೌಕರ್ಯ ದೊಡ್ಡ ಪ್ರಮಾಣದಲ್ಲಿ ಅಭಿವೃದ್ಧಿ ಹೊಂದಬೇಕು. ಇವೆಲ್ಲವುಗಳ ಜೊತೆಯಲ್ಲೇ, ಇ.ವಿ. ಖರೀದಿಸುವುದನ್ನು ಉತ್ತೇಜಿಸುವ ರೀತಿಯ ಸಾಲದ ನೆರವು ಹಣಕಾಸು ಸಂಸ್ಥೆಗಳಿಂದ ಸಿಗಬೇಕು' ಎಂದು ಉದ್ಯಮ ವಲಯದ ಪ್ರಮುಖರು ಹಾಗೂ ಮಾರುಕಟ್ಟೆ ತಜ್ಞರು ಹೇಳುತ್ತಾರೆ.

ನೀತಿ ಆಯೋಗ ಮತ್ತು ಆರ್‌ಎಂಐ ಸಂಸ್ಥೆಯ ಅಂದಾಜಿನ ಪ್ರಕಾರ 2030ರ ವೇಳೆಗೆ ದೇಶದ ದ್ವಿಚಕ್ರ ವಾಹನಗಳ ಪೈಕಿ ಶೇ 80ರಷ್ಟು, ನಾಲ್ಕು ಚಕ್ರದ ವಾಹನಗಳ ಪೈಕಿ ಶೇ 50ರಷ್ಟು ಹಾಗೂ ಬಸ್ಸುಗಳ ಪೈಕಿ ಶೇ 40ರಷ್ಟು ಇ.ವಿ. ಆಗಿರಬೇಕು. 'ವಾಹನ ಮಾರುಕಟ್ಟೆಯಲ್ಲಿ ಇ.ವಿ.ಗಳ ಪಾಲು ಹೆಚ್ಚಾಗಬೇಕು ಎಂದಾದರೆ ಸರ್ಕಾರದ ನೀತಿಗಳು ಹೇಗಿರುತ್ತವೆ ಎಂಬುದೇ ಮುಖ್ಯವಾಗುತ್ತವೆ' ಎಂದು ಮರ್ಸಿಡೀಸ್ ಬೆಂಜ್ ಕಂಪನಿಯ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ (ಸಿಇಒ) ಮಾರ್ಟಿನ್ ಶ್ವೆಂಕ್ 'ಪ್ರಜಾವಾಣಿ' ಜೊತೆ ಅಭಿಪ್ರಾಯ ಹಂಚಿಕೊಂಡರು.

6ನೇ ಪುಟ ನೋಡಿ

ಇನ್ನಷ್ಟು ಸುದ್ದಿಗಳು 6

ಒಳನೋಟ

ಸರಾಗವಾಗಲಿದೆಯೇ ಇ.ವಿ. ಪಯಣ

ಪ್ರತಿಕ್ರಿಯಿಸಿ: 9606038256
feedback@prajavani.co.in

ಇ.ವಿ. ವಿಚಾರವಾಗಿ ಕೇಂದ್ರ ಸರ್ಕಾರವು ಈವರೆಗೆ ಒಳ್ಳೆಯ ನೀತಿಗಳನ್ನು ಜಾರಿಗೊಳಿಸಿದೆ. ಇದರೊಂದಿಗೆ, ದೀರ್ಘಾವಧಿಗೆ ಅನ್ವಯವಾಗುವ ನೀತಿಯೊಂದನ್ನು ರೂಪಿಸಬೇಕು

ಹೇಮಲ್ ಥಕ್ಕರ್, ಕ್ರಿಸಿಲ್‌ನ ಸಂಶೋಧನಾ ವಿಭಾಗದ ಮುಖ್ಯಸ್ಥ

ಇ.ವಿ. ದ್ವಿಚಕ್ರ ವಾಹನ ಮಾರುಕಟ್ಟೆ ವೇಗವಾಗಿ ಬೆಳವಣಿಗೆ ಆಗಲಿದೆ. ಸಣ್ಣ ಬ್ಯಾಟರಿ ಸಾಕೆಂಬ ಅಂಶ, ಬೃಹತ್ ಮಾರುಕಟ್ಟೆ, ಖರೀದಿಸಲು ಸಾಧ್ಯವಾಗುವ ದರ ಇದಕ್ಕೆ ಕಾರಣ

ತನು ಶರ್ಮ, ಬ್ರಿಕ್‌ವರ್ಕ್ ರೇಟಿಂಗ್ಸ್ ಆಟೊಮೊಬೈಲ್ ವಿಭಾಗದ ನಿರ್ದೇಶಕಿ



ಸಾಂದರ್ಭಿಕ ಚಿತ್ರ

80% ನೀತಿ ಆಯೋಗ–ಆರ್‌ಎಂಐ ವರದಿಯ ಅಂದಾಜಿನ ಪ್ರಕಾರ, 2030ರ ವೇಳೆಗೆ ದೇಶದ ದ್ವಿಚಕ್ರ–ತ್ರಿಚಕ್ರ ವಾಹನ ಮಾರುಕಟ್ಟೆಯಲ್ಲಿ ಇರಬಹುದಾದ ಇ.ವಿ. ಪಾಲು

50% ನಾಲ್ಕು ಚಕ್ರಗಳ ವಾಹನ ಮಾರುಕಟ್ಟೆಯಲ್ಲಿ ಇರಲಿರುವ ಇ.ವಿ. ಪಾಲು

40% ಬಸ್ಸುಗಳ ಮಾರುಕಟ್ಟೆಯಲ್ಲಿ ಇರಬಹುದಾದ ಇ.ವಿ.ಗಳು

(ಆರ್‌ಎಂಐ ಸಂಸ್ಥೆಯು ಪರಿಸರ ಪೂರಕ ಇಂಧನ ಬಳಕೆಯನ್ನು ಉತ್ತೇಜಿಸುವ ಲಾಭದ ಉದ್ದೇಶವಿಲ್ಲದ ಸಂಸ್ಥೆ)

ಇ.ವಿ. ಬಳಕೆ: ತೊಡಕುಗಳು ಹಲವು

• ಜಯಸಿಂಹ ಆರ್.

ಬೆಂಗಳೂರು: ಭಾರತದಲ್ಲಿ ಸದ್ಯ ಹಲವು ವಿದ್ಯುತ್ ಚಾಲಿತ ಕಾರುಗಳು ಮಾರಾಟವಾಗುತ್ತಿವೆ. ಪ್ರವೇಶಮಟ್ಟದ ವಿದ್ಯುತ್ ಚಾಲಿತ ಕಾರುಗಳು ಒಮ್ಮೆ ಚಾರ್ಜ್ ಮಾಡಿದರೆ ಗರಿಷ್ಠ 80-90 ಕಿ.ಮೀ.ನಷ್ಟು ದೂರ ಕ್ರಮಿಸುವ (ರೇಂಜ್) ಸಾಮರ್ಥ್ಯ ಹೊಂದಿವೆ. ಅತ್ಯಾಧುನಿಕ ತಂತ್ರಜ್ಞಾನದ ವಿದ್ಯುತ್ ಚಾಲಿತ ಕಾರುಗಳ ರೇಂಜ್ 300 ಕಿ.ಮೀ.ನಿಂದ 450 ಕಿ.ಮೀ.ವರೆಗೂ ಇವೆ. ಇವುಗಳಲ್ಲಿ ಕೆಲವು ಕಾರುಗಳನ್ನಷ್ಟೇ ದೂರದ ಪ್ರಯಾಣಕ್ಕೆ ಬಳಸಲು ಸಾಧ್ಯವಾಗುತ್ತದೆ, ಅದೂ ಹೆದ್ದಾರಿ ಮಧ್ಯೆ ಚಾರ್ಜಿಂಗ್ ವ್ಯವಸ್ಥೆ ಇದ್ದರೆ ಮಾತ್ರ.

ಭಾರತದ ಹೆದ್ದಾರಿಗಳಲ್ಲಿ ವಿದ್ಯುತ್ ಚಾಲಿತ ವಾಹನಗಳ ಚಾರ್ಜಿಂಗ್ ವ್ಯವಸ್ಥೆ ಇಲ್ಲವೇ ಇಲ್ಲ. ಮುಂಬೈ, ದೆಹಲಿಯಂತಹ ದೊಡ್ಡ ನಗರಗಳ ಹೊರವಲಯದಲ್ಲಿ ಕೆಲವು ಚಾರ್ಜಿಂಗ್ ಕೇಂದ್ರಗಳಿವೆ. ಬೇರೆ ನಗರಗಳಲ್ಲಿ, ನಗರದ ಪರಿಮಿತಿಯಲ್ಲಷ್ಟೇ ಚಾರ್ಜಿಂಗ್ ವ್ಯವಸ್ಥೆ ಇದೆ.

ಚಾರ್ಜಿಂಗ್ ವ್ಯವಸ್ಥೆ ಸುಧಾರಿಸಿದರೆ ವಿದ್ಯುತ್ ಚಾಲಿತ ಕಾರನ್ನು ಖರೀದಿಸಬಹುದು ಎಂದು ಗ್ರಾಹಕರು ಬಯಸುತ್ತಾರೆ. ಆದರೆ, ಕೆಲವು ಕಂಪನಿಗಳು ಚಾರ್ಜಿಂಗ್ ವ್ಯವಸ್ಥೆಯಾದರೆ ಮಾತ್ರವೇ ಮಾರುಕಟ್ಟೆಗೆ ವಿದ್ಯುತ್ ಚಾಲಿತ ಕಾರುಗಳನ್ನು ಬಿಡುಗಡೆ ಮಾಡಲು ಕಾದಿವೆ. ಹೀಗಾಗಿ ವಿದ್ಯುತ್ ಚಾಲಿತ ವಾಹನಗಳ ಸಂಖ್ಯೆಯೂ ಕಡಿಮೆ ಇದೆ, ಚಾರ್ಜಿಂಗ್ ವ್ಯವಸ್ಥೆಯೂ ಸುಧಾರಿಸುತ್ತಿಲ್ಲ. ಟಾಟಾ ಪವರ್ ಕಂಪನಿ ಮಾತ್ರ ದೇಶದ ಹಲವೆಡೆ, ಎಚ್‌ಪಿ ಪೆಟ್ರೋಲ್ ಬಂಕ್‌ಗಳಲ್ಲಿ ಚಾರ್ಜಿಂಗ್ ಕೇಂದ್ರಗಳನ್ನು ಸ್ಥಾಪಿಸುತ್ತಿದೆ.

ಹೆದ್ದಾರಿಗಳಲ್ಲಿ ಚಾರ್ಜಿಂಗ್ ಕೇಂದ್ರ ಸ್ಥಾಪಿಸಲು ಹಲವು ತೊಡಕುಗಳಿವೆ. ಮನೆಗಳಲ್ಲಿಯೇ ಇಂತಹ ಕಾರುಗಳನ್ನು ಪೂರ್ಣ ಪ್ರಮಾಣದಲ್ಲಿ ಚಾರ್ಜ್ ಮಾಡಲು 6-8 ಗಂಟೆ ಬೇಕಾಗುತ್ತದೆ.

6ನೇ ಪುಟ ನೋಡಿ

ಲಖಿಂಪುರ ಹಿಂಸಾಚಾರ ಸಚಿವರ ಪುತ್ರನ ವಿಚಾರಣೆ



ಆಶಿಶ್ ಮಿಶ್ರಾ

ಲಖಿಂಪುರ ಖೇರಿ (ಉತ್ತರ ಪ್ರದೇಶ) (ಪಿಟಿಐ): ಲಖಿಂಪುರ ಖೇರಿ ಹಿಂಸಾಚಾರ ಪ್ರಕರಣಕ್ಕೆ ಸಂಬಂಧಿಸಿದಂತೆ, ಕೇಂದ್ರ ಗೃಹ ಖಾತೆ ರಾಜ್ಯ ಸಚಿವ ಅಜಯ್ ಮಿಶ್ರಾ ಅವರ ಪುತ್ರ ಆಶಿಶ್ ಮಿಶ್ರಾ ಶನಿವಾರ ಇಲ್ಲಿನ ಪೊಲೀಸ್ ಮಾರ್ಗದಲ್ಲಿರುವ ಅಪರಾಧ ವಿಭಾಗದಲ್ಲಿ ಎಸ್‌ಐಟಿ ಮುಂದೆ ವಿಚಾರಣೆಗೆ ಹಾಜರಾದರು.

ಪ್ರಕರಣದಲ್ಲಿ ಉತ್ತರ ಪ್ರದೇಶ ಸರ್ಕಾರ ತೆಗೆದುಕೊಂಡ ಕ್ರಮಗಳ ಬಗ್ಗೆ ಸುಪ್ರೀಂ ಕೋರ್ಟ್ ಅಸಮಾಧಾನ ವ್ಯಕ್ತಪಡಿಸಿದ ಮರುದಿನ ಪೊಲೀಸ್ ವಿಚಾರಣೆ ಶುರುವಾಗಿದೆ.

ಬೆಳಿಗ್ಗೆ 10.30ಕ್ಕೆ ವಿಶೇಷ ತನಿಖಾ ತಂಡದ ಮುಂದೆ ಆಶಿಶ್ ಮಿಶ್ರಾ ಹಾಜರಾದರು. ಸತತ 9 ಗಂಟೆಗಳ ಕಾಲ ವಿಚಾರಣೆ ನಡೆಯಿತು. ಅವರು ಶುಕ್ರವಾರ ವಿಚಾರಣೆಗೆ ಹಾಜರಾಗಿರಲಿಲ್ಲ. ಹೀಗಾಗಿ ಎರಡನೇ ಸಮನ್ಸ್ ಹೊರಡಿಸಲಾಗಿತ್ತು. ಸ್ಥಳದಲ್ಲಿ ಹೆಚ್ಚುವರಿ ಭದ್ರತಾ ಪಡೆಗಳನ್ನು ನಿಯೋಜಿಸಲಾಗಿದೆ.

ಆಶಿಶ್ ಮಿಶ್ರಾ ಅವರು ಅತ್ತ ಉಪ ಪೊಲೀಸ್ ಇನ್‌ಸ್ಪೆಕ್ಟರ್ ಜನರಲ್ ಉಪೇಂದ್ರ ಅಗರ್ವಾಲ್ ನೇತೃತ್ವದ ಎಸ್‌ಐಟಿ ತಂಡದಿಂದ ವಿಚಾರಣೆ ಎದುರಿಸುತ್ತಿದ್ದರೆ, ಇತ್ತ ಅವರ ತಂದೆ ಅಜಯ್ ಮಿಶ್ರಾ ಅವರು ಲಖಿಂಪುರದಲ್ಲಿರುವ ತಮ್ಮ ಪಕ್ಷದ ಕಚೇರಿಯಲ್ಲಿ ವಕೀಲರ ಜೊತೆ ಸುದೀರ್ಘ ಮಾತುಕತೆಯಲ್ಲಿ ತೊಡಗಿದ್ದರು.

ಪ್ರಕರಣಕ್ಕೆ ಸಂಬಂಧಿಸಿದಂತೆ ಆಶಿಶ್ ಮಿಶ್ರಾಗೆ ಕೇಳಲು ಸುಮಾರು 25 ಪ್ರಶ್ನೆಗಳನ್ನು ಪೊಲೀಸ್ ತಂಡ ಸಿದ್ಧಪಡಿಸಿಕೊಂಡಿತ್ತು ಎಂದು ಮೂಲಗಳು ತಿಳಿಸಿವೆ.

ಈ ಪ್ರಕರಣದಲ್ಲಿ ಗುರುವಾರ ಇಬ್ಬರನ್ನು ಬಂಧಿಸಿದ ನಂತರ, ಆರೋಪಿ ಆಶಿಶ್ ಮಿಶ್ರಾ ಅವರ ಮನೆಯ ಹೊರಗೆ ಪೊಲೀಸರು ನೋಟಿಸ್ ಅಂಟಿಸಿದ್ದರು. ಎಂಟು ಜೀವಗಳನ್ನು ಬಲಿ ತೆಗೆದುಕೊಂಡ ಪ್ರಕರಣದ ವಿಚಾರಣೆಗೆ ಹಾಜರಾಗುವಂತೆ ಸೂಚಿಸಲಾಗಿತ್ತು.

ಕಾಂಗ್ರೆಸ್ 'ಮೌನವ್ರತ': ಅಜಯ್ ಮಿಶ್ರಾ ಅವರನ್ನು ಸಂಪುಟದಿಂದ ಕೈಬಿಡಬೇಕು ಹಾಗೂ ಆರೋಪಿಗಳನ್ನು ಬಂಧಿಸುವಂತೆ ಒತ್ತಾಯಿಸಿ, ಸೋಮವಾರ 'ಮೌನವ್ರತ' ಹಮ್ಮಿಕೊಳ್ಳಲು ಕಾಂಗ್ರೆಸ್ ನಿರ್ಧರಿಸಿದೆ.

ಶಿರಸಿ: ₹ 100 ದಾಟಿದ ಡೀಸೆಲ್ ದರ

ಪ್ರಜಾವಾಣಿ ವಾರ್ತೆ


ಶಿರಸಿ: ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳು ಪೆಟ್ರೋಲ್ ಮತ್ತು ಡೀಸೆಲ್ ದರವನ್ನು ಶನಿವಾರ ಹೆಚ್ಚಿಸಿದ್ದು, ಶಿರಸಿ ನಗರದಲ್ಲಿ ಲೀಟರ್ ಡೀಸೆಲ್ ದರ ₹ 100.12ಕ್ಕೆ ಏರಿಕೆಯಾಗಿದೆ. ರಾಜ್ಯದಲ್ಲಿ ಡೀಸೆಲ್ ದರವು ಮೊದಲಿಗೆ ₹ 100ರ ಗಡಿ ದಾಟಿದ್ದು ಶಿರಸಿ ನಗರದಲ್ಲಿ.

ಶುಕ್ರವಾರ ಇಲ್ಲಿ ಡೀಸೆಲ್ ಬೆಲೆ ₹ 99.75 ಇತ್ತು. ಪೆಟ್ರೋಲ್ ದರವು ₹ 100 ಗಡಿಯನ್ನು ಮೊದಲಿಗೆ ದಾಟಿದ್ದು ಕೂಡ ಶಿರಸಿ ನಗರದಲ್ಲೇ. ಜೂನ್ 6ರಂದು ಇಲ್ಲಿ ಪೆಟ್ರೋಲ್ ದರ ₹ 100ರ ಗಡಿ ದಾಟಿತ್ತು.

'ಶಿರಸಿಗೆ ಮಂಗಳೂರಿನಿಂದ ಪೆಟ್ರೋಲ್, ಡೀಸೆಲ್ ಪೂರೈಕೆ ಆಗುತ್ತಿದೆ. ಸಾಗಾಣಿಕೆ ವೆಚ್ಚ ಹೆಚ್ಚು ಇರುವ ಕಾರಣ, ರಾಜ್ಯದ ಇತರ ಕಡೆಗಳಿಗಿಂತ ಇಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ದರ ಜಾಸ್ತಿ' ಎಂದು ಪೆಟ್ರೋಲ್ ಬಂಕ್ ಮಾಲೀಕರೊಬ್ಬರು ತಿಳಿಸಿದರು.

'ಡೀಸೆಲ್ ಬೆಲೆ ಏರಿಕೆಯಿಂದ ಸರಕು ಸಾಗಣೆ ವೆಚ್ಚ ಅಧಿಕಗೊಳ್ಳಲಿದೆ. ಇದು ಎಲ್ಲ ವಿಧದ ವಸ್ತುಗಳ ದರ ಏರಿಕೆಗೆ ಕಾರಣವಾಗಲಿದೆ. ತೈಲ ಬೆಲೆಯಲ್ಲಿ ಸ್ಥಿರತೆ ಇಲ್ಲದಿರುವುದು ಸರಕು ಸಾಗಣೆ ವೆಚ್ಚ ನಿಗದಿ ಮಾಡುವುದಕ್ಕೆ ಸಮಸ್ಯೆ ತಂದೊಡ್ಡುತ್ತಿದೆ' ಎಂದು ಶಿರಸಿಯ ಸರಕು ಸಾಗಣೆ ಉದ್ಯಮಿ ಶ್ರೀನಿವಾಸ ನಾಯ್ಕ ಪ್ರತಿಕ್ರಿಯಿಸಿದರು.

ಡೀಸೆಲ್ ದರ ಏರಿಳಿತ ಹಾದಿ



(ರಾಜ್ಯದಲ್ಲಿ ಡೀಸೆಲ್ ದರವು ₹ 100 ಗಡಿಯನ್ನು ಮೊದಲು ದಾಟಿದ್ದು ಶಿರಸಿಯಲ್ಲಿ. ಹಾಗಾಗಿ, ಅಲ್ಲಿನ ಲೀಟರ್ ಡೀಸೆಲ್ ದರವನ್ನು ನೀಡಲಾಗಿದೆ.)

15 ಜಿಲ್ಲೆಗಳಲ್ಲಿ 'ಯೆಲ್ಲೊ ಅಲರ್ಟ್' ಘೋಷಣೆ

ಬೆಂಗಳೂರು: ರಾಜ್ಯದ ಉತ್ತರ ಮತ್ತು ದಕ್ಷಿಣ ಒಳನಾಡಿನ ಜಿಲ್ಲೆಗಳಲ್ಲಿ ಅ.10 ಮತ್ತು 11ರಂದು ಧಾರಾಕಾರ ಮಳೆಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಬಾಗಲಕೋಟೆ, ಬೆಳಗಾವಿ, ಧಾರವಾಡ, ಗದಗ, ಕೊಪ್ಪಳ, ರಾಯಚೂರು, ವಿಜಯಪುರ, ಬೆಂಗಳೂರು ಗ್ರಾಮಾಂತರ, ಚಿಕ್ಕಮಗಳೂರು, ಹಾಸನ, ಕೊಡಗು, ಕೋಲಾರ, ಮಂಡ್ಯ, ಶಿವಮೊಗ್ಗ, ತುಮಕೂರು ಜಿಲ್ಲೆಗಳಲ್ಲಿ ಗುಡುಗು, ಸಿಡಿಲು ಸಹಿತ ಭಾರಿ ಮಳೆಯಾಗುವ ಮುನ್ಸೂಚನೆ ಇರುವುದರಿಂದ 'ಯೆಲ್ಲೊ ಅಲರ್ಟ್' ಘೋಷಿಸಲಾಗಿದೆ.

ದಕ್ಷಿಣ ಒಳನಾಡಿನ ಉಳಿದ ಜಿಲ್ಲೆಗಳಲ್ಲೂ ಇದೇ 14ರವರೆಗೆ ಮಳೆಯಾಗುವ ಸಾಧ್ಯತೆ ಇದೆ. ಕರಾವಳಿಯ ಉತ್ತರ ಕನ್ನಡ, ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳಲ್ಲಿ ಅ.11ರಿಂದ ಮಳೆ ಹೆಚ್ಚಾಗಲಿದೆ ಎಂದು ಮಾಹಿತಿ ನೀಡಿದೆ.

ಮಳೆ ಎಲ್ಲಿ, ಎಷ್ಟು?: ಕಲಬುರಗಿ ಜಿಲ್ಲೆಯ ಗುಂಡಗುರ್ತಿಯಲ್ಲಿ ಶನಿವಾರ 13 ಸೆಂ.ಮೀ ಗರಿಷ್ಠ ಮಳೆಯಾಗಿದೆ. ರಾಯಚೂರು 6, ಕೊಳ್ಳೇಗಾಲ, ಶಿರಾ 5, ಮಂಗಳೂರು, ಚಿಂಚೋಳಿ, ವಿರಾಜಪೇಟೆ 3, ಕಲಬುರ್ಗಿ, ಮದ್ದೂರು, ಮಾನ್ವಿ, ಮಧುಗಿರಿ, ಮಾಗಡಿ 2, ಸುಳ್ಯ, ಮಡಿಕೇರಿ, ನೆಲಮಂಗಲ, ಶಿಡ್ಲಘಟ್ಟ, ಕುಣಿಗಲ್‌ನಲ್ಲಿ ತಲಾ 1 ಸೆಂ.ಮೀ ಮಳೆಯಾಗಿದೆ. ಶಿರಾಲಿಯಲ್ಲಿ 34 ಡಿಗ್ರಿ ಸೆಲ್ಸಿಯಸ್ ಗರಿಷ್ಠ ತಾಪಮಾನ ಹಾಗೂ ಬೀದರ್‌ನಲ್ಲಿ 18 ಡಿಗ್ರಿ ಸೆಲ್ಸಿಯಸ್ ಕನಿಷ್ಠ ತಾಪಮಾನ ದಾಖಲಾಗಿದೆ.

ಗಡಿ ಬಿಕ್ಕಟ್ಟು: ಇಂದು ಭಾರತ–ಚೀನಾ ಮಾತುಕತೆ

ನವದೆಹಲಿ (ಪಿಟಿಐ): ಪೂರ್ವ ಲಡಾಖ್‌ನಲ್ಲಿನ ಗಡಿ ಬಿಕ್ಕಟ್ಟು ಶಮನಕ್ಕೆ ಸಂಬಂಧಿಸಿದಂತೆ ಭಾರತ ಮತ್ತು ಚೀನಾ ನಡುವೆ ಭಾನುವಾರ (ಅ.10) ಮಿಲಿಟರಿ ಅಧಿಕಾರಿಗಳ ನಡುವೆ 13ನೇ ಸುತ್ತಿನ ಉನ್ನತ ಮಟ್ಟದ ಮಾತುಕತೆ ನಡೆಯಲಿದೆ.

ವಾಸ್ತವ ನಿಯಂತ್ರಣ ರೇಖೆ (ಎಲ್‌ಎಸಿ) ಬಳಿ ಚೀನಾ ಅಧೀನಕ್ಕೆ ಒಳಪಟ್ಟ ಪ್ರದೇಶದಲ್ಲಿರುವ ಮೊಲ್ಡೊ ಗಡಿ ಠಾಣೆಯಲ್ಲಿ ಬೆಳಿಗ್ಗೆ 10.30ಕ್ಕೆ ಮಾತುಕತೆ ನಡೆಯಲಿದೆ ಎಂದು ಮೂಲಗಳು ಶನಿವಾರ ತಿಳಿಸಿವೆ.

ಉತ್ತರಾಖಂಡದ ಬಾರಾಹೋತಿ ಸೆಕ್ಟರ್ ಹಾಗೂ ಅರುಣಾಚಲ ಪ್ರದೇಶದ ತವಾಂಗ್ ಸೆಕ್ಟರ್‌ನಲ್ಲಿ ಇತ್ತೀಚೆಗೆ ಚೀನಾ ಯೋಧರ ಅತಿಕ್ರಮಣ ಯತ್ನವನ್ನು ಭಾರತೀಯ ಸೇನಾಪಡೆಗಳು ವಿಫಲಗೊಳಿಸಿದ್ದವು. ಈ ಘಟನೆಗಳ ಹಿನ್ನೆಲೆಯಲ್ಲಿ 13ನೇ ಸುತ್ತಿನ ಮಾತುಕತೆ ಆಯೋಜಿಸಲಾಗಿದೆ ಎಂದು ಇವೇ ಮೂಲಗಳು ಹೇಳಿವೆ.

ಐ.ಟಿ ಶೋಧ: ಮತ್ತಷ್ಟು ದಾಖಲೆ ವಶಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಲಸಂಪನ್ಮೂಲ, ಲೋಕೋಪಯೋಗಿ ಸೇರಿದಂತೆ ವಿವಿಧ ಇಲಾಖೆಗಳ ಹಿರಿಯ ಅಧಿಕಾರಿಗಳ ಜತೆ ನಿಕಟ ನಂಟು ಹೊಂದಿದ್ದ ಗುತ್ತಿಗೆದಾರ ಸೋಮಶೇಖರ್ ಮನೆಯಿಂದ ಆದಾಯ ತೆರಿಗೆ (ಐ.ಟಿ) ಇಲಾಖೆ ಅಧಿಕಾರಿಗಳು ಶನಿವಾರ ಹಲವು ದಾಖಲೆಗಳನ್ನು ವಶಪಡಿಸಿಕೊಂಡಿದ್ದಾರೆ.

2019ರಿಂದ ಈವರೆಗೆ ಜಲ ಸಂಪನ್ಮೂಲ, ಲೋಕೋಪಯೋಗಿ ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ಕೈಗೊಂಡಿರುವ ಬೃಹತ್ ಕಾಮಗಾರಿಗಳಲ್ಲಿ ತೆರಿಗೆ ವಂಚನೆ, ಭ್ರಷ್ಟಾಚಾರದ ಆರೋಪಕ್ಕೆ ಸಂಬಂಧಿಸಿದಂತೆ ಐ.ಟಿ ಅಧಿಕಾರಿಗಳು ಗುರುವಾರದಿಂದ ಶೋಧ ಆರಂಭಿಸಿದ್ದಾರೆ. ಸತತ ಮೂರನೇ ದಿನವೂ ಶೋಧ ಮುಂದುವರಿಯಿತು.

ಸೋಮಶೇಖರ್ ಅವರ ಬಸವೇಶ್ವರನಗರದ ಮನೆಯ ಮೇಲೆ ಶುಕ್ರವಾರವೇ ದಾಳಿ ನಡೆಸಲಾಗಿತ್ತು. ಶನಿವಾರವೂ ಶೋಧ ಮುಂದುವರಿಸಿದ ತಂಡ, ಚೀಲಗಳಲ್ಲಿ ತುಂಬಿ ದಾಖಲೆಗಳನ್ನು ಕೊಂಡೊಯ್ದಿದೆ. ಮನೆಯಲ್ಲೇ ಇದ್ದ ಗುತ್ತಿಗೆದಾರನನ್ನು ಐ.ಟಿ ಅಧಿಕಾರಿಗಳ ತಂಡ ವಿಚಾರಣೆಗೆ ಒಳಪಡಿಸಿದೆ ಎಂದು ಮೂಲಗಳು ತಿಳಿಸಿವೆ.

ಸೋಮಶೇಖರ್ ಮೂರೂ ಇಲಾಖೆಗಳ ಹಿರಿಯ ಅಧಿಕಾರಿಗಳ ಜತೆ ನಿಕಟ ನಂಟು ಹೊಂದಿದ್ದರು. ನೀರಾವರಿ ನಿಗಮಗಳ ವ್ಯವಸ್ಥಾಪಕ ನಿರ್ದೇಶಕರು ಹಾಗೂ ವಿವಿಧ ಇಲಾಖೆಗಳ ಮುಖ್ಯ ಎಂಜಿನಿಯರ್‌ಗಳ ಜತೆ ಸಂಪರ್ಕದಲ್ಲಿದ್ದರು. ಜಲ ಸಂಪನ್ಮೂಲ ಮತ್ತು ಲೋಕೋಪಯೋಗಿ ಇಲಾಖೆಗಳಿಂದ ಎರಡು ವರ್ಷಗಳ ಅವಧಿಯಲ್ಲಿ ಹಲವು ಕಾಮಗಾರಿಗಳ ಗುತ್ತಿಗೆ ಪಡೆದಿದ್ದರು. ಈ ಮಾಹಿತಿ ಆಧರಿಸಿ ದಾಳಿ ನಡೆಸಿದ್ದು, ಕೆಲವು ಕಾಮಗಾರಿಗಳ ಗುತ್ತಿಗೆಗೆ ಸಂಬಂಧಿಸಿದ ದಾಖಲೆಗಳನ್ನು ತನಿಖಾ ತಂಡ ವಶಕ್ಕೆ ಪಡೆದಿದೆ ಎಂಬ ಮಾಹಿತಿ ಲಭ್ಯವಾಗಿದೆ.

ಉಮೇಶ್, ಅರವಿಂದ್ ಜತೆಗೂ ನಂಟು: ಬಿಜೆಪಿ ನಾಯಕ ಬಿ.ಎಸ್. ಯಡಿಯೂರಪ್ಪ ಕುಟುಂಬದ ನಿಕಟವರ್ತಿಯಾಗಿದ್ದು, ಮುಖ್ಯಮಂತ್ರಿಯವರ ಸಚಿವಾಲಯದ ಸಿಬ್ಬಂದಿಯಾಗಿದ್ದ ಬಿಎಂಟಿಸಿ ಚಾಲಕ ಕಂ ನಿರ್ವಾಹಕ ಆಯನೂರು ಉಮೇಶ್ ಮತ್ತು ಬಿ.ವೈ. ವಿಜಯೇಂದ್ರ ಅವರ ಸಹಪಾಠಿ ಅರವಿಂದ್ ಜತೆಗೆ ಸೋಮಶೇಖರ್ ನಿಕಟ ನಂಟು ಹೊಂದಿದ್ದರು. ಈ ಕಾರಣಕ್ಕಾಗಿಯೇ ಅವರ ಮನೆಯ ಮೇಲೆಯೂ ದಾಳಿ ನಡೆದಿದೆ ಎಂದು ಮೂಲಗಳು ಹೇಳಿವೆ.

ಗುರುವಾರ ಮತ್ತು ಶುಕ್ರವಾರ ಶೋಧ ನಡೆಸಲಾಗಿದ್ದ ಇನ್ನೂ ಕೆಲವು ಸ್ಥಳಗಳಲ್ಲಿ ಶನಿವಾರವೂ ಐ.ಟಿ ಅಧಿಕಾರಿಗಳು ಪರಿಶೀಲನೆ ನಡೆಸಿದ್ದಾರೆ. ಕೆಲವು ಕಚೇರಿಗಳಿಂದ ಕಂಪ್ಯೂಟರ್ ಹಾರ್ಡ್ ಡಿಸ್ಕ್‌ಗಳು, ಲೆಕ್ಕಪತ್ರಕ್ಕೆ ಸಂಬಂಧಿಸಿದ ಡಿಜಿಟಲ್ ದಾಖಲೆಗಳನ್ನು ವಶಪಡಿಸಿಕೊಂಡಿದ್ದಾರೆ. ಎತ್ತಿನಹೊಳೆ ಯೋಜನೆ ಸೇರಿದಂತೆ ಕೆಲವು ಬೃಹತ್ ನೀರಾವರಿ ಕಾಮಗಾರಿಗಳ ಕಾಮಗಾರಿ ಸ್ಥಳಗಳಲ್ಲೂ ಶೋಧ ನಡೆಸಿ ದಾಖಲೆ ವಶಪಡಿಸಿಕೊಂಡಿದ್ದಾರೆ.

₹20 ಕೋಟಿ ಆಸ್ತಿಗೆ 'ನಕಲಿ ದಾವೆ'

• ಸಂತೋಷ ಜಿಗಳಿಕೊಪ್ಪ

ಬೆಂಗಳೂರು: ನ್ಯಾಯಾಲಯದಲ್ಲಿ ನಕಲಿ ದಾವೆ ಹೂಡಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ (ಬಿಬಿಎಂಪಿ) ಸೇರಿದ್ದ ₹ 20 ಕೋಟಿಗೂ ಹೆಚ್ಚಿನ ಮೌಲ್ಯದ ಆಸ್ತಿಯನ್ನು ಕಬಳಿಸಲು ಭೂಗಳ್ಳರು ಯತ್ನಿಸಿದ್ದು, ಈ ಕೃತ್ಯದಲ್ಲಿ ನಾಲ್ವರು ವಕೀಲರೂ ಭಾಗಿಯಾಗಿರುವುದು ಪತ್ತೆಯಾಗಿದೆ.

ವಾರಸುದಾರರು ಉಪಯೋಗಿಸದ ಖಾಲಿ ಜಾಗವನ್ನು ಕೊಳ್ಳೆ ಹೊಡೆಯಲು ನ್ಯಾಯಾಲಯದಲ್ಲಿ ನಕಲಿ ದಾವೆ ಹೂಡುತ್ತಿದ್ದ ಭೂಗಳ್ಳರ ಜಾಲವನ್ನು ಇತ್ತೀಚೆಗಷ್ಟೇ ಸಿಐಡಿ ಪೊಲೀಸರು ಭೇದಿಸಿದ್ದರು. ಈ ಜಾಲವೇ ಬಿಬಿಎಂಪಿಗೆ ಸೇರಿದ್ದ ಅಶೋಕನಗರದ 5ನೇ ಬೀದಿಯಲ್ಲಿರುವ ನಿವೇಶನ ಸಂಖ್ಯೆ 27ರ ಜಾಗವನ್ನು ಲಪಟಾಯಿಸಲು ಯತ್ನಿಸಿರುವ ಮಾಹಿತಿ ಹೊರಬಿದ್ದಿದೆ.

ಬಿಬಿಎಂಪಿ ಜಾಗದ ಹೆಸರಿನಲ್ಲಿ ಖೊಟ್ಟಿ ದಾಖಲೆ ಸೃಷ್ಟಿಸಿ ನ್ಯಾಯಾಲಯದಲ್ಲಿ ನಕಲಿ ದಾವೆ ಹೂಡಿ ಡಿಕ್ರಿ ಪಡೆದು ಆಸ್ತಿ ಕಬಳಿಸಲು ಪ್ರಯತ್ನಿಸಿದ್ದ ಆರೋಪದಡಿ ನಾಲ್ವರು ವಕೀಲರು ಸೇರಿ ಏಳು ಮಂದಿ ವಿರುದ್ಧ ಅಶೋಕನಗರ ಠಾಣೆಯಲ್ಲಿ ಎಫ್‌ಐಆರ್ ಸಹ ದಾಖಲಾಗಿದೆ.

3ನೇ ಪುಟ ನೋಡಿ

ಪಕ್ಷದಲ್ಲಿ ಚರ್ಚೆಗೆ ಗ್ರಾಸವಾದ ಬೆಳವಣಿಗೆ

ಸೋಮಣ್ಣ–ಅಶೋಕ ಮಧ್ಯೆ ಉಸ್ತುವಾರಿ ಗುದ್ದಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ನಗರದ ಉಸ್ತುವಾರಿಗಾಗಿ ಸಚಿವರ ಮಧ್ಯೆ ಜಟಾಪಟಿ ಮುಂದುವರಿದಿದೆ. ಕಂದಾಯ ಸಚಿವ ಆರ್. ಅಶೋಕ ವಿರುದ್ಧ ವಸತಿ ಸಚಿವ ವಿ. ಸೋಮಣ್ಣ ಶನಿವಾರ ಏಕವಚನದಲ್ಲೇ ಹರಿಹಾಯ್ದಿದ್ದಾರೆ.

ನಗರದ ಆಡಳಿತದ ಮೇಲೆ ಹಿಡಿತ ಸಾಧಿಸಲು ಅಶೋಕ ಪ್ರಯತ್ನಿಸುತ್ತಿದ್ದಾರೆ ಎಂದು ನಗರದ ಬಿಜೆಪಿಯ ಶಾಸಕರು ಮುನಿಸಿಕೊಂಡಿದ್ದಾರೆ ಎಂಬ ಚರ್ಚೆ ಬಿಜೆಪಿ ವಲಯದಲ್ಲಿ ಹರಿದಾಡಿತ್ತು.

ಶನಿವಾರ ಬಿಜೆಪಿ ರಾಜ್ಯ ಘಟಕದ ಕಚೇರಿಗೆ ಭೇಟಿ ನೀಡಿದ ಸೋಮಣ್ಣ, ಅಲ್ಲಿ ಬಹಿರಂಗವಾಗಿಯೇ ಅಶೋಕ ವಿರುದ್ಧ ಅಸಮಾಧಾನ ಹೊರಹಾಕಿದ್ದಲ್ಲದೇ, ಬೆಂಗಳೂರು ನಗರದ ಉಸ್ತುವಾರಿಯ ಸ್ಪರ್ಧೆಯಲ್ಲಿರುವುದಾಗಿಯೂ ಹೇಳಿದ್ದಾರೆ. ಅದಕ್ಕೆ ಪ್ರತಿಕ್ರಿಯಿಸಿರುವ ಅಶೋಕ, ತಾವು ಬೆಂಗಳೂರು ಉಸ್ತುವಾರಿ ಬಯಸಿಲ್ಲ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನಿರ್ಧಾರಕ್ಕೆ ಬದ್ಧ ಎಂದಿದ್ದಾರೆ.

ಬೆಂಗಳೂರು ಮಹತ್ವದ ನಗರವಾಗಿದ್ದು ಇಲ್ಲಿನ ಉಸ್ತುವಾರಿಯನ್ನು ಯಾರಿಗೆ ನೀಡಬೇಕು ಎಂಬ ಬಗ್ಗೆ ಎಲ್ಲರ ಜತೆ ಚರ್ಚಿಸಿ ಸೌಹಾರ್ದಯುತವಾಗಿ ಬಗೆಹರಿಸುವೆ. ಎಲ್ಲರೂ ನಮ್ಮವರೇ ಮಾತುಕತೆ ನಡೆಸಿ ಒಮ್ಮತದ ತೀರ್ಮಾನ ತೆಗೆದುಕೊಳ್ಳುತ್ತೇವೆ

ಬಸವರಾಜ ಬೊಮ್ಮಾಯಿ, ಮುಖ್ಯಮಂತ್ರಿ

'ಸಾಮ್ರಾಟನಂತೆ ಆಡುವುದೇಕೆ?'



'ಸಾಮ್ರಾಟ ಚಕ್ರವರ್ತಿ ಕೆಲಸವೇ ಬೇರೆ, ನನ್ನ ಕೆಲಸವೇ ಬೇರೆ. ಅಶೋಕ ಎಂದು ಅವರ ಅಪ್ಪ, ಅಮ್ಮ ಏಕೆ ಹೆಸರಿಟ್ಟರೋ ಗೊತ್ತಿಲ್ಲ. ಸಾಮ್ರಾಟನಂತೆ ಆಡುತ್ತಾನೆ. ನನಗೆ ದುರಹಂಕಾರ ಇಲ್ಲ, ಪಕ್ಷವೇ ಮುಖ್ಯ. ಈಗ ಇರುವುದು ಕೋವಿಡ್ ನಿರ್ವಹಣೆಯ ಉಸ್ತುವಾರಿ ಮಾತ್ರ. ಅಶೋಕ ಹೇಗೆ ಸಭೆ ನಡೆಸುತ್ತಿದ್ದಾರೆ ಎಂಬುದನ್ನು ಮುಖ್ಯಮಂತ್ರಿಯವರೇ ಕೇಳಬೇಕು' ಎಂದು ವಿ. ಸೋಮಣ್ಣ ಹೇಳಿದರು.

'ನಾನು ಸಚಿವನಾಗಿದ್ದಾಗ ಅಶೋಕ ಇನ್ನೂ ಶಾಸಕ. ನಾನಿನ್ನೂ ಬೆಂಜ್ ಕಾರಿನಂತೆ ಗಟ್ಟಿಯಾಗಿದ್ದೇನೆ. ಉಸ್ತುವಾರಿ ನೀಡಿದರೆ ಅತ್ಯುತ್ತಮವಾಗಿ ನಿಭಾಯಿಸುವೆ. ಉಸ್ತುವಾರಿ ಸಚಿವರ ವಿಷಯ ಮೂರು– ನಾಲ್ಕು ದಿನಗಳಲ್ಲಿ ಗೊತ್ತಾಗಲಿದೆ. ಅಶೋಕ ಅವರಿಗಾ? ನನಗಾ? ಅಥವಾ ಇಬ್ಬರು ಉಸ್ತುವಾರಿ ಸಚಿವರನ್ನು ಮಾಡುತ್ತಾರಾ' ಎಂದು ಸ್ಪಷ್ಟವಾಗಲಿದೆ ಎಂದು ಹೇಳಿದರು. 'ನಾನು ಕರೆದಿದ್ದ ಸಭೆಗೆ ಅಶೋಕ ಬಂದಿರಲಿಲ್ಲ. ಆದರೆ, ಅಶೋಕ ಸಭೆ ಕರೆದರೆ ನಾನು ಹೋಗುವೆ. ಸಭೆಗೆ ಬರದಿದ್ದರೆ ಅವರಿಗೇ ನಷ್ಟ' ಎಂದರು.

'ಬೆಂಗಳೂರು ನಗರದ ಉಸ್ತುವಾರಿಯನ್ನು ಯಾರಿಗಾದರೂ ನೀಡಲಿ. ಮುಖ್ಯಮಂತ್ರಿಯವರ ಬಳಿಯೇ ಇದ್ದರೆ ನಮ್ಮ ಅಭ್ಯಂತರ ಇಲ್ಲ. ಆದರೆ, ಬೇರೆಯವರಿಗೆ ನೀಡುವುದಾದರೆ ಹಿರಿತನದ ಆಧಾರದಲ್ಲಿ ನಿರ್ಧಾರ ಮಾಡಬೇಕು. ನನ್ನನ್ನೂ ಪರಿಗಣಿಸಿ ಎಂಬುದಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಕೇಳಿದ್ದೇನೆ' ಎಂದರು.

'ನಾನು ಟವೆಲ್ ಹಾಕಿಲ್ಲ'



'ಬೆಂಗಳೂರು ಉಸ್ತುವಾರಿ ಸಚಿವ ಸ್ಥಾನಕ್ಕೆ ನಾನು ಟವೆಲ್ ಹಾಕಿಲ್ಲ. ಹಿಂದೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಉಸ್ತುವಾರಿ ನೀಡಿದ್ದರು. ಸಚಿವ ಎಂ.ಟಿ.ಬಿ. ನಾಗರಾಜ್ ತಮಗೆ ಬಿಟ್ಟು ಕೊಡುವಂತೆ ಕೇಳಿದರು. ನಾನು ತಕ್ಷಣವೇ ಅವರ ಕೋರಿಕೆಯನ್ನು ಒಪ್ಪಿಕೊಂಡಿದ್ದೆ. ಯಾವುದೇ ಜಿಲ್ಲೆಯ ಉಸ್ತುವಾರಿ ಇಲ್ಲದೆಯೂ ಕೆಲಸ ಮಾಡಿದ್ದೇನೆ' ಎಂದು ಆರ್. ಅಶೋಕ ಹೇಳಿದರು.

'ನಾನು ಯಾವುದೇ ಜಿಲ್ಲೆಯ ಉಸ್ತುವಾರಿ ನೀಡುವಂತೆ ಬೇಡಿಕೆ ಇಟ್ಟಿಲ್ಲ. ರಾಜ್ಯದ 31 ಜಿಲ್ಲೆಗಳಿಗೂ ಉಸ್ತುವಾರಿ ಸಚಿವರನ್ನು ನೇಮಿಸುವುದು ಮುಖ್ಯಮಂತ್ರಿಯವರ ಪರಮಾಧಿಕಾರ. ಅವರು ಕೈಗೊಳ್ಳುವ ನಿರ್ಧಾರಕ್ಕೆ ಬದ್ಧ'

'ಸೋಮಣ್ಣ ಸರಿಯಾಗಿ ಹೇಳಿದ್ದಾರೆ. ನಮ್ಮ ನಡುವೆ ಯಾವುದೇ ಸಮಸ್ಯೆ ಇಲ್ಲ. ಅವರು ಸಭೆ ಕರೆದ ಹಿಂದಿನ ದಿನ ಅರ್ಧ ಗಂಟೆ ಮಾತನಾಡಿದ್ದೆವು. ಪೂರ್ವನಿಗದಿತ ಕಾರ್ಯಕ್ರಮ ಅಥವಾ ಪ್ರವಾಸದಲ್ಲಿದ್ದರೆ ಸಭೆಗೆ ಹೋಗಲು ಆಗುವುದಿಲ್ಲ. ಉಳಿದಂತೆ ಶಾಸಕರೇ ಸಭೆ ಕರೆದರೂ ನಾನು ಹೋಗುತ್ತೇನೆ' ಎಂದು ಹೇಳಿದರು.

'ನನ್ನ ಇಲಾಖೆಯನ್ನು ಬಿಟ್ಟು ಬೇರೆ ಇಲಾಖೆಗಳ ಕೆಲಸಕ್ಕೆ ನಾನು ತಲೆ ಹಾಕುವುದಿಲ್ಲ. ಬೆಂಗಳೂರಿನಲ್ಲಿ ರಸ್ತೆಗಳ ಗುಂಡಿ ಮುಚ್ಚಿಸಲು ಹೇಳಿದ್ದಾರೆ. ಅದನ್ನಷ್ಟೇ ಮಾಡಿದ್ದೇನೆ' ಎಂದರು.

ಕಲ್ಲಿದ್ದಲು ಕೊರತೆ ರಾಜ್ಯಗಳಲ್ಲಿ ವಿದ್ಯುತ್ ಸಮಸ್ಯೆ?

ನವದೆಹಲಿ (ಪಿಟಿಐ): ದೇಶದಲ್ಲಿ ದೆಹಲಿ, ಪಂಜಾಬ್ ಸೇರಿದಂತೆ ಕೆಲ ರಾಜ್ಯಗಳಲ್ಲಿ ವಿದ್ಯುತ್ ಸಮಸ್ಯೆ ತಲೆದೋರಿದೆ. ವಾಡಿಕೆಗಿಂತಲೂ ಹೆಚ್ಚಾಗಿರುವ ಮಳೆ ಕಲ್ಲಿದ್ದಲು ಪೂರೈಕೆ ಮೇಲೆ ಪರಿಣಾಮ ಬೀರಿರುವುದು, ಆಮದು ಕಲ್ಲಿದ್ದಲು ಅವಲಂಬಿಸಿದ್ದ ಸ್ಥಾವರಗಳು ಕಲ್ಲಿದ್ದಲು ದರ ಏರಿಕೆಯಿಂದಾಗಿ ಉತ್ಪಾದನೆ ಕಡಿತಗೊಳಿಸಿರುವುದು ಇದಕ್ಕೆ ಕಾರಣವಾಗಿದೆ.

ಕಲ್ಲಿದ್ದಲು ಉತ್ಪಾದನೆ ತೃಪ್ತಿಕರವಾಗಿದ್ದರೂ ಮಳೆಯಿಂದಾಗಿ ಸರಬರಾಜು ವ್ಯತ್ಯಯವಾಗಿರುವುದು ಸಮಸ್ಯೆಗೆ ಕಾರಣವಾಗಿದೆ. ಗುಜರಾತ್, ಪಂಜಾಬ್, ರಾಜಸ್ಥಾನ, ದೆಹಲಿ ಮತ್ತು ತಮಿಳುನಾಡಿನಲ್ಲಿ ವಿದ್ಯುತ್ ಸಮಸ್ಯೆ ತೋರುವ ಸೂಚನೆಗಳು ಇವೆ.

ಇರುವ ಕಲ್ಲಿದ್ದಲು ದಾಸ್ತಾನು ಒಂದೆರಡು ದಿನಗಳಿಗೆ ಸಾಕಾಗಬಹುದು. ಹೀಗಾಗಿ, ವಿದ್ಯುತ್ ಉತ್ಪಾದನೆ ಸ್ಥಗಿತವಾಗಬಹುದು ಎಂಬ ಎಚ್ಚರಿಕೆಯನ್ನು ವಿವಿಧ ಖಾಸಗಿ ಶಾಖೋತ್ಪನ್ನ ಸ್ಥಾವರಗಳ ಅಧಿಕಾರಿಗಳು, ಪೂರೈಕೆದಾರರು ನೀಡಿದ್ದಾರೆ.

ಆದರೆ, ಕಲ್ಲಿದ್ದಲು ಸಚಿವಾಲಯವು ದೇಶದಲ್ಲಿ ಅಗತ್ಯ ಪ್ರಮಾಣದಲ್ಲಿ ಕಲ್ಲಿದ್ದಲು ದಾಸ್ತಾನು ಇದೆ ಎಂದು ಹೇಳಿದ್ದು, ಪೂರ್ಣವಾಗಿ ವಿದ್ಯುತ್ ಉತ್ಪಾದನೆ ಸ್ಥಗಿತವಾಗಲಿದೆ ಎಂಬ ಆತಂಕಕ್ಕೆ ಅವಕಾಶವಿಲ್ಲ ಎಂದು ಪ್ರತಿಪಾದಿಸಿದೆ.

ಬನ್ನೇರುಘಟ್ಟ ಜೈವಿಕ ಉದ್ಯಾನ: 3 ತಿಂಗಳಲ್ಲಿ ₹6 ಕೋಟಿ ಸಂಗ್ರಹ

ಬರಿದಾದ ಬೊಕ್ಕಸ: ಅಭಿವೃದ್ಧಿಗೆ ಗರ

● ಜಿ.ಶಿವಕುಮಾರ



ಬನ್ನೇರುಘಟ್ಟ ಜೈವಿಕ ಉದ್ಯಾನದ ಹೊರ ನೋಟ

ಬೆಂಗಳೂರು: ಕೋವಿಡ್ ಪ್ರಕರಣ ಕಡಿಮೆಯಾದ ಬಳಿಕ ಬನ್ನೇರುಘಟ್ಟ ಜೈವಿಕ ಉದ್ಯಾನಕ್ಕೆ ಜೀವಕಳೆ ಬಂದಿದೆ. ಪ್ರಾಣಿ ಪ್ರಿಯರು ಉದ್ಯಾನದತ್ತ ಮುಖಮಾಡುತ್ತಿದ್ದಾರೆ. ಹೀಗಿದ್ದರೂ ಕೋವಿಡ್ ಪೂರ್ವದಲ್ಲಿದ್ದಷ್ಟು ಆದಾಯ ಸಂಗ್ರಹವಾಗುತ್ತಿಲ್ಲ. ಇದರಿಂದ ಅಭಿವೃದ್ಧಿ ಚಟುವಟಿಕೆಗಳಿಗೆ ಹಿನ್ನಡೆಯುಂಟಾಗಿದೆ.

ಈ ವರ್ಷದ ಜುಲೈ 1ರಂದು ರಾಜ್ಯ ಸರ್ಕಾರ ಮೃಗಾಲಯಗಳ ಪುನರಾರಂಭಕ್ಕೆ ಅನುಮತಿ ನೀಡಿತ್ತು. ಅಂದಿನಿಂದ ಸೆಪ್ಟೆಂಬರ್ ಅಂತ್ಯದವರೆಗೂ ₹2.37 ಲಕ್ಷ ಪ್ರವಾಸಿಗರು ಮೃಗಾಲಯಕ್ಕೆ ಭೇಟಿ ನೀಡಿದ್ದಾರೆ. ₹6.05 ಕೋಟಿ ಸಂಗ್ರಹವಾಗಿದೆ.

'ಲಾಕ್‌ಡೌನ್ ತೆರವಾದ ನಂತರ ಪ್ರವಾಸಿಗರ ಸಂಖ್ಯೆ ತೀರಾ ಕಡಿಮೆ ಇತ್ತು. ಈಗ ಉದ್ಯಾನಕ್ಕೆ ಭೇಟಿ ನೀಡುತ್ತಿರುವವರ ಸಂಖ್ಯೆ ಗಣನೀಯವಾಗಿ ಏರಿಕೆಯಾಗಿದೆ. ಜುಲೈನಲ್ಲಿ ₹1.33 ಕೋಟಿಯಷ್ಟೇ ಸಂಗ್ರಹವಾಗಿತ್ತು. ಹೀಗಾಗಿ ಪ್ರಾಣಿಗಳ ಆಹಾರ, ಸಿಬ್ಬಂದಿ ವೇತನಕ್ಕಾಗಿ ನಾವೇ ₹ 70 ಲಕ್ಷ ನೀಡಬೇಕಾಯಿತು. ಆಗಸ್ಟ್ ಮತ್ತು ಸೆಪ್ಟೆಂಬರ್‌ನಲ್ಲಿ ಪರಿಸ್ಥಿತಿ ಸುಧಾರಿಸಿದೆ. ಆದರೆ ಆದಾಯ ಇಲ್ಲ. ಹೀಗಾಗಿ ಅಭಿವೃದ್ಧಿ ಚಟುವಟಿಕೆಗಳಿಗೂ ಮಂಕು ಬಡಿದಿದೆ' ಎಂದು ಉದ್ಯಾನದ ಕಾರ್ಯನಿರ್ವಾಹಕ ನಿರ್ದೇಶಕಿ ವನಶ್ರೀ ವಿಪಿನ್ ಸಿಂಗ್ 'ಪ್ರಜಾವಾಣಿ'ಗೆ ತಿಳಿಸಿದರು.


ವನಶ್ರೀ ವಿಪಿನ್ ಸಿಂಗ್

'ಜನರಲ್ಲಿ ಈಗಲೂ ಭಯ ಇರುವಂತೆ ಕಾಣುತ್ತಿದೆ. ಹೀಗಾಗಿ ಸಾಮಾನ್ಯ ದಿನಗಳಲ್ಲಿದ್ದಷ್ಟು ಪ್ರವಾಸಿಗರು ಕಾಣುತ್ತಿಲ್ಲ. ಕೋವಿಡ್ ಪೂರ್ವದಲ್ಲಿ ಸಾಕಷ್ಟು ಆದಾಯವಿದ್ದು, ಒಂದಷ್ಟು ಮೊತ್ತವನ್ನು ಅಭಿವೃದ್ಧಿಗೆ ತೆಗೆದಿಡುತ್ತಿದ್ದೆವು. ಹಾಗೆ ತೆಗೆದಿಟ್ಟಿದ್ದ ಹಣವನ್ನು ಕೋವಿಡ್ ಸಮಯದಲ್ಲಿ ವ್ಯಯಿಸಲಾಗಿದೆ. ಹೀಗಾಗಿ ಬೊಕ್ಕಸ ಪೂರ್ಣವಾಗಿ ಬರಿದಾಗಿದೆ. ಮತ್ತೊಮ್ಮೆ ಲಾಕ್‌ಡೌನ್ ಹೇರಿದ್ದರೆ ಪ್ರಾಣಿಗಳ ಆಹಾರಕ್ಕಾಗಿ ಹಣ ಹೊಂದಿಸುವುದಕ್ಕೂ ಕಷ್ಟಪಡಬೇಕಾಗುತ್ತಿತ್ತು. ಅದೃಷ್ಟವಶಾತ್ ಹಾಗಾಗಲಿಲ್ಲ' ಎಂದರು.

ಪ್ರಜಾವಾಣಿ ವಿಶೇಷ

'ಕೋವಿಡ್ ಪೂರ್ವದಲ್ಲಿ ಹಲವು ಯೋಜನೆಗಳನ್ನು ಹಾಕಿಕೊಂಡಿದ್ದೆವು. ಹಣದ ಅಭಾವದಿಂದಾಗಿ ಯೋಜನೆಗಳನ್ನೆಲ್ಲಾ ತಾತ್ಕಾಲಿಕವಾಗಿ ಕೈಬಿಡುವುದು ಅನಿವಾರ್ಯವಾಗಿದೆ. ಈಗಾಗಲೇ ಪ್ರಗತಿಯಲ್ಲಿರುವ ಯೋಜನೆಗಳನ್ನು ಕಾಲಮಿತಿಯೊಳಗೆ ಪೂರ್ಣಗೊಳಿಸುವತ್ತ ಚಿತ್ತ ಹರಿಸಿದ್ದೇವೆ. ಪ್ರವಾಸಿಗರ ಸಂಖ್ಯೆ ಹೆಚ್ಚುತ್ತಿರುವುದರಿಂದ ಉದ್ಯಾನದಲ್ಲಿ ಮೂಲ ಸೌಕರ್ಯ ಕಲ್ಪಿಸಲೂ ಒತ್ತು ನೀಡುತ್ತಿದ್ದೇವೆ. ಚಿರತೆ ಸಫಾರಿ ಯೋಜನೆ ಬಹುತೇಕ ಪೂರ್ಣಗೊಂಡಿದೆ. ಅದನ್ನು ಶೀಘ್ರವೇ ಪ್ರವಾಸಿಗರಿಗೆ ಮುಕ್ತಗೊಳಿಸಲಿದ್ದೇವೆ. ದುಂದು ವೆಚ್ಚಗಳಿಗೂ ಕಡಿವಾಣ ಹಾಕಲಾಗುತ್ತಿದೆ' ಎಂದು ಹೇಳಿದರು.

ಜುಲೈನಿಂದ ಸೆಪ್ಟೆಂಬರ್ ಅವಧಿಯಲ್ಲಿ ಸಂಗ್ರಹವಾದ ಮೊತ್ತ (₹ ಕೋಟಿಗಳಲ್ಲಿ) ಮತ್ತು ಪ್ರವಾಸಿಗರ ಸಂಖ್ಯೆ

ತಿಂಗಳು	ಪ್ರವಾಸಿಗರ ಸಂಖ್ಯೆ	ಆದಾಯ
ಜುಲೈ	52,420	1.33
ಆಗಸ್ಟ್	89,115	2.27
ಸೆಪ್ಟೆಂಬರ್	95,618	2.45

ಅಂಕಿ-ಅಂಶಗಳು

16.16 ಲಕ್ಷ — 2019 ಏಪ್ರಿಲ್‌ನಿಂದ 2020 ಮಾರ್ಚ್ 15ರವರೆಗೆ ಉದ್ಯಾನಕ್ಕೆ ಭೇಟಿ ನೀಡಿದ್ದವರು

₹31.99 ಕೋಟಿ — 2019 ಏಪ್ರಿಲ್‌ನಿಂದ 2020 ಮಾರ್ಚ್ 15ರ ಅವಧಿಯಲ್ಲಿ ಸಂಗ್ರಹವಾಗಿದ್ದ ವರಮಾನ

₹2 ಕೋಟಿ — ನಿರ್ವಹಣೆಗೆ ತಗಲುವ ಮಾಸಿಕ ವೆಚ್ಚ

ಸುದ್ದಿ 2 ನಿಮಿಷ

ರಾಜಾಜಿನಗರದಲ್ಲಿ ಗ್ಲೋಬಲ್ ಮಾಲ್

ಬೆಂಗಳೂರು: ಬಹುರಾಷ್ಟ್ರೀಯ ಉದ್ಯಮ ಸಮೂಹವಾಗಿರುವ ಲುಲು ಗ್ರೂಪ್ ಇಂಟರ್‌ನ್ಯಾಷನಲ್ ಒಡೆತನದ ಗ್ಲೋಬಲ್ ಮಾಲ್ ರಾಜಾಜಿನಗರದಲ್ಲಿ ಸೋಮವಾರ ಉದ್ಘಾಟನೆ ಆಗಲಿದೆ. 'ಬೆಂಗಳೂರಿನ ಅತಿದೊಡ್ಡ ಹೈಪರ್‌ಮಾರ್ಕೆಟ್ ಆಗಿರುವ ಲುಲು ಹೈಪರ್‌ಮಾರ್ಕೆಟ್ ಹಾಗೂ ವಿನೂತನ ಮನರಂಜನಾ ತಾಣ ಫಂಟುರಾ ಇಲ್ಲಿರಲಿದೆ. ಇವುಗಳ ಕಾರಣದಿಂದಾಗಿ ಈ ಮಾಲ್ ನಗರದ ದೊಡ್ಡ ಆಕರ್ಷಣೆಯಾಗಿ ಬೆಳೆಯಲಿದೆ' ಎಂದು ಕಂಪನಿಯ ಪ್ರಕಟಣೆ ಹೇಳಿದೆ.



ರಾಜಾಜಿನಗರದಲ್ಲಿನ 14 ಎಕರೆ ಜಾಗದಲ್ಲಿ ಇದು ನಿರ್ಮಾಣ ಆಗಿದೆ. ಐದು ಮಹಡಿಗಳ ಈ ಮಾಲ್‌ನಲ್ಲಿ 132 ಅಂಗಡಿಗಳು, 17 ಕಿಯೋಸ್ಕ್‌ಗಳು ಇರಲಿವೆ. ಸಿದ್ಧ ಉಡುಪುಗಳು, ಆಭರಣಗಳು, ಎಲೆಕ್ಟ್ರಾನಿಕ್ ವಸ್ತುಗಳು, ರೆಸ್ಟೋರೆಂಟ್‌ಗಳು, ಕೆಫೆಗಳು ಇಲ್ಲಿರಲಿವೆ. ಲುಲು ಹೈಪರ್‌ಮಾರ್ಕೆಟ್ 2 ಲಕ್ಷ ಚದರ ಅಡಿ ವಿಸ್ತೀರ್ಣದಲ್ಲಿ ಇರಲಿದೆ.

ಫಂಟುರಾ ಕೇಂದ್ರವು 60 ಸಾವಿರ ಚದರ ಅಡಿ ವಿಸ್ತೀರ್ಣದಲ್ಲಿದೆ. ಇದು ದೇಶದ ಅತಿದೊಡ್ಡ ಒಳಾಂಗಣ ಮೋಜಿನ ತಾಣ ಆಗಲಿದೆ ಎಂದು ಕಂಪನಿ ಹೇಳಿದೆ. ಒಂದು ಬಾರಿಗೆ ಒಂದು ಸಾವಿರ ಜನ ಕುಳಿತುಕೊಳ್ಳಬಹುದಾದ ಫುಡ್ ಕೋರ್ಟ್ ಕೂಡ ಇಲ್ಲಿ ಇರಲಿದೆ. ಸೋಮವಾರ ಸಂಜೆ ಐದು ಗಂಟೆಯಿಂದ ಈ ಮಾಲ್ ಗ್ರಾಹಕರಿಗೆ ಮುಕ್ತವಾಗಲಿದೆ.

ಕ್ರೀಡಾಪಟುಗಳಿಗೆ 33 ಪದಕ

ರಾಮನಗರ: ಕೇಂದ್ರ ದೈಹಿಕ ಶಿಕ್ಷಣ ವಿಭಾಗದಿಂದ ಡೆಹ್ರಾಡೂನ್‌ನಲ್ಲಿ ಇದೇ ತಿಂಗಳ 3ರಿಂದ 5 ರವರೆಗೆ ನಡೆದ ರಾಷ್ಟ್ರೀಯ ಕ್ರೀಡಾಕೂಟದಲ್ಲಿ ಜಿಲ್ಲೆಯ ಕನಕಪುರ ತಾಲ್ಲೂಕಿನ ಅಡ್ವೆಂಚರ್ ಅಕಾಡೆಮಿಯ ಕ್ರೀಡಾಪಟುಗಳು 15 ಚಿನ್ನ, 13 ಬೆಳ್ಳಿ, 5 ಕಂಚು ಸೇರಿದಂತೆ ಒಟ್ಟು 33 ಪದಕವನ್ನು ತಮ್ಮದಾಗಿಸಿಕೊಂಡಿದ್ದಾರೆ. ಅಕಾಡೆಮಿಯ ಸಂಸ್ಥಾಪಕ ಹಾಗೂ ತರಬೇತುದಾರ ಮನೋಜ್ ಮತ್ತು ಅಕ್ಷತಾ ಈ ಕ್ರೀಡಾಪಟುಗಳಿಗೆ ತರಬೇತಿ ನೀಡಿದ್ದರು.

ದಸರಾ ನಂತರ ಶಾಲೆ ಆರಂಭ

ತುಮಕೂರು: ದಸರಾ ಹಬ್ಬದ ನಂತರ ಪ್ರಾಥಮಿಕ ಶಾಲೆ ಆರಂಭಿಸಲು ನಿರ್ಧರಿಸಲಾಗುವುದು. ಈ ಸಂಬಂಧ ಮುಖ್ಯಮಂತ್ರಿ ಜತೆಗೆ ಚರ್ಚಿಸಲಾಗುವುದು ಎಂದು ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಇಲ್ಲಿ ಶನಿವಾರ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿ, 'ಶಿಕ್ಷಕರ ವರ್ಗಾವಣೆಗೆ ಸಂಬಂಧಿಸಿದ ಗೊಂದಲಗಳನ್ನು ಸರಿಪಡಿಸುವ ಪ್ರಯತ್ನ ನಡೆದಿದೆ. ಕಳೆದ ಮೂರು ವರ್ಷಗಳಿಂದಲೂ ವರ್ಗಾವಣೆ ಪ್ರಕ್ರಿಯೆ ಆರಂಭವಾಗುತ್ತಿದ್ದಂತೆ ನ್ಯಾಯಾಲಯಕ್ಕೆ ಹೋಗಿ ತಡೆಯಾಜ್ಞೆ ತರುತ್ತಾರೆ. ಈ ಬಾರಿಯೂ ತಡೆಯಾಜ್ಞೆ ತರದಿದ್ದರೆ ಈ ವೇಳೆಗಾಗಲೇ ಅರ್ಧದಷ್ಟು ಪ್ರಕ್ರಿಯೆಗಳು ಪೂರ್ಣಗೊಂಡಿರುತ್ತಿದ್ದವು' ಎಂದರು.

ಶಿಕ್ಷಕರ ವರ್ಗಾವಣೆಗೆ ಹೊಸ ಕಾಯ್ದೆ ಜಾರಿಗೆ ತರಲಾಗುತ್ತಿದ್ದು, ಶೀಘ್ರ ಪ್ರಕಟಣೆ ಹೊರ ಬೀಳಲಿದೆ. ಇನ್ನು ಮುಂದೆ ಹೊಸ ಕಾನೂನಿನಂತೆ ವರ್ಗಾವಣೆ ಮಾಡಲಾಗುತ್ತದೆ ಎಂದು ಸ್ಪಷ್ಟಪಡಿಸಿದರು.

ಬಿಎಂಟಿಸಿ: 300 ಎಲೆಕ್ಟ್ರಿಕ್ ಬಸ್ ಗುತ್ತಿಗೆ ಆಧಾರದಲ್ಲಿ ಪಡೆಯಲು ಸಮ್ಮತಿ

643 ಡೀಸೆಲ್ ಬಸ್ ಖರೀದಿಗೆ ಒಪ್ಪಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 300 ಎಲೆಕ್ಟ್ರಿಕ್ ಬಸ್‌ಗಳನ್ನು ಗುತ್ತಿಗೆ ಆಧಾರದಲ್ಲಿ ಪಡೆಯುವ ಮತ್ತು 643 ಡೀಸೆಲ್ ಬಸ್‌ಗಳನ್ನು (ಬಿಎಸ್-6) ಖರೀದಿಸುವ ಪ್ರಸ್ತಾವಗಳಿಗೆ ಬಿಎಂಟಿಸಿ ಆಡಳಿತ ಮಂಡಳಿ ಒಪ್ಪಿಗೆ ಸೂಚಿಸಿದೆ.

ನಿರ್ವಹಣೆ, ಕಾರ್ಯಾಚರಣೆ ವೆಚ್ಚವನ್ನು ಕಿಲೋ ಮೀಟರ್‌ಗೆ ₹48.90 ನಿಗದಿ ಮಾಡಿದ್ದ ಅಶೋಕ್ ಲೇಲ್ಯಾಂಡ್ ಕಂಪನಿಗೆ ಕಾರ್ಯಾದೇಶ ನೀಡಲು ಮಂಡಳಿ ಸಮ್ಮತಿಸಿದೆ. ಇದಕ್ಕಿಂತ ಹೆಚ್ಚು ಮೊತ್ತ ದಾಖಲಿಸಿದ್ದ ಇತರೆ ಕಂಪನಿಗಳನ್ನು ಕೈಬಿಡಲಾಗಿದೆ.

12 ಮೀಟರ್ ಉದ್ದದ 43 ಆಸನಗಳ ಸಾಮರ್ಥ್ಯದ ಎಲೆಕ್ಟ್ರಿಕ್ ಬಸ್ ದಿನಕ್ಕೆ ಕನಿಷ್ಠ 225 ಕಿ.ಮೀ ಸಂಚಾರ ಆಗಬೇಕು. ಆಗದಿದ್ದರೂ, ಅದರ ಮೊತ್ತವನ್ನು (11 ಸಾವಿರ) ಪಾವತಿಸಬೇಕು ಎಂಬ ಒಪ್ಪಂದ ಏರ್ಪಡಲಿದೆ. ಚಾಲಕ ಮತ್ತು ಬಸ್‌ನ ಬ್ಯಾಟರಿ ಚಾರ್ಜಿಂಗ್ ಸೇರಿ ಬಸ್ ನಿರ್ವಹಣೆ ಹೊಣೆ ಕಂಪನಿಯದ್ದು. ನಿರ್ವಾಹಕರ ಸೇವೆ ಮತ್ತು ಚಾರ್ಜಿಂಗ್ ಪಾಯಿಂಟ್‌ಗಳಿಗೆ ಜಾಗವನ್ನು ಬಿಎಂಟಿಸಿಯೇ ಒದಗಿಸಲಿದೆ.

ಇದಲ್ಲದೇ 643 ಡೀಸೆಲ್ ಬಸ್‌ಗಳ ಖರೀದಿಗೂ ಮಂಡಳಿ ಸಮ್ಮತಿಸಿದೆ. ಕಡಿಮೆ ದರ ನಿಗದಿಪಡಿಸಿರುವ ಅಶೋಕ್ ಲೇಲ್ಯಾಂಡ್ ಕಂಪನಿಯಿಂದಲೇ ಬಸ್‌ಗಳನ್ನು ಖರೀದಿ ಮಾಡಲು ಮಂಡಳಿ ತೀರ್ಮಾನಿಸಿದೆ. ಪ್ರತಿ ಬಸ್‌ಗೆ ₹33 ಲಕ್ಷ ದರ ನಿಗದಿಯಾಗಿದೆ.

2017-18ನೇ ಸಾಲಿನಲ್ಲಿ ನಿಗದಿಯಾಗಿದ್ದ ಅನುದಾನ ಬಳಸಿ ಕೊಂಡು ಬಸ್‌ಗಳ ಖರೀದಿಗೆ ತೀರ್ಮಾನಿಸಲಾಗಿದೆ ಎಂದು ಬಿಎಂಟಿಸಿ ಉಪಾಧ್ಯಕ್ಷ ಎಂ.ಆರ್. ವೆಂಕಟೇಶ್ 'ಪ್ರಜಾವಾಣಿ'ಗೆ ತಿಳಿಸಿದರು.

ಎಲೆಕ್ಟ್ರಾನಿಕ್ ಟಿಕೆಟ್ ಮೆಷೀನ್ (ಇಟಿಎಂ) ಖರೀದಿ, ನಿರ್ಭಯಾ ಯೋಜನೆಯಡಿ ಬಸ್‌ಗಳಲ್ಲಿ ಸಿ.ಸಿ. ಟಿ.ವಿ ಕ್ಯಾಮೆರಾ ಅಳವಡಿಕೆಗೂ ಮಂಡಳಿ ಒಪ್ಪಿಗೆ ನೀಡಿದೆ ಎಂದು ವಿವರಿಸಿದರು.

ನೌಕರರ ಮರುನೇಮಕ ಮುಖ್ಯಮಂತ್ರಿ ತೀರ್ಮಾನಕ್ಕೆ

ಮುಷ್ಕರದ ವೇಳೆ ವಜಾಗೊಂಡಿದ್ದ ಬಿಎಂಟಿಸಿ ನೌಕರರ ಮರುನೇಮಕದ ವಿಷಯವನ್ನು ಮುಖ್ಯಮಂತ್ರಿ ಅವರ ತೀರ್ಮಾನಕ್ಕೆ ಬಿಡಲು ಸಭೆ ತೀರ್ಮಾನಿಸಿದೆ.

ಪದೇ ಪದೇ ಕರ್ತವ್ಯಕ್ಕೆ ಗೈರು ಹಾಜರಾಗುವ ಸಿಬ್ಬಂದಿಯ ವಜಾ ಆದೇಶ ವಾಪಸ್ ಪಡೆಯದಿರಲು ನಿರ್ಧರಿಸಲಾಗಿದೆ. ಮುಷ್ಕರದಲ್ಲಿ ಪಾಲ್ಗೊಂಡಿದ್ದ ಕಾರಣಕ್ಕೆ ಕ್ರಮ ಜರುಗಿಸಿದ್ದರೆ ಅವರನ್ನು ಸೇವೆಗೆ ಮರಳಿ ಕರೆದುಕೊಳ್ಳಲು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಜತೆ ಚರ್ಚಿಸಿ ಅಂತಿಮ ತೀರ್ಮಾನ ಕೈಗೊಳ್ಳುವುದು ಸೂಕ್ತ ಎಂಬ ಅಭಿಪ್ರಾಯಕ್ಕೆ ಬರಲಾಗಿದೆ ಎಂದು ಬಿಎಂಟಿಸಿ ಮೂಲಗಳು ತಿಳಿಸಿವೆ.



300 ಎಲೆಕ್ಟ್ರಿಕ್ ಬಸ್‌ಗಳನ್ನು ಗುತ್ತಿಗೆ ಆಧಾರದಲ್ಲಿ ಪಡೆಯಲು ಆಡಳಿತ ಮಂಡಳಿ ಸಭೆಯಲ್ಲಿ ಒಪ್ಪಿಗೆ ನೀಡಲಾಗಿದೆ
ಎನ್.ಎಸ್.ನಂದೀಶ್ ರೆಡ್ಡಿ, ಬಿಎಂಟಿಸಿ ಅಧ್ಯಕ್ಷ


ನಟಿ ಆದಿತಿ ಪ್ರಭುದೇವ ಅವರ ಜೊತೆ ಆಭರಣ ಪ್ರದರ್ಶಿಸಿದ ರೂಪದರ್ಶಿಗಳು

ಮಲಬಾರ್ ಗೋಲ್ಡ್ ಕಲಾತ್ಮಕ ಆಭರಣಗಳ ಪ್ರದರ್ಶನ

ಬೆಂಗಳೂರು: 'ಮಲಬಾರ್ ಗೋಲ್ಡ್ ಮತ್ತು ಡೈಮಂಡ್ಸ್'ನ ಕಲಾತ್ಮಕ ಆಭರಣಗಳ ಪ್ರದರ್ಶನ ಮತ್ತು ಮಾರಾಟಕ್ಕೆ ನಟಿ ಆದಿತಿ ಪ್ರಭುದೇವ ಅವರು ಜಯನಗರ ಮತ್ತು ರಾಜಾಜಿನಗರ ಷೋ ರೂಮ್‌ಗಳಲ್ಲಿ ಶನಿವಾರ ಚಾಲನೆ ನೀಡಿದರು.

ಪರಿಣತಿ ಪಡೆದ ಕುಶಲಕರ್ಮಿಗಳಿಂದ ಈ ಆಭರಣಗಳನ್ನು ತಯಾರಿಸಲಾಗಿದೆ. ಪ್ರತಿ ಆಭರಣವು ವಿಶೇಷ ಆಕರ್ಷಣೆ ಹೊಂದಿವೆ ಎಂದು ಪ್ರಕಟಣೆ ತಿಳಿಸಿದೆ.

'ಮಲಬಾರ್ ಗೋಲ್ಡ್ ಮತ್ತು ಡೈಮಂಡ್ಸ್'ನ ವಿವಿಧ ಬ್ರ್ಯಾಂಡೆಡ್ ಆಭರಣಗಳು ಇಲ್ಲಿ ಲಭ್ಯ. ಹಬ್ಬದ ನಿಮಿತ್ತ ವಿಶೇಷ ಕೊಡುಗೆ ನೀಡಲಾಗುತ್ತಿದೆ. ಪ್ರತಿಯೊಂದು ವಜ್ರದ ಆಭರಣಗಳು ಮತ್ತು ಮುತ್ತು ರತ್ನಗಳ ಖರೀದಿ ಜತೆಗೆ ₹50 ಸಾವಿರ ಮೌಲ್ಯದ ಚಿನ್ನದ ನಾಣ್ಯದ ಕೊಡುಗೆ ನೀಡಲಾಗುವುದು. ಅಕ್ಟೋಬರ್ 17ರವರೆಗೆ ಈ ಪ್ರದರ್ಶನ ಮತ್ತು ಮಾರಾಟ ನಡೆಯಲಿದೆ.

‘ಕ್ಲಬ್ ಹೌಸ್’ ಜನರ ಸೆಳೆದು ಬೆಟ್ಟಿಂಗ್ ದಂಧೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಮಾಜಿಕ ಜಾಲತಾಣ ‘ಕ್ಲಬ್ ಹೌಸ್’ ಮೂಲಕ ಜನರನ್ನು ಸೆಳೆದು ಆನ್‌ಲೈನ್‌ನಲ್ಲಿ ಕ್ರಿಕೆಟ್ ಬೆಟ್ಟಿಂಗ್ ದಂಧೆ ನಡೆಸುತ್ತಿದ್ದ ಜಾಲವನ್ನು ಮಡಿವಾಳ ಪೊಲೀಸರು ಪತ್ತೆ ಮಾಡಿದ್ದು, ಮೂವರು ಆರೋಪಿಗಳನ್ನು ಬಂಧಿಸಿದ್ದಾರೆ.

‘ಜೆ.ಪಿ.ನಗರದ 24ನೇ ಮುಖ್ಯರಸ್ತೆಯ ನಿವಾಸಿ ಬಾಲಚಂದ್ರನ್ (30), ಕಸ್ತೂರಬಾ ನಗರದ ರವಿಕುಮಾರ್ (28) ಹಾಗೂ ಹೊರಮಾವು ವಿ.ಜಿ. ಬಡಾವಣೆಯ ಪೆನ್ನಿ ಚೇತನ್ (28) ಬಂಧಿತರು. ಅವರಿಂದ ₹ 59,670 ನಗದು, ಹುಂಡೈ ಐ–20 ಕಾರು, ಬೈಕ್, ಮೂರು ಮೊಬೈಲ್‌ಗಳನ್ನು ಜಪ್ತಿ ಮಾಡಲಾಗಿದೆ’ ಎಂದು ಅಧಿಕಾರಿಯೊಬ್ಬರು ಹೇಳಿದರು.

‘ಆನ್‌ಲೈನ್ ಬೆಟ್ಟಿಂಗ್ ನಿಷೇಧಿಸಿ ಇತ್ತೀಚೆಗಷ್ಟೇ ಕರ್ನಾಟಕ ಪೊಲೀಸ್ ಕಾಯ್ದೆಗೆ ತಿದ್ದುಪಡಿ ತರಲಾಗಿದೆ. ಅದರನ್ವಯ ಬಂಧಿತರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಮತ್ತಷ್ಟು ಮಂದಿ ಕೃತ್ಯದಲ್ಲಿ ಭಾಗಿಯಾಗಿರುವ ಮಾಹಿತಿ ಇದೆ’ ಎಂದೂ ತಿಳಿಸಿದರು.

‘ಕ್ಲಬ್ ಹೌಸ್’ ಚರ್ಚೆ ಆಯೋಜನೆ: ‘ಪ್ರಮುಖ ಆರೋಪಿ ಬಾಲಚಂದ್ರನ್, ಅಡ್ಮಿನ್ ಆಗಿ ‘ಕ್ಲಬ್ ಹೌಸ್’ ಆ್ಯಪ್‌ನಲ್ಲಿ ಚರ್ಚೆಗಳನ್ನು ಆಯೋಜಿಸುತ್ತಿದ್ದ. ವಿಷಯವಾರು ಚರ್ಚಿಸಿ, ಪರಸ್ಪರ ಪರಿಚಯ ಮಾಡಿಕೊಳ್ಳುತ್ತಿದ್ದರು’ ಎಂದು ಅಧಿಕಾರಿ ಮಾಹಿತಿ ನೀಡಿದರು.

‘ಐಪಿಎಲ್ ಶುರುವಾಗಿದ್ದು, ಕ್ರಿಕೆಟ್ ಬೆಟ್ಟಿಂಗ್ ಆಡೋಣ’ ಎಂಬುದಾಗಿ ಆರೋಪಿ ಹೇಳುತ್ತಿದ್ದ. ‘ಕ್ಲಬ್‌ಹೌಸ್’ ಸದಸ್ಯರನ್ನು ಪ್ರಚೋದಿಸಿ ಬೆಟ್ಟಿಂಗ್‌ಗೆ ಹಣ ಕಟ್ಟಿಸಿಕೊಳ್ಳಲಾರಂಭಿಸಿದ್ದ’ ಎಂದೂ ಹೇಳಿದರು.

ಬೆಟ್ಟಿಂಗ್‌ಗೆ ಆ್ಯಪ್ ಬಳಕೆ: ‘ಕ್ರಿಕೆಟ್ ಪಂದ್ಯಗಳ ಸ್ಕೋರ್ ವಿವರ ತಿಳಿಯಲು ಹಾಗೂ ಬೆಟ್ಟಿಂಗ್ ಆಡಲು ಹಲವು ಆ್ಯಪ್‌ಗಳು ಲಭ್ಯ ಇವೆ. ಇಂಥ ಆ್ಯಪ್‌ಗಳನ್ನು ಮೊಬೈಲ್‌ನಲ್ಲಿ ಇನ್‌ಸ್ಟಾಲ್ ಮಾಡಿಸುತ್ತಿದ್ದ ಆರೋಪಿಗಳು, ಅವುಗಳ ಮೂಲಕವೇ ಹಣ ಕಟ್ಟಿಸಿಕೊಳ್ಳುತ್ತಿದ್ದರು’ ಎಂದು ಪೊಲೀಸ್ ಅಧಿಕಾರಿ ವಿವರಿಸಿದರು.

‘ಮಡಿವಾಳ ಠಾಣೆ ವ್ಯಾಪ್ತಿಯ ವಸತಿಗೃಹವೊಂದರ ಕೊಠಡಿಯಲ್ಲಿ ಇತ್ತೀಚೆಗೆ ಸೇರಿದ್ದ ಆರೋಪಿಗಳು, ಐಪಿಎಲ್ ಪಂದ್ಯಾವಳಿಯ ಕೋಲ್ಕತ್ತ ನೈಟ್ ರೈಡರ್ಸ್ ಹಾಗೂ ರಾಜಸ್ಥಾನ್ ರಾಯಲ್ಸ್ ತಂಡಗಳ ನಡುವಿನ ಕ್ರಿಕೆಟ್ ಪಂದ್ಯದ ಮೇಲೆ ಬೆಟ್ಟಿಂಗ್ ನಡೆಸುತ್ತಿದ್ದರು. ಸೋಲು ಹಾಗೂ ಗೆಲುವಿನ ಲೆಕ್ಕಾಚಾರದಲ್ಲಿ ಬೆಟ್ಟಿಂಗ್ ಇತ್ತು. ಈ ಬಗ್ಗೆ ಮಾಹಿತಿ ಸಿಗುತ್ತಿದ್ದಂತೆ ದಾಳಿ ಮಾಡಿ ಆರೋಪಿಗಳನ್ನ ಬಂಧಿಸಲಾಗಿದೆ’ ಎಂದೂ ಅಧಿಕಾರಿ ಹೇಳಿದರು.

‘ಕ್ಲಬ್ ಹೌಸ್’ ಮೇಲೆ ನಿಗಾ

‘ವಾಯ್ಸ್ ಚಾಟ್ ಸೌಲಭ್ಯ ಹೊಂದಿರುವ ‘ಕ್ಲಬ್ ಹೌಸ್’ ಆ್ಯಪ್‌ನಲ್ಲಿ ಹಲವರು ಪರಸ್ಪರ ಮಾತುಕತೆ ನಡೆಸುತ್ತಿದ್ದಾರೆ. ಕೆಲವರು, ಅಕ್ರಮ ಚಟುವಟಿಕೆಗಳ ವಿಷಯ ಪ್ರಸ್ತಾಪಿಸಿ ಜನರನ್ನು ಪ್ರಚೋದಿಸುತ್ತಿದ್ದಾರೆ. ಹೀಗಾಗಿ, ಕ್ಲಬ್ ಹೌಸ್ ಮೇಲೆ ನಿಗಾ ಇರಿಸಲಾಗಿದೆ’ ಎಂದು ಪೊಲೀಸ್ ಅಧಿಕಾರಿ ಹೇಳಿದರು.

‘ಕ್ಲಬ್ ಹೌಸ್‌ನಲ್ಲಿ ಯಾರಾದರೂ ಕ್ರಿಕೆಟ್ ಬೆಟ್ಟಿಂಗ್ ಸೇರಿದಂತೆ ಅಕ್ರಮ ಚಟುವಟಿಕೆಗಳ ಬಗ್ಗೆ ಮಾತನಾಡಿ, ಹಣ ಪಡೆಯಲು ಯತ್ನಿಸಿದರೆ ಸಾರ್ವಜನಿಕರು ಪೊಲೀಸರಿಗೆ ಮಾಹಿತಿ ನೀಡಬೇಕು’ ಎಂದೂ ಕೋರಿದ್ದಾರೆ.

ಅಪರಾಧ ಸುದ್ದಿ



ಲಾಲ್‌ಬಾಗ್‌ಗೆ ಶನಿವಾರ ಬಂದಿದ್ದ ಮಹಿಳೆಯರು, ಮಳೆ ಸುರಿಯುತ್ತಿದ್ದ ಸಂದರ್ಭದಲ್ಲಿ ಸುರಕ್ಷಿತ ಸ್ಥಳದತ್ತ ತೆರಳಿದರು – ಪ್ರಜಾವಾಣಿ ಚಿತ್ರ

ಕವಿದ ಮೋಡ: ಬಿಡುವು ಕೊಟ್ಟು ಸುರಿದ ಮಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಮೋಡ ಕವಿದ ವಾತಾವರಣ ಮುಂದುವರಿದಿದ್ದು, ಬಹುತೇಕ ಕಡೆ ಶನಿವಾರ ಜೋರು ಮಳೆ ಸುರಿಯಿತು.

ಕೆಲ ದಿನಗಳಿಂದ ನಗರದಲ್ಲಿ ನಿತ್ಯವೂ ಮಳೆ ಆಗುತ್ತಿದೆ. ಆಗಾಗ ಬಿಸಿಲು ಕಾಣಿಸಿಕೊಂಡರೂ ಮೋಡ ಮುಸು ಕಿದ ವಾತಾವರಣವೇ ಹೆಚ್ಚಿದೆ. ಹನಿ ಹನಿಯಾಗಿ ಆರಂಭವಾಗುವ ಮಳೆ, ಕ್ರಮೇಣ ಜೋರಾಗಿ ಅಬ್ಬರಿಸುತ್ತಿದೆ.

ಶನಿವಾರವೂ ಬೆಳಿಗ್ಗೆಯಿಂದಲೇ ಮಳೆ ಆರಂಭವಾಗಿತ್ತು. ಸಂಜೆಯವರೆಗೆ ಬಿಟ್ಟು ಬಿಟ್ಟು ಮಳೆ ಸುರಿಯಿತು. ಕೆಲವೆಡೆ ಕಾಲುವೆಗಳು ಭರ್ತಿಯಾದವು. ರಸ್ತೆಯಲ್ಲೇ ನೀರು ಧಾರಾಕಾರವಾಗಿ ಹರಿದು, ವಾಹನಗಳ ಸಂಚಾರಕ್ಕೆ ಅಡಚಣೆಯಾಯಿತು.

ಬನಶಂಕರಿ, ಬಸವನಗುಡಿ, ಹನುಮಂತನಗರ, ಗಿರಿನಗರ, ದೀಪಾಂಜಲಿನಗರ, ರಾಜರಾಜೇಶ್ವರಿನಗರ, ಕೆಂಗೇರಿ, ಕಾಮಾಕ್ಷಿಪಾಳ್ಯ, ರಾಜಾಜಿನಗರ, ಮಲ್ಲೇಶ್ವರ, ಮಹಾಲಕ್ಷ್ಮಿ ಲೇಔಟ್, ಬಸವೇಶ್ವರನಗರ, ವಿಜಯನಗರ, ಚಂದ್ರಾಲೇಔಟ್, ನಾಗರಬಾವಿ, ಯಶವಂತಪುರ, ಆರ್.ಟಿ.ನಗರ, ಸಂಜಯನಗರ, ಪೀಣ್ಯ, ಹೆಬ್ಬಾಳ, ಕೋರಮಂಗಲ, ಮಡಿವಾಳ, ಎಲೆಕ್ಟ್ರಾನಿಕ್ ಸಿಟಿ, ಎಚ್‌ಎಸ್‌ಆರ್ ಲೇಔಟ್, ಅಶೋಕನಗರ, ಎಂ.ಜಿ. ರಸ್ತೆ, ಶಿವಾಜಿನಗರ, ಎಚ್‌ಎಎಲ್, ಹೆಣ್ಣೂರು, ಬಾಣಸವಾಡಿ ಹಾಗೂ ಸುತ್ತಮುತ್ತ ಸ್ಥಳಗಳಲ್ಲಿ ಮಳೆ ಅಬ್ಬರ ಜೋರಾಗಿತ್ತು.

ಶಿವಾನಂದ ವೃತ್ತ, ಮೆಜೆಸ್ಟಿಕ್ ಕೆಳಸೇತುವೆ, ಮೈಸೂರು ರಸ್ತೆ ಸೇರಿದಂತೆ ಹಲವೆಡೆ ಕಾಮಗಾರಿ ಪ್ರಗತಿಯಲ್ಲಿದ್ದು, ಇಂತಹ ಕಡೆ ತಗ್ಗು ಪ್ರದೇಶಗಳಲ್ಲಿ ಮಳೆ ನೀರು ನಿಂತಿತ್ತು. ಕೆಲವೆಡೆ ನೀರು ನಿಂತಿದ್ದ ರಸ್ತೆಯಲ್ಲೇ ಚಾಲಕರು ವಾಹನ ಚಲಾಯಿಸಿಕೊಂಡು ಹೋದರು. ಕೆಲ ದ್ವಿಚಕ್ರ ವಾಹನಗಳು ಕೆಟ್ಟು ನಿಂತಿದ್ದವು. ಸಹ ಪ್ರಯಾಣಿಕರು ವಾಹನಗಳನ್ನು ತಳ್ಳಿ ದಡ ತಲುಪಿಸಿದ ದೃಶ್ಯಗಳು ಕಂಡುಬಂದವು.

ಮಹಾಲಕ್ಷ್ಮಿ ಲೇಔಟ್, ನಂದಿನಿ ಲೇಔಟ್ ಹಾಗೂ ಸುತ್ತಮುತ್ತ ರಾತ್ರಿ ಜೋರು ಮಳೆ ಆಗಿದೆ. ಹಲವೆಡೆ ರಸ್ತೆಯಲ್ಲಿ ಎರಡು ಅಡಿಯಷ್ಟು ನೀರು ಹರಿಯಿತು. ಕೆಲವೆಡೆ ಮನೆಗಳಿಗೂ ನೀರು ನುಗ್ಗಿದ್ದ ಬಗ್ಗೆ ಮಾಹಿತಿ ಬಂದಿತ್ತು.

ಸಂಧಾನಕ್ಕೆ ಕರೆದು ಕೊಲೆ: ಬಂಧನ

ಬೆಂಗಳೂರು: ಎಚ್‌ಎಎಲ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದ್ದ ಐಟಿಐ ವಿದ್ಯಾರ್ಥಿ ಲಿಖಿತ್ (19) ಎಂಬುವರ ಕೊಲೆ ಪ್ರಕರಣ ಸಂಬಂಧ ಮೂವರು ಸಹೋದರರನ್ನು ಕೃತ್ಯ ನಡೆದ 8 ಗಂಟೆಯಲ್ಲೇ ಪೊಲೀಸರು ಬಂಧಿಸಿದ್ದಾರೆ.

‘ವಿಭೂತಿಪುರದ ಮೊಹಮ್ಮದ್ ನಯೀಮ್ (27), ಆತನ ಅಣ್ಣಂದಿರಾದ ಮೊಹಮ್ಮದ್ ಮೋಹಿನ್, ವಾಸೀಂ ಬಂಧಿತರು. ಲಿಖಿತ್ ಅವರನ್ನು ಡ್ರ್ಯಾಗರ್‌ನಿಂದ ಇರಿದು ಕೊಂದು ಆರೋಪಿಗಳು ಪರಾರಿಯಾಗಿದ್ದರು’ ಎಂದು ಪೊಲೀಸರು ಹೇಳಿದರು.

‘ದೊಮ್ಮಲೂರಿನ ಲಿಖಿತ್, ಐಟಿಐ ವ್ಯಾಸಂಗ ಮಾಡುತ್ತಿದ್ದರು. ಪರಿಚಯಸ್ಥ ಸಿದ್ದಿಕ್ ಎಂಬುವರ ಬಳಿ ಹಣಕಾಸಿನ ವ್ಯವಹಾರ ಇದ್ದು, ಈ ಸಂಬಂಧ ಜಗಳವೂ ನಡೆದಿತ್ತು. ಸಿದ್ದಿಕ್ ಸ್ನೇಹಿತನಾಗಿದ್ದ ಆರೋಪಿ ನಯೀಮ್ ಮಧ್ಯಪ್ರವೇಶಿಸಿದ್ದ.’

‘ಸಂಧಾನ ಮಾಡುವುದಾಗಿ ಹೇಳಿದ್ದ ನಯೀಮ್, ಲಿಖಿತ್ ಅವರನ್ನು ಲಾಲ್ ಬಹದ್ದೂರ್ ಶಾಸ್ತ್ರಿ ನಗರಕ್ಕೆ ಶುಕ್ರವಾರ ಸಂಜೆ ಕರೆಸಿಕೊಂಡಿದ್ದ. ಅಣ್ಣಂದಿರ ಜೊತೆ ಹಾಜರಾಗಿದ್ದ ನಯೀಮ್, ಲಿಖಿತ್ ಜೊತೆ ಜಗಳ ತೆಗೆದಿದ್ದ. ಪರಸ್ಪರ ಕೈ ಕೈ ಮಿಲಾಯಿಸಿ ಪರಿಸ್ಥಿತಿ ವಿಕೋಪಕ್ಕೆ ಹೋಗಿತ್ತು.’

‘ಲಿಖಿತ್ ಅವರನ್ನು ತಳ್ಳಾಡಿದ್ದ ಆರೋಪಿಗಳು, ದೇಹದ ಹಲವೆಡೆ ಡ್ರ್ಯಾಗರ್‌ನಿಂದ ಇರಿದಿದ್ದರು. ತೀವ್ರ ರಕ್ತಸ್ರಾವದಿಂದಾಗಿ ಲಿಖಿತ್ ಸ್ಥಳದಲ್ಲೇ ಮೃತಪಟ್ಟಿದ್ದರು’ ಎಂದೂ ಪೊಲೀಸರು ತಿಳಿಸಿದರು.

ವಿದ್ಯಾರ್ಥಿಗಳಿಗೆ ಡ್ರಗ್ಸ್ ಮಾರುತ್ತಿದ್ದವರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಲೇಜು ವಿದ್ಯಾರ್ಥಿಗಳಿಗೆ ಡ್ರಗ್ಸ್ ಮಾರುತ್ತಿದ್ದ ಇಬ್ಬರು ಆರೋಪಿಗಳನ್ನು ಎಚ್.ಎಸ್.ಆರ್ ಲೇಔಟ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಕೇರಳದ ರಾಹಿತ್ (29), ಮಣಿಪುರದ ಮಮಯಾಂಗ್ (32) ಬಂಧಿತರು. ಅವರಿಂದ ₹ 10 ಲಕ್ಷ ಮೌಲ್ಯದ ಮಾದಕ ವಸ್ತುವನ್ನು ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

ಅ.16ರಂದು ಸಿಡಬ್ಲ್ಯುಸಿ ಸಭೆ

ನವದೆಹಲಿ (ಪಿಟಿಐ): ಕಾಂಗ್ರೆಸ್ ಉನ್ನತ ನಾಯಕರು ಇದೇ 16 ರಂದು ಇಲ್ಲಿ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಸೇರಲಿದ್ದಾರೆ. ಸಭೆಯು ಸದ್ಯದ ರಾಜಕೀಯ ಪರಿಸ್ಥಿತಿಯ ಬಗ್ಗೆ ಚರ್ಚಿಸುವ ಜತೆಗೆ ಸಾಂಸ್ಥಿಕ ಚುನಾವಣೆಗಳ ಬಗ್ಗೆ ನಿರ್ಧಾರ ಕೈಗೊಳ್ಳಲಿದೆ.

ಇತ್ತೀಚಿನ ಕೆಲವು ಪಕ್ಷಾಂತರದ ಬೆಳವಣಿ ಗೆಳು ಸೇರಿ ಪ್ರಮುಖ ವಿಷಯಗಳನ್ನು ಚರ್ಚಿ ಸಲು ಪಕ್ಷದ ಪ್ರಮುಖ ನಾಯಕರು ಬೇಡಿಕೆ ಇಟ್ಟಿದ್ದರಿಂದ ಸಭೆ ಕರೆಯಲಾಗಿದೆ.

ಪಕ್ಷದ ಘಟಕಗಳಲ್ಲಿನ ಗೊಂದಲ, ಉತ್ತರಪ್ರದೇಶ, ಪಂಜಾಬ್, ಛತ್ತೀಸ್‌ಗಡ ಮತ್ತು ಇತರ ರಾಜ್ಯಗಳಲ್ಲಿ ಎದುರಾಗಲಿರುವ ವಿಧಾನಸಭಾ ಚುನಾವಣೆಗಳು ಹಾಗೂ ಹಂಗಾಮಿ ಅಧ್ಯಕ್ಷೆ ಸೋನಿಯಾ ಗಾಂಧಿ ಅವರ ಬದಲಿಗೆ ಪಕ್ಷಕ್ಕೆ ಪೂರ್ಣಾವಧಿ ಅಧ್ಯಕ್ಷರನ್ನು ನೇಮಕ ಮಾಡುವ ಪ್ರಸ್ತಾವದ ಬಗ್ಗೆ ಸಭೆಯಲ್ಲಿ ಚರ್ಚೆಯಾಗುವ ನಿರೀಕ್ಷೆ ಇದೆ. ಕಾಂಗ್ರೆಸ್ ತೊರೆಯುತ್ತಿರುವ ನಾಯಕರು, ಪಕ್ಷದ ರಾಜ್ಯ ಘಟಕಗಳಲ್ಲಿನ ಬಂಡಾಯ, ಬಿಜೆಪಿ ಆಡಳಿತದ ಕೇಂದ್ರ ಮತ್ತು ರಾಜ್ಯಗಳ ವಿರುದ್ಧ ಯಶಸ್ವಿ ಪ್ರತಿಭಟನೆ ನಡೆಸಲು ಅಸಮರ್ಥವಾಗಿರುವುದು ಸೇರಿದಂತೆ ಪಕ್ಷದೊಳಗಿನ ಆಂತರಿಕ ಬಿಕ್ಕಟ್ಟುಗಳು ಸಭೆಯಲ್ಲಿ ಬಿರುಗಾಳಿ ಎಬ್ಬಿಸುವ ನಿರೀಕ್ಷೆಯಿದೆ.

₹20 ಕೋಟಿ ಆಸ್ತಿಗೆ ‘ನಕಲಿ ದಾವೆ’

ಒಂದನೇ ಪುಟದಿಂದ

‘ಬಿಬಿಎಂಪಿ ವಾರ್ಡ್ ನಂಬರ್-111ರ ಕಂದಾಯ ನಿರೀಕ್ಷಕ ಎಚ್.ಎಲ್. ರಾಮಮೂರ್ತಿ ಎಂಬುವರು ಭೂಗಳ್ಳರ ಜಾಲದ ವಿರುದ್ಧ ದೂರು ನೀಡಿದ್ದಾರೆ. ಆರೋಪಿಗಳಾದ ಸೆಂದಿಲ್‌ಕುಮಾರ್, ಸಿ.ಎನ್. ನಾಗರಾಜು, ಬಾಬು, ವಕೀಲರಾದ ಸರೋಜಿನಿ ದೋತ್ರಾ, ಕಾಂತಮ್ಮ, ವೆಂಕಟಪ್ಪ ಹಾಗೂ ಚಿತ್ರಾ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ’ ಎಂದು ಅಶೋಕ ನಗರ ಠಾಣೆ ಪೊಲೀಸ್ ಮೂಲಗಳು ಹೇಳಿವೆ.

‘ಮೋಸದ ಮಾರ್ಗದಿಂದ ಆಸ್ತಿ ಹಕ್ಕಿನ ರಾಜಿ ಡಿಕ್ರಿ ಪಡೆಯುತ್ತಿದ್ದ ಬಗ್ಗೆ ಹೈಕೋರ್ಟ್ ನೀಡಿದ್ದ ನಿರ್ದೇಶನದಂತೆ ಲಘು ಪ್ರಕರಣಗಳ ನ್ಯಾಯಾಲಯದ (ಎಸ್‌ಸಿಸಿಎಚ್) ರಿಜಿಸ್ಟ್ರಾರ್ ಆರ್. ಧನಲಕ್ಷ್ಮಿ ಅವರು ಹಲಸೂರು ಗೇಟ್ ಠಾಣೆಗೆ ದೂರು ನೀಡಿದ್ದರು. 2020ರ ಡಿಸೆಂಬರ್ 7ರಂದು ಎಫ್‌ಐಆರ್ ದಾಖಲಾಗಿತ್ತು. ಇದರ ತನಿಖೆ ಹೊಣೆಯನ್ನು ಸಿಐಡಿಗೆ ವಹಿಸಲಾಗಿದೆ. ಈಗ ಠಾಣೆಯಲ್ಲಿ ದಾಖಲಾಗಿರುವ ಪ್ರಕರಣವನ್ನೂ ಸಿಐಡಿಗೆ ಹಸ್ತಾಂತರಿಸುವ ಪ್ರಕ್ರಿಯೆ ಆರಂಭವಾಗಿದೆ’ ಎಂದೂ ಮೂಲಗಳು ತಿಳಿಸಿವೆ.

ಬಾಡಿಗೆ ಕರಾರು ಪತ್ರ ಸೃಷ್ಟಿಸಿ ಕೃತ್ಯ: ‘ಬಿಬಿಎಂಪಿ ಒಡೆತನದ ಜಾಗದ ಮೇಲೆ 2016ರ ಡಿಸೆಂಬರ್ 15ರಂದು ಬಾಡಿಗೆ ಕರಾರು ಪತ್ರ ಸೃಷ್ಟಿಸಿದ್ದ ಆರೋಪಿಗಳು, ಅದನ್ನು ಬಳಸಿಕೊಂಡು ದಸ್ತಾವೇಜು ಸಿದ್ಧಪಡಿಸಿದ್ದರು. ಈ ಸಂಗತಿ ದೂರಿನಲ್ಲಿದೆ’ ಎಂದು ಮೂಲಗಳು ಹೇಳಿವೆ.

‘ಬಾಡಿಗೆ ಕರಾರು ಉಲ್ಲಂಘಿಸಿರುವುದಾಗಿ ಹೇಳಿ ಆರೋಪಿ ಸಿ.ಎನ್. ನಾಗರಾಜು ಅವರಿಗೆ ವಕೀಲೆ ಸರೋಜಿನಿ ದೋತ್ರಾ ಮೂಲಕ ನೋಟಿಸ್ ಕೊಡಿಸಲಾಗಿತ್ತು. ಅದರ ಆಧಾರದಲ್ಲಿ 8ನೇ ಹೆಚ್ಚುವರಿ ಲಘು ವ್ಯವಹಾರ ನ್ಯಾಯಾಲಯದಲ್ಲಿ ವಾದಿ- ಪ್ರತಿವಾದಿಯಾಗಿ ದಾವೆ ಸಹ ಹೂಡಲಾಗಿತ್ತು. ಈ ಸಂಗತಿ ಬಿಬಿಎಂಪಿ ಅಧಿಕಾರಿಗಳಿಗೆ ಗೊತ್ತೇ ಇರಲಿಲ್ಲ.’

‘ನಕಲಿ ಖಾತಾ ದೃಢೀಕರಣ ಹಾಗೂ ಖಾತಾ ಎಕ್ಸ್-ಟ್ರಾಕ್ಟನ್ ಅನ್ನು ನ್ಯಾಯಾಲಯಕ್ಕೆ ತೆಗೆದುಕೊಂಡು ಹೋಗಿದ್ದ ಆರೋಪಿಗಳು, ಸದರಿ ಸ್ವತ್ತನ್ನು ತೆರವುಗೊಳಿಸಲು ಆದೇಶ ನೀಡುವಂತೆ ನ್ಯಾಯಾಲಯವನ್ನು ಕೋರಿದ್ದರು. ವಾದಿ–ಪ್ರತಿವಾದಿ ಪರವಾಗಿ ವಕೀಲರೇ ವಿಚಾರಣೆಗೆ ಹಾಜರಾಗಿದ್ದರು. ತಮ್ಮದೇ ಜಾಗವೆಂದು ಹೇಳಿದ್ದ ವಾದಿ, ಪ್ರತಿವಾದಿ ಜೊತೆ ರಾಜಿ ಮಾಡಿಕೊಳ್ಳಲು ಅರ್ಜಿ ಸಲ್ಲಿಸಿದ್ದರು. ಅದನ್ನು ಮನ್ನಿಸಿದ್ದ ನ್ಯಾಯಾಲಯ, ಡಿಕ್ರಿ ಆದೇಶ ಹೊರಡಿಸಿತ್ತು. ಅದೇ ಡಿಕ್ರಿ ಬಳಸಿಕೊಂಡು ಆರೋಪಿಗಳು, ಬಿಬಿಎಂಪಿ ಜಾಗವನ್ನು ತಮ್ಮದಾಗಿಸಿಕೊಳ್ಳಲು ಮುಂದಾಗಿದ್ದರು. ಈ ಸಂಗತಿ ಇತ್ತೀಚೆಗೆ ಬಿಬಿಎಂಪಿ ಅಧಿಕಾರಿಗಳಿಗೆ ಗೊತ್ತಾಗಿದೆ’ ಎಂದೂ ಪೊಲೀಸ್ ಮೂಲಗಳು ಹೇಳಿವೆ.

‘116 ಪ್ರಕರಣ; ವಕೀಲರನ್ನು ಬಂಧಿಸಿದ್ದ ಸಿಐಡಿ’

ನಕಲಿ ದಾವೆ ಹೂಡಿ ಜಾಗ ಕಬಳಿಸಿದ್ದ ಪ್ರಕರಣದ ತನಿಖೆ ನಡೆಸಿದ್ದ ಸಿಐಡಿ ಅಧಿಕಾರಿಗಳು, ಈಗಾಗಲೇ ಹೈಕೋರ್ಟ್‌ಗೆ ಪ್ರಾಥಮಿಕ ತನಿಖಾ ವರದಿ ಸಲ್ಲಿಸಿದ್ದಾರೆ.

‘ಬೆಂಗಳೂರು ಹಾಗೂ ಹೊರವಲಯದಲ್ಲಿರುವ ₹ 600 ಕೋಟಿ ಮೌಲ್ಯದ ಜಾಗವನ್ನು ಕಬಳಿಸಲು 116 ನಕಲಿ ದಾವೆಗಳನ್ನು ಹೂಡಿದ್ದ ಸಂಗತಿಯನ್ನು ಪತ್ತೆ ಮಾಡಲಾಗಿತ್ತು. ಕೃತ್ಯದಲ್ಲಿ ಭಾಗಿಯಾಗಿದ್ದ ನಾಲ್ವರು ವಕೀಲರನ್ನೂ ಬಂಧಿಸಲಾಗಿತ್ತು. ನಾಲ್ವರೂ ಜಾಮೀನು ಪಡೆದುಕೊಂಡಿದ್ದಾರೆ’ ಎಂದು ಸಿಐಡಿ ಮೂಲಗಳು ಹೇಳಿವೆ.

'ಯಶವಂತಪುರ ಬಳಿಯ ಗೋಕುಲ 1ನೇ ಹಂತದ ಆಂಜನೇಯ ದೇವಸ್ಥಾನ ಬಳಿ ಇರುವ ಷಾ ಹರಿಲಾಲ್ ಭಿಕಾಬಾಯಿ ಅಂಡ್ ಕಂಪನಿಗೆ ಸೇರಿದ್ದ ಜಾಗ ಕಬಳಿಸಲು ಆರೋಪಿಗಳು ಯತ್ನಿಸಿದ್ದರು. ಜಾಲದ ವಿರುದ್ಧ ಕಂಪನಿ, ಹೈಕೋರ್ಟ್‌ನಲ್ಲಿ ದಾವೆ ಹೂಡಿತ್ತು. ಅರ್ಜಿ ವಿಚಾರಣೆ ನಡೆಸಿದ್ದ ಹೈಕೋರ್ಟ್, ಕೆಲವರು ನಕಲಿ ಮೊಕದ್ದಮೆ ದಾಖಲಿಸಿ ರಾಜಿ ಡಿಕ್ರಿ ಪಡೆಯುತ್ತಿದ್ದ ಸಂಗತಿಯನ್ನು ಪತ್ತೆ ಹಚ್ಚಿತ್ತು. ಎಫ್‌ಐಆರ್ ದಾಖಲಿಸಿ ಸಿಐಡಿ ಅಧಿಕಾರಿಗಳಿಂದ ವಿಶೇಷ ತನಿಖೆ ನಡೆಸುವಂತೆಯೂ ನಿರ್ದೇಶನ ನೀಡಿತ್ತು’ ಎಂದೂ ಮೂಲಗಳು ತಿಳಿಸಿವೆ.

ರಾಯಚೂರು ತಾಲ್ಲೂಕಿನಲ್ಲಿ ಸಂಕಷ್ಟಕ್ಕೆ ಸಿಲುಕಿದ ಜನ

ಮಳೆ; ಮನೆಗಳಿಗೆ ನುಗ್ಗಿದ ನೀರು

ಪ್ರಜಾವಾಣಿ ವಾರ್ತೆ

ಕಲಬುರಗಿ/ರಾಯಚೂರು: ಕಲಬುರಗಿ ಮತ್ತು ರಾಯಚೂರು ಜಿಲ್ಲೆಯ ವಿವಿಧೆಡೆ ಶುಕ್ರವಾರ ರಾತ್ರಿಯಿಡೀ ಮಳೆ ಸುರಿಯಿತು.

ರಾಯಚೂರು ನಗರದ ಸಿಯಾತಲಾಬ್, ಎಲ್‌ಬಿಎಸ್ ನಗರ, ಸುಖಾಣಿ ಕಾಲೊನಿ ಮತ್ತು ಬಂದರ್ ಗಲ್ಲಿಯ 300ಕ್ಕೂ ಹೆಚ್ಚು ಮನೆಗಳಲ್ಲಿ ನೀರು ನುಗ್ಗಿತು. ಮನೆಯಲ್ಲಿದ್ದ ದವಸಧಾನ್ಯ ಸೇರಿ ಅಗತ್ಯ ವಸ್ತುಗಳು ಹಾಳಾದ ಕಾರಣ ಜನರು ಶನಿವಾರ ಮಧ್ಯಾಹ್ನದವರೆಗೂ ಆಹಾರ, ಕುಡಿಯಲು ನೀರಿಲ್ಲದೇ ಸಂಕಷ್ಟ ಅನುಭವಿಸಿದರು. ನಂತರ ಜಿಲ್ಲಾಡಳಿತ ಕಾಳಜಿ ಕೇಂದ್ರಗಳನ್ನು ಆರಂಭಿಸಿ, ಆಹಾರ ಒದಗಿಸುವ ವ್ಯವಸ್ಥೆ ಮಾಡಿತು.


ರಾಯಚೂರಿನಲ್ಲಿ ಮಳೆ ನೀರು ಎಲ್‌ಬಿಎಸ್ ನಗರದಲ್ಲಿಯ ಮನೆಗಳಿಗೆ ನುಗ್ಗಿತ್ತು

ರಾಯಚೂರು ತಾಲ್ಲೂಕಿನ ಕರೇಕಲ್, ಬೇವಿನಬೆಂಚಿ, ಗುರ್ಜಾಪುರ, ಅರಷಿಣಗಿ, ಹಾಳ್ ತಿಮ್ಮಾಪುರ, ಕಾಡ್ಲೂರು, ರಂಗಾಪುರ ಗ್ರಾಮಗಳಲ್ಲಿ ಮಳೆಯಿಂದ ರಸ್ತೆ ಸಂಪರ್ಕ ಕಡಿತವಾಗಿದೆ. ಮಾರ್ಗಮಧ್ಯದ ಹಳ್ಳದ ಸೇತುವೆಗಳ ಮೇಲೆ ಮಳೆನೀರು ಹರಿಯುತ್ತಿದೆ. ಯರಗುಂಟ ಮತ್ತು ಶಾಖವಾದಿಯಲ್ಲಿ ಎರಡು ಮನೆಗಳಿಗೆ ಹಾನಿಯಾಗಿದೆ.

ಕಲಬುರಗಿ ಜಿಲ್ಲೆಯ ಚಿಂಚೋಳಿ ತಾಲ್ಲೂಕಿನಲ್ಲಿ ಜಲಾಶಯಗಳ ಒಳ ಹರಿವು ಹೆಚ್ಚಾಗಿದೆ. ನಾಗರಾಳ ಜಲಾಶಯದಿಂದ ನೀರು ಬಿಡಲಾಗಿದ್ದು, ಮುಲ್ಲಾಮಾರಿ ನದಿಯಲ್ಲಿ ಪ್ರವಾಹ ಪರಿಸ್ಥಿತಿ ತಲೆದೋರಿದೆ.

ಕಾಳಗಿ ತಾಲ್ಲೂಕಿನಲ್ಲಿ ಶುಕ್ರವಾರ ರಾತ್ರಿ ಸುರಿದ ಮಳೆಯಿಂದ ಹಲವಾರು ಮನೆಗಳಿಗೆ ನೀರು ನುಗ್ಗಿದೆ. ಕಂಚನಾಳ ಗ್ರಾಮದ ಸೇತುವೆ ಮೇಲೆ ಹಳ್ಳದ ನೀರು ಹರಿಯುತ್ತಿದೆ. ಸಾಸರಗಾಂವ ಗ್ರಾಮದಲ್ಲಿ ಮನೆಗಳಿಗೆ ಹಾನಿಯಾಗಿದೆ. ಮುಕರಂಬಾ ಗ್ರಾಮದಲ್ಲಿ ಚೌಡೇಶ್ವರಿ ದೇಗುಲದ ಗೋಡೆ ಕುಸಿದಿದೆ.

ಮುಂದುವರಿದ ಮಳೆ: ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ಪಟ್ಟಣ ಸೇರಿ ತಾಲ್ಲೂಕಿನ ಹಲವೆಡೆ ಶನಿವಾರ ಸಾಧಾರಣ ಮಳೆ ಸುರಿಯಿತು. ತಾಲ್ಲೂಕಿನಲ್ಲಿ ಎರಡು ದಿನಗಳಿಂದ ಮಳೆ ಮುಂದುವರಿದಿದೆ.

ಕಟಾವಿಗೆ ಬಂದಿದ್ದ ಈರುಳ್ಳಿ ಕೊಳೆಯುವಂತಾಗಿದ್ದು, ಬೆಳೆಗಾರರಿಗೆ ಸಂಕಟವನ್ನುಂಟು ಮಾಡಿದೆ. ತೆಂಗು, ಅಡಿಕೆ ತೋಟಗಳಿಗೆ ಹೆಚ್ಚು ಅನುಕೂಲವಾಗಿದ್ದು ಬೆಳೆಗಾರರ ಮೊಗದಲ್ಲಿ ಮಂದಹಾಸ ಮೂಡಿದೆ. ಕೊನೆಗೆ ಬಿತ್ತನೆ ಮಾಡಿದ್ದ ರಾಗಿ ಹಾಗೂ ಅಕ್ಕಡಿ ಬೆಳೆಗಳಿಗೂ ಮಳೆ ನೆರವಾಗಿದೆ.

ದಾವಣಗೆರೆ ಜಿಲ್ಲೆಯ ಮಲೇಬೆನ್ನೂರು ಸಮೀಪದ ದೇವರಬೆಳಕೆರೆ ಜಲಾಶಯಕ್ಕೆ ಹೆಚ್ಚಿನ ಪ್ರಮಾಣದಲ್ಲಿ ನೀರು ಹರಿದು ಬರುತ್ತಿರುವುದರಿಂದ ಜಲಾಶಯದ ಹಿನ್ನೀರಿನ ಭತ್ತದಗದ್ದೆ, ತೋಟಗಳು ನೀರಿನಲ್ಲಿ ಮುಳುಗಿವೆ.

ಹರಿಹರ ತಾಲ್ಲೂಕಿನ ಕೊಕ್ಕನೂರು ಕ್ಲಸ್ಟರ್ ವ್ಯಾಪ್ತಿಯ ಮೂಗಿನಗೊಂದಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಎರಡು ಕೊಠಡಿಗಳು ಮಳೆಯಿಂದ ಕುಸಿದು ಬಿದ್ದಿವೆ.

ಉಕ್ಕಿದ ಉತ್ತರ ಪಿನಾಕಿನಿ

ಪ್ರಜಾವಾಣಿ ವಾರ್ತೆ

ಚಿಕ್ಕಬಳ್ಳಾಪುರ: ಜಿಲ್ಲೆಯಲ್ಲಿ ಮಳೆಯ ಆರ್ಭಟ ಮುಂದುವರಿದಿದೆ. ಶನಿವಾರ ಬೆಳಿಗ್ಗೆಯಿಂದ ಮಧ್ಯಾಹ್ನದವರೆಗೂ ಧಾರಾಕಾರವಾಗಿ ಸುರಿಯಿತು. ಜಿಲ್ಲೆಯ ಉತ್ತರ ಪಿನಾಕಿನಿ ನದಿ, ಜಕ್ಕಲಮಡುಗು ಜಲಾಶಯ, ಶ್ರೀನಿವಾಸ ಸಾಗರ, ಅಮಾನಿಬೈರ ಸಾಗರ ಕೆರೆ ಸೇರಿದಂತೆ ದೊಡ್ಡ ಕೆರೆಗಳು ಭರ್ತಿಯಾಗಿವೆ.

ಬಾಗೇಪಲ್ಲಿ ತಾಲ್ಲೂಕಿನ ಮಾಡಪ್ಪಲ್ಲಿ ಗ್ರಾಮದಲ್ಲಿ ಮನೆಯೊಂದು ಕುಸಿದು ಬಿದ್ದಿದೆ. ಯಾವುದೇ ಅಪಾಯವಾಗಿಲ್ಲ. ಬಾಗೇಪಲ್ಲಿ ತಾಲ್ಲೂಕು ದೇವಿಕುಂಟೆ ಬಳಿ ರಸ್ತೆ ಬದಿಯ ಮೋರಿ ಕುಸಿದಿದ್ದು ಕೆಎಸ್‌ಆರ್‌ಟಿಸಿ ಬಸ್ ಆ ಮೋರಿಯಲ್ಲಿ ಸಿಲುಕಿ ಹಾಕಿಕೊಂಡಿತ್ತು. ಶಿಡ್ಲಘಟ್ಟದಲ್ಲಿ ತಾಲ್ಲೂಕು ಕಚೇರಿ ಮತ್ತು ಆವರಣ ನೀರಿನಿಂದ ಸೋರಿದ ಪರಿಣಾಮ ಕೆಲಸ ಕಾರ್ಯಗಳು ಸ್ಥಗಿತವಾಗಿದ್ದವು.



ಬಾಗೇಪಲ್ಲಿ ತಾಲ್ಲೂಕಿನ ದೇವಿಕುಂಟೆ ಗ್ರಾಮದ ರಸ್ತೆಯಲ್ಲಿನ ಮೇಲುಸೇತುವೆ ಕುಸಿತಗೊಂಡಿದ್ದರಿಂದ ಕೆಎಸ್‌ಆರ್‌ಟಿಸಿ ಬಸ್ ಮೇಲುಸೇತುವೆಯಲ್ಲಿ ಸಿಲುಕಿಕೊಂಡಿತ್ತು

ಚಿಂತಾಮಣಿ ಸೇರಿದಂತೆ ಬಹಳಷ್ಟು ಕಡೆಗಳಲ್ಲಿ ಮಳೆ ನೀರು ಮನೆಗಳಿಗೆ ನುಗ್ಗಿದೆ. ಗೌರಿಬಿದನೂರು ತಾಲ್ಲೂಕಿನ ರಮಾಪುರದಲ್ಲಿ ಮಳೆಯ ಪರಿಣಾಮವಾಗಿ ಮರಗಳು ನೆಲಕ್ಕುರುಳಿವೆ.

ಹಂಪಿ ಸ್ಮಾರಕಗಳು ಮುಳುಗಡೆ

ಹೊಸಪೇಟೆ (ವಿಜಯನಗರ): ಜಲಾನಯನ ಪ್ರದೇಶದಲ್ಲಿ ಭಾರಿ ಮಳೆಯಾಗುತ್ತಿರುವುದರಿಂದ ಇಲ್ಲಿನ ತುಂಗಭದ್ರಾ ಜಲಾಶಯಕ್ಕೆ ಅಪಾರ ನೀರು ಹರಿದು ಬರುತ್ತಿದ್ದು, ನದಿಗೆ ಹೆಚ್ಚಿನ ಪ್ರಮಾಣದಲ್ಲಿ ನೀರು ಹರಿಸುತ್ತಿರುವುದರಿಂದ ಹಂಪಿ ಸ್ಮಾರಕಗಳು ಶನಿವಾರ ಮುಳುಗಡೆಯಾಗಿವೆ.

ಹಂಪಿಯ ಪುರಂದರ ಮಂಟಪ, ವಿಜಯನಗರ ಕಾಲದ ಕಾಲು ಸೇತುವೆ, ಕೋದಂಡರಾಮ ದೇವಸ್ಥಾನದ ಅಂಗಳ, ಸ್ನಾನಘಟ್ಟ ಬಹುತೇಕ ಮುಳುಗಡೆಯಾಗಿದೆ. ನದಿ ತಟದಲ್ಲಿ ಮುನ್ನೆಚ್ಚರಿಕೆ ವಹಿಸಲಾಗಿದೆ. ಭಕ್ತರು, ಪ್ರವಾಸಿಗರಿಗೆ ನದಿ ತಟದಲ್ಲಿ ಓಡಾಡಲು ಬಿಡುತ್ತಿಲ್ಲ. ತೆಪ್ಪ, ದೋಣಿ ಸಂಚಾರ ನಿಂತಿದೆ.

ನೀರಿಗೆ ಬಿದ್ದು ಯುವಕ ಸಾವು

ಪ್ರಜಾವಾಣಿ ವಾರ್ತೆ

ಚಿಕ್ಕನಾಯಕನಹಳ್ಳಿ (ತುಮಕೂರು): ತಾಲ್ಲೂಕಿನಲ್ಲಿ ತುಂಬಿ ಹರಿಯುತ್ತಿರುವ ಅಂಕಸಂದ್ರ ಅಣೆಯನ್ನು (ಚೆಕ್‌ಡ್ಯಾಂ) ನೋಡಲು ಹೋಗಿದ್ದ ಯುವಕನೊಬ್ಬ ಹರಿಯುವ ನೀರಿಗೆ ಬಿದ್ದು ಶನಿವಾರ ಮೃತಪಟ್ಟಿದ್ದು, ಶವದ ಶೋಧ ಕಾರ್ಯ ನಡೆಯುತ್ತಿದೆ.

ಹೇಮಾವತಿ ಹಾಗೂ ಮಳೆ ನೀರಿನಿಂದ ಅಂಕಸಂದ್ರ ಅಣೆ ಮೂಲಕ ನೀರು ಹರಿಯುತ್ತಿದೆ. ನೀರು ಹರಿಯುವುದನ್ನು ನೋಡಲು ಯುವಕರ ತಂಡ ತೆರಳಿತ್ತು. ತಂಡದ ಒಬ್ಬ ಯುವಕ ನೀರಿಗೆ ಬಿದ್ದು ಮೃತಪಟ್ಟಿದ್ದಾನೆ.

ಶನಿವಾರ ಮಧ್ಯಾಹ್ನದಿಂದಲೇ ಪೊಲೀಸರು ಹಾಗೂ ಅಗ್ನಿಶಾಮಕ ತಂಡ ಶೋಧ ನಡೆಸುತ್ತಿದ್ದಾರೆ. ನೀರಿನ ಹರಿವು ಹೆಚ್ಚಾದ ಕಾರಣ ತಿಪಟೂರಿನಿಂದ ತಂದ ಬೋಟ್ ಸಹಾಯದಿಂದ ಮುಳುಗು ತಜ್ಞರು ಸಂಜೆಯವರೆಗೂ ಶವದ ಹುಡುಕಾಟ ನಡೆಸಿದ್ದರು. ಕತ್ತಲಾದ ನಂತರ ಶೋಧ ಕಾರ್ಯ ಸ್ಥಗಿತಗೊಳಿಸಿದ್ದಾರೆ.

ಮೃತ ಯುವಕ ಬರಕನಹಾಳ್ ಸಮೀಪದ ಎರೆಹಳ್ಳಿ ದೊಡ್ಡನಹಟ್ಟಿ ಗ್ರಾಮದವನು. ಹುಳಿಯಾರು ಕನಕದಾಸ ಪದವಿ ಪೂರ್ವ ಕಾಲೇಜಿನ ದ್ವಿತೀಯ ಪಿಯುಸಿ ವಿದ್ಯಾರ್ಥಿ ಎಂದು ಸ್ಥಳೀಯರು ಹೇಳುತ್ತಿದ್ದಾರೆ.

ಗೋಡೆ ಕುಸಿದು ವ್ಯಕ್ತಿ ಸಾವು

ಚೇಳೂರು (ತುಮಕೂರು): ಮೂರು ದಿನಗಳಿಂದ ಸುರಿಯುತ್ತಿರುವ ಮಳೆಗೆ ಗೋಡೆ ಕುಸಿದು ಶನಿವಾರ ಮುದ್ದಾಪುರ ಗೊಲ್ಲರಹಟ್ಟಿಯಲ್ಲಿ ವ್ಯಕ್ತಿಯೊಬ್ಬರು ಮೃತಪಟ್ಟಿದ್ದಾರೆ.

ಹಬ್ಬಕ್ಕೆಂದು ಗ್ರಾಮಕ್ಕೆ ಬಂದಿದ್ದ ಹುಚ್ಚರಂಗಪ್ಪನ ಹಟ್ಟಿಯ ಉಗ್ರಯ್ಯ (60) ಗ್ರಾಮದ ಮನೆಯೊಂದರ ಪಕ್ಕದಲ್ಲಿ ಬೆಳಿಗ್ಗೆ ಹಾಯ್ದು ಹೋಗುವಾಗ ಹಠಾತ್ತನೆ ಗೋಡೆ ಕುಸಿದು, ಅದರಡಿ ಸಿಲುಕಿ ಮೃತಪಟ್ಟಿದ್ದಾರೆ.

ಸತತ ಮಳೆಯಿಂದಾಗಿ ಗೋಡೆ ಸಂಪೂರ್ಣವಾಗಿ ನೆನೆದಿದ್ದ ಕಾರಣ ಕುಸಿದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಈಜಲು ಹೋದ ಯುವಕ ನೀರುಪಾಲು

ಗುಡಿಬಂಡೆ: ಅಮಾನಿಬೈರಸಾಗರ ಕೆರೆ ಕೋಡಿ ನೀರು ಹೋಗುವ ಕಾಲುವೆ ಬಳಿ ಯುವಕರೊಂದಿಗೆ ಈಜಾಡಲು ಹೋಗಿದ್ದ ಹಂಪಸಂದ್ರ ಗ್ರಾಮದ ಸಂತೋಷ (24) ನೀರುಪಾಲಾಗಿದ್ದು, ಶೋಧ ಕಾರ್ಯ ಮುಂದುವರಿದಿದೆ.

ಸ್ಥಳಕ್ಕೆ ತಾಲ್ಲೂಕು ಆಡಳಿತ, ಪೊಲೀಸರು, ಅಗ್ನಿಶಾಮಕ ಸಿಬ್ಬಂದಿ ಭೇಟಿ ನೀಡಿ ಕಾರ್ಯಾಚರಣೆ ನಡೆಸಿದರು. ರಾತ್ರಿವರೆಗೂ ಶೋಧಕಾರ್ಯ ನಡೆದಿತ್ತು.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್‌ಎಸ್*	124.80	115.62	7,692	6,422
ಹಾರಂಗಿ	2,859	2,858.24	1,008	1,250
ಕಬಿನಿ	2284	2,278.95	2,100	3,500
ಹೇಮಾವತಿ	2,922	2,912.46	1,921	4,683
ಲಿಂಗನಮಕ್ಕಿ	1,819	1,816.10	4,762	-
ಸೂಪಾ (ಮೀ)	564	557.02	4,586	1,465
ಮಾಣಿ	594.36	587.58	815	-
ತುಂಗಭದ್ರಾ	1,633	1,632.99	59,161	58,801
ಮಲಪ್ರಭಾ	2079.50	2,079.35	8,825	6,394
ಘಟಪ್ರಭಾ	2,175	2,175.00	5,717	5,717
ಭದ್ರಾ	186	186	3,825	3,825
ಆಲಮಟ್ಟಿ (ಮೀ)	519.60	519.60	12,780	12,780
ನಾರಾಯಣಪುರ (ಮೀ)	492.25	492.23	14,000	24,800

*ನೆಲಮಟ್ಟದಿಂದ


ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಹುಳಿಯಾರು ಹೋಬಳಿ ಬಡಕೇಗುಡ್ಲು ಗ್ರಾಮದ ಬಳಿ ಚೆಕ್‌ಡ್ಯಾಂ ತುಂಬಿ ಹರಿದಿದ್ದು, ಸ್ಥಳೀಯರು ಸಂಭ್ರಮಿಸಿದರು

ಬಾಲಕಿ ಮೇಲೆ ಅತ್ಯಾಚಾರ: ನಾಲ್ವರು ವಶಕ್ಕೆ

ಬಂಟ್ವಾಳ (ದಕ್ಷಿಣ ಕನ್ನಡ): ಇಲ್ಲಿನ ಪ್ರೌಢಶಾಲೆಗೆ ಹೋಗುತ್ತಿದ್ದ 16 ವರ್ಷದ ಬಾಲಕಿಯನ್ನು ಕಾರಿನಲ್ಲಿ ಅಪಹರಿಸಿದ ಐವರು ಸಾಮೂಹಿಕ ಅತ್ಯಾಚಾರ ಎಸಗಿದ್ದಾರೆ. ಪ್ರಕರಣಕ್ಕೆ ಸಂಬಂಧಿಸಿದಂತೆ ನಾಲ್ವರು ಆರೋಪಿಗಳನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

‘ಬಾಲಕಿಯು ಶುಕ್ರವಾರ ಬೆಳಿಗ್ಗೆ 7 ಗಂಟೆಗೆ ಮನೆಯಿಂದ ಶಾಲೆಗೆ ನಡೆದುಕೊಂಡು ಹೋಗುತ್ತಿದ್ದಾಗ ಕಾರಿನಲ್ಲಿ ಬಂದ ಆರೋಪಿ ಶರತ್ ಶೆಟ್ಟಿ, ಇತರ ನಾಲ್ವರು ಸ್ನೇಹಿತರೊಂದಿಗೆ ಆಕೆಯನ್ನು ಅಪಹರಿಸಿದ್ದಾನೆ. ನಂತರ ಮಂಗಳೂರಿನ ಲಾಡ್ಜ್‌ವೊಂದರಲ್ಲಿ ಸಾಮೂಹಿಕ ಅತ್ಯಾಚಾರ ಮಾಡಲಾಗಿದೆ. ಪೋಕ್ಸೊ ಕಾಯ್ದೆಯಡಿ ಪ್ರಕರಣ ದಾಖಲಾಗಿದೆ’ ಎಂದು ಎಸ್ಪಿ ಋಷಿಕೇಶ್ ಸೋನಾವಣೆ ತಿಳಿಸಿದ್ದಾರೆ.

‘ಶರತ್ ಶೆಟ್ಟಿ, ಬಾಲಕಿಗೆ ಪರಿಚಿತನಾಗಿದ್ದು, ಆಕೆಯೊಂದಿಗೆ ಫೋನ್‌ನಲ್ಲಿ ಸಂಪರ್ಕ ಹೊಂದಿದ್ದ. ಶರತ್ ಶೆಟ್ಟಿ ಸೇರಿದಂತೆ ನಾಲ್ವರು ಆರೋಪಿಗಳನ್ನು ವಶಕ್ಕೆ ಪಡೆದಿದ್ದು, ವಿಚಾರಣೆ ನಡೆಸಲಾಗುತ್ತಿದೆ’ ಎಂದು ಹೇಳಿದ್ದಾರೆ.

ಬಂಟ್ವಾಳ ಸರ್ಕಾರಿ ಆಸ್ಪತ್ರೆಯಿಂದ ಶುಕ್ರವಾರ ಸೂಚನಾ ಪತ್ರ ನೀಡಿದ ನಂತರ ಪೊಲೀಸರಿಗೆ ಈ ವಿಷಯ ಗೊತ್ತಾಗಿದೆ. ಮಂಗಳೂರಿನ ಲೇಡಿಗೋಷನ್ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ದಾಖಲಾಗಿದ್ದ ಸಂತ್ರಸ್ತ ಬಾಲಕಿಯ ವಿಚಾರಣೆ ನಡೆಸಿದಾಗ ಅತ್ಯಾಚಾರ ಎಸಗಿರುವುದು ಗೊತ್ತಾಗಿದೆ.

ಕಠಿಣ ಶಿಕ್ಷೆ: ‘ಮಹಿಳೆಯರು ಹಾಗೂ ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ಪ್ರಕರಣಗಳನ್ನು ಸಹಿಸಲು ಸಾಧ್ಯವಿಲ್ಲ. ಕಠಿಣ ಶಿಕ್ಷೆಗೆ ಗುರಿಪಡಿಸಲು ಕ್ರಮ ಕೈಗೊಳ್ಳಲಾಗಿದೆ. ಈ ಪ್ರಕರಣದಲ್ಲಿ ಈಗಾಗಲೇ ಹಲವರನ್ನು ವಶಕ್ಕೆ ಪಡೆದಿದ್ದು, ಪೊಲೀಸರು ತನಿಖೆ ನಡೆಸುತ್ತಿದ್ದಾರೆ’ ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ತಿಳಿಸಿದ್ದಾರೆ.


ಕಸಾಪದಿಂದ ಪುಸ್ತಕಗಳ ವಿಲೇವಾರಿ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ತನ್ನ ದಾಸ್ತಾನಿನಲ್ಲಿ ಇರುವ ಕೆಲವು ಪುಸ್ತಕಗಳ ವಿಲೇವಾರಿಗೆ ತೀರ್ಮಾನಿಸಿದೆ.

ಸರ್ಕಾರಿ, ಅನುದಾನಿತ ಶಿಕ್ಷಣ ಸಂಸ್ಥೆಗಳು, ಗ್ರಂಥಾಲಯಗಳು, ಕೇಂದ್ರ ಹಾಗೂ ರಾಜ್ಯ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳ ಕನ್ನಡ ಸಂಘಟನೆಗಳು ಪುಸ್ತಕಗಳನ್ನು ಪಡೆಯಬಹುದಾಗಿದೆ. ತಜ್ಞರ ಸಮಿತಿ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ. ವಿಲೇವಾರಿಗೆ ಲಭ್ಯವಿರುವ ಪುಸ್ತಕಗಳ ಪಟ್ಟಿಯನ್ನು ಪರಿಷತ್ತಿನ ವೆಬ್‌ಸೈಟ್ www.kasapa.inನಲ್ಲಿ ಪ್ರಕಟಿಸಲಾಗಿದೆ.

ಆಸಕ್ತರು ತಮಗೆ ಬೇಕಾದ ಪುಸ್ತಕಗಳ ಪಟ್ಟಿಯನ್ನು ಇ-ಮೇಲ್ ವಿಳಾಸ kannadaparishattu@gmail.comಗೆ ಸಂಸ್ಥೆಯ ಲೆಟರ್‌ಹೆಡ್‌ನಲ್ಲಿ ಕಳುಹಿಸಬೇಕು. ಆಯ್ಕೆ ಮಾಡಿದ ಪುಸ್ತಕಗಳನ್ನು ತಮ್ಮ ಖರ್ಚಿನಲ್ಲಿಯೇ ತೆಗೆದುಕೊಂಡು ಹೋಗಬೇಕು ಎಂದು ಪರಿಷತ್ತಿನ ಆಡಳಿತಾಧಿಕಾರಿ ಎಸ್. ರಂಗಪ್ಪ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಿಧನ


ಶ್ರೀ ಎನ್. ಶ್ರೀನಿವಾಸ್
ಕಾರ್ಯದರ್ಶಿಗಳು, ರಾಗೀಗುಡ್ಡದ ಭಕ್ತಮಂಡಳಿ ಟ್ರಸ್ಟ್ ಇವರು 9-10-2021 ರಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ಮೃತರ ಆತ್ಮಕ್ಕೆ ಶಾಂತಿ ಕೋರುವ ರಾಗೀಗುಡ್ಡದ ಭಕ್ತ ಮಂಡಳಿ ಮತ್ತು ಛಾರಿಟಬಲ್ ಟ್ರಸ್ಟ್


15ನೇ ವರ್ಷದ ಪುಣ್ಯಸ್ಮರಣೆ


ಕೆ.ವಿ. ಪ್ರಕಾಶ್
ಮರಣ: 10-10-2006
ನಿಮ್ಮ ಸವಿನೆನಪು, ಆದರ್ಶಗಳು ಸದಾ ನಮಗೆ ಮಾರ್ಗದರ್ಶನ, ನಿಮ್ಮ ಆತ್ಮಕ್ಕೆ ಭಗವಂತನು ಚಿರಶಾಂತಿ ನೀಡಲೆಂದು ಪ್ರಾರ್ಥಿಸುವ
ಪತ್ನಿ–ಮಂಜುಳ
ಮಕ್ಕಳು–ಪವನ್ ಪಿ., ಬಾಲಾಜಿ ಪಿ.

18ನೇ ಸವಿನೆನಪು


ಶ್ರೀ ಎಂ.ಆರ್. ರಾಮಯ್ಯನವರು
"ನಿಮ್ಮ ನೆನಪು ನಮ್ಮ ಮನೆ ಮನಗಳಲ್ಲಿ ನಿತ್ಯ ನೂತನ, ನಿರಂತರ ಹಾಗೂ ಅಮರ"
ಶ್ರೀಮತಿ ವೈ. ಶಾಂತಮ್ಮನವರು, ಮಕ್ಕಳು, ಸೊಸೆಯಂದಿರು, ಅಳಿಯಂದಿರು ಹಾಗೂ ಮೊಮ್ಮಕ್ಕಳು
ನಾಗರಭಾವಿ, ಬೆಂಗಳೂರು-72.

25ನೇಯ ವರುಷದ ಪುಣ್ಯಸ್ಮರಣೆ


ಪೂಜ್ಯ ಶ್ರೀ. ಪಿ. ವೀರಪ್ಪನವರು
ಮಾಜಿ ಕಾರ್ಪೊರೇಟರ್, ಬೆಂಗಳೂರು
1920 - 1996
"ನಿಮ್ಮಲ್ಲಿತ್ತು ದಿವ್ಯ ಸಂಕಲ್ಪಶಕ್ತಿ ನೀವು ನಡೆದಿರಿ ಎಂದೂ ಸತ್ಯ ಪಥದಿ ನೀಡೆಮಗೆ ನಿಮ್ಮ ದಿವ್ಯಶಕ್ತಿ ಕ್ರಮಿಸಲು ಈ ಬಾಳಹಾದಿ"
ಪುಷ್ಪಾಂಜಲಿ ಅರ್ಪಿಸುವ
ದುಃಖತಪ್ತ: ಪತ್ನಿ ಶ್ರೀಮತಿ. ಪಿ. ವಿ. ಗಿರಿಜಾಂಬ, ಮಕ್ಕಳು, ಮೊಮ್ಮಕ್ಕಳು, ಅಳಿಯಂದಿರು, ಸೊಸೆಯಂದಿರು ಹಾಗು ಬಂಧುಗಳು

ಕೆಲಸ ಕಳೆದುಕೊಂಡ 500ಕ್ಕೂ ಹೆಚ್ಚು ನೌಕರರು • ಸರ್ಕಾರದ ಸೂಚನೆಯಂತೆ ಕ್ರಮ– ಕುಲಸಚಿವೆ

ಬೆಂಗಳೂರು ವಿ.ವಿ: ಹೊರಗುತ್ತಿಗೆ ನೌಕರರ ವಜಾ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಹೊರಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುತ್ತಿದ್ದ ಎಲ್ಲ ಸಿಬ್ಬಂದಿಯನ್ನು ಕರ್ತವ್ಯದಿಂದ ಬಿಡುಗಡೆ ಮಾಡಿ ವಿಶ್ವವಿದ್ಯಾಲಯದ ಕುಲಸಚಿವರಾದ (ಆಡಳಿತ) ಕೆ. ಜ್ಯೋತಿ ಅವರು ಶುಕ್ರವಾರ ಆದೇಶ ಹೊರಡಿಸಿದ್ದಾರೆ. ಇದರಿಂದ ಸುಮಾರು 500 ಸಿಬ್ಬಂದಿ ಕೆಲಸ ಕಳೆದುಕೊಂಡಿದ್ದಾರೆ.

'ನಿಯಮಬಾಹಿರವಾಗಿ, ಅರ್ಹತೆಯ ಮಾನದಂಡಗಳನ್ನು ಮೀರಿ ಮಂಜೂರಾದ ಹುದ್ದೆಗಳಿಗಿಂತಲೂ ಹೆಚ್ಚಿನ ಸಂಖ್ಯೆಯಲ್ಲಿ ಬೋಧಕ, ಬೋಧಕೇತರ ಹುದ್ದೆಗಳಿಗೆ ಸಿಬ್ಬಂದಿಯನ್ನು ನೇಮಿಸಿಕೊಳ್ಳಲಾಗಿದೆ. ತಾತ್ಕಾಲಿಕ, ಗುತ್ತಿಗೆ, ಹೊರಗುತ್ತಿಗೆ ಆಧಾರದ ಮೇಲೆ ನೇಮಕಗೊಂಡ ಸಿಬ್ಬಂದಿ ತಮ್ಮ ಸೇವೆಯನ್ನು ಕಾಯಂಗೊಳಿಸುವುದು ಮತ್ತು ಇತರ ಸೌಲಭ್ಯಗಳಿಗೆ ಪದೇ ಪದೇ ನ್ಯಾಯಾಲಯಗಳಲ್ಲಿ ಅರ್ಜಿ ಸಲ್ಲಿಸುತ್ತಿದ್ದಾರೆ. ಅಂಥ ಸಿಬ್ಬಂದಿಯನ್ನು ಕರ್ತವ್ಯದಿಂದ ಬಿಡುಗಡೆ ಮಾಡಲು ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಸೆ.2ರಂದು ನಿರ್ದೇಶಿಸಿದ್ದಾರೆ. ಅದರಂತೆ ಕ್ರಮ ತೆಗೆದುಕೊಳ್ಳಲಾಗಿದೆ' ಎಂದು ಆದೇಶದಲ್ಲಿ ತಿಳಿಸಿದ್ದಾರೆ.

'ವಿಶ್ವವಿದ್ಯಾಲಯದಲ್ಲಿ ಮಂಜೂರಾದ ಖಾಲಿ ಹುದ್ದೆಗಳಿಗೆ ಹೊರಗುತ್ತಿಗೆ ಆಧಾರದಲ್ಲಿ ನೌಕರರನ್ನು ನೇಮಿಸಿಕೊಂಡಿಲ್ಲ. ಅಲ್ಲದೇ, ಅರ್ಹತೆಯ ಮಾನದಂಡವನ್ನೂ ಪಾಲಿಸಿಲ್ಲ. ಮಾರ್ಚ್ 24ರಂದು ನಡೆದ ವಿಶ್ವವಿದ್ಯಾಲಯದ ಸಿಂಡಿಕೇಟ್ ಸಭೆಯಲ್ಲಿ ಈ ವಿಷಯದ ಬಗ್ಗೆ ಸ್ಪಷ್ಟವಾಗಿ ಹಾಗೂ ಈ ಹಿಂದಿನ ಸಿಂಡಿಕೇಟ್ ಸಭೆಗಳಲ್ಲಿ ಪ್ರಾಸಂಗಿಕವಾಗಿ ಪ್ರಸ್ತಾಪಿಸಲಾಗಿದೆ. ಸದ್ಯ ಹೊರ ಗುತ್ತಿಗೆ ನೌಕರರನ್ನು ನೇಮಿಸಿಕೊಳ್ಳಲು ವಿಶ್ವವಿದ್ಯಾಲಯ ಅನುಸರಿಸುತ್ತಿರುವ ಕ್ರಮ ಸರ್ಕಾರ ನೀತಿ, ಮಾರ್ಗಸೂಚಿಗಳಿಗೆ ಅನುಸಾರವಾಗಿ ಇಲ್ಲ. ಹೊರಗುತ್ತಿಗೆ ನೌಕರರನ್ನು ಹೊರಗುತ್ತಿಗೆದಾರ ಸಂಸ್ಥೆಯಿಂದ ಪಡೆದುಕೊಳ್ಳಬೇಕಿದೆ. ಅಲ್ಲದೇ, ಮಂಜೂರಾದ ಹುದ್ದೆಗಳಿಗೆ ಅರ್ಹತೆಯ ಮಾನದಂಡ ಅನುಸರಿಸಿ ಮಾತ್ರ ಪಡೆಯಬೇಕು ಎಂದು ಸಿಂಡಿಕೇಟ್ ಸಭೆಯ ಗಮನಕ್ಕೆ ತರಲಾಗಿದೆ. ಆದರೂ ಪ್ರಸ್ತುತ ಇರುವ ಹೊರಗುತ್ತಿಗೆ ನೌಕರರನ್ನು ಮುಂದಿನ 6 ತಿಂಗಳ ಅವಧಿಗೆ ಮುಂದುವರಿಸಲು ಸಿಂಡಿಕೇಟ್ ಸಭೆಯಲ್ಲಿ ತೀರ್ಮಾನಿಸಲಾಗಿತ್ತು. ಅದರಂತೆ ಏಪ್ರಿಲ್ 9ರಿಂದ ಅ. 8ರವರೆಗೆ ಮುಂದುವರಿಸಲಾಗಿದ್ದು, ಇದೀಗ ಅವಧಿ ಕೊನೆಗೊಂಡಿರುವುದರಿಂದ ಕರ್ತವ್ಯದಿಂದ ಬಿಡುಗಡೆ ಮಾಡಲಾಗಿದೆ' ಎಂದೂ ಆದೇಶದಲ್ಲಿ ಅವರು ವಿವರಿಸಿದ್ದಾರೆ.

ಈ ಬಗ್ಗೆ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ಕುಲಸಚಿವರು, 'ಸರ್ಕಾರದ ಸೂಚನೆಯಂತೆ ಎಲ್ಲ ಹೊರಗುತ್ತಿಗೆ ನೌಕರರನ್ನು ಸೇವೆಯಿಂದ ಬಿಡುಗಡೆ ಮಾಡಲಾಗಿದೆ' ಎಂದು ಅವರು ತಿಳಿಸಿದರು.

'ಮಾನದಂಡ ಪ್ರಕಾರ ನೇಮಕಾತಿ ಪ್ರಕ್ರಿಯೆಗಳನ್ನು ಅನುಸರಿಸದೇ ಮತ್ತು ಸರ್ಕಾರದಿಂದ ಅನುಮೋದನೆ ಪಡೆಯದೇ ನೇಮಕಗೊಂಡವರನ್ನು ಬಿಡುಗಡೆ ಮಾಡುವಂತೆ ಸೂಚನೆ ಬಂದಿತ್ತು. ಹೊರಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುತ್ತಿರುವ 494 ಮಂದಿ ಜೊತೆಗೆ ಇನ್ನೂ ಕೆಲವರಿದ್ದು, ಸುಮಾರು 500 ನೌಕರರನ್ನು ಕರ್ತವ್ಯದಿಂದ ಬಿಡುಗಡೆ ಮಾಡಲಾಗಿದೆ' ಎಂದು ಹೇಳಿದರು.

ಈ ಬಗ್ಗೆ ಪ್ರತಿಕ್ರಿಯೆ ಪಡೆಯಲು ವಿಶ್ವವಿದ್ಯಾಲಯದ ಕುಲಪತಿ ಕೆ.ಆರ್. ವೇಣುಗೋಪಾಲ್ ಅವರಿಗೆ ಕರೆ ಮಾಡಲಾಯಿತಾದರೂ ಅವರು ಸಂಪರ್ಕಕ್ಕೆ ಸಿಗಲಿಲ್ಲ.

ವಜಾ ಮಾಡಬೇಡಿ: ಗುತ್ತಿಗೆ ನೌಕರರ ಸಂಘ

ಕೆಲಸದಿಂದ ಬಿಡುಗಡೆ ಮಾಡಿ ಹೊರಡಿಸಿರುವ ಆದೇಶವನ್ನು ವಾಪಸು ಪಡೆಯುವಂತೆ ಕೋರಿ ಕುಲಪತಿ, ಕುಲಸಚಿವರು ಮತ್ತು ಎಲ್ಲ ಸಿಂಡಿಕೇಟ್ ಸದಸ್ಯರಿಗೆ ಸೋಮವಾರ ಮನವಿ ಸಲ್ಲಿಸಲು ವಿಶ್ವವಿದ್ಯಾಲಯ ಗುತ್ತಿಗೆ ನೌಕರರ ಸಂಘ ತೀರ್ಮಾನಿಸಿದೆ.

ಈ ಬಗ್ಗೆ ಪ್ರತಿಕ್ರಿಯಿಸಿದ ಸಂಘದ ಉಪಾಧ್ಯಕ್ಷ ಎಸ್.ಆರ್. ದೇವರಾಜ್, 'ಎಲ್ಲ ಹೊರಗುತ್ತಿಗೆ ನೌಕರರನ್ನು ಏಕಾಏಕಿ ಕೆಲಸದಿಂದ ತೆಗೆದು ಹಾಕಲಾಗಿದೆ. ಕನಿಷ್ಠ ನಾಲ್ಕು ವರ್ಷಗಳಿಂದ ಆರಂಭಿಸಿ 17 ವರ್ಷಗಳಿಗೂ ಅಧಿಕ ಸಮಯದಿಂದ ಕೆಲಸ ಮಾಡುವ ಹೊರಗುತ್ತಿಗೆ ನೌಕರರೂ ವಿಶ್ವವಿದ್ಯಾಲಯದಲ್ಲಿ ಇದ್ದಾರೆ. ಇವರಲ್ಲಿ ಅನೇಕರು 40 ವರ್ಷ ದಾಟಿದವರಾಗಿದ್ದು, ಜೀವನ ನಿರ್ವಹಣೆಗೆ ಈ ಉದ್ಯೋಗವನ್ನೇ ನೆಚ್ಚಿಕೊಂಡಿದ್ದಾರೆ. ಹೀಗಾಗಿ, ವಿಶ್ವವಿದ್ಯಾಲಯದ ಆವರಣದಲ್ಲಿ ಶನಿವಾರ ಸಭೆ ಸೇರಿ ಚರ್ಚೆ ಮಾಡಿದ್ದೇವೆ. ಕೆಲಸದಿಂದ ತೆಗೆದು ಹಾಕದಂತೆ ಮನವಿ ಸಲ್ಲಿಸಲು ತೀರ್ಮಾನಿಸಿದ್ದೇವೆ' ಎಂದು ಹೇಳಿದರು.

ಅಖಿಲ ಭಾರತ ವಿಶ್ವವಿದ್ಯಾಲಯಗಳ ನೌಕರರ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಎಂ.ಬಿ. ಸಜ್ಜನರ್, 'ವಿಶ್ವವಿದ್ಯಾಲಯಗಳ ಇತಿಹಾಸದಲ್ಲಿಯೇ ಮೊದಲ ಬಾರಿಗೆ ಇಷ್ಟು ದೊಡ್ಡ ಸಂಖ್ಯೆಯಲ್ಲಿ ಹೊರಗುತ್ತಿಗೆ ನೌಕರರನ್ನು ಕೆಲಸದಿಂದ ಒಮ್ಮೆಲೆ ತೆಗೆದು ಹಾಕಲಾಗಿದೆ. ಇದರ ವಿರುದ್ಧ ಎಲ್ಲ ವಿಶ್ವವಿದ್ಯಾಲಯಗಳ ಸಿಬ್ಬಂದಿ ಪ್ರತಿಭಟನೆ ನಡೆಸಲಿದ್ದಾರೆ' ಎಂದರು.

ಸುದ್ದಿ 2 ನಿಮಿಷ

ದೇಶದಲ್ಲಿ ಕ್ರಮೇಣ ಏಕರೂಪದ ಪಠ್ಯಕ್ರಮ ಜಾರಿ: ಕರಜಗಿ

ಬೆಂಗಳೂರು: 'ದೇಶದಲ್ಲಿ ಕಾಲ ಕ್ರಮೇಣ ಏಕರೂಪದ ಪಠ್ಯಕ್ರಮ ಜಾರಿಗೊಳ್ಳುವ ಸಾಧ್ಯತೆ ಇದೆ. ಹಂತ ಹಂತವಾಗಿ ಶಿಕ್ಷಣ ಮಂಡಳಿಗಳು ವಿಲೀನಗೊಳ್ಳಲಿವೆ. ನೂತನ ರಾಷ್ಟ್ರೀಯ ಶಿಕ್ಷಣ ನೀತಿಯ (ಎನ್‌ಇಪಿ) ಮೂಲಕ ಅದಕ್ಕೆ ವೇದಿಕೆ ಸಜ್ಜುಗೊಳಿಸುತ್ತಿರುವಂತೆ ಭಾಸವಾಗುತ್ತಿದೆ' ಎಂದು ಶಿಕ್ಷಣ ತಜ್ಞ ಗುರುರಾಜ ಕರಜಗಿ ಅಭಿಪ್ರಾಯಪಟ್ಟರು.



ಎಡ್‌ಕ್ವಾರ್ಟ್ ಇತ್ತೀಚೆಗೆ ಹಮ್ಮಿಕೊಂಡಿದ್ದ 'ರಾಷ್ಟ್ರೀಯ ಶಿಕ್ಷಣ ನೀತಿ: ಪಠ್ಯಕ್ರಮ ಮತ್ತು ಗುಣಮಟ್ಟದಲ್ಲಿ ಅವಕಾಶಗಳ ಆಗರ' ಕುರಿತ ವಿಚಾರ ಸಂಕಿರಣದಲ್ಲಿ ಅವರು ಮಾತನಾಡಿದರು.

'ಎನ್‌ಇಪಿಯ ಮೊದಲ ಭಾಗದಲ್ಲಿ ಇಸಿಸಿಇ ಉಲ್ಲೇಖವಿದೆ. ಇಂಗ್ಲೆಂಡ್‌ನಲ್ಲಿರುವ ಇಸಿಸಿಇ ಪದ್ಧತಿಯ ಬಹುಪಾಲು ಅಂಶಗಳು ಇಸಿಸಿಇಯಲ್ಲಿವೆ. ಇದರ ಅನ್ವಯ ಪೂರ್ವ ಪ್ರಾಥಮಿಕ ಹಂತವನ್ನೂ ಶಾಲಾ ಶಿಕ್ಷಣಕ್ಕೆ ಸೇರ್ಪಡೆ ಮಾಡಿರುವುದು ಸ್ವಾಗತಾರ್ಹ. ಇಂಗ್ಲೆಂಡ್‌ನಲ್ಲಿ ಪೂರ್ವ ಪ್ರಾಥಮಿಕ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಲಾಗುತ್ತದೆ. ಆ ದೇಶದಲ್ಲಿ ಪೂರ್ವ ಪ್ರಾಥಮಿಕ ಶಾಲೆ ಆರಂಭಕ್ಕೆ ಅನುಮತಿ ಪಡೆಯಲು ಹರಸಾಹಸಪಡಬೇಕು. ನಮ್ಮಲ್ಲಿ ಅದಕ್ಕೆ ತದ್ವಿರುದ್ಧ ಪರಿಸ್ಥಿತಿ ಇದೆ' ಎಂದರು.

ತಾರಸಿ ಸೌರ ವಿದ್ಯುತ್ ಉತ್ಪಾದನೆಗೆ ಚಾಲನೆ

ಬೆಂಗಳೂರು: 'ಸುಸ್ಥಿರ ಅಭಿವೃದ್ಧಿ ಎಲ್ಲರ ಗುರಿಯಾಗಬೇಕು. ಈ ದಿಸೆಯಲ್ಲಿ ಸ್ವಯಂ ವಿದ್ಯುತ್ ಉತ್ಪಾದನೆ ಪ್ರಮುಖ ಹೆಜ್ಜೆ. ಯಾವುದೇ ಅಭಿವೃದ್ಧಿ ಕಾರ್ಯವು ಪರಿಸರಕ್ಕೆ ಧಕ್ಕೆಯಾಗದಂತೆ ಎಚ್ಚರ ವಹಿಸುವುದೂ ಮುಖ್ಯ' ಎಂದು ಉನ್ನತ ಶಿಕ್ಷಣ ಸಚಿವ ಸಿ.ಎನ್.ಅಶ್ವತ್ಥನಾರಾಯಣ ತಿಳಿಸಿದರು.

'ಬ್ರಿಗೇಡ್ ಗೇಟ್ ವೇ' ವಸತಿ ಸಮುಚ್ಚಯದ ತಾರಸಿ ಮೇಲೆ ಅಳವಡಿಸಿರುವ 354 ಕಿಲೋವಾಟ್ ಸಾಮರ್ಥ್ಯದ ಸೌರ ವಿದ್ಯುತ್ ಉತ್ಪಾದನಾ ಘಟಕಕ್ಕೆ ಚಾಲನೆ ನೀಡಿ ಅವರು ಶನಿವಾರ ಮಾತನಾಡಿದರು.

'ಪ್ರಧಾನಿ ನರೇಂದ್ರ ಮೋದಿಯವರು ದೇಶದಲ್ಲಿ 100 ಗಿಗಾವಾಟ್‌ಗಳಷ್ಟು ನವೀಕರಿಸಬಹುದಾದ ಇಂಧನ ಉತ್ಪಾದಿಸುವ ಗುರಿ ಹೊಂದಿದ್ದಾರೆ. ವಿದ್ಯಾರ್ಥಿಗಳು ಸೇರಿ ಇದಕ್ಕೆ ಪ್ರತಿಯೊಬ್ಬರೂ ತಮ್ಮದೇ ಆದ ಕೊಡುಗೆ ನೀಡಬೇಕು. ಇದಕ್ಕೆ ಅಗತ್ಯವಿರುವ ಶಿಕ್ಷಣಕ್ಕೆ ನೂತನ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಒತ್ತು ನೀಡಲಾಗಿದೆ' ಎಂದರು.

'ಬ್ರಿಗೇಡ್ ಗೇಟ್ ವೇ ಒಕ್ಕೂಟವು ನೀರಿನ ಮರುಬಳಕೆ, ತ್ಯಾಜ್ಯ ವಿಲೇವಾರಿ ವ್ಯವಸ್ಥೆಗಳನ್ನು ಅಳವಡಿಸಿಕೊಂಡಿದ್ದು, ಈಗ ಸರ್ಕಾರದ ನೆರವು ಬಯಸದೇ ಸ್ವಯಂ ಸೌರ ವಿದ್ಯುತ್ ಉತ್ಪಾದನಾ ವ್ಯವಸ್ಥೆ ಅಳವಡಿಸಿರುವುದು' ಎಂದು ಶ್ಲಾಘಿಸಿದರು.

ಬ್ರಿಗೇಡ್ ಗೇಟ್ ವೇ ಒಕ್ಕೂಟದ ಅಧ್ಯಕ್ಷ ಮಹೇಶ್, ಬೆಸ್ಕಾಂ ಕಾರ್ಯನಿರ್ವಾಹಕ ಎಂಜಿನಿಯರ್ ರಘು, ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಸಿದ್ದರಾಜು ಇದ್ದರು.



ಸೈಕ್ಲಥಾನ್

ಮಲ್ಲೇಶ್ವರದ ಮಣಿಪಾಲ್ ಆಸ್ಪತ್ರೆಯು ನಗರದಲ್ಲಿ ಶನಿವಾರ ಸೈಕ್ಲಥಾನ್ ಆಯೋಜಿಸಿದ್ದು, ಈ ಮೂಲಕ ಬೊಜ್ಜಿನಿಂದ ಉಂಟಾಗುವ ಅಪಾಯದ ಬಗ್ಗೆ ಜಾಗೃತಿ ಮೂಡಿಸಲಾಯಿತು – ಪ್ರಜಾವಾಣಿ ಚಿತ್ರ

ಗುಲ್ಫಿಶಾ ಫಾತಿಮಾ ಬಿಡುಗಡೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಿಎಎ ವಿರೋಧಿಸಿ ಪ್ರತಿಭಟನೆ ನಡೆಸಿದ್ದ, 18 ತಿಂಗಳುಗಳಿಂದ ಜೈಲಿನಲ್ಲಿರುವ ದೆಹಲಿ ವಿದ್ಯಾರ್ಥಿನಿ ಗುಲ್ಫಿಶಾ ಫಾತಿಮಾ ಅವರನ್ನು ಬಿಡುಗಡೆಗೆ ವಿವಿಧ ಸಂಘಟನೆಗಳು ಒತ್ತಾಯಿಸಿವೆ. ಫಾತಿಮಾ ಅವರನ್ನು 2020ರ ಏಪ್ರಿಲ್‌ನಲ್ಲಿ ಬಂಧಿಸಲಾಗಿತ್ತು.

ನಗರದಲ್ಲಿ ಶನಿವಾರ 'ನಾವೆದ್ದು ನಿಲ್ಲದಿದ್ದರೆ–ಕರ್ನಾಟಕ' ಸಂಘಟನೆ, ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ, ಎಐಪಿಡಬ್ಲ್ಯುಎ, ಪ್ರಜಾಪ್ರಭುತ್ವ ರಕ್ಷಣೆಗಾಗಿ ಅಭಿಯಾನ, ಪಿಯುಸಿಎಲ್–ಕೆ ಮುಖಂಡರು ಮತ್ತು ಸಮಾನ ಮನಸ್ಕ ನಾಗರಿಕರ ಸಹಯೋಗದೊಂದಿಗೆ ಆಯೋಜಿಸಲಾಗಿದ್ದ 'ಐಕ್ಯತಾ ಸಮಾವೇಶ'ದಲ್ಲಿ ಈ ಬಗ್ಗೆ ನಿರ್ಣಯ ಕೈಗೊಳ್ಳಲಾಯಿತು.



ನಗರದಲ್ಲಿ ಶನಿವಾರ ನಡೆದ ಐಕ್ಯತೆ ಸಮಾವೇಶದಲ್ಲಿ ವಿವಿಧ ಸಂಘಟನೆಗಳ ಪ್ರತಿನಿಧಿಗಳು ಪಾಲ್ಗೊಂಡರು – ಪ್ರಜಾವಾಣಿ ಚಿತ್ರ

ಪೌರತ್ವ ತಿದ್ದುಪಡಿ ಕಾಯ್ದೆ (ಸಿಎಎ), ರಾಷ್ಟ್ರೀಯ ಪೌರತ್ವ ನೋಂದಣಿ (ಎನ್‌ಆರ್‌ಸಿ), ರಾಷ್ಟ್ರೀಯ ಜನಸಂಖ್ಯಾ ನೋಂದಣಿ (ಎನ್‌ಪಿಆರ್), ಕಾನೂನು ವಿರೋಧಿ ಚಟುವಟಿಕೆಗಳ ತಡೆ ಕಾಯ್ದೆ (ಯುಎಪಿಎ), ದೇಶದ್ರೋಹದ ಕಾಯ್ದೆಗಳನ್ನು ರದ್ದುಪಡಿಸಬೇಕು ಎಂದು ಒತ್ತಾಯಿಸಲಾಯಿತು.

ಸಾಮಾಜಿಕ ಕಾರ್ಯಕರ್ತೆ ಅಪೇಕ್ಷಾ ವೋಹ್ರಾ,'ಗುಲ್ಫಿಶಾ ತನ್ನ ಹಕ್ಕುಗಳಿಗಾಗಿ ಹೋರಾಟ ಮಾಡಿದ್ದಾರೆ. ಅವರು ಯಾವುದೇ ಸಂಘಟನೆಯ ಜತೆಯೂ ಗುರುತಿಸಿಕೊಂಡಿರಲಿಲ್ಲ. ಸಮಾಜ ಅವರ ಬೆಂಬಲಕ್ಕೆ ನಿಲ್ಲಬೇಕು' ಎಂದರು.

ಗುಲ್ಫಿಶಾ ಅವರಿಗೆ ಬೆಂಬಲ ವ್ಯಕ್ತಪಡಿಸಿ 'ಕಾವ್ಯ ಸಂಜೆ' ತಂಡದಿಂದ ಕವಿಗೋಷ್ಠಿ ನಡೆಯಿತು.

ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ ನಿರ್ದೇಶಕ ಡಾ.ಸಿ. ರಾಮಚಂದ್ರ ಕಳವಳ

ಲಕ್ಷ ಜನರಲ್ಲಿ 35 ಮಂದಿಗೆ ಸ್ತನ ಕ್ಯಾನ್ಸರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಗರದ ಪ್ರತಿ ಒಂದು ಲಕ್ಷ ಜನರಲ್ಲಿ ಸರಾಸರಿ 35 ಮಂದಿ ಸ್ತನ ಕ್ಯಾನ್ಸರ್ ಕಾಯಿಲೆಯನ್ನು ಎದುರಿಸುತ್ತಿದ್ದಾರೆ' ಎಂದು ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ ನಿರ್ದೇಶಕ ಡಾ.ಸಿ. ರಾಮಚಂದ್ರ ಶನಿವಾರ ಕಳವಳ ವ್ಯಕ್ತಪಡಿಸಿದರು.

ಅಂತರರಾಷ್ಟ್ರೀಯ ಸ್ತನ ಕ್ಯಾನ್ಸರ್ ಜಾಗೃತಿ ಮಾಸದ ಪ್ರಯುಕ್ತ ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ ನಗರದಲ್ಲಿ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಗ್ಲೋಬಲ್ ಬ್ರೆಸ್ಟ್ ಕ್ಯಾನ್ಸರ್ ಫೌಂಡೇಷನ್ ಹಾಗೂ ಗ್ಲೋಬಲ್ ಪ್ರೋಸ್ಟೇಟ್ ಕ್ಯಾನ್ಸರ್ ಫೌಂಡೇಷನ್ ಉದ್ಘಾಟಿಸಿ ಮಾತನಾಡಿದರು.



ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ನಯನಾ ನಾಗರಾಜ್ ಹಾಗೂ ನರ್ಸಿಂಗ್ ವಿದ್ಯಾರ್ಥಿಗಳು ಸ್ತನ ಕ್ಯಾನ್ಸರ್ ಬಗ್ಗೆ ಜಾಗೃತಿ ಮೂಡಿಸಿದರು – ಪ್ರಜಾವಾಣಿ ಚಿತ್ರ

'ಸ್ತನ ಕ್ಯಾನ್ಸರ್ ಪ್ರಕರಣಗಳು ಈಚಿನ ದಿನಗಳಲ್ಲಿ ಹೆಚ್ಚಳವಾಗುತ್ತಿವೆ. ಸಣ್ಣ ಮಕ್ಕಳಲ್ಲಿಯೂ ಕಾಣಿಸಿಕೊಳ್ಳುತ್ತಿದೆ. ಬದಲಾದ ಜೀವನ ಶೈಲಿ, ಪಾಶ್ಚಿಮಾತ್ಯ ಆಹಾರ ಪದ್ಧತಿ ಹಾಗೂ ಧೂಮಪಾನ, ಮದ್ಯಸೇವನೆಯಂತಹ ವ್ಯಸನಗಳೂ ಕ್ಯಾನ್ಸರ್ ಕಾಣಿಸಿಕೊಳ್ಳಲು ಕಾರಣಗಳಾಗಿವೆ. ಕಾಯಿಲೆಯನ್ನು ಬೇಗ ಪತ್ತೆ ಮಾಡಿ, ಚಿಕಿತ್ಸೆ ಒದಗಿಸಿದಲ್ಲಿ ಗುಣಪಡಿಸಲು ಸಾಧ್ಯ. ಮೂರು ಮತ್ತು ನಾಲ್ಕನೇ ಹಂತದಲ್ಲಿ ಆಸ್ಪತ್ರೆಗಳಿಗೆ ಬಂದಲ್ಲಿ ರೋಗವನ್ನು ಗುಣಪಡಿಸುವುದು ಕಷ್ಟ' ಎಂದು ಹೇಳಿದರು.

ಮಾಹಿತಿ ಕೊರತೆ: ಗ್ಲೋಬಲ್ ಬ್ರೆಸ್ಟ್ ಕ್ಯಾನ್ಸರ್ ಫೌಂಡೇಷನ್ ಟ್ರಸ್ಟಿ ಕರ್ನಲ್ ಅಯ್ಯಪ್ಪ, 'ನಾನೂ ಕ್ಯಾನ್ಸರ್ ಜಯಿಸಿದ್ದೇನೆ. ಈ ಕಾಯಿಲೆ ಪತ್ತೆ ಆಗುವವರೆಗೆ ನನಗೂ ಮಾಹಿತಿ ಇರಲಿಲ್ಲ. ದೈಹಿಕ, ಮಾನಸಿಕ, ಆರ್ಥಿಕವಾಗಿ ಕಾಯಿಲೆ ಘಾಸಿಗೊಳಿಸುತ್ತದೆ. ಹೆಚ್ಚಿನವರಿಗೆ ಈ ಬಗ್ಗೆ ಸರಿಯಾದ ತಿಳಿವಳಿಕೆಯಿಲ್ಲ. ಹಾಗಾಗಿ, ಅರಿವು ಮೂಡಿಸಲು ಫೌಂಡೇಷನ್ ಪ್ರಾರಂಭಿಸಲಾಗಿದೆ. ರೋಗಿಗಳಿಗೆ ಸೂಕ್ತ ಮಾರ್ಗದರ್ಶನ ಒದಗಿಸಿ, ಚಿಕಿತ್ಸೆ ಕೊಡಿಸಲು ನೆರವಾಗುತ್ತೇವೆ' ಎಂದರು.

ಕಿರುತೆರೆ ಕಲಾವಿದೆ ನಯನಾ ನಾಗರಾಜ್, 'ಕ್ಯಾನ್ಸರ್ ಬಗ್ಗೆ ಹಲವರಿಗೆ ಸೂಕ್ತ ಮಾಹಿತಿಯಿಲ್ಲ. ತಪಾಸಣೆ, ಚಿಕಿತ್ಸೆ ಬಗ್ಗೆ ಜಾಗೃತಿ ಮೂಡಿಸುವ ಕೆಲಸ ಆಗಬೇಕು' ಎಂದು ಹೇಳಿದರು.

ಭಾರತ್ ಸ್ಕೌಟ್ಸ್ ಆ್ಯಂಡ್ ಗೈಡ್ಸ್ ಪ್ರಧಾನ ಸಲಹೆಗಾರ ಜಿ.ಎಂ. ಬಾಬು, 'ಕ್ಯಾನ್ಸರ್ ಕಾಯಿಲೆ ಬಗ್ಗೆ ನಿರ್ಲಕ್ಷ್ಯ ಸಲ್ಲದು. ಗ್ರಾಮೀಣ ಮಹಿಳೆಯರು ಹಿಂಜರಿಕೆಯಿಂದ ತಪಾಸಣೆ ಮಾಡಿಸಿಕೊಳ್ಳುತ್ತಿಲ್ಲ. ಇದರಿಂದ ಸಮಸ್ಯೆ ಉಲ್ಬಣವಾಗುತ್ತಿದೆ. ಹಳ್ಳಿಗಳಲ್ಲಿ ಕ್ಯಾನ್ಸರ್ ತಪಾಸಣೆ ಹಾಗೂ ಚಿಕಿತ್ಸೆಗೆ ಸೂಕ್ತ ವ್ಯವಸ್ಥೆಯನ್ನು ಒದಗಿಸುವ ಕೆಲಸವಾಗಬೇಕು' ಎಂದು ತಿಳಿಸಿದರು.

ಇದಕ್ಕೂ ಮೊದಲು ಕೋರಮಂಗಲದ ಪೊಲೀಸ್ ಪಬ್ಲಿಕ್ ಸ್ಕೂಲ್‌ನಿಂದ ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯವರೆಗೆ ಸ್ತನ ಕ್ಯಾನ್ಸರ್ ಜಾಗೃತಿ ಜಾಥಾವನ್ನು ನಡೆಸಲಾಯಿತು.

ಯುವತಿಯರಲ್ಲೂ ಸ್ತನ ಕ್ಯಾನ್ಸರ್

'ಮಹಿಳೆಯರಲ್ಲಿ ಸ್ತನ ಕ್ಯಾನ್ಸರ್ ಸಾಮಾನ್ಯವಾಗಿದೆ. ದೇಶದಲ್ಲಿ ಪ್ರತಿವರ್ಷ 1.78 ಲಕ್ಷ ಸ್ತನ ಕ್ಯಾನ್ಸರ್ ಪ್ರಕರಣಗಳು ಪತ್ತೆಯಾಗುತ್ತಿವೆ. ಮಹಿಳೆಯರಲ್ಲಿ ಕಾಣಿಸಿಕೊಳ್ಳುತ್ತಿರುವ ಕ್ಯಾನ್ಸರ್ ಪ್ರಕಾರಗಳಲ್ಲಿ ಸ್ತನ ಕ್ಯಾನ್ಸರ್ ಪ್ರಮಾಣವೇ ಜಾಸ್ತಿ. ಈ ಹಿಂದೆ 50ರಿಂದ 70 ವರ್ಷದೊಳಗಿನ ಮಹಿಳೆಯರಲ್ಲಿ ಸ್ತನ ಕ್ಯಾನ್ಸರ್ ಹೆಚ್ಚಾಗಿ ಕಾಣಿಸಿಕೊಳ್ಳುತ್ತಿತ್ತು. ಆದರೆ, ಇತ್ತೀಚಿನ ವರ್ಷಗಳಲ್ಲಿ 20ರಿಂದ 30 ವರ್ಷದೊಳಗಿನವರಲ್ಲಿಯೂ ಹೆಚ್ಚಾಗಿ ಈ ಕಾಯಿಲೆ ಪತ್ತೆಯಾಗುತ್ತಿದೆ' ಎಂದು ಡಾ.ಸಿ. ರಾಮಚಂದ್ರ ತಿಳಿಸಿದರು.

ಕೋವಿಡ್ ಪರಿಹಾರ: ಅರ್ಜಿ ಸಲ್ಲಿಕೆಗೆ ಅವಕಾಶ


ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್‌ನಿಂದ ಮೃತಪಟ್ಟವರ ಕುಟುಂಬದವರು ಸರ್ಕಾರದಿಂದ ಪರಿಹಾರ ಪಡೆಯಲು ಅರ್ಜಿ ಸಲ್ಲಿಸುವುದಕ್ಕೆ ಬಿಬಿಎಂಪಿ ಅವಕಾಶ ಕಲ್ಪಿಸಿದೆ.

ಬಡತನ ರೇಖೆಗಿಂತ ಕೆಳಗಿನ (ಬಿಪಿಎಲ್) ಕುಟುಂಬಗಳ ಸಂತ್ರಸ್ತರಿಗೆ ಸಂಧ್ಯಾ ಸುರಕ್ಷಾ ಯೋಜನೆಯಡಿ ₹1 ಲಕ್ಷ ಮತ್ತು ರಾಜ್ಯ ವಿಪತ್ತು ಪರಿಹಾರ ನಿಧಿಯಿಂದ (ಎಸ್‌ಡಿಆರ್‌ಎಫ್) ₹50 ಸಾವಿರ ನೀಡಲಾಗುವುದು. ಬಿಪಿಎಲ್ ಕುಟುಂಬ ಅಲ್ಲದ ಸಂತ್ರಸ್ತರಿಗೆ ಎಸ್‌ಡಿಆರ್‌ಎಫ್‌ನಿಂದ ₹50 ಸಾವಿರ ಮಾತ್ರ ಪರಿಹಾರವಾಗಿ ದೊರಕಲಿದೆ ಎಂದು ಬಿಬಿಎಂಪಿ ತಿಳಿಸಿದೆ.

ಆಯಾ ವಾರ್ಡ್‌ನ ಕಂದಾಯ ಅಧಿಕಾರಿ ಕಚೇರಿಗೆ ಅರ್ಜಿ ಸಲ್ಲಿಸಬೇಕು. ಕೋವಿಡ್ ದೃಢಪಟ್ಟ ವರದಿ, ಕೋವಿಡ್ ರೋಗಿ ಸಂಖ್ಯೆ (ಬಿ.ಯು), ಮರಣ ಪ್ರಮಾಣಪತ್ರ, ಮೃತ ವ್ಯಕ್ತಿಯ ಆಧಾರ್ ಕಾರ್ಡ್, ಬಿಪಿಎಲ್ ಪಡಿತರ ಚೀಟಿ, ಅರ್ಜಿದಾರರ ಆಧಾರ್ ಕಾರ್ಡ್, ಬ್ಯಾಂಕ್ ಖಾತಾ ಪುಸ್ತಕದ ಪ್ರತಿ, ಸ್ವಯಂ ಘೋಷಣಾ ಪತ್ರವನ್ನು ಅರ್ಜಿಯೊಂದಿಗೆ ಸಲ್ಲಿಸಬೇಕು.

ಮೃತ ವ್ಯಕ್ತಿಯ ಪತಿ ಅಥವಾ ಪತ್ನಿ ಹೊರತುಪಡಿಸಿ ಕುಟುಂಬದ ಇತರೆ ಸದಸ್ಯರು ಅರ್ಜಿ ಸಲ್ಲಿಸಿದಲ್ಲಿ ಕುಟುಂಬದ ಉಳಿದ ಸದಸ್ಯರಿಂದ ನಿರಾಕ್ಷೇಪಣಾ ಪತ್ರ (ಫಾರಂ -3) ಸಲ್ಲಿಸಬೇಕು ಎಂದು ಬಿಬಿಎಂಪಿ ಪ್ರಕಟಣೆ ತಿಳಿಸಿದೆ.



ಬೆಂಗಳೂರು ನಗರದ ಕೋವಿಡ್ ಅಂಕಿ–ಅಂಶ

12,48,157 ಒಟ್ಟು ಸೋಂಕಿತರು (12,47,970 ನಿನ್ನೆಯ ವಿವರ)

ಸಕ್ರಿಯ ಪ್ರಕರಣ	ಗುಣಮುಖ ಆದವರು	ಒಟ್ಟು ಸಾವು
6,727	12,25,246	16,183

ದಿನದ ಏರಿಕೆ

ಹೊಸ ಪ್ರಕರಣ	187
ಗುಣಮುಖ	1,009
ಸಾವು	03

ಆಧಾರ: ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಸ್ನೇಹಿತರ ಜಗಳ: ಕೊಲೆಯಲ್ಲಿ ಅಂತ್ಯ

ಕೋಲಾರ: ತಾಲ್ಲೂಕಿನ ನರಸಾಪುರದ ಕುರ್ಕಿ ರಸ್ತೆಯಲ್ಲಿ ಶುಕ್ರವಾರ ರಾತ್ರಿ ಮೊಬೈಲ್ ಕಳುವಾಗಿರುವ ವಿಚಾರವಾಗಿ ಸ್ನೇಹಿತರ ನಡುವೆ ನಡೆದ ಜಗಳ ಚಂದ್ರು (32) ಎಂಬುವರ ಕೊಲೆಯಲ್ಲಿ ಅಂತ್ಯಗೊಂಡಿದೆ.

'ವಿಶ್ವ ವಸತಿ ರಹಿತರ ದಿನ' ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಇಂಪ್ಯಾಕ್ಟ್ ಇಂಡಿಯಾ ಒಕ್ಕೂಟದ ವತಿಯಿಂದ ವಿಶ್ವ ವಸತಿ ರಹಿತರ ದಿನವನ್ನು ಅ.10ರಂದು ಬೆಳಿಗ್ಗೆ 11ಕ್ಕೆ ಚಾಮರಾಜಪೇಟೆಯ ಸೇಂಟ್ ಜೋಸೆಫ್ ಪ್ರೌಢಶಾಲೆಯಲ್ಲಿ ಏರ್ಪಡಿಸಲಾಗಿದೆ' ಎಂದು ಒಕ್ಕೂಟದ ಅಧ್ಯಕ್ಷ ಎಡ್ವರ್ಡ್ ಥಾಮಸ್ ತಿಳಿಸಿದರು.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಮೆಟ್ರೊಪಾಲಿಟನ್ ಆರ್ಚ್ ಬಿಷಪ್ ಪೀಟರ್ ಮಚಾಡೊ, ಶೈಲ ಶಾಖಾ ಮಠದ ಕುಮಾರ ಆರಾಧ್ಯ ಪಂಡಿತ್ ಸ್ವಾಮೀಜಿ, ಮಹಾಬೋಧಿ ಸೊಸೈಟಿಯ ಭಿಕ್ಷು ನ್ಯಾನಶೀಲಾ, ವಿ.ರಂಗರಾಜನ್ ಸ್ವಾಮೀಜಿ, ಶಾಸಕ ಉದಯ್ ಬಿ.ಗರುಡಾಚಾರ್, ನಟಿ ನೀತು ಶೆಟ್ಟಿ ಸೇರಿದಂತೆ ಹಲವರು ಭಾಗವಹಿಸಲಿದ್ದಾರೆ' ಎಂದರು.

ಉಪಾಧ್ಯಕ್ಷ ಕೆ.ಭೀಮಾ,'ಬೆಂಗಳೂರಿಗೆ ಕನಿಷ್ಠ 86 ನಗರ ನಿರಾಶ್ರಿತರ ತಂಗುದಾಣಗಳ ಅಗತ್ಯವಿದೆ. ಪ್ರಸ್ತುತ 14 ಮಾತ್ರ ಇವೆ. ನಗರ ನಿರಾಶ್ರಿತರಿಗೆ ವಸತಿ ಕಲ್ಪಿಸುವುದು, ಗಣತಿ ಸೇರಿ ವಿವಿಧ ಬೇಡಿಕೆಗಳ ಬಗ್ಗೆ ಚರ್ಚಿಸಲಾಗುವುದು' ಎಂದರು.

'ರಾಗಲಹರಿ' ಸಂಗೀತ, ನೃತ್ಯ ಸ್ಪರ್ಧೆ

ಬೆಂಗಳೂರು: ರೋಟರಿ ಇಂದಿರಾ ನಗರ ವತಿಯಿಂದ 'ರಾಗ ಲಹರಿ' ಹೆಸರಿನಲ್ಲಿ ಭಾರತೀಯ ಶಾಸ್ತ್ರೀಯ ಸಂಗೀತ ಮತ್ತು ನೃತ್ಯ ಸ್ಪರ್ಧೆಯನ್ನು ಆಯೋಜಿಸಲಾಗಿದೆ.

ಆರು ವರ್ಷಗಳಿಂದ ಈ ಸ್ಪರ್ಧೆಗಳನ್ನು ರೋಟರಿ ಆಯೋಜಿಸುತ್ತಿದೆ. ಕಳೆದ ವರ್ಷ ಕೋವಿಡ್ ಕಾರಣಕ್ಕೆ ಸ್ಪರ್ಧೆಯನ್ನು ವರ್ಚುವಲ್ ವ್ಯವಸ್ಥೆ ಮೂಲಕ ನಡೆಸಲಾಗಿತ್ತು ಎಂದು ಅಧ್ಯಕ್ಷ ಫಜಲ್ ಉರ್ ರಹಮಾನ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸ್ಪರ್ಧಿಗಳು ನ. 3ರ ಒಳಗೆ ತಮ್ಮ ವಿಡಿಯೊ ಕಳುಹಿಸಬೇಕು. ನ. 12ರಿಂದ 14ರವರೆಗೆ ಪ್ರಾಥಮಿಕ ಸುತ್ತಿನ ಸ್ಪರ್ಧೆ ನಡೆಯಲಿದೆ. ನ. 28ರಂದು ಅಂತಿಮ ಸುತ್ತಿನ ಸ್ಪರ್ಧೆ ನಡೆಯಲಿದೆ. ಮಾಹಿತಿಗೆ www.raagalahari.rotaryindiranagar.org ನೋಡಬಹುದು ಎಂದು ಅವರು ತಿಳಿಸಿದ್ದಾರೆ.

ನಗರದಲ್ಲಿ ಇಂದು

ಇನ್‌ಸ್ಟಿಟ್ಯೂಟ್ ಆಫ್ ಗ್ಯಾಸ್ಟ್ರೊಎಂಟ್ರಾಲಜಿ ಸೈನ್ಸಸ್ ಆ್ಯಂಡ್ ಆರ್ಗನ್ ಟ್ರಾನ್ಸ್‌ಪ್ಲಾಂಟ್ ನೂತನ ಆಸ್ಪತ್ರೆ ಉದ್ಘಾಟನೆ: ಕೇಂದ್ರ ಆರೋಗ್ಯ ಸಚಿವ ಮನ್‌ಸುಖ್ ಮಾಂಡವಿಯಾ, ಅತಿಥಿಗಳು–ಬಸವರಾಜ ಬೊಮ್ಮಾಯಿ, ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್, ಕೇಂದ್ರ ಸಚಿವ ಎಂ.ರಾಜೀವ್ ಚಂದ್ರಶೇಖರ್, ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಸ್ಥಳ–ವಿಕ್ಟೋರಿಯಾ ಆಸ್ಪತ್ರೆ ಆವರಣ, ಬೆಳಿಗ್ಗೆ 8

ಎಂ.ಸಿ.ಪ್ರಕಾಶ್ ಅವರು ಕನ್ನಡಕ್ಕೆ ಅನುವಾದಿಸಿರುವ ಲೇಖಕ ರಾಮಚಂದ್ರ ಗುಹಾ ಅವರ 'ಗಾಂಧಿ: ಪ್ರಪಂಚವನ್ನು ಬದಲಾಯಿಸಿದ ಆ ವರ್ಷಗಳು 1914–1948' ಎರಡು ಸಂಪುಟಗಳ ಬಿಡುಗಡೆ: ಭಾಗವಹಿಸುವವರು–ರಾಮಚಂದ್ರ ಗುಹಾ, ಪತ್ರಕರ್ತ ಸತೀಶ್ ಚಪ್ಪರಿಕೆ, ಲೇಖಕ ಅಗ್ರಹಾರ ಕೃಷ್ಣಮೂರ್ತಿ, ಲೇಖಕಿ ಎಂ.ಎಸ್.ಆಶಾದೇವಿ, ಆಯೋಜನೆ–ವಸಂತ ಪ್ರಕಾಶನ, ಸಹಯೋಗ–ಬುಕ್ ಬ್ರಹ್ಮ, ಸ್ಥಳ–ತರಬೇತಿ ಕೊಠಡಿ, ಸುಚಿತ್ರ ಫಿಲಂ ಸೊಸೈಟಿ, ಬೆಳಿಗ್ಗೆ 10.30



ರಾಮಚಂದ್ರ ಗುಹಾ

ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆ: ಅತಿಥಿಗಳು–ಕೇಂದ್ರ ಆರೋಗ್ಯ ಸಚಿವ ಮನ್‌ಸುಖ್ ಮಾಂಡವಿಯಾ, ಆರೋಗ್ಯ ಸಚಿವಾಲಯದ ಕಾರ್ಯದರ್ಶಿ ರಾಜೇಶ್ ಭೂಷಣ್, ಆಯೋಜನೆ, ಸ್ಥಳ–ನಿಮ್ಹಾನ್ಸ್ ಸಮಾವೇಶ ಕೇಂದ್ರ, ಬೆಳಿಗ್ಗೆ 10.30

ಆಜಾದಿ ಕಾ ಅಮೃತ ಮಹೋತ್ಸವ: ಅತಿಥಿಗಳು–ಕೇಂದ್ರ ಆರೋಗ್ಯ ಸಚಿವ ಮನ್‌ಸುಖ್ ಮಾಂಡವಿಯಾ, ರಾಜ್ಯ ಆರೋಗ್ಯ ಸಚಿವ ಕೆ.ಸುಧಾಕರ್, ಸಂಸದ ತೇಜಸ್ವಿ ಸೂರ್ಯ, ಅದಮ್ಯ ಚೇತನ ಸಂಸ್ಥೆಯ ತೇಜಸ್ವಿನಿ ಅನಂತಕುಮಾರ್, ಆಯೋಜನೆ–ಭಾರತೀಯ ಔಷಧ ಮತ್ತು ವೈದ್ಯಕೀಯ ಸಾಧನಗಳ ಬ್ಯೂರೊ(ಪಿಎಂಬಿಐ), ಸ್ಥಳ–ಪಾಲಿಕೆ ಹೆರಿಗೆ ಆಸ್ಪತ್ರೆ, ಎನ್.ಆರ್.ಕಾಲೊನಿ, ಬಸವನಗುಡಿ, ಸಂಜೆ 4




ಮನ್‌ಸುಖ್ ಮಾಂಡವಿಯಾ

ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಸಂಸ್ಥೆ (ನಿಮ್ಹಾನ್ಸ್) ಘಟಿಕೋತ್ಸವ: ಮುಖ್ಯ ಭಾಷಣ–ಕೇಂದ್ರ ಆರೋಗ್ಯ ಸಚಿವ ಮನ್‌ಸುಖ್ ಮಾಂಡವಿಯಾ, ಅತಿಥಿಗಳು–ಬಸವರಾಜ ಬೊಮ್ಮಾಯಿ, ಆರೋಗ್ಯ ಸಚಿವ ಕೆ.ಸುಧಾಕರ್, ಸಂಸದರಾದ ಪಿ.ಸಿ.ಮೋಹನ್, ತೇಜಸ್ವಿ ಸೂರ್ಯ, ಸ್ಥಳ–ನಿಮ್ಹಾನ್ಸ್ ಸಮಾವೇಶ ಕೇಂದ್ರ, ಮಧ್ಯಾಹ್ನ 2

'ಕೃಷಿ–ಕೋವಿಡ್ ಸಮಯದಲ್ಲಿ ರೈತರ ಸಮಸ್ಯೆ ಬಗೆಹರಿಸದ ಸರ್ಕಾರ' ಉಪನ್ಯಾಸ: ಭಾಗವಹಿಸುವವರು–ಎ.ಎಸ್.ನಟರಾಜ್, ನಾಗೇಂದ್ರ ಕುಮಾರ್, ಆರ್.ನಾಗೇಶ್ ಅರಳಕುಪ್ಪೆ, ಗೀತಾ ಚಂದ್ರಹಾಸ, ಆಯೋಜನೆ–ಅಖಿಲ ಕರ್ನಾಟಕ ವಿಚಾರವಾದಿ ಟ್ರಸ್ಟ್, ಬೆಳಿಗ್ಗೆ 11 (ಆನ್‌ಲೈನ್ ಕಾರ್ಯಕ್ರಮ)

ಚಂದ್ರಶೇಖರ ಕಂಬಾರ ಅವರ 'ಚಾಂದಬೀ ಸರಕಾರ' ಪುಸ್ತಕ ಬಿಡುಗಡೆ: ಪ್ರೊ.ಮಲ್ಲೇಪುರಂ ಜಿ.ವೆಂಕಟೇಶ, ಅತಿಥಿ–ಎಸ್.ಆರ್. ವಿಜಯಶಂಕರ, ಆಯೋಜನೆ–ಅಂಕಿತ ಪುಸ್ತಕ, ಬುಕ್ ಬ್ರಹ್ಮ, ಸಂಜೆ 5 (ಆನ್‌ಲೈನ್ ಕಾರ್ಯಕ್ರಮ)



ಚಂದ್ರಶೇಖರ ಕಂಬಾರ

ನವರಾತ್ರಿ ಯಕ್ಷೋತ್ಸವ–'ರಾವಣ ವಧೆ' ಮತ್ತು 'ಕುಶ–ಲವ ಕಾಳಗ' ಯಕ್ಷಗಾನ ಪ್ರದರ್ಶನ: ನಿರ್ದೇಶನ–ಗುರು ಶ್ರೀನಿವಾಸ ಸಾಸ್ತಾನ, ನಿರ್ವಹಣೆ–ಗೌತಮ್ ಸಾಸ್ತಾನ, ಅತಿಥಿಗಳು–ಸಂಸ್ಕಾರ ಭಾರತಿ ಸಂಘಟನಾ ಕಾರ್ಯದರ್ಶಿ ಪ.ರಾ.ಕೃಷ್ಣಮೂರ್ತಿ, ರಾಮಾಶ್ರಮ ಅಧ್ಯಕ್ಷ ರಮೇಶ್ ಹೆಗಡೆ, ಕೆ.ಎನ್.ಅಡಿಗ, ಆಯೋಜನೆ– ಕರ್ನಾಟಕ ಕಲಾ ದರ್ಶಿನಿ, ಸ್ಥಳ–ಉದಯಭಾನು ಕಲಾ ಸಂಘ, ಮಧ್ಯಾಹ್ನ 3

ಬಿ.ಆರ್.ರಾಮೇಗೌಡ ಅವರ 'ಕುಂಡಲಿನಿ ತಂತ್ರ ಯೋಗ' ಮತ್ತು 'ಸಾಮಾನ್ಯ ಕಾಯಿಲೆಗಳಿಗೆ ಯೋಗ' ಪುಸ್ತಕಗಳ ಬಿಡುಗಡೆ: ಅತಿಥಿಗಳು–ಸಂಸದ ಬಿ.ಎನ್.ಬಚ್ಚೇಗೌಡ, ಜಯದೇವ ಹೃದ್ರೋಗ ಸಂಸ್ಥೆಯ ನಿರ್ದೇಶಕ ಡಾ.ಸಿ.ಎನ್.ಮಂಜುನಾಥ್, ಅಧ್ಯಕ್ಷತೆ–ಬೆಂಗಳೂರು ನಗರ ಜಂಟಿ ಪೊಲೀಸ್ ಆಯುಕ್ತ (ಸಂಚಾರ) ಬಿ.ಆರ್.ರವಿಕಾಂತೇಗೌಡ, ಆಯೋಜನೆ–ಶೂದ್ರಶಕ್ತಿ ಸಮಿತಿ, ಸ್ಥಳ–ಚಿತ್ರಕಲಾ ಪರಿಷತ್, ಸಂಜೆ 4

ಟಿ.ಮೋಹನ್ ಕುಮಾರ್ ಅವರ ಚಿತ್ರ ಕಲಾಕೃತಿಗಳ ಪ್ರದರ್ಶನ: ಸ್ಥಳ–ಆರ್ಟ್ ಹೌಸ್, ವಸಂತನಗರ

'ದಿ ಹಿಂದುತ್ವ ಪ್ಯಾರಡೈಮ್' ಪುಸ್ತಕ ಬಿಡುಗಡೆ • ಸ್ವಪನ್ ದಾಸ್ ಗುಪ್ತಾ ಅಭಿಮತ

'ಗಾಂಧಿಗೆ 'ರಾಷ್ಟ್ರಪಿತ' ಸಂಬೋಧನೆ ಸೂಕ್ತವಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಹಾತ್ಮ ಗಾಂಧೀಜಿಯವರಿಗೆ 'ರಾಷ್ಟ್ರಪಿತ' ಎಂದು ಸಂಬೋಧಿಸುತ್ತಿರುವುದು ಸರಿಯಲ್ಲ. ಅದು ತಪ್ಪಾದ ಬಳಕೆ. ಏಕೆಂದರೆ ಗಾಂಧೀಜಿ ಜನಿಸುವ ಮುನ್ನವೇ ಈ ದೇಶ ಇತ್ತು' ಎಂದು ರಾಜ್ಯಸಭಾ ಸದಸ್ಯ ಸ್ವಪನ್ ದಾಸ್ ಗುಪ್ತಾ ಅಭಿಪ್ರಾಯ ಪಟ್ಟರು.

ಆರ್‌ಎಸ್‌ಎಸ್ ಕೇಂದ್ರ ಕಾರ್ಯಕಾರಿಣಿ ಸದಸ್ಯ ರಾಮ್ ಮಾಧವ್ ಅವರ 'ದಿ ಹಿಂದುತ್ವ ಪ್ಯಾರಡೈಮ್' ಪುಸ್ತಕ ಬಿಡುಗಡೆ ಸಲುವಾಗಿ ಮಂಥನ ಬೆಂಗಳೂರು ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಅವರು ಶನಿವಾರ ಮಾತನಾಡಿದರು.

'ಗಾಂಧಿ ಅವರನ್ನು 'ಸ್ವತಂತ್ರ ಭಾರತದ ರಾಷ್ಟ್ರಪಿತ', 'ರಾಷ್ಟ್ರೀಯ ಚಳವಳಿಯ ನೇತಾರ' ಎಂದು ಕರೆಯುವುದು ಸೂಕ್ತ. ಅದು ನಿಜ ಕೂಡ. ಅವರು 20ನೇ ಶತಮಾನದ ಶ್ರೇಷ್ಠ ಭಾರತೀಯ ಎಂಬುದರಲ್ಲಿ ಯಾವುದೇ ಅನುಮಾನವಿಲ್ಲ' ಎಂದರು.



ಕಾರ್ಯಕ್ರಮದಲ್ಲಿ ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ (ಎಡದಿಂದ ಎರಡನೇಯವರು) ಅವರು ಪುಸ್ತಕ ಬಿಡುಗಡೆ ಮಾಡಿದರು. ಲೇಖಕ ರಾಮ್ ಮಾಧವ್, ಸ್ವಪನ್ ದಾಸ್ ಗುಪ್ತಾ ಹಾಗೂ ನಳಂದ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಸುನೈನಾ ಸಿಂಗ್ ಇದ್ದಾರೆ – ಪ್ರಜಾವಾಣಿ ಚಿತ್ರ

'ಭಾರತವನ್ನು ಜನ್ಮ ಹಾಗೂ ಕರ್ಮಭೂಮಿ ಎಂದು ಭಾವಿಸುವವರೇ ನಿಜವಾದ ಹಿಂದೂಗಳು ಎಂದು ವೀರ ಸಾವರ್ಕರ್ ಪ್ರತಿಪಾದಿಸುತ್ತಿದ್ದರು. ಯುರೋಪಿಯನ್ ರಾಷ್ಟ್ರಗಳಿಗೆ ಹೋಲಿಸಿದರೆ ನಮ್ಮಲ್ಲಿ ರಾಷ್ಟ್ರೀಯತೆಯ ಮಾನದಂಡ ತುಂಬಾ ಭಿನ್ನ' ಎಂದು ತಿಳಿಸಿದರು.

ಲೇಖಕ ರಾಮ್ ಮಾಧವ್, 'ನಾವೆಲ್ಲಾ ಸಿದ್ಧಾಂತದ ಜಗತ್ತಿನಲ್ಲಿ ಬದುಕುತ್ತಿದ್ದೇವೆ. ಭಾರತವು ಕಲ್ಪನೆಗಳ ನಾಡು. ಜಗತ್ತಿಗೆ ಅಹಿಂಸೆ ಮತ್ತು ಸತ್ಯಾಗ್ರಹದಂತಹ ಪರಿಕಲ್ಪನೆಗಳನ್ನು ಕೊಡುಗೆಯಾಗಿ ನೀಡಿದ ದೇಶ ನಮ್ಮದು. ಸಿದ್ಧಾಂತವೊಂದು ಜನರಿಗೆ ಅರ್ಥವಾಗಿ ಅದು ಕಾರ್ಯಗತಗೊಳ್ಳಲು ವರ್ಷಗಳೇ ಬೇಕಾಗುತ್ತದೆ' ಎಂದು ಹೇಳಿದರು.

'ಕಾರ್ಲ್ ಮಾರ್ಕ್ಸ್ ಹಾಗೂ ಫ್ರೆಡೆರಿಕ್ ಎಂಗೆಲ್ಸ್ ಅವರು 'ದಾಸ್ ಕ್ಯಾಪಿಟಲ್' ಕೃತಿ ರಚಿಸಿ 50 ವರ್ಷಗಳ ಬಳಿಕ ಸೋವಿಯತ್ ರಷ್ಯಾದಲ್ಲಿ ಕಮ್ಯುನಿಸ್ಟ್ ಸರ್ಕಾರ ಅಸ್ತಿತ್ವಕ್ಕೆ ಬಂದಿತ್ತು. ದೀನದಯಾಳ್ ಉಪಾಧ್ಯಾಯ ಅವರು ಭಾರತೀಯತೆಯನ್ನು ಪ್ರತಿಪಾದಿಸಿದರು. ಅವರ ಪರಿಕಲ್ಪನೆಗಳು ಜಾರಿಗೊಳ್ಳಲು ದಶಕಗಳೇ ಬೇಕಾಯಿತು. ದೇಶದ ಈಗಿನ ಆಡಳಿತದಲ್ಲಿ ಅವರ ಚಿಂತನೆಗಳು ಎದ್ದುಕಾಣುತ್ತಿವೆ' ಎಂದರು.



ಕಾರ್ಯಕ್ರಮದಲ್ಲಿ (ಬಲ ತುದಿ) ಪ್ರೊ.ಎಂ.ವಿ.ನಾಡಕರ್ಣಿ ಅವರು 'ಪಬ್ಲಿಕ್ ಪಾಲಿಸಿ ಇನ್ ಇಂಡಿಯಾ' ಪುಸ್ತಕ ಬಿಡುಗಡೆ ಮಾಡಿದರು. (ಎಡದಿಂದ) ಬಿ.ಎಸ್.ಶ್ರೀಕಂಠಾರಾಧ್ಯ, ಪ್ರೊ.ಅಬ್ದುಲ್ ಅಜೀಜ್, ಐಸೆಕ್ ಉಸ್ತುವಾರಿ ನಿರ್ದೇಶಕ ಪ್ರೊ.ಡಿ.ರಾಜಶೇಖರ್, ಪ್ರೊ.ಕೃಷ್ಣ ರಾಜ್ ಇದ್ದಾರೆ ಪ್ರಜಾವಾಣಿ ಚಿತ್ರ

'ಆರ್ಥಿಕ ನೀತಿಗಳ ಬದಲಾವಣೆ ಅಗತ್ಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಆರ್ಥಿಕ ಪ್ರಗತಿಗೆ ಕಾಲಕ್ಕೆ ಅನುಗುಣವಾಗಿ ಆರ್ಥಿಕ ನೀತಿಗಳನ್ನುಪರಿಷ್ಕರಿಸುವುದು ಅವಶ್ಯಕ' ಎಂದು ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆ ಅಧ್ಯಯನ ಸಂಸ್ಥೆಯ (ಐಸೆಕ್) ಸಂದರ್ಶಕ ಪ್ರಾಧ್ಯಾಪಕ ಎಂ.ವಿ.ನಾಡಕರ್ಣಿ ಹೇಳಿದರು.

ಐಸೆಕ್ ವತಿಯಿಂದ ನಗರದಲ್ಲಿ ಆಯೋಜಿಸಿದ್ದ ಪ್ರೊ.ಬಿ.ಎಸ್. ಶ್ರೀಕಂಠಾರಾಧ್ಯ ಅವರಿಗೆ ಅಭಿನಂದನೆ ಹಾಗೂ 'ಪಬ್ಲಿಕ್ ಪಾಲಿಸಿ ಇನ್ ಇಂಡಿಯಾ' (ಭಾರತದಲ್ಲಿ ಸಾರ್ವಜನಿಕ ನೀತಿಗಳು) ಪುಸ್ತಕದ ಬಿಡುಗಡೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಪುಸ್ತಕದಲ್ಲಿ ಪ್ರಸ್ತುತ ಆರ್ಥಿಕ ಪದ್ಧತಿಯ ಬದಲಾವಣೆಗಳಿಗೆ ಪೂರಕವಾದ ನೀತಿಗಳಿಗೆ ಹೆಚ್ಚು ಆದ್ಯತೆ ನೀಡಲಾಗಿದೆ' ಎಂದರು.

ಐಸೆಕ್ ಸಂದರ್ಶಕ ಪ್ರಾಧ್ಯಾಪಕ ಪ್ರೊ.ಅಬ್ದುಲ್ ಅಜೀಜ್,'ಆರ್ಥಿಕ ನೀತಿಗಳ ನಿರೂಪಣೆ ಕುರಿತ ಈ ಪುಸ್ತಕ ಹೆಚ್ಚು ಪ್ರಸ್ತುತತೆಯಿಂದ ಕೂಡಿದೆ' ಎಂದು ಹೇಳಿದರು.

ಐಸೆಕ್ ವತಿಯಿಂದ ಸನ್ಮಾನಿತರಾದ ಮೈಸೂರು ವಿಶ್ವವಿದ್ಯಾಲಯದ ಅರ್ಥಶಾಸ್ತ್ರ ಮತ್ತು ಸಹಕಾರ ಅಧ್ಯಯನ ವಿಭಾಗದ ನಿವೃತ್ತ ಪ್ರಾಧ್ಯಾಪಕ ಬಿ.ಎಸ್. ಶ್ರೀಕಂಠಾರಾಧ್ಯ ಅವರು, ಸಂಸ್ಥೆ ಜೊತೆಗಿನ ಒಡನಾಟವನ್ನು ಮೆಲುಕು ಹಾಕಿದರು.

'ಪಬ್ಲಿಕ್ ಪಾಲಿಸಿ ಇನ್ ಇಂಡಿಯಾ' ಪುಸ್ತಕವನ್ನು ಐಸೆಕ್ ಸಂಸ್ಥೆಯ ಪ್ರೊ.ಕೃಷ್ಣ ರಾಜ್ ಪ್ರಕಟಿಸಿದ್ದಾರೆ.

ಬಿಬಿಎಂಪಿ: 2020–21ಕ್ಕೆ ಹೋಲಿಸಿದರೆ ಈ ಸಾಲಿನ ತೆರಿಗೆ ಸಂಗ್ರಹದಲ್ಲಿ ₹ 277 ಕೋಟಿ ಹೆಚ್ಚಳ

ತಿಂಗಳಲ್ಲಿ ₹ 277 ಕೋಟಿ ಆಸ್ತಿ ತೆರಿಗೆ ಸಂಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿಯು ಸೆಪ್ಟೆಂಬರ್ ತಿಂಗಳೊಂದರಲ್ಲೇ ₹ 276.98 ಕೋಟಿ ಆಸ್ತಿ ತೆರಿಗೆ ಸಂಗ್ರಹಿಸಿದ್ದು, ಇದರೊಂದಿಗೆ 2021–22ನೇ ಸಾಲಿನಲ್ಲಿ ಸೆಪ್ಟೆಂಬರ್ ಅಂತ್ಯದವರೆಗೆ ಒಟ್ಟು ₹ 2270.98 ಕೋಟಿ ತೆರಿಗೆ ಸಂಗ್ರಹವಾದಂತಾಗಿದೆ. 2020–21ನೇ ಸಾಲಿಗೆ ಹೋಲಿಸಿದರೆ ಈ ವರ್ಷದಲ್ಲಿ ಸೆಪ್ಟೆಂಬರ್ ಅಂತ್ಯದವರೆಗಿನ ಆಸ್ತಿ ತೆರಿಗೆ ಸಂಗ್ರಹ ₹277.07 ಕೋಟಿಗಳಷ್ಟು ಹೆಚ್ಚಳವಾಗಿದೆ.

ಸೆಪ್ಟೆಂಬರ್ ತಿಂಗಳಿನಲ್ಲಿ ₹ 847.24 ಕೋಟಿ ಆಸ್ತಿ ತೆರಿಗೆ ಸಂಗ್ರಹಿಸುವ ಗುರಿಯನ್ನು ಬಿಬಿಎಂಪಿಯು ನಿಗದಿಪಡಿಸಿತ್ತು. ಆದರೆ, ಶೇ 32ರಷ್ಟು ಮಾತ್ರ ಗುರಿ ಸಾಧನೆ ಆಗಿದೆ. ಈ ಪೈಕಿ ಯಲಹಂಕ ವಲಯದ ಕಂದಾಯ ಅಧಿಕಾರಿಗಳು ಶೇ 78ರಷ್ಟು ಗುರಿ ಸಾಧನೆ ಮಾಡುವ ಮೂಲಕ ಉಳಿದ ವಲಯಗಳಿಗಿಂತ ಮುಂದಿದ್ದಾರೆ. ಪೂರ್ವ ವಲಯವು ಗುರಿ ಸಾಧನೆಯಲ್ಲಿ (ಶೇ 18) ಹಿಂದುಳಿದಿದೆ.



2020ರಲ್ಲಿ ಸೆಪ್ಟೆಂಬರ್‌ವರೆಗೆ ಪಾಲಿಕೆಯು 1,993.91 ಕೋಟಿ ಆಸ್ತಿ ತೆರಿಗೆ ಸಂಗ್ರಹಿಸಿತ್ತು. 2020ರ ಸೆಪ್ಟೆಂಬರ್‌ನಲ್ಲಿ ₹ 112.53 ಕೋಟಿ ತೆರಿಗೆ ಸಂಗ್ರಹವಾಗಿತ್ತು. ಅದಕ್ಕೆ ಹೋಲಿಸಿದರೆ 2021ರ ಸೆಪ್ಟೆಂಬರ್ ತಿಂಗಳಿನಲ್ಲಿ ತೆರಿಗೆ ಸಂಗ್ರಹ ₹ 164.45 ಕೋಟಿಯಷ್ಟು ಹೆಚ್ಚಳವಾಗಿದೆ.

'ಕಳೆದ ಸಾಲಿಗೆ ಹೋಲಿಸಿದರೆ ಈ ಬಾರಿ ತೆರಿಗೆ ಸಂಗ್ರಹ ಪ್ರಮಾಣ ಹೆಚ್ಚಳವಾಗಿದೆ. ಮುಖ್ಯ ಆಯುಕ್ತ ಗೌರವ್ ಗುಪ್ತ ಅವರ ಮಾರ್ಗದರ್ಶನದಲ್ಲಿ ಕಂದಾಯ ಇಲಾಖೆ ಅಧಿಕಾರಿಗಳು ಬಾಕಿ ತೆರಿಗೆ ಸಂಗ್ರಹಕ್ಕಾಗಿ ನಿರಂತರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿರುವುದು ಇದಕ್ಕೆ ಕಾರಣ' ಎಂದು ಪಾಲಿಕೆಯ ವಿಶೇಷ ಆಯುಕ್ತ (ಕಂದಾಯ) ಎಸ್ .ಬಸವರಾಜು 'ಪ್ರಜಾವಾಣಿ'ಗೆ ತಿಳಿಸಿದರು.

'ಆಸ್ತಿ ತೆರಿಗೆಯ ಹಳೆ ಬಾಕಿ ಸಂಗ್ರಹಕ್ಕೆ ಒತ್ತು ನೀಡಿದ್ದೇವೆ. ಅದರ ಜೊತೆಗೆ ತೆರಿಗೆ ವ್ಯಾಪ್ತಿಗೆ ಸೇರಿಲ್ಲದ ಆಸ್ತಿಗಳನ್ನು ಪತ್ತೆ ಹಚ್ಚಿ ಅವುಗಳಿಂದಲೂ ತೆರಿಗೆ ಸಂಗ್ರಹಿಸಲು ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದೇವೆ. ಇನ್ನು ಕೆಲವು ಆಸ್ತಿಗಳ ತೆರಿಗೆ ಲೆಕ್ಕಾಚಾರ ತಪ್ಪಾಗಿತ್ತು. ಅವುಗಳನ್ನು ಸರಿಪಡಿಸಿ ಸೋರಿಕೆ ತಪ್ಪಿಸುವ ನಿಟ್ಟಿನಲ್ಲೂ ಕ್ರಮ ವಹಿಸಲಾಗಿದೆ. ಇವೆಲ್ಲವುಗಳ ಶ್ರೇಯ ಪಾಲಿಕೆಯ ಕಂದಾಯ ವಿಭಾಗದ ಎಲ್ಲ ಅಧಿಕಾರಿಗಳಿಗೆ ಸಲ್ಲಬೇಕು' ಎಂದರು.

'2021–22ನೇ ಸಾಲಿನಲ್ಲಿ ಹಳೆ ಬಾಕಿ ಸೇರಿಸಿ ₹ 4 ಸಾವಿರ ಕೋಟಿ ಆಸ್ತಿ ತೆರಿಗೆ ಸಂಗ್ರಹಿಸುವ ಗುರಿಯನ್ನು ನಿಗದಿಪಡಿಸಲಾಗಿದೆ. 2020–21ರಲ್ಲಿ ₹ 3 ಸಾವಿರ ಕೋಟಿ ತೆರಿಗೆ ಸಂಗ್ರಹವಾಗಿತ್ತು. ಈ ಬಾರಿ ತೆರಿಗೆ ಸಂಗ್ರಹ ಪ್ರಮಾಣವನ್ನು ₹ 3500 ಕೋಟಿವರೆಗಾದರೂ ಹೆಚ್ಚಿಸಬೇಕೆಂದು ಶಕ್ತಿ ಮೀರಿ ಪ್ರಯತ್ನ ಮಾಡುತ್ತಿದ್ದೇವೆ' ಎಂದರು.

ಆಸ್ತಿ ತೆರಿಗೆ ಸಂಗ್ರಹ: ವಲಯವಾರು ವಿವರ (₹ ಕೋಟಿಗಳಲ್ಲಿ)

ವಲಯ	ವಾರ್ಷಿಕ ಬೇಡಿಕೆ	ಇದುವರೆಗಿನ ಸಂಗ್ರಹ	ವಸೂಲಾಗಬೇಕಾದುದು	ಶೇಕಡ	ಸೆಪ್ಟೆಂಬರ್ ಗುರಿ	ಸಂಗ್ರಹ	ಶೇಕಡ
ಯಲಹಂಕ	341	231.77	109.23	67.97	72.42	56.51	78.03
ಮಹದೇವಪುರ	996.10	584.95	411.15	58.72	207.55	83.83	40.39
ದಾಸರಹಳ್ಳಿ	120.23	62.65	57.58	52.11	26.03	8.41	32.31
ಆರ್.ಆರ್.ನಗರ	262.81	153.27	109.54	58.32	56.47	12.93	22.90
ಬೊಮ್ಮನಹಳ್ಳಿ	432.94	226.9	206.04	52.41	93.66	22.62	24.15
ಪಶ್ಚಿಮ	465.12	232.88	232.24	50.07	100.15	22.71	22.68
ದಕ್ಷಿಣ	623.11	349.73	273.38	56.13	131.94	41.35	31.34
ಪೂರ್ವ	759.22	428.83	330.39	56.48	159.02	28.62	18.00

ಕಿಮ್ಸ್ ಶುಲ್ಕ ಸ್ವಂತಕ್ಕೆ ಬಳಕೆ: ಮತ್ತೆರಡು ಎಫ್‌ಐಆರ್

ಬೆಂಗಳೂರು: ಕೆಂಪೇಗೌಡ ವೈದ್ಯಕೀಯ ಮಹಾವಿದ್ಯಾಲಯದ (ಕಿಮ್ಸ್) ವಿದ್ಯಾರ್ಥಿಗಳಿಬ್ಬರು ಪಾವತಿಸಿದ್ದ ಶುಲ್ಕವನ್ನು ಸ್ವಂತಕ್ಕೆ ಬಳಸಿರುವ ಆರೋಪದಡಿ ರಾಜ್ಯ ಒಕ್ಕಲಿಗರ ಸಂಘದ ಮಾಜಿ ಅಧ್ಯಕ್ಷ ಸೇರಿ ನಾಲ್ವರ ವಿರುದ್ಧ ಮತ್ತೆರಡು ಎಫ್‌ಐಆರ್ ದಾಖಲಾಗಿವೆ.

ವಿದ್ಯಾರ್ಥಿಯೊಬ್ಬರು ಪಾವತಿಸಿದ್ದ ₹ 70 ಲಕ್ಷ ಶುಲ್ಕವನ್ನು ಸ್ವಂತಕ್ಕೆ ಬಳಸಿದ್ದ ಆರೋಪದಡಿ ಸಂಘದ ಮಾಜಿ ಚೇರ್ಮನ್ ಡಿ.ಸಿ.ಕೆ.ಕಾಳೇಗೌಡ, ಮಾಜಿ ಅಧ್ಯಕ್ಷ ಡಾ.ಅಪ್ಪಾಜಿಗೌಡ, ಮಾಜಿ ನಿರ್ದೇಶಕ ನರೇಂದ್ರಬಾಬು ಹಾಗೂ ಇತರರ ವಿರುದ್ಧ ವಿ.ವಿ.ಪುರ ಠಾಣೆಯಲ್ಲಿ ಸೆ. 30ರಂದು ಮೊದಲ ಪ್ರಕರಣ ದಾಖಲಾಗಿತ್ತು.

ಇದೀಗ, ಮಾಜಿ ಅಧ್ಯಕ್ಷ ಡಿ.ಎನ್. ಬೆಟ್ಟೇಗೌಡ, ನರೇಂದ್ರಬಾಬು, ಬ್ಯಾರವಳ್ಳಿ ನಾಗರಾಜು ಹಾಗೂ ಕಾರ್ಯಕಾರಿ ಸಮಿತಿಯ ಮಾಜಿ ಸದಸ್ಯ ಎಂ.ಎಲ್. ಸತೀಶ್ ವಿರುದ್ಧ ಶನಿವಾರ ಎರಡು ಪ್ರತ್ಯೇಕ ಎಫ್‌ಐಆರ್‌ಗಳು ದಾಖಲಾಗಿವೆ.

'ಸಂಘದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ (ಸಿಇಒ) ಡಾ.ಸಿ. ಸಿದ್ದರಾಮಯ್ಯ ವಂಚನೆ ಬಗ್ಗೆ ದೂರು ನೀಡಿದ್ದಾರೆ. ಅದರನ್ವಯ ಪ್ರಕರಣ ದಾಖಲಾಗಿದ್ದು, ಆರೋಪಿಗಳಿಗೆ ನೋಟಿಸ್ ನೀಡಿ ವಿಚಾರಣೆ ನಡೆಸಲಾಗುವುದು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಬೆಂಗಳೂರಿನ ವಿದ್ಯಾರ್ಥಿನಿ ಸಂಜನಾ ಅವರಿಗೆ 2016–17ನೇ ಸಾಲಿನಲ್ಲಿ ಎಂಬಿಬಿಎಸ್ ಸೀಟು ಕೊಡಿಸುವುದಾಗಿ ನರೇಂದ್ರಬಾಬು ಹೇಳಿದ್ದರು. ಸಂಜನಾ ಅವರ ತಂದೆ ಹರೀಶ್ ಬಳಿ ₹ 50 ಲಕ್ಷ ಪಡೆದಿದ್ದರು. ₹ 40 ಲಕ್ಷವನ್ನು ಮಾತ್ರ ಸಂಘಕ್ಕೆ ಕಟ್ಟಿ, ಉಳಿದ ₹ 10 ಲಕ್ಷವನ್ನು ಸ್ವಂತಕ್ಕೆ ಬಳಸಿಕೊಂಡಿದ್ದರೆಂದು ದೂರುದಾರ ಆರೋಪಿಸಿದ್ದಾರೆ' ಎಂದೂ ತಿಳಿಸಿವೆ.

₹ 26.56 ಲಕ್ಷ ವಂಚನೆ: 'ಸಾಗರ್ ದೀಪ್ ಎಂಬುವರಿಗೆ ಎಂಬಿಬಿಎಸ್ ಸೀಟ್ ಕೊಡಿಸುವುದಾಗಿ ಹೇಳಿದ್ದ ಬ್ಯಾರವಳ್ಳಿ ನಾಗರಾಜು, ಎಂ.ಎಲ್. ಸತೀಶ್ ಹಾಗೂ ಡಿ.ಎನ್. ಬೆಟ್ಟೇಗೌಡ, 2017ರ ಆ. 28ರಂದು ₹ 26.56 ಲಕ್ಷ ಪಡೆದಿದ್ದರು. ಆ ಹಣವನ್ನು ಆರೋಪಿಗಳು ಸ್ವಂತಕ್ಕೆ ಬಳಸಿಕೊಂಡಿರುವುದಾಗಿ ಆರೋಪಿಸಲಾಗಿದೆ' ಎಂದೂ ಪೊಲೀಸ್ ಮೂಲಗಳು ವಿವರಿಸಿವೆ.



ಮೈಸೂರು ರಸ್ತೆ ಮೆಟ್ರೊ ನಿಲ್ದಾಣದ ಬಳಿ ಮುಚ್ಚಿದ್ದ ಗುಂಡಿ ಮತ್ತೆ ಬಾಯ್ದೆರೆದಿರುವುದು



ನಾಯಂಡಹಳ್ಳಿ ಬಳಿ ರಸ್ತೆಯಲ್ಲೇ ಹೊಂಡ ನಿರ್ಮಾಣವಾಗಿರುವುದು

ಸಿಂದಗಿ, ಹಾನಗಲ್ ಗೆಲುವು ಖಚಿತ: ಡಿಕೆಶಿ ವಿಶ್ವಾಸ

ಬೆಂಗಳೂರು: 'ಸಿಂದಗಿ ಹಾಗೂ ಹಾನಗಲ್ ಉಪ ಚುನಾವಣೆಯಲ್ಲಿ ನಾಮಪತ್ರ ಸಲ್ಲಿಕೆ ವೇಳೆ ಪಕ್ಷದ ಪರವಾಗಿ ಸಾಕಷ್ಟು ದೊಡ್ಡ ಪ್ರಮಾಣದಲ್ಲಿ ಉತ್ಸಾಹ, ಬೆಂಬಲ ಸಿಕ್ಕಿದ್ದು, ಎರಡೂ ಕ್ಷೇತ್ರಗಳಲ್ಲಿ ನಾವು ಗೆಲ್ಲುತ್ತೇವೆ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ವಿಶ್ವಾಸ ವ್ಯಕ್ತಪಡಿಸಿದರು.

ಸುದ್ದಿಗಾರರ ಜೊತೆ ಶನಿವಾರ ಮಾತನಾಡಿದ ಅವರು, 'ಚುನಾವಣಾ ಆಯೋಗ ಬೆಳಿಗ್ಗೆ 10ರಿಂದ ರಾತ್ರಿ 10 ಗಂಟೆವರೆಗೂ ಇದ್ದ ಪ್ರಚಾರ ಅವಕಾಶವನ್ನು ರಾತ್ರಿ 7 ಗಂಟೆಗೆ ಸೀಮಿತಗೊಳಿಸಿದೆ. ನಾವು ನಮ್ಮದೇ ಆದ ತಂತ್ರಗಾರಿಕೆ ಮೂಲಕ ಪ್ರಚಾರ ಮಾಡುತ್ತೇವೆ. ನಾವೂ ನಿತ್ಯ ಆಂತರಿಕ ವರದಿ ಪಡೆಯುತ್ತಿರುತ್ತೇವೆ. ಮುಖ್ಯಮಂತ್ರಿಗೂ ನಿತ್ಯ ವರದಿ ಹೋಗುತ್ತಿರುತ್ತದೆ. ಎರಡೂ ಕ್ಷೇತ್ರಗಳಲ್ಲೂ ಕಾಂಗ್ರೆಸ್ ಪಕ್ಷ ಗೆಲ್ಲಲಿದೆ ಎಂಬ ಮಾಹಿತಿಯೇ ಮುಖ್ಯಮಂತ್ರಿಗೆ ರವಾನೆಯಾದ ವರದಿಯಲ್ಲೂ ಇದೆ' ಎಂದರು.

ಭೇಟಿ ಮಾಡಿದ್ದು ನಿಜ: 'ರಮೇಶ ಜಾರಕಿಹೊಳಿ ಅವರ ಆಪ್ತರು ನನ್ನನ್ನು ಬಂದು ಭೇಟಿ ಮಾಡಿದ್ದರು. ಅನೇಕ ವಿಚಾರ ಚರ್ಚೆ ಮಾಡಿದ್ದಾರೆ. ಅವರ ಸಂದೇಶಗಳನ್ನು ತಿಳಿಸಿದ್ದಾರೆ. ಈ ವಿಚಾರಗಳನ್ನು ನಾನು ಈಗ ಗೌಪ್ಯವಾಗಿ ಇಡಬೇಕಿದೆ' ಎಂದೂ ಹೇಳಿದರು.

ಅನೇಕ ಲೆಕ್ಕಾಚಾರಗಳಿವೆ: 'ನೀರಾವರಿ ಇಲಾಖೆ ವಿಚಾರವಾಗಿ ಗುತ್ತಿಗೆದಾರರು ಹಾಗೂ ಯಡಿಯೂರಪ್ಪ ಅವರ ಆಪ್ತ ಸಹಾಯಕರ ಮನೆ ಮೇಲೆ ತೆರಿಗೆ ಇಲಾಖೆ ದಾಳಿ ನಡೆಸಿರುವುದರ ಹಿಂದೆ ಅನೇಕ ಲೆಕ್ಕಾಚಾರಗಳಿವೆ. ತೆರಿಗೆ ಇಲಾಖೆ ಕಡೆಯಿಂದ ಅಧಿಕೃತ ಹೇಳಿಕೆ ಬರುವವರೆಗೂ ಪ್ರತಿಕ್ರಿಯೆ ನೀಡುವುದಿಲ್ಲ' ಎಂದರು.

'ದಾಳಿ ರಾಜಕೀಯ ಪ್ರೇರಿತ ಎಂದು ಏಕಾಏಕಿಯಾಗಿ ಹೇಳಲು ನನ್ನ ಬಳಿ ಖಚಿತ ಮಾಹಿತಿ ಇಲ್ಲ. ಯಾರ ಮನೆಯಲ್ಲಿ ಎಷ್ಟು ಹಣ ಸಿಕ್ಕಿದೆ, ಏನು ದಾಖಲೆ ಸಿಕ್ಕಿದೆ ಎಂದು ಮಾಹಿತಿ ಬರುವವರೆಗೂ ಮಾತನಾಡಲು ಸಾಧ್ಯವಿಲ್ಲ. ಆಂತರಿಕ ರಾಜಕೀಯ ಇದ್ದೇ ಇರುತ್ತದೆ' ಎಂದರು.

ಗಡುವು ಮುಗಿದರೂ ಬಾಯ್ದೆರೆದೇ ಇರುವ ರಸ್ತೆ ಗುಂಡಿಗಳು

ದುರಸ್ತಿ ಬಳಿಕ ವಾರದಲ್ಲೇ ಕಿತ್ತು ಬಂದ ರಸ್ತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಸ್ತೆ ಗುಂಡಿ ಮುಚ್ಚಲು ಕಂದಾಯ ಸಚಿವ ಆರ್.ಅಶೋಕ ನೀಡಿದ್ದ ಗಡುವು ಭಾನುವಾರ ಮುಗಿಯುತ್ತಿದ್ದು, ಹಲವು ಪ್ರಮುಖ ರಸ್ತೆಗಳಲ್ಲಿ ಗುಂಡಿಗಳು ಹಾಗೇ ಉಳಿದಿವೆ. ಮೈಸೂರು ರಸ್ತೆಯಲ್ಲಿ ವಾರದ ಹಿಂದಷ್ಟೇ ಮುಚ್ಚಿದ್ದ ಕೆಲವು ಗುಂಡಿಗಳು ಮತ್ತೆ ಬಾಯ್ದೆರೆದುಕೊಂಡಿವೆ.

ಪ್ರಮುಖ ರಸ್ತೆಗಳ ಗುಂಡಿಗಳನ್ನು ಹತ್ತು ದಿನಗಳಲ್ಲಿ ಹಾಗೂ ಒಳ ರಸ್ತೆಗಳಲ್ಲಿರುವ ಗುಂಡಿಗಳನ್ನು 25 ದಿನಗಳಲ್ಲಿ ಮುಚ್ಚಲಾಗುವುದು ಎಂದು ಸಚಿವರು ಭರವಸೆ ನೀಡಿದ್ದರು. ಆ ಗಡುವು ಮುಗಿದು, ಇನ್ನೊಂದು ಗಡುವನ್ನು ನಿಗದಿಪಡಿಸಿದ್ದರು.

ಮೈಸೂರು ರಸ್ತೆ ಮೆಟ್ರೊ ನಿಲ್ದಾಣದ ಬಳಿ ವಾರದ ಹಿಂದಷ್ಟೇ ಹಾಕಿದ್ದ ಡಾಂಬರ್ ಈಗ ಕಿತ್ತುಹೋಗಿದೆ. ವಾರದಲ್ಲೇ ಕಿತ್ತು ಹೋಗುವಷ್ಟು ಕಳಪೆ ಕಾಮಗಾರಿ ನಡೆಸಲಾಗಿದೆ ಎಂದು ವಾಹನ ಸವಾರರು ಬಿಬಿಎಂಪಿಗೆ ಹಿಡಿಶಾಪ ಹಾಕುತ್ತಿದ್ದಾರೆ.

ಮೈಸೂರು ರಸ್ತೆಯಲ್ಲಿ ಕೆಂಗೇರಿ ತನಕವೂ ರಸ್ತೆ ಗುಂಡಿಗಳು ಹಾಗೇ ಉಳಿದಿದ್ದು, ಕೆಲವೆಡೆ ದುರಸ್ತಿ ಕಾಮಗಾರಿ ಇನ್ನೂ ಆರಂಭವೇ ಆಗಿಲ್ಲ. ಜ್ಞಾನಭಾರತಿ ಮೆಟ್ರೊ ನಿಲ್ದಾಣದ ಬಳಿಯಂತೂ ಗುಂಡಿಗಳ ಮಯವಾಗಿದೆ. ಸಣ್ಣ ಗುಂಡಿಗಳಿರುವ ಕಡೆ ಭಾರಿ ವಾಹನಗಳು ಅವುಗಳನ್ನು ಲೆಕ್ಕಿಸದೆ ಸಾಗುತ್ತಿವೆ. ದ್ವಿಚಕ್ರ ವಾಹನ ಮತ್ತು ಲಘು ವಾಹನ ಚಾಲಕರು ಚಾಲನೆ ಮಾಡುವುದೇ ಕಷ್ಟವಾಗಿದೆ. ಗುಂಡಿ ತಪ್ಪಿಸಲು ಪ್ರಯತ್ನಿಸಿದರೆ ಬೀಳುವ ಅಥವಾ ಹಿಂದಿನಿಂದ ಬರುವ ವಾಹನಗಳು ಡಿಕ್ಕಿ ಹೊಡೆಯುವ ಭಯದಲ್ಲೇ ಬೈಕ್ ಸವಾರರು ಚಾಲನೆ ಮಾಡುತ್ತಿದ್ದಾರೆ.

ರಸ್ತೆ ಗುಂಡಿಗಳ ಕಾಮಗಾರಿ ಕಳಪೆ ಬಗ್ಗೆ ಹೈಕೋರ್ಟ್ ಕೂಡ ಬಿಬಿಎಂಪಿಗೆ ಎಚ್ಚರಿಕೆ ನೀಡಿದೆ. ಸಚಿವರ ಮನೆಯ ಮುಂದಿನ ರಸ್ತೆಗಳನ್ನಷ್ಟೇ ಅಲ್ಲ, ಇತರೆ ರಸ್ತೆಗಳ ಗುಂಡಿ ಮುಚ್ಚುವ ಕಾಮಗಾರಿಯೂ ಗುಣಮಟ್ಟದ್ದಾಗಿರಬೇಕು ಎಂದು ಸೂಚಿಸಿದೆ. ಆದರೂ, ಪ್ರಮುಖ ರಸ್ತೆಗಳಲ್ಲೇ ಮುಚ್ಚಿದ್ದ ಗುಂಡಿಗಳು ಮತ್ತೆ ಬಾಯ್ದೆರೆಯುತ್ತಿವೆ ಎಂದು ಬೈಕ್ ಸವಾರ ಸತೀಶ್ ಬೇಸರ ವ್ಯಕ್ತಪಡಿಸಿದರು.



ಮೈಸೂರು ರಸ್ತೆಯ ಜ್ಞಾನಭಾರತಿ ಜಂಕ್ಷನ್ ಬಳಿ ಹಾಳಾಗಿರುವ ರಸ್ತೆ —ಪ್ರಜಾವಾಣಿ ಚಿತ್ರ/ಪ್ರಶಾಂತ್ ಎಚ್‌.ಜಿ.

'ರಸ್ತೆ ಗುಂಡಿ ಮುಚ್ಚುವ ಹೆಸರಲ್ಲಿ ಬಿಲ್ ದಂಧೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪಾಲಿಕೆ ಮತ್ತು ಸರ್ಕಾರ ನಗರದ ರಸ್ತೆಗಳಲ್ಲಿನ ಗುಂಡಿ ಮುಚ್ಚುವ ಹೆಸರಿನಲ್ಲಿ ಬಿಲ್ ಮಾಡುವ ದಂಧೆ ನಡೆಸಿರುವ ಕಾರಣ ಗುಂಡಿಗಳಿಗೆ ಹಲವರು ಬಲಿಯಾಗುತ್ತಿದ್ದಾರೆ. ರಸ್ತೆ ಗುಂಡಿಗಳನ್ನು ತ್ವರಿತವಾಗಿ ಮುಚ್ಚಬೇಕು' ಎಂದು ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಒತ್ತಾಯಿಸಿದೆ.

'ಐದು ವರ್ಷಗಳಲ್ಲಿ ಪಾಲಿಕೆ ವ್ಯಾಪ್ತಿಯ ರಸ್ತೆಗಳಿಗಾಗಿ ₹20 ಸಾವಿರ ಕೋಟಿ ಖರ್ಚು ಮಾಡಲಾಗಿದೆ. ಆದರೂ ರಸ್ತೆಗಳು ಹದಗೆಟ್ಟ ಸ್ಥಿತಿಯಲ್ಲೇ ಇವೆ. ಇದರಿಂದ ಕೇವಲ ಬಿಲ್ ಮತ್ತು ಕಮಿಷನ್‌ಗಾಗಿ ಕಾಮಗಾರಿ ನಡೆದಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ' ಎಂದು ಸಿಪಿಎಂನ ಬೆಂಗಳೂರು ದಕ್ಷಿಣ ಜಿಲ್ಲಾ ಸಮಿತಿ ಕಾರ್ಯದರ್ಶಿ ಕೆ.ಎನ್.ಉಮೇಶ್ ಶಂಕೆ ವ್ಯಕ್ತಪಡಿಸಿದ್ದಾರೆ.

'ರಸ್ತೆ ಸರಿಪಡಿಸುವಂತೆ ಹೈಕೋರ್ಟ್ ನೀಡಿರುವ ಗಡುವು ಮತ್ತು ಎಚ್ಚರಿಕೆಗಳಿಗೆ ಬೆಲೆಯೇ ಇಲ್ಲವಾಗಿದೆ. ಇದಕ್ಕೆ ರಾಜ್ಯ ಸರ್ಕಾರವೇ ಹೊಣೆ. ಮಳೆ ಬಂದಾಗ, ಹಲವು ವಸತಿ ಪ್ರದೇಶಗಳು ಜಲಾವೃತಗೊಳ್ಳುವುದಕ್ಕೆ ರಾಜಕಾಲುವೆಗಳ ದುರಸ್ತಿ ಹಾಗೂ ನಿರ್ವಹಣೆ ಕೊರತೆಯೇ ಕಾರಣ' ಎಂದು ಉತ್ತರ ಜಿಲ್ಲಾ ಸಮಿತಿ ಕಾರ್ಯದರ್ಶಿ ಎನ್. ಪ್ರತಾಪಸಿಂಹ ದೂರಿದ್ದಾರೆ.

'ನಗರದಾದ್ಯಂತ ಮಾಡಿರುವ ಒತ್ತುವರಿಯೂ ಈ ಸಮಸ್ಯೆಗೆ ಕಾರಣ. ಕೂಡಲೇ ಎಲ್ಲ ಒತ್ತುವರಿಗಳ ತೆರವಿಗೆ ಅಗತ್ಯ ಕ್ರಮವಹಿಸಬೇಕು' ಎಂದೂ ಆಗ್ರಹಿಸಿದ್ದಾರೆ.

'ಕೋಲಾರಕ್ಕೂ ಮೇಕೆದಾಟು ನೀರು'

ಮುಳಬಾಗಿಲು (ಕೋಲಾರ): ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಿಗೆ ಮೇಕೆದಾಟು ಯೋಜನೆಯಡಿ ನೀರು ಹರಿಸಲು ಬಿಜೆಪಿ ನೇತೃತ್ವದ ಸರ್ಕಾರ ಬದ್ಧವಾಗಿದೆ ಎಂದು ಸಣ್ಣ ನೀರಾವರಿ ಸಚಿವ ಜೆ.ಸಿ.ಮಾಧುಸ್ವಾಮಿ ಹೇಳಿದರು.

ತಾಲ್ಲೂಕಿನ 32 ಕೆರೆಗಳನ್ನು ತುಂಬಿಸುವ ಯೋಜನೆ ಹಾಗೂ ಕೆ.ಸಿ ವ್ಯಾಲಿ ಯೋಜನೆಯನ್ನು ಶನಿವಾರ ಲೋಕಾರ್ಪಣೆ ಮಾಡಿ ಮಾತನಾಡಿದರು.

'ನೀರಾವರಿ ಯೋಜನೆಗೆ ಅಗತ್ಯ ಜಮೀನನ್ನು ಸ್ವಾಧೀನಪಡಿಸಿಕೊಳ್ಳುವುದು ಕಷ್ಟದ ಕೆಲಸ. ಕೋಲಾರ – ಚಿಕ್ಕಬಳ್ಳಾಪುರಕ್ಕೆ ಎತ್ತಿನಹೊಳೆ ನೀರು ಹರಿಸಲು ತುಮಕೂರು ಜಿಲ್ಲೆಯ ರೈತರ ಮನವೊಲಿಸಿ ಜಮೀನು ಪಡೆಯಲಾಗಿದೆ' ಎಂದರು.



ನೆಲಮಂಗಲದ ಬಸವಣ್ಣದೇವರ ಮಠದಲ್ಲಿ ರಾಜ್ಯ ಕಾರ್ಯನಿರತ ಪತ್ರಕರ್ತರ ಸಂಘವು ಹಮ್ಮಿಕೊಂಡಿದ್ದ ಪತ್ರಿಕಾ ದಿನಾಚರಣೆ ಮತ್ತು ಪತ್ರಿಕಾ ವಿತರಕರ ದಿನಾಚರಣೆಯಲ್ಲಿ ಕೋವಿಡ್ ಸೋಂಕು ಪತ್ತೆ ಕಾರ್ಯದಲ್ಲಿ ತೊಡಗಿರುವ ಪ್ರಯೋಗಾಲಯ ತಜ್ಞರಿಗೆ ಶಾಸಕ ಡಾ.ಕೆ.ಶ್ರೀನಿವಾಸಮೂರ್ತಿ ಪ್ರಶಂಸನಾ ಪತ್ರ ನೀಡಿ ಗೌರವಿಸಿದರು.

ಅಮೃತ ಮಹೋತ್ಸವ ಬೀದಿ ನಾಟಕ ಸರಣಿಗೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ವಾತಂತ್ರ್ಯ ಭಾರತದ 75ನೇ ವರ್ಷದ ಸ್ಮರಣೆಯಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ಪ್ರದರ್ಶನ ಕಲಾ ವಿಭಾಗ ಹಮ್ಮಿಕೊಂಡಿರುವ 'ಅಮೃತ ಮಹೋತ್ಸವ ಬೀದಿ ನಾಟಕ ಸರಣಿ'ಯನ್ನು ಕುಲಪತಿ ಕೆ.ಆರ್. ವೇಣುಗೋಪಾಲ್ ಉದ್ಘಾಟಿಸಿದರು.

ಬಳಿಕ ಮಾತನಾಡಿದ ಅವರು, 'ಪ್ರದರ್ಶನ ಕಲಾ ವಿಭಾಗ ಹಮ್ಮಿಕೊಂಡಿರುವ ನಾಟಕ ಸರಣಿಯಲ್ಲಿ 75 ವಿವಿಧ ಬೀದಿ ನಾಟಕಗಳು ಇತರೆ ಸ್ಥಳಗಳಲ್ಲಿ ಯಶಸ್ವಿಯಾಗಿ ಪ್ರದರ್ಶನ ಕಾಣಲಿ' ಎಂದು ಶುಭ ಹಾರೈಸಿದರು.

ಗಾಂಧೀಜಿಯವರ ದಕ್ಷಿಣ ಆಫ್ರಿಕಾದ ಜೀವನ, ಉಪ್ಪಿನ ಸತ್ಯಾಗ್ರಹದ ಪರಿಣಾಮ ಮತ್ತು ಗಾಂಧೀಜಿ ಅವರು ಸೂಟ್ ತ್ಯಜಿಸಿ, ಖಾದಿ ಧರಿಸಿದ ಘಟನೆಗಳನ್ನು ವಿದ್ಯಾರ್ಥಿಗಳೊಂದಿಗೆ ಹಂಚಿಕೊಂಡರು.

ವಿಶ್ವವಿದ್ಯಾಲಯದ ಆಡಳಿತ ಕಚೇರಿ ಆವರಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಪ್ರದರ್ಶನ ಕಲಾ ವಿಭಾಗದ ಪಿಎಚ್‌.ಡಿ ವಿದ್ಯಾರ್ಥಿಗಳು 'ಈಸೂರು ದಂಗೆ' ಬೀದಿ ನಾಟಕ ಪ್ರದರ್ಶಿಸಿದರು.

ಪ್ರದರ್ಶನ ಕಲಾ ವಿಭಾಗದ ಪ್ರೊ. ಹಂಸಿನಿ ನಾಗೇಂದ್ರ ಹಾಗೂ ಇತರರು ಭಾಗವಹಿಸಿದ್ದರು.



ಕುಲಪತಿ ಕೆ.ಆರ್‌.ವೇಣುಗೋಪಾಲ್ ಅವರು ಪ್ರದರ್ಶನ ಕಲಾ ವಿಭಾಗದ ವಿದ್ಯಾರ್ಥಿಗಳೊಂದಿಗೆ ತಮಟೆ ಬಾರಿಸುವ ಮೂಲಕ ಬೀದಿ ನಾಟಕ ಸರಣಿಗೆ ಚಾಲನೆ ನೀಡಿದರು.

ಕೊಡಿಯಾಲಕರೇನಹಳ್ಳಿ ಟಿಡಿಆರ್ ಬಿಕ್ಕಟ್ಟು ಬಗೆಹರಿಸುವ ನೆಪದಲ್ಲಿ ಕಾಯ್ದೆ ಪರಿಷ್ಕರಣೆ

ಕೆಟಿಸಿಪಿ ಕಾಯ್ದೆ ತಿದ್ದುಪಡಿ, ಅವ್ಯವಹಾರಕ್ಕೆ ರಹದಾರಿ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿಯು ಕಸ ವಿಲೇವಾರಿಗಾಗಿ ರಾಮನಗರ ಜಿಲ್ಲೆಯ ಕೊಡಿಯಾಲಕರೇನಹಳ್ಳಿ ಗ್ರಾಮದಲ್ಲಿ ಸ್ವಾಧೀನಪಡಿಸಿಕೊಂಡ ಭೂಮಿಗೆ ವರ್ಗಾಯಿಸಬಹುದಾದ ಅಭಿವೃದ್ಧಿ ಹಕ್ಕು (ಟಿಡಿಆರ್) ನೀಡುವಲ್ಲಿ ಆಗಿರುವ ಲೋಪವನ್ನು ಸರಿಪಡಿಸುವ ನೆಪದಲ್ಲಿ ಸರ್ಕಾರವು ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ (ಕೆಟಿಸಿಪಿ) ಕಾಯ್ದೆ ತಿದ್ದುಪಡಿ ಮಸೂದೆಗೆ ವಿಧಾನ ಮಂಡಲದ ಉಭಯ ಸದನಗಳಲ್ಲಿ ಅನುಮೋದನೆ ಪಡೆದುಕೊಂಡಿದೆ. ಈ ತಿದ್ದುಪಡಿಯು ಅವ್ಯವಹಾರಗಳಿಗೆ ದಾರಿ ಮಾಡಿಕೊಡಬಹುದು ಎಂಬ ಆತಂಕ ವ್ಯಕ್ತವಾಗಿದೆ.

ಈ ಕಾಯ್ದೆಯ ಸೆಕ್ಷನ್ 4 (9) ರದ್ದುಪಡಿಸಿ ಟಿಡಿಆರ್ ಅನ್ನು ಸ್ಥಳೀಯ ಯೋಜನಾ ಪ್ರಾಧಿಕಾರದ ವ್ಯಾಪ್ತಿಯಾಚೆಯಲ್ಲೂ ಮಾರಾಟ ಮಾಡಲು ಅಥವಾ ಬಳಸಲು ಅವಕಾಶ ಕಲ್ಪಿಸಲಾಗುತ್ತಿದೆ.

ಬೆಂಗಳೂರು– ಮೈಸೂರು ಮೂಲ ಸೌಕರ್ಯ ಕಾರಿಡಾರ್ ಪ್ರದೇಶ ಯೋಜನಾ ಪ್ರಾಧಿಕಾರದ (ಬಿಎಂಐಸಿಪಿಎ) ವ್ಯಾಪ್ತಿಯಲ್ಲಿರುವ ರಾಮನಗರ ಜಿಲ್ಲೆಯ ಕೊಡಿಯಾಲಕರೇನಹಳ್ಳಿ ಗ್ರಾಮದಲ್ಲಿ 40 ಎಕರೆ 9 ಗುಂಟೆ ಜಾಗವನ್ನು ಕಸ ವಿಲೇವಾರಿ ಸಲುವಾಗಿ ಬಳಸುವ ಬಗ್ಗೆ ಬಿಬಿಎಂಪಿಯು 2011ರ ಜೂನ್ 08ರಂದು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿತ್ತು.

ಸಂಪುಟ ಸಮಿತಿಯ ಅನುಮೋದನೆ ಪಡೆಯುವ ಷರತ್ತಿನ ಮೇರೆಗೆ, ಟಿಡಿಆರ್ ಮೂಲಕ ಈ ಜಾಗ ಸ್ವಾಧೀನಪಡಿಸಿಕೊಳ್ಳಲು 2013ರ ಜ.3ರಂದು ಸರ್ಕಾರ ಆದೇಶ ಹೊರಡಿಸಿತು. ಅದರ ಪ್ರಕಾರ ಕೊಡಿಯಾಲಕರೇನಹಳ್ಳಿಯ 25 ಕಿ.ಮೀ ವ್ಯಾಪ್ತಿಯಲ್ಲಿ ಆ ಟಿಡಿಆರ್ ಬಳಸಬಹುದಾಗಿತ್ತು.

ಬಿಬಿಎಂಪಿಯು 4 ಎಕರೆ 9 ಗುಂಟೆ ಜಾಗದ ಸ್ವಾಧೀನಕ್ಕೆ ಸಂಬಂಧಿಸಿ ಭೂಮಾಲೀಕರಿಂದ ಹಕ್ಕುಪರಿತ್ಯಾಗ ಪತ್ರಗಳನ್ನು ಪಡೆದು 2013ರ ಮಾರ್ಚ್ 12ರಂದು ಅಭಿವೃದ್ಧಿ ಹಕ್ಕು ಪ್ರಮಾಣಪತ್ರಗಳನ್ನು (ಡಿಆರ್‌ಸಿ) ವಿತರಿಸಿತು. ಈ ಜಾಗವು ಬಿಎಂಐಸಿಪಿಎ ವ್ಯಾಪ್ತಿಯಲ್ಲಿ ಇರುವುದರಿಂದ ಅವರೇ ಟಿಡಿಆರ್‌ಸಿ ವಿತರಿಸಬೇಕಿತ್ತು. ಈ ವಿಚಾರದಲ್ಲಿ ಲೋಪ ಉಂಟಾಗಿತ್ತು.

ಡಿಆರ್‌ಸಿಗಳನ್ನು ಭೂಮಾಲೀಕರು ವೆಂಕಟೇಶ್ವರ ಡೆವೆಲಪರ್ಸ್ ಮತ್ತು ಬಾಲಾಜಿ ಇನ್‌ಫ್ರಾಸ್ಟ್ರಕ್ಚರ್ ಆ್ಯಂಡ್ ಡೆವಲಪರ್ಸ್ ಸಂಸ್ಥೆಗಳಿಗೆ ಮಾರಾಟ ಮಾಡಿದ್ದರು. ಡಿಆರ್‌ಸಿ ಬಳಸಿಕೊಳ್ಳುವ ಸಲುವಾಗಿ ಈ ಸಂಸ್ಥೆಗಳು ಸಂಪರ್ಕಿಸಿದಾಗ ಬಿಬಿಎಂಪಿಗೆ ತನ್ನ ತಪ್ಪಿನ ಅರಿವಾಗಿತ್ತು. 4 ಎಕರೆ 9 ಗುಂಟೆ ಭೂಸ್ವಾಧೀನಕ್ಕಾಗಿ ವಿತರಿಸಿದ್ದ ಡಿಆರ್‌ಸಿಗಳನ್ನು ಪಾಲಿಕೆ ರದ್ದುಪಡಿಸಿತು. ಇನ್ನುಳಿದ 36 ಎಕರೆ ಜಾಗಕ್ಕೆ ಡಿಆರ್‌ಸಿಗಳನ್ನು ಬಿಎಂಐಸಿಪಿಎ ವಿತರಿಸಿದೆ. ಈ ನಡುವೆ ಟಿಡಿಆರ್ ಖರೀದಿಸಿದ ಸಂಸ್ಥೆಗಳು ಹೈಕೋರ್ಟ್ ಮೊರೆ ಹೋಗಿವೆ. 2017ರಲ್ಲಿ ಸರ್ಕಾರ ಬಿಕ್ಕಟ್ಟು ಬಗೆಹರಿಸುವ ಭರವಸೆ ನೀಡಿದ್ದರಿಂದ ಅವರು ಮೊಕದ್ದಮೆ ಹಿಂಪಡೆದರು.

2016ರ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ (ಕೆಟಿಸಿಪಿ) ಕಾಯ್ದೆಯ (ಅಭಿವೃದ್ಧಿ ಹಕ್ಕುಗಳ ಪ್ರಯೋಜನಗಳು) ನಿಯಮ 4 (9)ರ ಪ್ರಕಾರ ಜಾಗಕ್ಕೆ ಟಿಡಿಆರ್ ನೀಡಿರುವ ಸ್ಥಳೀಯ ಯೋಜನಾ ಪ್ರಾಧಿಕಾರದ ವ್ಯಾಪ್ತಿಯಲ್ಲೇ ಡಿಆರ್‌ಸಿಗಳನ್ನು ಬಳಸಬೇಕಾಗಿದೆ.

ಯಾವುದೇ ಪ್ರದೇಶದಲ್ಲೂ ಟಿಡಿಆರ್ ಬಳಕೆಗೆ ಅವಕಾಶ

ಕೊಡಿಯಾಲಕರೇನಹಳ್ಳಿ ಗ್ರಾಮದ ಜಾಗ ಸ್ವಾಧೀನಕ್ಕೆ 2011ರಲ್ಲಿ ಹೊರಡಿಸಲಾದ ಸರ್ಕಾರಿ ಆದೇಶವೂ 25 ಕಿ.ಮೀ ವ್ಯಾಪ್ತಿಯ ಯಾವೆಲ್ಲ ಸ್ಥಳೀಯ ಯೋಜನಾ ಪ್ರಾಧಿಕಾರಗಳನ್ನು ಒಳಗೊಳ್ಳುತ್ತದೆ ಎಂಬ ಬಗ್ಗೆ ಸ್ಪಷ್ಟತೆಯನ್ನು ಹೊಂದಿರಲಿಲ್ಲ. ಬಿಬಿಎಂಪಿಯ ಒಟ್ಟು ವಿಸ್ತೀರ್ಣದಲ್ಲಿ (741 ಚ.ಕಿ.ಮೀ) 708 ಚ.ಕಿ.ಮೀ ಪ್ರದೇಶವು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಅಧೀನದಲ್ಲಿ ಬರುತ್ತದೆ. ಇನ್ನುಳಿದ 33 ಚ.ಕಿ.ಮೀ ಪ್ರದೇಶವು ಬಿಎಂಐಸಿಪಿಎ ವ್ಯಾಪ್ತಿಯಲ್ಲಿದೆ. ಈ 33 ಚ.ಕಿ.ಮೀ ಪ್ರದೇಶವು ಬಿಬಿಎಂಪಿ ಹಾಗೂ ಬಿಎಂಐಸಿಪಿಎ ವ್ಯಾಪ್ತಿಯಲ್ಲಿದೆ. ಬಿಎಂಐಸಿಪಿಎ ಅಧೀನದ ಈ ಜಾಗವನ್ನು ಹೊರತಾಗಿ ಬೇರೆ ಕಡೆ ಡಿಆರ್‌ಸಿ ಬಳಸುವುದಕ್ಕೆ ಅವಕಾಶ ಇಲ್ಲ. 2016ರ ಕೆಟಿಸಿಪಿ ಕಾಯ್ದೆ (ಅಭಿವೃದ್ಧಿ ಹಕ್ಕುಗಳ ಪ್ರಯೋಜನಗಳು) ನಿಯಮಗಳು ಪೂರ್ವಾನ್ವಯವಾಗುತ್ತವೆ. 2015ಕ್ಕೆ ಮುನ್ನ ವಿತರಿಸಲಾದ ಡಿಆರ್‌ಸಿಗಳನ್ನೂ ಕೆಟಿಸಿಪಿ ಕಾಯ್ದೆಯ ನಿಯಮ 9ರ ಪ್ರಕಾರ ಸ್ಥಳೀಯ ಯೋಜನಾ ಪ್ರಾಧಿಕಾರದ ವ್ಯಾಪ್ತಿಯಲ್ಲೇ ಬಳಸಬೇಕಾಗುತ್ತದೆ.

ಈ ಬಿಕ್ಕಟ್ಟನ್ನು ಬಗೆಹರಿಸಲು ಸರ್ಕಾರವು ಕೆಟಿಸಿಪಿ ಕಾಯ್ದೆಗೆ ತಿದ್ದುಪಡಿ ತಂದು ಉಪಸೆಕ್ಷನ್ 4(9) ಅನ್ನು ಕೈಬಿಡಲು ಮಸೂದೆಯನ್ನು ಮಂಡಿಸಿತ್ತು. ಉಪಸೆಕ್ಷನ್ 5 (13ರಲ್ಲಿ 'ಅಭಿವೃದ್ಧಿ ಹಕ್ಕುಗಳನ್ನು ಸ್ಥಳೀಯ ಯೋಜನಾ ಪ್ರಾಧಿಕಾರದಲ್ಲಿ ನಿಯಮಿಸಲಾದಂತೆ ಅಥವಾ ಸರ್ಕಾರವು ಅಧಿಸೂಚಿಸಿದಂತೆ ಯಾವುದೇ ಪ್ರದೇಶದಲ್ಲಿ ಮಾರಾಟ ಮಾಡಬಹುದು ಅಥವಾ ಬಳಸಿಕೊಳ್ಳಬಹುದು' ಎಂದು ತಿದ್ದುಪಡಿ ಸೂಚಿಸಿತ್ತು. ಈ ತಿದ್ದುಪಡಿ ಮಸೂದೆಯು ವಿಧಾನಮಂಡಲದ ಉಭಯ ಸದನಗಳಲ್ಲಿ ಅನುಮೋದನೆಗೊಂಡಿದ್ದು, ರಾಜ್ಯಪಾಲರ ಅಂಕಿತ ಹಾಕುವುದು ಬಾಕಿ ಇದೆ. ಇದು ಜಾರಿಗೆ ಬಂದಿದ್ದೇ ಆದರೆ, ಅಭಿವೃದ್ಧಿ ಹಕ್ಕನ್ನು ಸ್ಥಳೀಯ ಯೋಜನಾ ಪ್ರಾಧಿಕಾರದ ಹೊರಗೆ ಯಾವುದೇ ಸ್ಥಳದಲ್ಲಿ ಬಳಸುವುದಕ್ಕೂ ಅವಕಾಶ ಕಲ್ಪಿಸಿ ಸರ್ಕಾರ ಅಧಿಸೂಚನೆ ಹೊರಡಿಸಬಹುದು.

'ಅನಿಯಮಿತ ಅಭಿವೃದ್ಧಿಗೆ ದಾರಿ'

'ಟಿಡಿಆರ್ ಅನ್ನು ಸ್ಥಳೀಯ ಯೋಜನಾ ಪ್ರಾಧಿಕಾರದ ಆಚೆಗಿನ ಪ್ರದೇಶಗಳಲ್ಲೂ ಬಳಸುವುದಕ್ಕೆ ಅವಕಾಶ ಕಲ್ಪಿಸುವುದು ಅಪಾಯಕಾರಿ. ಎರಡು ಸ್ಥಳೀಯ ಯೋಜನಾ ಪ್ರಾಧಿಕಾರಗಳ ಜಮೀನುಗಳ ಮೌಲ್ಯದಲ್ಲಿ ಅಗಾಧ ವ್ಯತ್ಯಾಸವಿದ್ದರೂ ಕೆಟಿಸಿಪಿ ಕಾಯ್ದೆ ತಿದ್ದುಪಡಿಯ ನಂತರ ಎಲ್ಲ ಯೋಜನಾ ಪ್ರಾಧಿಕಾರದ ಒಂದೇ ವಿಸ್ತೀರ್ಣದ ಜಮೀನುಗಳೂ ಒಂದೇ ದರ ಹೊಂದಿರಲಿವೆ. ಇದು ಅನಿಯಮಿತ ಅಭಿವೃದ್ಧಿಗೆ ಕಾರಣವಾಗುತ್ತದೆ. ಜೊತೆಗೆ ಭಾರಿ ಅಕ್ರಮಗಳಿಗೂ ದಾರಿ ಮಾಡಿಕೊಡಲಿದೆ' ಎಂದು ಅಧಿಕಾರಿಯೊಬ್ಬರು ಕಳವಳ ವ್ಯಕ್ತಪಡಿಸಿದರು.

'ಕೊಡಿಯಾಲಕರೇನಹಳ್ಳಿ ಗ್ರಾಮದ ಆಸುಪಾಸಿನಲ್ಲಿ 40 ಎಕರೆ ಜಾಗಕ್ಕೆ ಪ್ರಸ್ತುತ ₹ 10.8 ಕೋಟಿ ಮೌಲ್ಯವಿದೆ. ಕೆಟಿಸಿಪಿ ತಿದ್ದುಪಡಿ ಮಸೂದೆ ಜಾರಿಯಾದರೆ, ಅದರ ಪ್ರಕಾರ ನೀಡಿದ ಟಿಡಿಆರ್ ಅನ್ನು ಬಿಎಂಐಸಿಪಿಎ ವ್ಯಾಪ್ತಿಯಲ್ಲಿ ಬಳಸಿದರೆ ಅದರ ಮೌಲ್ಯ ₹20.6 ಕೋಟಿ ಆಗಲಿದೆ. ಎಂ.ಜಿ.ರಸ್ತೆ ಆಸುಪಾಸಿನಲ್ಲಿ 40 ಎಕರೆಯಷ್ಟು ಜಾಗಕ್ಕೆ ₹ 2,808.13 ಕೋಟಿ ಮೌಲ್ಯವಿದೆ. ಕೊಡಿಯಾಲಕರೇನಹಳ್ಳಿ ಗ್ರಾಮದ ಜಾಗಕ್ಕೆ ನೀಡಿದ ಟಿಡಿಆರ್ ಅನ್ನು ಎಂ.ಜಿ.ರಸ್ತೆಯಲ್ಲಿ ಬಳಸಿದರೆ ಅದರ ಮೌಲ್ಯ ₹ 5,616.26 ಕೋಟಿ ಆಗಲಿದೆ' ಎಂದು ಅಧಿಕಾರಿಯೊಬ್ಬರು ವಿವರಿಸಿದರು.

ಇ–ಬಸ್ ಯುಗ: 6 ವರ್ಷಗಳ ಬಳಿಕ ಪರಿಕ್ಷಾರ್ಥ ಸಂಚಾರ ಆರಂಭಿಸಿದ ಬಿಎಂಟಿಸಿ

ತಯಾರಿಯಲ್ಲೇ ಇದೆ ಕೆಎಸ್‌ಆರ್‌ಟಿಸಿ

• ವಿಜಯಕುಮಾರ್ ಎಸ್.ಕೆ.



ಇ–ಬಸ್

ಬೆಂಗಳೂರು: ಬಿಎಂಟಿಸಿ ಮೂಲಕ ಎಲೆಕ್ಟ್ರಿಕ್ ಬಸ್‌ಗಳ ಸಂಚಾರ ಆರಂಭಿಸುವ ಕಾಲ ಕೊನೆಗೂ ಸನ್ನಿಹಿತವಾಗಿದೆ. ಆದರೆ, ಕೆಎಸ್‌ಆರ್‌ಟಿಸಿಗೆ ಮಾತ್ರ ಇನ್ನೂ ಕಾಲ ಕೂಡಿ ಬಂದಿಲ್ಲ.

ಡೀಸೆಲ್ ಬಸ್‌ಗಳಿಗೆ ಬದಲಾಗಿ ಎಲೆಕ್ಟ್ರಿಕ್ ಬಸ್‌ಗಳನ್ನು ಬಿಎಂಟಿಸಿಗೆ ಪರಿಚಯಿಸುವ ಪ್ರಸ್ತಾಪ ಇಂದು–ನಿನ್ನೆಯದಲ್ಲ. 2015ರ ಏಪ್ರಿಲ್‌ನಲ್ಲಿ ಕೇಂದ್ರ ಸರ್ಕಾರದ 'ಫೇಮ್–1' ಯೋಜನೆ ಆರಂಭವಾಯಿತು. 80 ಬಸ್‌ಗಳನ್ನು ರಸ್ತೆಗಿಳಿಸಲು ಸುಮಾರು ₹18.68 ಕೋಟಿ ನೆರವು ನೀಡಿತ್ತು. ಎಲೆಕ್ಟ್ರಿಕ್ ಬಸ್‌ಗಳನ್ನು ಖರೀದಿಸಬೇಕೋ, ಗುತ್ತಿಗೆ ಆಧಾರದಲ್ಲಿ ಪಡೆಯಬೇಕೋ ಎಂಬ ಕಗ್ಗಂಟಿನಲ್ಲೇ ಬಿಎಂಟಿಸಿ ಕಾಲ ತಳ್ಳಿದ್ದರಿಂದ ಆ ಹಣ ಬಳಕೆಯಾಗಲೇ ಇಲ್ಲ.

ಎರಡನೇ ಹಂತದ ಯೋಜನೆಯಡಿ ಗುತ್ತಿಗೆ ಆಧಾರದಲ್ಲಿ ಪಡೆಯಬೇಕು ಎಂದು ಕೇಂದ್ರ ಸರ್ಕಾರ ಷರತ್ತು ವಿಧಿಸಿತು. ಆದರೆ, ಬಸ್‌ಗಳನ್ನು ಗುತ್ತಿಗೆ ಆಧಾರದಲ್ಲಿ ಪಡೆಯುವುದು ಬೇಡ, ಖರೀದಿಸಬೇಕು ಎಂದು ಆಗಿನ ಸಾರಿಗೆ ಸಚಿವರು ಪಟ್ಟು ಹಿಡಿದಿದ್ದರಿಂದ ಯೋಜನೆ ಒಂದಷ್ಟು ಕಾಲ ನನೆಗುದಿಗೆ ಬಿದ್ದಿತ್ತು. 2019ರ ಸೆಪ್ಟೆಂಬರ್‌ನಲ್ಲಿ ಆರಂಭವಾದ ಟೆಂಡರ್ ಪ್ರಕ್ರಿಯೆಗೆ 2021ರಲ್ಲಿ ಕೊನೆಗೂ ಒಪ್ಪಿಗೆ ದೊರೆತಿದೆ. ಅಶೋಕ್ ಲೇಲ್ಯಾಂಡ್ ಕಂಪನಿ ಮೂಲಕ 300 ಬಸ್‌ಗಳನ್ನು ಗುತ್ತಿಗೆ ಆಧಾರದಲ್ಲಿ ಪಡೆದುಕೊಳ್ಳಲು ತೀರ್ಮಾನಿಸಲಾಗಿದೆ. ಎಲ್ಲವೂ ಅಂದುಕೊಂಡಂತೆ ನಡೆದರೆ 12 ಮೀಟರ್ ಉದ್ದದ ಬಸ್‌ಗಳು ಆರು ತಿಂಗಳಲ್ಲಿ ರಸ್ತೆಗೆ ಇಳಿಯಲಿವೆ.

> ಆಡಳಿತ ಮಂಡಳಿಯ ಸಭೆಯಲ್ಲಿ ಒಪ್ಪಿಗೆ ಸಿಕ್ಕರೆ ಕೆಎಸ್‌ಆರ್‌ಟಿಸಿಗೆ ಶೀಘ್ರವೇ 50 ಎಲೆಕ್ಟ್ರಿಕ್ ಬಸ್‌ಗಳು ಬರಲಿವೆ. ಮುಂದಿನ 3 ವರ್ಷಗಳಲ್ಲಿ 1,500 ಬಸ್‌ಗಳನ್ನು ಪಡೆಯುವ ಉದ್ದೇಶ ಇದೆ
> –ಶಿವಯೋಗಿ ಸಿ. ಕಳಸದ, ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ

ಮೊದಲ ಹಂತದಲ್ಲಿ ಸ್ಮಾರ್ಟ್‌ಸಿಟಿ ಯೋಜನೆಯಡಿ 90 ಬಸ್‌ಗಳನ್ನು (9 ಮೀಟರ್ ಉದ್ದದ ಬಸ್) ಡಿಸೆಂಬರ್ ವೇಳೆಗೆ ರಸ್ತೆಗೆ ಇಳಿಸಲು ಬಿಎಂಟಿಸಿ ಮುಂದಾಗಿದೆ. ಗುತ್ತಿಗೆ ಪಡೆದಿರುವ ಕಂಪನಿಯೇ (ಜೆಬಿಎಂ) ಎನ್‌ಟಿಪಿಸಿ ಸಹಯೋಗದಲ್ಲಿ ಬಸ್‌ಗಳ ನಿರ್ವಹಣೆ ಮತ್ತು ಕಾರ್ಯಾಚರಣೆ ನಡೆಸಲಿದೆ. ಆಡಳಿತ ಮಂಡಳಿ ಒಪ್ಪಿಗೆ ದೊರೆತರೆ ಮುಂದಿನ ಆರು ತಿಂಗಳಲ್ಲಿ ಕೆಎಸ್‌ಆರ್‌ಟಿಸಿಗೂ 50 ಎಲೆಕ್ಟ್ರಿಕ್ ಬಸ್‌ಗಳು ಬರಲಿವೆ.

ಖಾಸಗೀಕರಣದ ಹುನ್ನಾರ: ಆರೋಪ

ಎಲೆಕ್ಟ್ರಿಕ್ ಬಸ್‌ಗಳ ಕಾರ್ಯಾಚರಣೆ ಮತ್ತು ನಿರ್ವಹಣೆಯನ್ನು ಖಾಸಗಿ ಕಂಪನಿಗಳ ಮೂಲಕ ಮಾಡಿಸುವುದಕ್ಕೆ ಸಾರಿಗೆ ಸಂಸ್ಥೆಗಳ ನೌಕರರ ಸಂಘಟನೆಗಳು ವಿರೋಧ ವ್ಯಕ್ತಪಡಿಸುತ್ತಿವೆ.

'ಪರಿಸರದ ದೃಷ್ಟಿಯಿಂದ ಇ–ಬಸ್‌ಗಳಿಗೆ ಒಗ್ಗಿಕೊಳ್ಳಬೇಕಿದೆ. ಅದಕ್ಕೆ ನಮ್ಮ ವಿರೋಧವಿಲ್ಲ. ಆದರೆ, ಸಹಾಯಧನವನ್ನು ಖಾಸಗಿ ಕಂಪನಿಗಳಿಗೆ ಕೊಡುವ ಬದಲು ಅದನ್ನು ಸಾರಿಗೆ ನಿಗಮಗಳಿಗೇ ಕೊಟ್ಟು ಅವುಗಳ ಮೂಲಕವೇ ಕಾರ್ಯಾಚರಣೆ ಮತ್ತು ನಿರ್ವಹಣೆ ಮಾಡಿಸಬೇಕು' ಎಂದು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಗಳ ನೌಕರರ ಫೆಡರೇಷನ್‌ನ (ಸಿಐಟಿಯು ಸಂಯೋಜಿತ) ಪ್ರಧಾನ ಕಾರ್ಯದರ್ಶಿ ಎಚ್‌.ಎಸ್. ಮಂಜುನಾಥ್ ಹೇಳುತ್ತಾರೆ.

'ಒಪ್ಪಂದದ ಪ್ರಕಾರ ದಿನಕ್ಕೆ ₹9 ಸಾವಿರಕ್ಕೂ ಹೆಚ್ಚು ಮೊತ್ತವನ್ನು ಒಂದು ಎಲೆಕ್ಟ್ರಿಕ್ ಬಸ್ ನಿರ್ವಹಣೆಗೆ ಖಾಸಗಿ ಕಂಪನಿಗೆ ನೀಡಬೇಕಿದೆ. ಒಂದು ಬಸ್‌ನಿಂದ ಟಿಕೆಟ್ ರೂಪದಲ್ಲಿ ಬರುವ ವರಮಾನ ₹5 ಸಾವಿರದಿಂದ ₹6 ಸಾವಿರ ದಾಟುವುದೇ ದೊಡ್ಡ ವಿಷಯ. ಉಳಿದ ₹3 ಸಾವಿರದಿಂದ ₹4 ಸಾವಿರವನ್ನು ಬೇರೆ ಬಸ್‌ಗಳಿಂದ ಬರುವ ವರಮಾನದಿಂದ ತುಂಬಿಕೊಡಬೇಕಾಗುತ್ತದೆ' ಎಂದರು.

'ಚಾಲಕ ಮತ್ತು ತಾಂತ್ರಿಕ ಸಿಬ್ಬಂದಿಗಳ ಉದ್ಯೋಗಕ್ಕೆ ಕುತ್ತು ಬರಲಿದೆ. ಪರಿಸರ ಮಾಲಿನ್ಯ ತಪ್ಪಿಸುವ ನೆಪದಲ್ಲಿ ಕ್ರಮೇಣ ಈ ಸಂಸ್ಥೆಗಳನ್ನು ಖಾಸಗೀಕರಣ ಮಾಡುವ ಹುನ್ನಾರ ಇದರ ಹಿಂದಿದೆ' ಎಂದು ಹೇಳಿದರು.

ಇ.ವಿ. ಬಳಕೆಗೆ ಬೇಕಿದೆ ಇನ್ನಷ್ಟು ಉತ್ತೇಜನ

• ವಿಶ್ವನಾಥ ಎಸ್.

ಬೆಂಗಳೂರು: ಪರಿಸರ ಮಾಲಿನ್ಯ ತಡೆಗೆ ಮತ್ತು ತೈಲ ಆಮದು ವೆಚ್ಚದ ಹೊರೆ ತಗ್ಗಿಸಲು ಕೇಂದ್ರ ಸರ್ಕಾರವು ವಿದ್ಯುತ್ ಚಾಲಿತ ವಾಹನಗಳ (ಇ.ವಿ.) ತಯಾರಿಗೆ ಮತ್ತು ಬಳಕೆ ಉತ್ತೇಜಿಸುತ್ತಿದೆ. ಅದಕ್ಕಾಗಿ ಯೋಜನೆ (ಫೇಮ್) ಜಾರಿಗೊಳಿಸಿದೆಯಾದರೂ, ಗುರಿ ಸಾಧನೆ ಪೂರ್ತಿಯಾಗಿ ಆಗಿಲ್ಲ.

ದೇಶದ ಸಾರ್ವಜನಿಕ ಸಾರಿಗೆಯ ಎಲ್ಲ ವಾಹನಗಳು ಮತ್ತು ಖಾಸಗಿ ಬಳಕೆಯ ಶೇ 40ರಷ್ಟು ವಾಹನಗಳು 2030ರ ವೇಳೆಗೆ ಸಂಪೂರ್ಣವಾಗಿ ವಿದ್ಯುತ್ ಚಾಲಿತ ಆಗಿರಬೇಕು ಎನ್ನುವ ಮಹತ್ವಾಕಾಂಕ್ಷೆ ಸರ್ಕಾರದ್ದು. ಅದಕ್ಕಾಗಿ,₹ 895 ಕೋಟಿ ನೀಡಿ, ಫೇಮ್ ಯೋಜನೆಯನ್ನು ಎರಡು ವರ್ಷಗಳ ಅವಧಿಗೆ 2015ರ ಏಪ್ರಿಲ್‌ನಲ್ಲಿ ಜಾರಿಗೊಳಿಸಲಾಯಿತು. ಆದರೆ, ಯೋಜನೆವಿಸ್ತರಿಸುವ ಬೇಡಿಕೆ ಉದ್ಯಮ ವಲಯದಿಂದ ಬಂದಿದ್ದರಿಂದ 2019ರ ಏಪ್ರಿಲ್‌ನಲ್ಲಿ (ಫೇಮ್–2) ಜಾರಿಗೊಳಿಸಿ, ಮೂರು ವರ್ಷಗಳ ಅವಧಿ ನಿಗದಿಪಡಿಸಲಾಗಿತ್ತು. ಗುರಿ ತಲುಪಲು ಸಾಧ್ಯವಾಗದೇ ಮತ್ತೆ ಎರಡು ವರ್ಷ ವಿಸ್ತರಿಸಲಾಗಿದೆ. 'ಫೇಮ್–2'ಗಾಗಿ ₹ 10 ಸಾವಿರ ಕೋಟಿ ಮೀಸಲಿಡಲಾಗಿದೆ.

ಫೇಮ್–2 ಅಡಿಯಲ್ಲಿ, 2022ರ ಮಾರ್ಚ್ ಒಳಗಾಗಿ ಗರಿಷ್ಠ ವೇಗದ 10 ಲಕ್ಷ ದ್ವಿಚಕ್ರ ವಾಹನ ಮಾರಾಟದ ಗುರಿ ಇದೆ. 2019ರ ಜನವರಿ–ಡಿಸೆಂಬರ್‌ನ 27,224 ದ್ವಿಚಕ್ರ ವಾಹನ ಮಾರಾಟವಾಗಿದ್ದರೆ, 2020ರ ಇದೇ ಅವಧಿಯಲ್ಲಿ ಈ ಸಂಖ್ಯೆ 25,735. ಸಬ್ಸಿಡಿ ಇದ್ದರೂ ಕೆಲವು ಷರತ್ತುಗಳಿಂದಾಗಿ ವಾಹನ ಖರೀದಿಗೆ ಹಿನ್ನಡೆಯಾಗುತ್ತಿದೆ ಎನ್ನುತ್ತಾರೆ ಸಂಘದ ಪ್ರಧಾನ ನಿರ್ದೇಶಕ ಸೋಹಿಂದರ್ ಗಿಲ್.

ವಿದ್ಯುತ್ ಚಾಲಿತ ವಾಹನಗಳ ಮಾರಾಟ

2.95 ಲಕ್ಷ
2019–20ರಲ್ಲಿ

2.36 ಲಕ್ಷ
2020–21ರಲ್ಲಿ

ಮಾಹಿತಿ: ವಿದ್ಯುತ್‌ಚಾಲಿತ ವಾಹನ ತಯಾರಕರ ಸಂಘ (ಎಸ್‌ಎಂಇವಿ)

ಉತ್ತೇಜಕ ಕ್ರಮ

- ಬ್ಯಾಟರಿ ದರ ತಗ್ಗಿಸಲು ತಯಾರಿಕೆ ಆಧಾರಿತ ಉತ್ತೇಜನ (ಪಿಎಲ್‌ಐ) ಯೋಜನೆ ವ್ಯಾಪ್ತಿಗೆ ಅಡ್ವಾನ್ಸ್ಡ್ ಕೆಮಿಸ್ಟ್ರಿ ಸೆಲ್ (ಎಸಿಸಿ) ತಯಾರಿಕೆ
- ಇ.ವಿ.ಗಳ ಮೇಲಿನ ಜಿಎಸ್‌ಟಿ ಶೇ 12 ರಿಂದ ಶೇ 5ಕ್ಕೆ ಇಳಿಕೆ. ಚಾರ್ಜರ್ಸ್/ಚಾರ್ಜಿಂಗ್ ಕೇಂದ್ರಗಳ ಮೇಲಿನ ಜಿಎಸ್‌ಟಿ ಶೇ 18 ರಿಂದ ಶೇ 5ಕ್ಕೆ ಇಳಿಕೆ
- ಬ್ಯಾಟರಿ ಚಾಲಿತ ವಾಹನಗಳಿಗೆ ಹಸಿರು ಪರವಾನಗಿ ಪ್ಲೇಟ್
- ರಸ್ತೆ ತೆರಿಗೆ ಮನ್ನಾ ಮಾಡಲು ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯದ ಸಲಹೆ

ಬೆಂಗಳೂರಿನ ನೆಲದಲ್ಲಿ 'ಇ.ವಿ ನವೋದ್ಯಮ'

• ಸಂತೋಷ ಜಿಗಳಿಕೊಪ್ಪ

ಬೆಂಗಳೂರು: ವಿಶ್ವದ ಅಗ್ರ ನಗರಗಳ ಪಟ್ಟಿಯಲ್ಲಿರುವ ಬೆಂಗಳೂರು, ಸಾರಿಗೆ ಕ್ಷೇತ್ರದಲ್ಲೂ ಹೆಗ್ಗಳಿಕೆ ಪಡೆದಿದೆ. ನಗರದಲ್ಲಿ ಮೊದಲ ಬಾರಿಗೆ ಮೊಬೈಲ್ ಆ್ಯಪ್ ಆಧಾರಿತ ಕ್ಯಾಬ್ ಸೇವೆ ಆರಂಭಿಸಿದ್ದ ಓಲಾ ಕಂಪನಿ, ಇಂದು ವಿಶ್ವಮಟ್ಟದಲ್ಲಿ ಹೆಸರು ಮಾಡಿದೆ. ಇದೀಗ ಎಲೆಕ್ಟ್ರಿಕ್ ವಾಹನ (ಇ.ವಿ) ಕ್ಷೇತ್ರದಲ್ಲೂ ಬೆಂಗಳೂರು ಮುಂಚೂಣಿಯಲ್ಲಿದ್ದು, ಎಲೆಕ್ಟ್ರಿಕ್ ವಾಹನಗಳ ಕ್ಷೇತ್ರದಲ್ಲಿ ಸ್ಥಳೀಯ ನವೋದ್ಯಮಗಳು (ಸ್ಟಾರ್ಟ್‌ಅಪ್) ಆರಂಭಗೊಂಡಿವೆ.


ಸಿಂಪಲ್ ಎನರ್ಜಿ, ಸ್ಟಾರ್ಯ ಮೊಬಿಲಿಟಿ, ರೆವೊಸ್, ಯುಲೂ, ಎಮ್‌ಪ್ಲಕ್ಸ್ ಮೋಟರ್ಸ್, ಒರಕ್ಸ್ ಎನರ್ಜಿಸ್, ಮಂಕಮೆ ಹಾಗೂ ಬೌನ್ಸ್ ಕಂಪನಿಗಳು ಮುಂಚೂಣಿಯಲ್ಲಿವೆ. ಅಂತರರಾಷ್ಟ್ರೀಯ ಕಂಪನಿ 'ಓಲಾ' ಜೊತೆ ಪೈಪೋಟಿಗೆ ಇಳಿದಿವೆ.

ಸುಹಾಸ್ ರಾಜ್‌ಕುಮಾರ್, 'ಸಿಂಪಲ್ ಎನರ್ಜಿ' ನವೋದ್ಯಮ ಆರಂಭಿಸಿ 'ಒನ್' ಹೆಸರಿನಲ್ಲಿ ಎಲೆಕ್ಟ್ರಿಕ್ ವಾಹನ ತಯಾರಿಸಿ ಮಾರಾಟ ಮಾಡುತ್ತಿದ್ದಾರೆ. ರವಿಕುಮಾರ್ ಜಗನ್ನಾಥ್ 2018ರಲ್ಲಿ 'ಸ್ಟಾರ್ಯ ಮೊಬಿಲಿಟಿ' ನವೋದ್ಯಮ ಆರಂಭಿಸಿದ್ದು, ಪೆಟ್ರೋಲ್ ಬೈಕ್‌ಗಳನ್ನು ಎಲೆಕ್ಟ್ರಿಕ್ ವಾಹನಗಳಾಗಿ ಮಾರ್ಪಡಿಸುವ ತಂತ್ರಜ್ಞಾನ ರೂಪಿಸಿದ್ದಾರೆ. ಇತ್ತೀಚೆಗೆ 'ಯೂಲು' ಸ್ಕೂಟರ್ ಬಳಕೆ ಹೆಚ್ಚಿದೆ. ಅಮಿತ್ ಗುಪ್ತಾ ಅವರು ಆರ್. ಕೆ.ಮಿಶ್ರಾ ಹಾಗೂ ನವೀನ್ ದಚೂರಿ ಪಾಲುದಾರಿಕೆಯಲ್ಲಿ 'ಆ್ಯಡ್‌ಟೆಕ್ ಯುನಿಕಾರ್ನ್ ಇನ್‌ಮೊಬಿ' ಕಂಪನಿಯಡಿ 'ಯೂಲು' ಎಲೆಕ್ಟ್ರಿಕ್ ಸ್ಕೂಟರ್ ಬಿಡುಗಡೆ ಮಾಡಿದ್ದಾರೆ.

ಬೆಂಗಳೂರಿನ ವರುಣ್ ಮಿತ್ತಲ್ ತಂಡವು 'ಎಮ್‌ಪ್ಲಕ್ಸ್ ಮೋಟರ್ಸ್' ಆರಂಭಿಸಿದ್ದಾರೆ. ರಂಜಿತಾ ರವಿ ಹಾಗೂ ಅವರ ಪತಿ ಪ್ರಜ್ವಲ್ ಸಬ್ನೀಸ್, 'ಒರಕ್ಸ್ ಎನರ್ಜಿಸ್' ನವೋದ್ಯಮ ಸ್ಥಾಪಿಸಿದ್ದಾರೆ.

ಹೊಸದಾಗಿ 1,000 ಚಾರ್ಜಿಂಗ್ ಕೇಂದ್ರಗಳು

• ಎಸ್.ರವಿ ಪ್ರಕಾಶ್



ವಿ. ಸುನಿಲ್ ಕುಮಾರ್

ಬೆಂಗಳೂರು: 'ರಾಜ್ಯದಲ್ಲಿ ಎಲೆಕ್ಟ್ರಿಕ್ ವಾಹನಗಳಿಗಾಗಿ ಈಗ 136 ರೀಚಾರ್ಜಿಂಗ್ ಕೇಂದ್ರಗಳಿವೆ. ಈ ವರ್ಷ ಹೊಸದಾಗಿ 1,000 ಚಾರ್ಜಿಂಗ್ ಕೇಂದ್ರಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ. ಮುಖ್ಯವಾಗಿ, ಸರ್ಕಾರಿ ಕಚೇರಿಗಳು, ಹೆದ್ದಾರಿಗಳು ಮತ್ತು ಪ್ರವಾಸಿ ಕೇಂದ್ರಗಳಲ್ಲಿ ಸ್ಥಾಪಿಸಲಾಗುವುದು. ನಂತರದ ಹಂತದಲ್ಲಿ ಮಾಲ್‌ಗಳು ಮತ್ತು ಅಪಾರ್ಟ್‌ಮೆಂಟ್‌ಗಳಲ್ಲಿ ಕಡ್ಡಾಯವಾಗಿ ಮಾಡಲು ಉದ್ದೇಶಿಸಲಾಗಿದೆ' ಎಂದು ಇಂಧನ ಸಚಿವ ವಿ.ಸುನಿಲ್ ಕುಮಾರ್ ತಿಳಿಸಿದರು.

'ರಾಜ್ಯದಲ್ಲಿ ವಿವಿಧ ವಿದ್ಯುತ್ ಕಂಪನಿಗಳಿಂದಲೂ ಚಾರ್ಜಿಂಗ್ ಕೇಂದ್ರಗಳನ್ನು ಸ್ಥಾಪಿಸುತ್ತಿದ್ದೇವೆ. ಖಾಸಗಿ ಮತ್ತು ಸರ್ಕಾರಿ ಸಹಭಾಗಿತ್ವದಲ್ಲಿ (ಪಿಪಿಪಿ) ಸ್ಥಾಪನೆಗೆ ಮುಂದೆ ಬಂದರೆ, ಅದಕ್ಕೂ ಅವಕಾಶ ನೀಡುತ್ತೇವೆ' ಎಂದರು.

'ಹದಿನೈದು ದಿನಗಳ ಹಿಂದೆ ಎಲೆಕ್ಟ್ರಿಕ್ ವಾಹನಗಳ ತಯಾರಕರ ಸಭೆಯೊಂದನ್ನು ನಡೆಸಲಾಗಿತ್ತು. ಅವರ ಸಮಸ್ಯೆಗಳನ್ನು ಆಲಿಸಲಾಯಿತು. ಅವರಿಂದ ಹಲವು ಸಲಹೆಗಳು ಬಂದಿವೆ. ಅವುಗಳನ್ನು ಅಳವಡಿಸಿಕೊಂಡು ಮುನ್ನಡೆಯುವ ಉದ್ದೇಶ ಹೊಂದಿದ್ದೇವೆ. ವಾಹನಗಳ ಬೆಲೆ ಜಾಸ್ತಿ ಇರುವುದರಿಂದ ಹೆಚ್ಚಿನವರು ಖರೀದಿಸಲು ಸಾಧ್ಯವಾಗುತ್ತಿಲ್ಲ. ಕಡಿಮೆ ಮಾಡಲು ಅಗತ್ಯ ಕ್ರಮ ತೆಗೆದುಕೊಳ್ಳುವಂತೆ ಸಲಹೆ ನೀಡಿದ್ದೇನೆ' ಎಂದು ಹೇಳಿದರು.

'ವಾಹನಗಳ ಖರೀದಿದಾರರಿಗೆ ಸರ್ಕಾರ ಹೆಚ್ಚಿನ ಸಹಾಯಧನ ನೀಡುವುದರ ಜತೆಗೆ ಜಿಎಸ್‌ಟಿ ವ್ಯಾಪ್ತಿಯಿಂದ ಹೊರಗಿಡಬೇಕು, ಚಾರ್ಜಿಂಗ್ ಶುಲ್ಕವನ್ನೂ ಕಡಿಮೆ ಮಾಡಬೇಕು ಎಂಬ ಬೇಡಿಕೆ ಮಂಡಿಸಿದ್ದಾರೆ. ಆದರೆ, ಇವೆಲ್ಲ ಕೇಂದ್ರ ಸರ್ಕಾರದ ವ್ಯಾಪ್ತಿಗೆ ಬರುತ್ತವೆ. ನಾವು ಏನೂ ಮಾಡಲು ಸಾಧ್ಯವಿಲ್ಲ ಎಂಬುದನ್ನು ಅವರಿಗೆ ತಿಳಿಸಿದ್ದೇವೆ. ಮುಂಬರುವ ದಿನಗಳಲ್ಲಿ ಇಂಧನ ಇಲಾಖೆಯಲ್ಲಿ ಎಲೆಕ್ಟ್ರಿಕ್ ವಾಹನಗಳನ್ನೇ ಖರೀದಿಸಬೇಕು ಎಂಬ ಚರ್ಚೆ ನಡೆಯುತ್ತಿದೆ' ಎಂದು ಸುನಿಲ್ ಕುಮಾರ್ ಹೇಳಿದರು.

ಗ್ರಾಹಕರಿಗಿಂತ ಉದ್ಯಮಕ್ಕೇ ಹೆಚ್ಚು ಒತ್ತು

ರಾಜ್ಯದಲ್ಲಿ ವಿದ್ಯುತ್ ಚಾಲಿತ ವಾಹನಗಳ ಗ್ರಾಹಕರಿಗೆ ಸರ್ಕಾರದ ಕೊಡುಗೆ ಅತ್ಯಲ್ಪ. ಗುಜರಾತ್, ದೆಹಲಿ ಮತ್ತು ಮಹಾರಾಷ್ಟ್ರ ಸರ್ಕಾರಗಳೂ ವಾಹನ ಖರೀದಿಸುವವರಿಗೆ ಸಹಾಯಧನ ನೀಡುತ್ತಿವೆ. ಆದರೆ, ರಾಜ್ಯ ಸರ್ಕಾರ ಗ್ರಾಹಕರಿಗೆ ಸಹಾಯಧನ ನೀಡುತ್ತಿಲ್ಲ. ಸದ್ಯಕ್ಕೆ ಕೇಂದ್ರ ಸರ್ಕಾರ ನೀಡುವ ಸಹಾಯಧನವಷ್ಟೇ ಗ್ರಾಹಕರಿಗೆ ಸಿಗುತ್ತಿದೆ. ರಾಜ್ಯದಲ್ಲಿ ರಸ್ತೆ ತೆರಿಗೆ ಮತ್ತು ನೋಂದಣಿ ಶುಲ್ಕ ಪಾವತಿಯಿಂದ ವಿನಾಯಿತಿ ನೀಡಲಾಗಿದೆ.

ರಾಜ್ಯದ ಎಲೆಕ್ಟ್ರಿಕ್ ವಾಹನಗಳ ನೀತಿಯು ಉದ್ಯಮಸ್ನೇಹಿಯಾಗಿದೆ. ಉದ್ಯಮಗಳನ್ನು ಸೆಳೆಯುವುದಕ್ಕಾಗಿಯೇ ಹೆಚ್ಚಿನ ಒತ್ತು ನೀಡಿವೆ. ಉತ್ಪಾದಕರಿಗೆ ಶೇ 15 ರಷ್ಟು ಬಂಡವಾಳ ಸಹಾಯಧನ ಸೇರಿದಂತೆ ವಿವಿಧ ರೀತಿಯ ರಿಯಾಯ್ತಿಗಳನ್ನು ನೀಡಿದೆ. ಈ ರೀತಿಯ ವಾಹನ ಖರೀದಿಸಲು ಗ್ರಾಹಕರಿಗೆ ಉತ್ತೇಜನ ನೀಡದೇ ಇರುವ ಬಗ್ಗೆ ಪ್ರಸ್ತಾಪಿಸಿದರೆ ಕೋವಿಡ್ ಮತ್ತು ಆರ್ಥಿಕ ಸಂಕಷ್ಟದಿಂದ ಗ್ರಾಹಕರಿಗೆ ಸಹಾಯಧನ ನೀಡಲು ಸಾಧ್ಯವಿಲ್ಲ ಎನ್ನುವ ಉತ್ತರ ಅಧಿಕಾರಿಗಳದ್ದು.

ವಿವಿಧ ರಾಜ್ಯಗಳು ನೀಡುವ ಸಹಾಯಧನ

ರಾಜ್ಯ	ಸಹಾಯಧನ ಮೊತ್ತ
ಗುಜರಾತ್	₹10,000
ದೆಹಲಿ	₹5,000 (₹5,000 ಹಳೆ ವಾಹನ ಗುಜರಿಗೆ ಹಾಕಲು ಪ್ರೋತ್ಸಾಹ ಧನ)
ಮಹಾರಾಷ್ಟ್ರ	₹5,000

* ಕೇಂದ್ರ ಸರ್ಕಾರ ನೀಡುವ ಸಹಾಯಧನ ಪ್ರತಿ ಕೆಎಚ್‌ಡಬ್ಲ್ಯುಗೆ ₹10,000 ದಿಂದ ₹15,000

ಸಬ್ಸಿಡಿ ಹೆಚ್ಚಳ

ಫೇಮ್–2 ಅಡಿ, ದ್ವಿಚಕ್ರ ವಾಹನಗಳ ಮೇಲಿನ ಸಬ್ಸಿಡಿಯನ್ನು ಕೇಂದ್ರವು ಶೇಕಡ 50ರಷ್ಟು ಹೆಚ್ಚಿಸಿದೆ. ಆರಂಭದಲ್ಲಿ, ಎಲ್ಲಾ ವಿದ್ಯುತ್ ಚಾಲಿತ ವಾಹನಗಳಿಗೆ ಪ್ರತಿ ಕೆಡಬ್ಲ್ಯುಎಚ್‌ಗೆ (per KWh) ₹ 10 ಸಾವಿರ ಸಬ್ಸಿಡಿ ನಿಗದಿಪಡಿಸಲಾಗಿತ್ತು. ಇದೀಗ ದ್ವಿಚಕ್ರ ವಾಹನಗಳಿಗೆ ಪ್ರತಿ ಕೆಡಬ್ಲ್ಯುಎಚ್‌ಗೆ ₹ 15 ಸಾವಿರ ಸಬ್ಸಿಡಿ ನಿಗದಿ ಮಾಡಲಾಗಿದೆ. ಬೃಹತ್ ಉದ್ದಿಮೆಗಳ ಇಲಾಖೆಯು ಈಚೆಗೆ ತಂದ ಬದಲಾವಣೆ ಪ್ರಕಾರ, ವಿದ್ಯುತ್ ಚಾಲಿತ ದ್ವಿಚಕ್ರ ವಾಹನಗಳಿಗೆ ನೀಡುವ ಆರ್ಥಿಕ ಉತ್ತೇಜನ ಮೊತ್ತವನ್ನು ವಾಹನಗಳ ಒಟ್ಟು ವೆಚ್ಚದ ಶೇ 40ಕ್ಕೆ ಹೆಚ್ಚಿಸಲಾಗಿದೆ. ಈ ಮೊದಲು ಇದು ಶೇ 20ರಷ್ಟಿತ್ತು.

ಫೇಮ್–2 ಸಬ್ಸಿಡಿ

- ಕಾರು ತಯಾರಿಕಾ ವೆಚ್ಚ ₹ 15 ಲಕ್ಷ ಆಗಿದ್ದರೆ, ಅದರ ಖರೀದಿಗೆ ₹ 1.5 ಲಕ್ಷದವರೆಗೆ
- ಪ್ರತಿ ವಿದ್ಯುತ್ ಚಾಲಿತ ಬಸ್ ತಯಾರಿಕೆಗೆ ಅಂದಾಜು ₹ 2 ಕೋಟಿ ವೆಚ್ಚವಾಗಲಿದ್ದು, ಅದಕ್ಕೆ ₹ 50 ಲಕ್ಷ
- ವಿದ್ಯುತ್ ಚಾಲಿತ ಇ–ರಿಕ್ಷಾ ತಯಾರಿಕೆಗೆ ₹ 5 ಲಕ್ಷ ವೆಚ್ಚವಾಗಲಿದ್ದು, ಅದಕ್ಕೆ ₹ 50 ಸಾವಿರ

ಇ.ವಿ: ಗುರಿ ಈಡೇರೀತೇ?

ಒಂದನೇ ಪುಟದಿಂದ

'ಮುಂದಿನ ಎರಡು ವರ್ಷಗಳಲ್ಲಿ ಇ.ವಿ. ಸಂಬಂಧಿತ ನೀತಿ ಹೇಗಿರುತ್ತದೆ ಎಂಬುದನ್ನು ಈಗಲೇ ಊಹಿಸಲು ಆಗದು. ಮುಂದಿನ ಹತ್ತು ವರ್ಷಗಳಲ್ಲಿ ದೇಶದಲ್ಲಿ ನಾಲ್ಕು ಚಕ್ರಗಳ ವಾಹನ ಮಾರುಕಟ್ಟೆಯಲ್ಲಿ ಇ.ವಿ.ಗಳ ಪಾಲು ಏನಾಗಬಹುದು ಎಂಬುದನ್ನು ಈಗಲೇ ಊಹಿಸುವುದಕ್ಕೂ ಸಾಧ್ಯವಿಲ್ಲ' ಎಂದು ಶ್ವೆಂಕ್ ಭವಿಷ್ಯ ನುಡಿದರು.

ಕಂಪನಿಗಳು, ಇ.ವಿ.ಗಳನ್ನು ಭಾರತದಲ್ಲಿಯೇ ತಯಾರಿಸಲು ಪೂರ್ತಿಯಾಗಿ ಆರಂಭಿಸಿದ ನಂತರ ವಾಹನಗಳ ಬೆಲೆ ತುಸು ಕಡಿಮೆ ಆಗಬಹುದು. ಅಲ್ಲದೆ, ವಾಹನಗಳ ಉತ್ಪಾದನೆ ದೊಡ್ಡ ಪ್ರಮಾಣದಲ್ಲಿ ಆದಾಗ ಬೆಲೆ ತಗ್ಗುತ್ತದೆ. ಬ್ಯಾಟರಿ ತಂತ್ರಜ್ಞಾನ ಅಭಿವೃದ್ಧಿಗೆ ದೊಡ್ಡ ಪ್ರಮಾಣದಲ್ಲಿ ಹೂಡಿಕೆ ಆಗುತ್ತಿದೆ, ಸಂಶೋಧನೆಗಳು ನಡೆಯುತ್ತಿವೆ. ಹಾಗಾಗಿ, ಮುಂದಿನ ದಿನಗಳಲ್ಲಿ ಇ.ವಿ. ಬೆಲೆ ಖಂಡಿತ ಇನ್ನಷ್ಟು ತಗ್ಗುವುದು ಖಚಿತ ಎಂದು ಪ್ರಮುಖ ವಾಹನ ಮಾರಾಟ ಕಂಪನಿಯೊಂದರ ಹಿರಿಯ ಅಧಿಕಾರಿ ತಿಳಿಸಿದರು.

ಹಣಕಾಸು ನೆರವು: ಇ.ವಿ. ಇನ್ನಷ್ಟು ಜನಪ್ರಿಯ ಆಗಬೇಕು ಎಂದಾದರೆ ಹಣಕಾಸು ಸಂಸ್ಥೆಗಳಿಂದ ಸಾಲ ಹೆಚ್ಚಿನ ಪ್ರಮಾಣದಲ್ಲಿ ಸಿಗುವಂತೆ ಆಗಬೇಕು ಎಂದು ರೇಟಿಂಗ್ಸ್ ಸಂಸ್ಥೆ ಕ್ರಿಸಿಲ್‌ನ ಸಂಶೋಧನಾ ವಿಭಾಗದ ಮುಖ್ಯಸ್ಥ ಹೇಮಲ್ ಥಕ್ಕರ್ 'ಪ್ರಜಾವಾಣಿ' ಜೊತೆ ಅನಿಸಿಕೆ ಹಂಚಿಕೊಂಡರು.

ಇ.ವಿ. ದ್ವಿಚಕ್ರ ವಾಹನ ಖರೀದಿಗೆ ಈಗ ಹೆಚ್ಚಿನ ಡೌನ್‌ಪೇಮೆಂಟ್ ಅಗತ್ಯವಿದೆ. ಹಣಕಾಸಿನ ವಿಚಾರದಲ್ಲಿ ಸುಧಾರಣೆಗಳು ಆದರೆ 2030ರ ವೇಳೆಗೆ ದೇಶದ ದ್ವಿಚಕ್ರ ವಾಹನ ಮಾರುಕಟ್ಟೆಯಲ್ಲಿ ಶೇಕಡ 45ರಿಂದ ಶೇ 50ರಷ್ಟು ಪಾಲನ್ನು ಇ.ವಿ.ಗಳು ಸುಲಭವಾಗಿ ಹೊಂದಬಹುದೆ ಎಂದು ಥಕ್ಕರ್ ವಿವರಿಸಿದರು.

'ಚಾರ್ಜಿಂಗ್ ಸೌಕರ್ಯ ಹಿಂದುಳಿದಿದೆ'

ಇ.ವಿ. ವಾಹನ ಬಳಕೆ ಹೆಚ್ಚಾಗಬೇಕು ಎಂದಾದರೆ ಚಾರ್ಜಿಂಗ್ ಮೂಲಸೌಕರ್ಯ ಇನ್ನಷ್ಟು ಹೆಚ್ಚಬೇಕು ಎಂದು ಬ್ರಿಕ್‌ವರ್ಕ್ ರೇಟಿಂಗ್ಸ್ ಸಂಸ್ಥೆಯ ಆಟೊಮೊಬೈಲ್ ವಿಭಾಗದ ನಿರ್ದೇಶಕಿ ತನು ಶರ್ಮಾ ಹೇಳಿದರು.

'ಇ.ವಿ. ಚಾರ್ಜಿಂಗ್ ಮೂಲಸೌಕರ್ಯ ಕಲ್ಪಿಸುವಲ್ಲಿ ದೇಶವು ಹಿಂದುಳಿದಿದೆ. ಇಡೀ ದೇಶದಲ್ಲಿ ಇರುವುದು 1,800 ಚಾರ್ಜಿಂಗ್ ಕೇಂದ್ರಗಳು. ಪ್ರತಿ 100 ಕಿ.ಮೀ.ಗೆ ಒಂದಾದರೂ ಚಾರ್ಜಿಂಗ್ ಕೇಂದ್ರ ಆರಂಭಿಸಲು ಕ್ರಮ ಕೈಗೊಳ್ಳಬೇಕು ಅಥವಾ ಈಗಾಗಲೇ ಇರುವ ಪೆಟ್ರೋಲ್ ಬಂಕ್‌ಗಳಲ್ಲಿ ಇ.ವಿ. ಚಾರ್ಜಿಂಗ್ ಸೌಲಭ್ಯ ಕಲ್ಪಿಸಬೇಕು' ಎಂದು ಅವರು ಹೇಳಿದರು.

ಜಾಗತಿಕ ಮಟ್ಟದಲ್ಲಿ ಇ.ವಿ.ಗಳ ಮಾರುಕಟ್ಟೆ ಪಾಲು ಶೇ 5ರಷ್ಟಿದೆ. ಆದರೆ ಭಾರತದಲ್ಲಿ ಇವುಗಳ ಪಾಲು ಶೇ 1ಕ್ಕಿಂತ ಕಡಿಮೆ ಇದೆ. 2030ರ ವೇಳೆಗೆ ದೇಶದಲ್ಲಿ ಇ.ವಿ. ಪಾಲು ಶೇ 30ರಷ್ಟು ಇರಬೇಕು ಎಂದಾದರೆ, ಇ.ವಿ. ವಾಹನಗಳ ವಾರ್ಷಿಕ ಬೆಳವಣಿಗೆ ಪ್ರಮಾಣವು ಶೇ 45ರಷ್ಟು ಇರಬೇಕಾಗುತ್ತದೆ ಎಂದು ತನು ಅಂದಾಜಿಸಿದರು.

ಇ.ವಿ. ಬಳಕೆ: ತೊಡಕುಗಳು ಹಲವು

ಒಂದನೇ ಪುಟದಿಂದ

ಇಷ್ಟೇ ಸಾಮರ್ಥ್ಯದ ಸಾಮಾನ್ಯ ಚಾರ್ಜಿಂಗ್ ಕೇಂದ್ರಗಳನ್ನು ಹೆದ್ದಾರಿಗಳಲ್ಲಿ ಸ್ಥಾಪಿಸಿದರೆ, ಅದರಿಂದ ಹೆಚ್ಚು ಪ್ರಯೋಜನವಿಲ್ಲ. ದೂರದ ಪ್ರಯಾಣ ಮಾಡುತ್ತಿರುವವರು ಚಾರ್ಜಿಂಗ್ ಮಾಡಲು 6-8 ಗಂಟೆ ದಾರಿ ಮಧ್ಯೆ ಕಾಯಲು ಸಾಧ್ಯವಿಲ್ಲ. ಅದು ಕಾರ್ಯಸಾಧುವೂ ಅಲ್ಲ.

ಇದಕ್ಕೆ ಪರಿಹಾರವೆಂದರೆ ಡಿ.ಸಿ ಫಾಸ್ಟ್ ಚಾರ್ಜಿಂಗ್ ಕೇಂದ್ರ. ಈಗ ಮಾರುಕಟ್ಟೆಯಲ್ಲಿರುವ ಮತ್ತು ಫಾಸ್ಟ್ ಚಾರ್ಜಿಂಗ್ ವ್ಯವಸ್ಥೆ ಇರುವ ಬಹುತೇಕ ಕಾರುಗಳು, ಫಾಸ್ಟ್ ಚಾರ್ಜಿಂಗ್ ಕೇಂದ್ರಗಳಲ್ಲಿ ಒಂದು ಗಂಟೆಗೆ ಗರಿಷ್ಠ ಶೇ 80ರಷ್ಟು ಚಾರ್ಜ್ ಆಗುತ್ತವೆ. ಹೋಟೆಲ್-ರೆಸ್ಟೋರೆಂಟ್‌ಗಳ ಬಳಿ ಇಂತಹ ಚಾರ್ಜಿಂಗ್ ಕೇಂದ್ರಗಳನ್ನು ಸ್ಥಾಪಿಸಿದರೆ ಅನುಕೂಲವಾಗುತ್ತದೆ. ಆದರೆ, ಇಂತಹ ಚಾರ್ಜಿಂಗ್ ಕೇಂದ್ರ ಸ್ಥಾಪಿಸಲು ಲಕ್ಷಾಂತರ ರೂಪಾಯಿ ಬಂಡವಾಳ ಹೂಡಬೇಕಾಗುತ್ತದೆ. ಹೀಗಾಗಿಯೇ ಇಂತಹ ಚಾರ್ಜಿಂಗ್ ಕೇಂದ್ರಗಳ ಸಂಖ್ಯೆ ಕಡಿಮೆ ಇದೆ.

ದೇಶದ ಎಲ್ಲಾ ಹೆದ್ದಾರಿಗಳಲ್ಲಿ ಡಿಸಿ ಫಾಸ್ಟ್ ಚಾರ್ಜಿಂಗ್ ಕೇಂದ್ರಗಳನ್ನು ಸ್ಥಾಪಿಸಲು ಕೇಂದ್ರ ಸರ್ಕಾರವು, ರಾಷ್ಟ್ರೀಯ ಹೆದ್ದಾರಿ ಮೂಲಸೌಕರ್ಯ ಅಭಿವೃದ್ಧಿ ಲಿಮಿಟೆಡ್‌ನ ಜತೆಗೆ ಯೋಜನೆ ರೂಪಿಸುತ್ತಿದೆ. ಯೋಜನೆ ಅನುಷ್ಠಾನಕ್ಕೆ ಬಂದರೆ, ಈ ಪರಿಸ್ಥಿತಿ ಸುಧಾರಿಸಬಹುದು. ಆದರೆ ಈಚೆಗೆ ಬೆಂಗಳೂರಿನಿಂದ ಮೈಸೂರಿಗೆ ಇವಿ ಕಾರ್‌ನಲ್ಲಿ ಹೋಗಿದ್ದ ಒಬ್ಬರು, ಮೈಸೂರಿನ ಪಬ್ಲಿಕ್ ಚಾರ್ಜಿಂಗ್ ಕೇಂದ್ರದಲ್ಲಿ ಸಮಸ್ಯೆ ಎದುರಿಸಿದ್ದು ವರದಿಯಾಗಿದೆ. ಚಾರ್ಜಿಂಗ್ ಕೇಂದ್ರದಲ್ಲಿ ಇವಿ ಚಾರ್ಜ್ ಆಗದೇ ಇದ್ದ ಕಾರಣ ಆ ವ್ಯಕ್ತಿ, ವಾಹನವನ್ನು ಅಲ್ಲಿಯೇ ಬಿಟ್ಟು ಬಸ್‌ನಲ್ಲಿ ವಾಪಸ್ಸಾಗಿದ್ದಾರೆ. ಇಂತಹ ಘಟನೆಗಳು ಇ.ವಿ.ಗಳ ಬಗ್ಗೆ ಜನರಲ್ಲಿ ವಿಶ್ವಾಸ ಕುಂದಿಸುತ್ತವೆ. ಚಾರ್ಜಿಂಗ್ ಕೇಂದ್ರಗಳಲ್ಲಿ ಯಾವುದೇ ರೀತಿಯ ತೊಂದರೆ ಆಗದಂತಹ ವ್ಯವಸ್ಥೆಯನ್ನು ನಿರ್ಮಿಸಬೇಕಾಗುತ್ತದೆ. ಚಾರ್ಜಿಂಗ್ ಕೇಂದ್ರಗಳ ಸಂಖ್ಯೆಯನ್ನು ಹೆಚ್ಚಿಸುವುದು ಮತ್ತು ಅವುಗಳು ಸರಿಯಾಗಿ ಕಾರ್ಯನಿರ್ವಹಿಸುವಂತೆ ಮಾಡುವುದು ಸರ್ಕಾರದ ಹೊಣೆ. ಆಗ ಮಾತ್ರ ಇವಿ ಮತ್ತು ಚಾರ್ಜಿಂಗ್ ಕೇಂದ್ರಗಳ ಬಗ್ಗೆ ಜನರಲ್ಲಿ ವಿಶ್ವಾಸ ಮೂಡುತ್ತದೆ.

ಭಾರತೀಯರ ಈಗಿನ ಜೀವನಶೈಲಿಗೆ ಈ ಕಾರುಗಳು ಹೊಂದಿಕೆಯಾಗುವುದಿಲ್ಲ ಎಂಬ ಅಭಿಪ್ರಾಯವಿದೆ. ಇ.ವಿ. ವಾಹನ ಹೊಂದಿರುವವರು ದಿಢೀರ್ ಪ್ರಯಾಣ/ಪ್ರವಾಸ ಯೋಜಿಸಲು ಸಾಧ್ಯವಿಲ್ಲ. ತುರ್ತು ಸಂದರ್ಭದಲ್ಲಿ ಚಾರ್ಜ್ ಇಲ್ಲದಿದ್ದರೆ ಬಳಸಲು ಸಾಧ್ಯವಿಲ್ಲ. ತುರ್ತು ಸಂದರ್ಭದಲ್ಲಿ 6-8 ಗಂಟೆ ಚಾರ್ಜ್ ಮಾಡುತ್ತಾ ಕೂರಲಾಗದು. ಇವುಗಳ ಬಳಕೆ ಹೆಚ್ಚಾದಂತೆ, ಸದಾ ಚಾರ್ಜ್ ಸ್ಥಿತಿಯಲ್ಲಿ ಇರಿಸುವ ಮತ್ತುಪ್ರಯಾಣಗಳನ್ನೂ ಪೂರ್ವಯೋಜಿತವಾಗಿ ಮಾಡುವಂತಹ ಜೀವನ ಶೈಲಿ ರೂಪಿಸಿಕೊಳ್ಳಬೇಕಾಗುತ್ತದೆ. ಇದರೊಂದಿಗೆ, ಪಾರ್ಕಿಂಗ್ ವ್ಯವಸ್ಥೆ ಇಲ್ಲದೇ ಇದ್ದರೆ, ಇವುಗಳನ್ನು ಚಾರ್ಜ್ ಮಾಡಲು ಸಾಧ್ಯವೇ ಇಲ್ಲ.

ಗುಂಡಣ್ಣ



25 ವರ್ಷಗಳ ಹಿಂದೆ
ಗುರುವಾರ, 10-10-1996

• ರಾವ್ ಬಂಧನ, ಬಿಡುಗಡೆ

ನವದೆಹಲಿ, ಅ.9 (ಯುಎನ್‌ಐ, ಪಿಟಿಐ)– ಸೇಂಟ್ ಕಿಟ್ಸ್ ಫೋರ್ಜರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಮಾಜಿ ಪ್ರಧಾನಿ ಪಿ.ವಿ. ನರಸಿಂಹ ರಾವ್ ಅವರನ್ನು ಇಂದು ರಾತ್ರಿ ಸಿಬಿಐ ಪೊಲೀಸರು ಇಲ್ಲಿ ಬಂಧಿಸಿದರು. ನಂತರ ಜಾಮೀನಿನ ಮೇಲೆ ಅವರನ್ನು ಬಿಡುಗಡೆ ಮಾಡಲಾಯಿತು.

ಸಿಬಿಐ ಸೂಪರಿಂಟೆಂಡೆಂಟ್ ಉಮೇಶ್ ನೇತೃತ್ವದಲ್ಲಿ ಅಧಿಕಾರಿಗಳ ತಂಡ ಈ ಬಂಧನದ ಆದೇಶವನ್ನು ಜಾರಿಗೊಳಿಸಿತು ಎಂದು ಮೂಲಗಳು ತಿಳಿಸಿವೆ.

ವಿಷಯವನ್ನು ದೃಢಪಡಿಸಿದ ರಾವ್ ಅವರ ವಕೀಲ ಐ.ಯು ಖಾನ್, ಮುಖ್ಯ ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟ್ ಕೋರ್ಟ್ ನೀಡಿದ್ದ ವಾರಂಟ್ ಪ್ರಕಾರ ರಾವ್ ಅವರನ್ನು ಅವರ ಮೋತಿಲಾಲ್ ನಿವಾಸದಲ್ಲಿ ಬಂಧಿಸಲಾಯಿತು ಎಂದರು.

50 ವರ್ಷಗಳ ಹಿಂದೆ
ಭಾನುವಾರ, 10-10-1971

• ಗಡಿ ಉಲ್ಲಂಘಿಸಿದರೆ ಪಾಕಿಸ್ತಾನಕ್ಕೆ ತಕ್ಕ ಶಾಸ್ತಿ: ರಾಂ ಎಚ್ಚರಿಕೆ

ಕೈಲಾಸನಗರ, ಅ. 9– ಪಾಕಿಸ್ತಾನದ ಮಿಲಿಟರಿ ಆಡಳಿತಗಾರರು ತಮ್ಮ ಈಗಿನ ಹುಚ್ಚುತನದಲ್ಲಿ ಭಾರತೀಯ ಗಡಿಯನ್ನೇನಾದರೂ ಉಲ್ಲಂಘಿಸಲು ಯತ್ನಿಸಿದರೆ ಭಾರತವು ತನ್ನ ಗಡಿಯನ್ನು ರಕ್ಷಿಸಿಕೊಳ್ಳುವುದು ಮಾತ್ರವಲ್ಲದೆ ಪಾಕಿಸ್ತಾನಿ ಸೈನಿಕರನ್ನು ಅವರ ಪ್ರದೇಶದೊಳಕ್ಕೆ ಹಿಮ್ಮೆಟ್ಟಿಸುವುದೆಂದು ರಕ್ಷಣಾ ಸಚಿವ ಜಗಜೀವನರಾಂ ಇಲ್ಲಿ ಇಂದು ಘೋಷಿಸಿದರು.

ಎ.ಐ.ಸಿ.ಸಿ. ಅಧಿವೇಶನವನ್ನು ಉದ್ದೇಶಿಸಿ ಮಾತನಾಡಿದ ಅವರು, 'ಈ ಅಂಶವನ್ನು ಸ್ಪಷ್ಟಪಡಿಸಿದರಲ್ಲದೆ ಭಾರತಕ್ಕೆ ಯುದ್ಧದ ಬಯಕೆಯಲ್ಲ. ಆದರೆ ಅದರ ಪ್ರಾದೇಶಿಕ ಸಮಗ್ರತೆಯ ತಂಟೆಗೆ ಬರುವ ಯಾವುದೇ ಯತ್ನಕ್ಕೆ ಸೂಕ್ತವಾದ ಉತ್ತರ ದೊರಕದೇ ಹೋಗದು' ಎಂದೂ ಸ್ಪಷ್ಟಪಡಿಸಿದರು.

ದಿನ ಭವಿಷ್ಯ
ಭಾನುವಾರ ಅಕ್ಟೋಬರ್ 10, 2021

ಶ್ರೀ ಪ್ಲವ ನಾಮ ಸಂವತ್ಸರ ದಕ್ಷಿಣಾಯಣ ಶರದೃತು ಆಶ್ವಯುಜ ಮಾಸ ಶುಕ್ಲ ಪಕ್ಷ ಮಳೆ ನಕ್ಷತ್ರ ಹಸ್ತ ಚತುರ್ಥೀ ಗಂ. 6-13 (ಬೆ. 8-45) ಭಾನುವಾರ ನಿತ್ಯ ನಕ್ಷತ್ರ ಅನೂರಾಧ ಗಂ. 32-52 (ರಾ. 7-25) ಆಯುಃ ನಾಮ ಯೋಗ ಗಂ. 35-13 ಭದ್ರೆ ಕರಣ ಗಂ. 6-13 ವಿಷ ಗಂ. 45-53 ಅಮೃತ ಗಂ 8-34 ರಾಹುಕಾಲ: ಮ. ಗಂ. 4-30 ರಿಂದ 6-00 ಗುಳಿಕ ಮ. ಕಾಲ ಗಂ 3-00ರಿಂದ 4-30 ಯಮಗಂಡ ಕಾಲ ಮ. ಗಂ 12-00 ರಿಂದ 1-30 : ಸೂರ್ಯೋದಯ: 6-13 ಸೂರ್ಯಾಸ್ತ: 6-00 ಅದೃಷ್ಟ ಸಂಖ್ಯೆ 5 8

ಮೇಷ: ಅನಾವಶ್ಯಕ ಮಾತುಗಳಿಂದಾಗಿ ನಿಷ್ಠೂರಕ್ಕೊಳಗಾಗುವ ಸಾಧ್ಯತೆ. ಉದ್ಯೋಗಾಕಾಂಕ್ಷಿಗಳಿಗೆ ಉತ್ತಮ ಅವಕಾಶಗಳು ದೊರಕಲಿದೆ. ಉದ್ಯೋಗದಲ್ಲಿರುವವರಿಗೆ ಪದೋನ್ನತಿ ವಾ ಬದಲಾವಣೆ.

ವೃಷಭ: ವಿದ್ಯಾರ್ಥಿಗಳಿಗೆ ಓದಿನಲ್ಲಿ ವಿಶೇಷ ಪ್ರಗತಿ. ಮಾತಿನಿಂದ ಗೌರವ ಪ್ರಾಪ್ತವಾಗುವುದು. ಸರ್ಕಾರದಿಂದಾಗುವ ಕೆಲಸ ಕಾರ್ಯಗಳು ಸುಗಮವಾಗುವವು. ಉದ್ಯೋಗ ನಿಮಿತ್ತ ದೂರ ಪ್ರಯಾಣ.

ಮಿಥುನ: ವೈಯಕ್ತಿಕ ತೊಂದರೆಯಿಂದ ಮುಕ್ತರಾಗುವಿರಿ. ಆರ್ಥಿಕ ಸಮಸ್ಯೆಗಳು ಪರಿಹಾರವಾಗಿ ನೆಮ್ಮದಿ. ಚಿನ್ನಾಭರಣ - ಸ್ಥಿರಾಸ್ತಿ ಖರೀದಿ ಸಾಧ್ಯತೆ. ಉದ್ಯೋಗದಲ್ಲಿ ಪ್ರಗತಿಯನ್ನು ಕಾಣುವಿರಿ.

ಕರ್ಕಾಟಕ: ಇಂದಿನ ಮಟ್ಟಿಗೆ ದೂರದ ಪ್ರಯಾಣಗಳನ್ನು ಮುಂದೂಡುವುದು ಸೂಕ್ತ. ಸಂಗಾತಿಯ ಸಹಕಾರದಿಂದಾಗಿ ಸಾಂಸಾರಿಕ ನೆಮ್ಮದಿ ದೊರಕುವುದು. ವಿವಾಹ ಸಂಬಂಧಗಳು ಕೂಡಿಬರಲಿವೆ.

ಸಿಂಹ: ಆರ್ಥಿಕ ಸಂಪನ್ಮೂಲಗಳ ಅಭಿವೃದ್ಧಿಯಿಂದಾಗಿ ಸಂತೃಪ್ತಿ. ಕುಟುಂಬದ ಹಿರಿಯರ ಮನೋಭಿಲಾಷೆಗಳು ಈಡೇರುವವು. ಸಂಗಾತಿಯ ಆರೋಗ್ಯದಲ್ಲಿ ವ್ಯತ್ಯಯ ಕಂಡುಬರುವ ಸಾಧ್ಯತೆ.

ಕನ್ಯಾ: ಸಾಮಾಜಿಕ ಕಾರ್ಯಕರ್ತರಿಗೆ ಇರಿಸುಮುರಿಸು. ಮನೆಯಲ್ಲಿ ವಸ್ತ್ರಾಭರಣ ಖರೀದಿ ಸಾಧ್ಯತೆ. ಶತ್ರುಬಾಧೆ ಉಲ್ಬಣಗೊಳ್ಳುವ ಸಾಧ್ಯತೆ. ವಿದ್ಯಾಭ್ಯಾಸಕ್ಕಾಗಿ ದೂರಪ್ರಯಾಣ ಸಾಧ್ಯತೆ.

ತುಲಾ: ಅನಾವಶ್ಯಕ ಪ್ರಯಾಣದಿಂದಾಗಿ ಧನ ನಷ್ಟ. ಮನರಂಜನಾ ಕಾರ್ಯಕ್ರಮದಲ್ಲಿ ಭಾಗಿ. ಪ್ರಿಯ ವ್ಯಕ್ತಿಗಳ ಆಗಮನ. ಮಕ್ಕಳ ಶ್ರೇಯೋಭಿವೃದ್ಧಿಯಿಂದಾಗಿ ಮಾನಸಿಕ ತೃಪ್ತಿ.

ವೃಶ್ಚಿಕ: ಅನಾವಶ್ಯಕ ವ್ಯವಹಾರಗಳಲ್ಲಿ ತಲೆ ಹಾಕದಿರುವುದೇ ಉತ್ತಮ. ಸರ್ಕಾರಿ ನೌಕರಿಯಲ್ಲಿರುವವರಿಗೆ ಬಡ್ತಿ. ಹೊಸ ಯೋಜನೆಯನ್ನು ನಿರೂಪಿಸುವಲ್ಲಿ ಯಶಸ್ಸು. ಮನರಂಜನೆಗಾಗಿ ಖರ್ಚು ಸಂಭವ.

ಧನು: ಪರಸ್ಪರ ಭಿನ್ನಾಭಿಪ್ರಾಯಗಳು ಪರಿಹಾರವಾಗಿ ಸುಖದಾಂಪತ್ಯ ಜೀವನಕ್ಕೆ ನಾಂದಿ. ಶುಭ ಸಮಾರಂಭಗಳಲ್ಲಿ ಭಾಗಿ. ಕೆಲಸ ಕಾರ್ಯಗಳಲ್ಲಿ ಆತುರತೆ ಬೇಡ. ವ್ಯವಹಾರದಲ್ಲಿ ಆರ್ಥಿಕ ನಷ್ಟ.

ಮಕರ: ಆರ್ಥಿಕ ವಿಷಯಗಳಲ್ಲಿ ತುಂಬಾ ಎಚ್ಚರಿಕೆ ಅಗತ್ಯ. ಸರ್ಕಾರಿ ನೌಕರರಿಗೆ ಕಾರ್ಯಗಳಲ್ಲಿ ಪ್ರಗತಿ ಉಂಟಾಗುವುದು. ಕುಟುಂಬದಲ್ಲಿ ಸೌಹಾರ್ದತೆ ಮೂಡಿ ಸಂತಸ ಮೂಡುವುದು.

ಕುಂಭ: ವೈಯಕ್ತಿಕ ಜೀವನದಲ್ಲಿ ಅಭಿವೃದ್ಧಿ ಕಂಡುಬರುವುದು. ಸಾಮಾಜಿಕ ಚಿಂತನೆಗಳಿಂದ ಗೌರವಾದರಗಳನ್ನು ಹೊಂದುವಿರಿ. ಕೃಷಿ ಕ್ಷೇತ್ರದಲ್ಲಿ ಧನ ಧಾನ್ಯಾಭಿವೃದ್ಧಿ. ವೃತ್ತಿಯಲ್ಲಿನ ಸಮಸ್ಯೆಗಳಿಗೆ ಪರಿಹಾರ.


ಮೀನ: ಹೊಸ ಸಂಬಂಧಿಗಳಿಂದ ಹೊಸ ಯೋಜನೆಗಳಿಗೆ ಉತ್ಸಾಹ ಮೂಡುವುದು. ಶುಭಕಾರ್ಯಗಳ ಸಂಕಲ್ಪ ಈಡೇರಿ ಸಂತಸ ಮೂಡುವುದು. ಅವಸರದ ನಿರ್ಧಾರಗಳು ಸೂಕ್ತವಲ್ಲ.

ನಿಮ್ಮ ಜನ್ಮದಿನ 10-ಅಕ್ಟೋಬರ್ ಇಂದು ಅತ್ಯಂತ ಶುಭದಾಯಕವಾಗಿದ್ದು, ಈಗಾಗಲೇ ಹಿನ್ನಡೆ ಕಂಡಿರುವ ವ್ಯವಹಾರದಲ್ಲಿ ಪ್ರಗತಿಯ ಹೊಸ ಆಶಾಕಿರಣ ಮೂಡಿಬರಲಿದೆ. ಸರ್ಕಾರಿ ನೌಕರಿಯಲ್ಲಿರುವವರಿಗೆ ಬಡ್ತಿಯೊಂದಿಗೆ ವರ್ಗಾವಣೆಯ ಸಾಧ್ಯತೆ ಕಂಡುಬರುತ್ತಿದೆ. ಆರೋಗ್ಯ ಭಾಗ್ಯ ನಿಮ್ಮದಾಗಲಿದೆ.

ಪದಬಂಧ 4744
– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಈತ ಶಾಸನಗಳನ್ನು ಮಾಡುವವನು (3)
2.ಪಾರುವಿನ ಮೇಲ್ವಿಚಾರಣೆಯಿದು (4)
4.ಮನುಷ್ಯನಿಗೆ ಸಂಬಂಧಪಟ್ಟದ್ದು! (4)
6.ಕೊನೆಗೆ ಪದ ಇಟ್ಟರೆ ಐಶ್ವರ್ಯ ಕಾಣುತ್ತದೆಯಲ್ಲಾ! (3)
7.ಕನಸಲ್ಲಿ ತೆಗೆದ ಗಲೀಜು! (2)
9.ಈತ ಪಾರಂಗತ (3)
11.ಉರಗದ ಎದೆಯಿಲ್ಲಿ ಉಲ್ಟಾ ಕಾಣುತ್ತಿದೆ (2)
13.ಪ್ರತಿಕೂಲವಾದುದು ಇಲ್ಲಿದೆ (3)
14.ಕನ್ನಡಿಗನ ಚಾಳೀಸು (4)
16.ಒಂದು ಬಗೆಯ ನಯವಾದ ಬಟ್ಟೆ (4)
17.ಪಣ ಹೂಡಿ ನಡೆಸಿದ ಸಂಚಾರ (3)

ಮೇಲಿಂದ ಕೆಳಕ್ಕೆ
1.ಉಷ್ಣದ ಪ್ರಮಾಣವನ್ನು ಕಂಡು ಹಿಡಿಯುವ ಸಾಧನ (5)
2.ಕ್ರೈಸ್ತ ಗುರು ಇಲ್ಲಿದ್ದಾರೆ (2)
3.ಇತರರಿಗೆ ಉಪಕಾರವನ್ನು ಮಾಡುವುದು (5)
5.ಈಕೆ ವಿದೇಶದವಳು (3)
8.ಜೊತೆಯಲ್ಲಿ ಆಲೋಚಿಸುವವನು (5)
10.ಅತಿಯಾದ ಆತುರ (3)
12.ಕೆಲಸ ಮಾಡಲು ಬೇಕಾದ ಸಲಕರಣೆ (5)
15.ಬಾಯಿಂದ ಸುರಿವ ಲಾಲಾರಸವಿದು (2)



4743ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಜಕಾತಿ 6.ಜವಾಬುದಾರಿ 7.ಶಾಬ್ದಿಕ 10.ಸಮಯೋಚಿತ 15.ಫಜೀತಿ 16.ಮಾರ್ಗದರ್ಶಕ 17.ಕದನ

ಮೇಲಿಂದ ಕೆಳಕ್ಕೆ: 1.ಜಯಶಾಲಿ 2.ತಿರುಕ 3.ಅಂಜಲಿ 4.ಅಂಬುಧಿ 5.ತುರಿಮಣೆ 8.ಗಮಕ 9.ಉಚಿತ 11.ಅನುಮಾನ 12.ಮತಿಹೀನ 13.ಸುಂದರಿ 14.ವಿಕಚ 15.ಫಲಕ

ಸುಡೊಕು 5130

2			1				8	
						5		9
8		3			9		1	
3		9	5		1			
	6						4	
5		1	6		8			2
	7			3	5	2		4
4		5						
	8		4	6		3		1

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5129 ಸುಡೊಕು

4	7	5	3	9	8	2	6	1
1	2	9	6	4	7	5	8	3
3	6	8	5	1	2	4	9	7
9	5	2	7	8	1	3	4	6
6	4	1	9	5	3	8	7	2
8	3	7	2	6	4	1	5	9
7	1	6	4	3	5	9	2	8
5	9	3	8	2	6	7	1	4
2	8	4	1	7	9	6	3	5

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಬದುಕಿನ ಅನುಭವಗಳ ನೆನಪುಗಳನ್ನು ಬಿಚ್ಚಿಟ್ಟ ಸಾಹಿತಿ ಚಂದ್ರಶೇಖರ ಕಂಬಾರ

‘ದನ ಕಾಯುತ್ತ ಬಯಲಾಟ ಮಾಡುತ್ತಿದ್ದೆ’

ಬೆಂಗಳೂರು: ‘ನನಗೆ ಕಂಬಾರಿಕೆ ಹತ್ತಲಿಲ್ಲ. ಹೀಗಾಗಿ, ದನ ಕಾಯಲು ಹಚ್ಚಿದರು. ಆಗ ಚೇಷ್ಟೆ ಮಾಡಿಕೊಂಡು ಬಯಲಾಟ ಅನುಕರಣೆ ಮಾಡುತ್ತಿದ್ದೆ. ದೊಡ್ಡವನಾದ ಮೇಲೆ ಅಣ್ಣ ಶಾಲೆಗೆ ಹೋಗಲು ಒತ್ತಾಯಿಸಿದ. ಕೈಕಾಲು ಕಟ್ಟಿ ಶಾಲೆಗೆ ಎಸೆದು ಬಂದ...’

ಶನಿವಾರ ನಡೆದ‘ಪ್ರಜಾವಾಣಿ’ ಸೆಲೆಬ್ರಿಟಿ ಲೈವ್ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಸಾಹಿತಿ ಮತ್ತು ಕೇಂದ್ರ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಚಂದ್ರಶೇಖರ ಕಂಬಾರ ಅವರು, ತಮ್ಮ ಬಾಲ್ಯದ ಅನುಭವಗಳು, ಸಾಹಿತ್ಯ ಕೃಷಿ, ಕನ್ನಡ ಭಾಷೆಯ ಉಳಿವು, ಜಾನಪದ ಪರಂಪರೆಯ ಬೆಳವಣಿಗೆಗಳ ಬಗ್ಗೆ ಮನಬಿಚ್ಚಿ ಮಾತನಾಡಿದರು.


‘ಪ್ರಾಥಮಿಕ ಶಾಲೆಯಲ್ಲಿ ದೇಶಪಾಂಡೆ ಮಾಸ್ತರ್ ಎನ್ನುವವರು ಅಕ್ಷರ ಕಲಿಸಿದರು. ಶುಲ್ಕ ಪಾವತಿಸಲು ಸಾಧ್ಯವಾಗದಿದ್ದರಿಂದ ಪ್ರೌಢಶಾಲೆಗೆ ಸಾವಳಗಿ ಮಠಕ್ಕೆ ಸೇರಿದೆ. ಈ ಮಠದಲ್ಲಿದ್ದುಕೊಂಡು ಎಸ್ಸೆಸ್ಸೆಲ್ಸಿ ಪಾಸಾದೆ. ಸಾವಳಗಿ ಮಠ ಹಿಂದೂ–ಮುಸ್ಲಿಂ ಮೈತ್ರಿಗೆ ಸಾಕ್ಷಿಯಾಗಿದೆ. ಬಂದೇ ನವಾಜರು ಈ ಮಠಕ್ಕೆ ಭೇಟಿ ನೀಡಿದಾಗ ಸ್ವಾಮೀಜಿಗಳ ಜತೆ 13 ದಿನ ಧರ್ಮಗಳ ಬಗ್ಗೆ ಗಂಭೀರ ಚರ್ಚೆ ನಡೆಯುತ್ತದೆ. ಅಂತಿಮವಾಗಿ ಧರ್ಮಗಳು ಒಂದೇ ಎನ್ನುವ ತೀರ್ಮಾನಕ್ಕೆ ಬರುತ್ತಾರೆ. ಅಂದಿನಿಂದ ಸಾವಳಗಿ ಮಠದಲ್ಲಿ 13 ದಿನ ಸ್ವಾಮೀಜಿಗಳು ಹಸಿರು ಬಟ್ಟೆ ಧರಿಸುತ್ತಾರೆ. ಅವರು ಖಾವಿ ಬಟ್ಟೆ ಧರಿಸಿಕೊಳ್ಳುತ್ತಾರೆ. ಸಾವಳಗಿ ಮಠದ 360 ಶಾಖಾ ಮಠಗಳಲ್ಲೂ ಈ ಪದ್ಧತಿ ಅನುಸರಿಸಲಾಗುತ್ತದೆ’ ಎಂದು ವಿವರಿಸಿದರು.

‘ನಮ್ಮೂರು ಘಟಪ್ರಭಾ ನದಿ ದಂಡೆಯ ಮೇಲಿದೆ. ಪ್ರವಾಹ ಬಂದರೆ ಮನೆತನಕ ಬರುತ್ತಿತ್ತು. ನಮ್ಮ ಪ್ರದೇಶ ಆಗ ಕೊಲೆಗಳಿಗೆ ಹೆಸರುವಾಸಿಯಾಗಿತ್ತು. ಕೊಲೆಗಡುಕರಿಗೆ ಮಹಾಪೂರ ಬಂದರೆ ಅದೊಂದು ಸೀಸನ್. ಹೆಣಗಳು ನದಿಯಲ್ಲಿ ತೇಲಿ ಬರುತ್ತಿದ್ದವು. ಆಗ ಇಡೀ ಊರಲ್ಲಿ ಹೆಣಗಳ ಬಗ್ಗೆ ಕಟ್ಟುಕಥೆಗಳು ಹುಟ್ಟಿಕೊಳ್ಳುತ್ತಿದ್ದವು. ಅದೊಂದು ರೀತಿಯಲ್ಲಿ ಸೃಜನಶೀಲತೆಗೆ ಸಾಕ್ಷಿಯಾಗುತ್ತಿತ್ತು. ನಮ್ಮ ಊರು ಜನ ಧರ್ಮಿಷ್ಟರು. ರುದ್ರಯ್ಯ ಸ್ವಾಮಿ ಎನ್ನುವವರ ಮೂಲಕ ಸಂಸ್ಕಾರ ಮಾಡಿ ಹೂಳುತ್ತಿದ್ದರು’ ಎಂದು ತಮ್ಮ ಊರಿನ ಅನುಭವಗಳನ್ನು ಹಂಚಿಕೊಂಡರು.

‘ನಾನು ದನ ಕಾಯುವ ದಿನಗಳಿಂದಲೂ ಜಾನಪದ ಸಾಹಿತ್ಯ, ಸಂಗೀತ ನನ್ನ ದೇಹದಲ್ಲಿತ್ತು. ದನಗಳನ್ನು ಕಾಯುತ್ತ 3–4 ಮಂದಿ ಸೇರಿ ಬಯಲಾಟ ಅನುಕರಣೆ ಮಾಡುತ್ತಿದ್ದೆವು. ಕಾಲೇಜು ಶಿಕ್ಷಣಕ್ಕಾಗಿ ಬೆಳಗಾವಿಗೆ ಹೋದೆ. ಅಲ್ಲಿನ ನಾಗನೂರು ಮಠದಲ್ಲಿದ್ದುಕೊಂಡು ಓದು ಮುಂದುವರಿಯಿತು. ಕಾಲೇಜಿನಲ್ಲಿದ್ದಾಗಲೂ ಬರೆಯುತ್ತಿದ್ದೆ’ ಎಂದು ಹೇಳಿದರು.

‘ಸೃಜನಶೀಲ ಲೇಖಕನಿಗೆ ಬಾಲ್ಯ ಬಹಳ ಮುಖ್ಯ. ಆದರೆ, ಇಂದಿನ ಮಕ್ಕಳ ಬಗ್ಗೆ ನನಗೆ ಕರುಣೆ ಬರುತ್ತದೆ. ನಮಗೆ ಇಂದು ಇಂಗ್ಲಿಷ್ ಮಾದರಿಯಾಗಿದೆ. ಇಂಗ್ಲಿಷ್ ಮೂಲಕವೇ ಶಿಕ್ಷಣ ನೀಡುತ್ತಿದ್ದೇವೆ. ನಮ್ಮತನ ಎನ್ನುವುದು ಯಾವುದು ಇಲ್ಲ. ಸರ್ಕಾರಗಳು ನಮ್ಮನ್ನು ಇಂಗ್ಲಿಷಮಯವನ್ನಾಗಿ ಮಾಡಲು ಪಣ ತೊಟ್ಟರೆ ಏನು ಮಾಡಲು ಸಾಧ್ಯ’ ಎಂದು ಪ್ರಶ್ನಿಸಿದರು.

ಪ್ರಜಾವಾಣಿ ಸೆಲೆಬ್ರಿಟಿ LIVE



ಚಂದ್ರಶೇಖರ ಕಂಬಾರ

ಕಂಬಾರರು ಪ್ರತಿಪಾದಿಸಿದ ಅಂಶಗಳು

- ಇಂಗ್ಲಿಷ್ ಭಾಷೆಯೇ ಮಾದರಿಯಾಗುತ್ತಿರುವ ಈ ಸಂದರ್ಭದಲ್ಲಿ ಶಿಕ್ಷಣ, ಆಡಳಿತ, ಕಲಿಕೆ, ವ್ಯಾಪಾರ ಸೇರಿದಂತೆ ಎಲ್ಲ ಕ್ಷೇತ್ರಗಳಲ್ಲಿ ಕನ್ನಡ ಬಳಸಬೇಕು. ಆಗ ಮಾತ್ರ ಕನ್ನಡಕ್ಕೆ ಭವಿಷ್ಯ ಇದೆ.
- ಮೌಖಿಕ ಪರಂಪರೆಯಿಂದ ಜಾನಪದ ಬದುಕಿದೆ. ಅದಕ್ಕೆ ಅಕ್ಷರ ತಾಕಿದರೆ ನಾಶವಾಗುತ್ತದೆ. ಬರವಣಿಗೆಯಿಂದ ಜಾನಪದ ಬೆಳೆಯುವುದಿಲ್ಲ. ಜಾನಪದ ಉಳಿವಿಗೆ ಹೊಸ ಮಾರ್ಗವನ್ನು ಹುಡುಕಬೇಕಾಗಿದೆ.
- ಅಸಮಾಧಾನಗಳನ್ನು ಹೊರಹಾಕಲು ನಾನು ಬರೆಯುತ್ತೇನೆ. ಬೇರೆಯವರನ್ನು ಅನುಕರಣೆ ಮಾಡಿಲ್ಲ. ನಮ್ಮತನವನ್ನೇ ಅನುಕರಣೆ ಮಾಡಿದ್ದೇನೆ.
- ಬಾಯಿ ಪಾಠ ಮಾಡುವ ಯಂತ್ರಗಳನ್ನು ಸೃಷ್ಟಿಸಬೇಕಾಗಿಲ್ಲ. ಸೃಜನಶೀಲತೆ ಸೃಷ್ಟಿಸಬೇಕು. ಇಂಗ್ಲಿಷ್ ಬೇಕು.

‘ಸಂಗ್ಯಾ ಬಾಳ್ಯಾ’ ನಿಷೇಧಿಸಿದ್ದ ಬ್ರಿಟಿಷ್ ಸರ್ಕಾರ

ಕೇವಲ ಒಂದು ಸಂಭಾಷಣೆಗಾಗಿ ‘ಸಂಗ್ಯಾ ಬಾಳ್ಯಾ’ ನಾಟಕವನ್ನು ನಿಷೇಧಿಸಿದ್ದ ಪ್ರಸಂಗವನ್ನು ಕಂಬಾರರು ಬಿಚ್ಚಿಟ್ಟರು.

ಈ ನಾಟಕದಲ್ಲಿ ಸಂಗ್ಯಾನ ಕೊಲೆಯಾಗುತ್ತದೆ. ಆಗ ವಿರೂಪಾಕ್ಷಿ ಸಹೋದರರು ‘ಈ ಕೆಟ್ಟ ಬ್ರಿಟಿಷ್ ಸರ್ಕಾರ ನಮಗೆ ಯಾವ ಶಿಕ್ಷೆ ಕೊಡುತ್ತದೆ’ ಎಂದು ಕೇಳುತ್ತಾರೆ. ಈ ಸಂಭಾಷಣೆಗಾಗಿ ಬ್ರಿಟಿಷರು ನಾಟಕ ನಿಷೇಧಿಸಿದ್ದರು. ಆದರೆ, ಜನರು ಸವಾಲಾಗಿ ಸ್ವೀಕರಿಸಿದರು. ಯಾವುದೇ ಬಯಲಾಟ ಮಾಡಿದರೂ ರಾಕ್ಷಸರ ಹಾಡುಗಳನ್ನು ಬ್ರಿಟಿಷರ ಧಾಟಿಯಲ್ಲಿ ಹಾಡುತ್ತಿದ್ದರು ಎಂದು ನೆನಪಿಸಿಕೊಂಡರು.

‘ಭಾರತಕ್ಕೆ ಬ್ರಿಟಿಷರು ಬಂದ ಮೇಲೆ ನಮ್ಮ ಪರಂಪರೆಯಿಂದ ದೂರವಿರಿಸಿ, ಕೀಳರಿಮೆ ಸೃಷ್ಟಿಸಿದರು. 33 ಕೋಟಿ ದೇವರುಗಳು, 64 ಸಾವಿರ ಜಾತಿಗಳು, 1020ಕ್ಕೂ ಹೆಚ್ಚು ಭಾಷೆಗಳನ್ನು ಹೊಂದಿರುವ ವೈವಿಧ್ಯಮಯ ದೇಶ ಇನ್ನೊಂದಿಲ್ಲ. ಇಂತಹ ಸಂಸ್ಕೃತಿ, ಪರಂಪರೆಯನ್ನು ಹೇಗೆ ಬಿಡಲು ಸಾಧ್ಯ. ಆದರೆ, ಬ್ರಿಟಿಷರು ನಮಗೆ ಕನಸುಗಳು ಇಲ್ಲದ ಹಾಗೆಯೇ ಮಾಡಿದರು’ ಎಂದು ವಿವರಿಸಿದರು.

ಕೋವಿಡ್: ಸಕ್ರಿಯ ಪ್ರಕರಣ 10,395ಕ್ಕೆ ಇಳಿಕೆ

ಪ್ರಜಾವಾಣಿ ವಾರ್ತೆ


ಬೆಂಗಳೂರು: ಕೋವಿಡ್ ಸಕ್ರಿಯ ಪ್ರಕರಣಗಳ ಸಂಖ್ಯೆ ಇಳಿಕೆ ಕಂಡಿದ್ದು, 10,395 ಮಂದಿ ಆಸ್ಪತ್ರೆ ಸೇರಿದಂತೆ ವಿವಿಧೆಡೆ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ.


ಒಂದು ದಿನದ ಅವಧಿಯಲ್ಲಿ 1.20 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. ಹೊಸದಾಗಿ 451 ಮಂದಿ ಕೋವಿಡ್ ಪೀಡಿತರಾಗಿದ್ದಾರೆ. ಸೋಂಕು ದೃಢ ಪ್ರಮಾಣವು ಶೇ 0.37 ರಷ್ಟು ವರದಿಯಾಗಿದೆ. 8 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಎರಡಂಕಿ, 14 ಜಿಲ್ಲೆಗಳಲ್ಲಿ ಒಂದಂಕಿಯಲ್ಲಿದೆ. ಬಾಗಲಕೋಟೆ, ಹಾವೇರಿ, ಕಲಬುರ್ಗಿ, ಕೊಪ್ಪಳ, ರಾಯಚೂರು, ವಿಜಯಪುರ ಹಾಗೂ ಯಾದಗಿರಿಯಲ್ಲಿ ಹೊಸ ಪ್ರಕರಣ ವರದಿಯಾಗಿಲ್ಲ.

ಬೆಂಗಳೂರಿನಲ್ಲಿ 187 ಮಂದಿ ಸೋಂಕಿತರಾಗಿದ್ದಾರೆ. ಉಳಿದ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು 50ರ ಗಡಿಯೊಳಗೆ ಇವೆ. ಸೋಂಕಿತರಾದವರ ಒಟ್ಟು ಸಂಖ್ಯೆ 29.80 ಲಕ್ಷ ದಾಟಿದೆ.

ಸೋಂಕಿತರಲ್ಲಿ 1,455 ಮಂದಿ ಚೇತರಿಸಿಕೊಂಡಿದ್ದಾರೆ. ಗುಣಮುಖರಾದವರ ಒಟ್ಟು ಸಂಖ್ಯೆ 29.32 ಲಕ್ಷ ದಾಟಿದೆ.

ಕೋವಿಡ್ ಪೀಡಿತರಲ್ಲಿ 9 ಮಂದಿ ಮೃತಪಟ್ಟಿರುವುದು ದೃಢಪಟ್ಟಿದೆ. 6 ಜಿಲ್ಲೆಗಳಲ್ಲಿ ಹೊಸದಾಗಿ ಮರಣ ಪ್ರಕರಣಗಳು ವರದಿಯಾಗಿವೆ. ಬೆಂಗಳೂರಿನಲ್ಲಿ ಮೂವರು, ತುಮಕೂರಿನಲ್ಲಿ ಇಬ್ಬರು, ದಾವಣಗೆರೆ, ಧಾರವಾಡ, ಹಾಸನ ಹಾಗೂ ಉತ್ತರ ಕನ್ನಡದಲ್ಲಿ ತಲಾ ಒಬ್ಬರು ಸಾವಿಗೀಡಾಗಿದ್ದಾರೆ. ಮರಣ ಪ್ರಮಾಣ ದರವು ಶೇ 1.99 ರಷ್ಟು ವರದಿಯಾಗಿದೆ. ಈವರೆಗೆ ಸಾವಿಗೀಡಾದವರ ಒಟ್ಟು ಸಂಖ್ಯೆ 37,875ಕ್ಕೆ ಏರಿಕೆಯಾಗಿದೆ.





ವಸತಿ ಶಾಲೆ ಕಟ್ಟಡ ಉದ್ಘಾಟನಾ ಸಮಾರಂಭ ರದ್ದು

ಸಚಿವರನ್ನು ವಾಪಸ್ ಕಳಿಸಿದ ಚಿಂಚನಸೂರ

ಪ್ರಜಾವಾಣಿ ವಾರ್ತೆ

ಯಾದಗಿರಿ: ಗುರುಮಠಕಲ್ ವಿಧಾನಸಭಾ ಕ್ಷೇತ್ರದಲ್ಲಿರುವ ತಾಲ್ಲೂಕಿನ ಬಂದಳ್ಳಿ ಗ್ರಾಮದ ಏಕಲವ್ಯ ಮಾದರಿ ವಸತಿ ಶಾಲೆ ಕಟ್ಟಡ ಉದ್ಘಾಟನಾ ಸಮಾರಂಭಕ್ಕೆ ತಮಗೆ ಆಹ್ವಾನ ನೀಡಿಲ್ಲ ಎಂಬ ಕಾರಣಕ್ಕೆ ಅಂಬಿಗರ ಚೌಡಯ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷ ಬಾಬುರಾವ ಚಿಂಚನಸೂರ, ಕಾರ್ಯಕ್ರಮಕ್ಕೆ ತೆರಳುತ್ತಿದ್ದ ಸಚಿವ ಶ್ರೀರಾಮುಲು ಅವರನ್ನು ತಡೆದು ಆಕ್ರೋಶ ವ್ಯಕ್ತಪಡಿಸಿದರು.

‘ಸಿಂದಗಿ ಉಪ ಚುನಾವಣೆ ಪ್ರಚಾರದಲ್ಲಿ ತೊಡಗಿಸಿಕೊಂಡಿದ್ದೆ. ನನ್ನ ಗಮನಕ್ಕೆ ತಾರದೇ ಸಮಾರಂಭ ಆಯೋಜಿಸಲಾಗಿದೆ. ನಾನು ಸಚಿವನಾಗಿದ್ದಾಗ ಈ ಶಾಲೆ ಮಂಜೂರು ಮಾಡಿಸಿಕೊಂಡು ಬಂದಿದ್ದೇನೆ. ಈಗಲೂ ಸಂಪುಟ ದರ್ಜೆ ಸ್ಥಾನಮಾನ ಹೊಂದಿದ್ದೇನೆ. ಇಂಥ ಕಾರ್ಯಕ್ರಮಕ್ಕೆ ನನಗೆ ಆಹ್ವಾನ ನೀಡದಿದ್ದರೆ ಹೇಗೆ? ನನ್ನ ಮರ್ಯಾದೆ ಹೋಗಿದ್ದು, ಈ ಕಾರ್ಯಕ್ರಮಕ್ಕೆ ನೀವು ಹೋಗಕೂಡದು’ ಎಂದು ಚಿಂಚನಸೂರ ಪಟ್ಟು ಹಿಡಿದರು.

ಬಂದಳ್ಳಿ ಗ್ರಾಮದವರೆಗೆ ಬಂದಿದ್ದ ಸಚಿವ ಶ್ರೀರಾಮುಲು ಅವರು ಅಲ್ಲಿಂದ ಒಂದು ಕಿ.ಮೀ. ಅಂತರದಲ್ಲಿದ್ದ ವಸತಿ ಶಾಲೆಯ ಕಟ್ಟಡಕ್ಕೂ ತೆರಳದೇ ಕಾರ್ಯಕ್ರಮ ರದ್ದುಗೊಳಿಸಿ ಯಾದಗಿರಿಗೆ ವಾಪಸ್ಸಾದರು.

ವಿದ್ಯಾರ್ಥಿಗಳು ಶನಿವಾರ ಬೆಳಿಗ್ಗೆಯಿಂದಲೇ ಸಚಿವರಿಗಾಗಿ ಕಾದು ಕುಳಿತಿದ್ದರು. ಡೊಳ್ಳು ಕುಣಿತ ತಂಡದವರನ್ನೂ ಕರೆಸಲಾಗಿತ್ತು. ಕಾರ್ಯಕ್ರಮ ರದ್ದಾಗಿದ್ದರಿಂದ ಅವರೆಲ್ಲ ನಿರಾಸೆಗೊಂಡರು.

ಗುರುಮಠಕಲ್ ಕ್ಷೇತ್ರದ ಮಾಜಿ ಶಾಸಕರೂ ಆಗಿರುವ ಚಿಂಚನಸೂರ, ಕಳೆದ ಚುನಾವಣೆಯಲ್ಲಿ ಪರಾಭವಗೊಂಡಿದ್ದು ಕಾಂಗ್ರೆಸ್ ತೊರೆದು ಬಿಜೆಪಿ ಸೇರಿದ್ದಾರೆ.

ಕಾಲಿಗೆ ಬೀಳಲು ಮುಂದಾದ ಅಧಿಕಾರಿ: ‘ಜಿಲ್ಲಾ ಪರಿಶಿಷ್ಟ ಪಂಗಡಗಳ ಕಲ್ಯಾಣಾಧಿಕಾರಿ ಎಸ್.ಎಸ್. ಚನ್ನಬಸವ ಅವರು ಚಿಂಚನಸೂರ ಕಾಲಿಗೆ ಬೀಳಲು ಮುಂದಾಗುತ್ತಿದ್ದಂತೆ ಅವರನ್ನು ಅವಾಚ್ಯವಾಗಿ ಬೈದು, ದೂರ ಸರಿಯುವಂತೆ ಹೇಳಿದರು’ ಎಂದು ಸ್ಥಳದಲ್ಲಿದ್ದವರು ತಿಳಿಸಿದರು.

ಶ್ರೀರಾಮುಲು ಅಭಿಮಾನಿಗಳಿಂದ ಪ್ರತಿಭಟನೆ: ಕಾರ್ಯಕ್ರಮ ರದ್ದಾಗಿದ್ದು ತಿಳಿಯುತ್ತಿದ್ದಂತೆ ಸಚಿವ ಶ್ರೀರಾಮುಲು ಅವರ ಅಭಿಮಾನಿಗಳು ಬಾಬುರಾವ ಚಿಂಚನಸೂರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿ ಯಾದಗಿರಿಯಲ್ಲಿ ಪ್ರತಿಭಟನೆ ಮಾಡಿದರು.



ಯಾದಗಿರಿ ತಾಲ್ಲೂಕಿನ ಬಂದಳ್ಳಿ ಗ್ರಾಮದಲ್ಲಿ ಬಾಬುರಾವ ಚಿಂಚನಸೂರ ಅವರು ಸಚಿವ ಶ್ರೀರಾಮುಲು ಅವರನ್ನು ತಡೆದು ಆಕ್ರೋಶ ವ್ಯಕ್ತಪಡಿಸಿದರು

ಮೃಗಾಲಯದ 239 ನೌಕರರಿಗೆ ತಲಾ ₹ 10 ಸಾವಿರ ನೀಡಿದ ಸುಧಾಮೂರ್ತಿ

ಪ್ರಜಾವಾಣಿ ವಾರ್ತೆ

ಮೈಸೂರು: ಇನ್ಫೊಸಿಸ್ ಫೌಂಡೇಷನ್ ಅಧ್ಯಕ್ಷೆ ಸುಧಾಮೂರ್ತಿ ಅವರು ಇಲ್ಲಿನ ಚಾಮರಾಜೇಂದ್ರ ಮೃಗಾಲಯದ ದಿನಗೂಲಿ ನೌಕರರಿಗೆ ತಲಾ ₹ 10 ಸಾವಿರ ನೀಡಿದ್ದಾರೆ.

‘ಮೃಗಾಲಯದಲ್ಲಿ ಒಟ್ಟು 239 ದಿನಗೂಲಿ ನೌಕರರಿದ್ದು, ಕೋವಿಡ್–19ನಿಂದ ಸಂಕಷ್ಟಕ್ಕೆ ಒಳಗಾಗಿರುವುದರಿಂದ ಹಣಕಾಸು ನೆರವು ನೀಡಿದ್ದಾರೆ’ ಎಂದು ಮೃಗಾಲಯದ ಕಾರ್ಯನಿರ್ವಾಹಕ ನಿರ್ದೇಶಕ ಅಜಿತ್ ಕುಲಕರ್ಣಿ ತಿಳಿಸಿದ್ದಾರೆ.

ಸುಧಾಮೂರ್ತಿ ಅವರು ಈಗಾಗಲೇ ಪ್ರಾಣಿಗಳ ಪೋಷಣೆ ಹಾಗೂ ನಿರ್ವಹಣೆಗಾಗಿ ಒಟ್ಟು ₹ 60 ಲಕ್ಷ ದೇಣಿಗೆ ನೀಡಿದ್ದಾರೆ. ಗೊರಿಲ್ಲಾಗಳಿಗೆ ಮೃಗಾಲಯದಲ್ಲಿ ಆವರಣ ನಿರ್ಮಿಸಿಕೊಡುತ್ತಿದ್ದಾರೆ.

ರಜೆ ದಿನವೂ ಮುಕ್ತ: ಅ.12 ಹಾಗೂ 19ರಂದು ಮೃಗಾಲಯಕ್ಕೆ ನಿಗದಿತ ರಜೆ ಇದ್ದರೂ ದಸರೆ ಕಾರಣ ಅಂದು ಪ್ರವಾಸಿಗರ ವೀಕ್ಷಣೆಗೆ ಅನುವು ಮಾಡಿಕೊಡಲಾಗುವುದು ಎಂದು ಅಜಿತ್ ಕುಲಕರ್ಣಿ ಹೇಳಿದ್ದಾರೆ.

ಪಿ.ಯು: 10ರಿಂದ 17ರವರೆಗೆ ರಜೆ

ಬೆಂಗಳೂರು: ಪದವಿ ಪೂರ್ವ ಕಾಲೇಜುಗಳಿಗೆ ದಸರಾ ರಜಾ ಅವಧಿಯನ್ನು ಇದೇ 10ರಿಂದ 17ರವರೆಗೆ ನಿಗದಿಪಡಿಸಿ ಪರಿಷ್ಕತ ಸುತ್ತೋಲೆ ಹೊರಡಿಸಲಾಗಿದೆ. 18ರಿಂದ ತರಗತಿಗಳು ಮತ್ತೆ ಆರಂಭವಾಗಲಿದೆ.ಈ ಮೊದಲು ಇದೇ 13ರಿಂದ 20ರವರೆಗೆ ರಜೆ ಘೋಷಿಸಲಾಗಿತ್ತು.

ಪ್ರಾಧ್ಯಾಪಕ ಹುದ್ದೆಗೆ ಬಡ್ತಿ: 12ರಿಂದ ಸಂದರ್ಶನ

ಬೆಂಗಳೂರು: ಕಾಲೇಜು ಶಿಕ್ಷಣ ಇಲಾಖೆಯ ಇತಿಹಾಸದಲ್ಲಿ ಮೊದಲ ಬಾರಿಗೆ ಸರ್ಕಾರಿ ಪದವಿ ಕಾಲೇಜುಗಳ ಸಹ ಪ್ರಾಧ್ಯಾಪಕರಿಗೆ ಪ್ರಾಧ್ಯಾಪಕ ಹುದ್ದೆ ನೀಡಲು ಸಂದರ್ಶನಕ್ಕೆ ದಿನ ನಿಗದಿಪಡಿಸಲಾಗಿದೆ.

ಇದೇ 12ರಂದು ಎಲೆಕ್ಟ್ರಾನಿಕ್ಸ್, ಭೂಗೋಳಶಾಸ್ತ್ರ, ಕಂಪ್ಯೂಟರ್ ಸೈನ್ಸ್, ರೇಷ್ಮೆಕೃಷಿ, ಗಣಿತ, ಗೃಹ ವಿಜ್ಞಾನ, 13ರಂದು ಜೀವ ವಿಜ್ಞಾನ, ಹಿಂದಿ, ಇಂಗ್ಲಿಷ್, 21ರಂದು ಇತಿಹಾಸ, ರಾಜ್ಯಶಾಸ್ತ್ರ, 22ರಂದು ಸಮಾಜವಿಜ್ಞಾನ, ಸಸ್ಯವಿಜ್ಞಾನ, 25ರಂದು ವಾಣಿಜ್ಯ, 26 ಭೌತವಿಜ್ಞಾನ, ರಸಾಯನ ವಿಜ್ಞಾನ, 27ರಂದು ಅರ್ಥಶಾಸ್ತ್ರ, 28ರಂದು ಕನ್ನಡ ಹೀಗೆ ವಿಷಯವಾರು ಸಹ ಪ್ರಾಧ್ಯಾಪಕರಿಗೆ ಕೇಂದ್ರ ಕಚೇರಿಯಲ್ಲಿ ಸಂದರ್ಶನ ನಡೆಯಲಿದೆ.

ಯುಜಿಸಿ ವೇತನ ಶ್ರೇಣಿ (1986) ಜಾರಿಗೆ ಬಂದ ನಂತರ ಬಡ್ತಿ ನೀಡಲು ಅರ್ಹ ಅಧ್ಯಾಪಕರ ಪಟ್ಟಿಯನ್ನು 1:2 ಅನುಪಾತದಲ್ಲಿ ಕಾಲೇಜು ಶಿಕ್ಷಣ ಇಲಾಖೆ ಸಿದ್ಧಪಡಿಸಿದೆ. ಯುಜಿಸಿ ವೃತ್ತಿ ಪದೋನ್ನತಿಯ ನಿಯಮಗಳಡಿ ಈ ಬಡ್ತಿ ನೀಡಲಾಗುತ್ತದೆ.

‘ಪದೋನ್ನತಿ ನೀಡಲು ಸಂದರ್ಶನ ದಿನಾಂಕವನ್ನು ಇಲಾಖೆ ನಿಗದಿಪಡಿಸಿರುವುದರಿಂದ ದಶಕಗಳ ಹಿಂದಿನ ನಮ್ಮ ಕನಸು ನನಸಾಗುತ್ತಿದೆ’ ಎಂದು ಕರ್ನಾಟಕ ಸರ್ಕಾರಿ ಕಾಲೇಜು ಅಧ್ಯಾಪಕರ ಸಂಘ (ಕೆಜಿಸಿಟಿಎ) ಅಧ್ಯಕ್ಷ ಟಿ.ಎಂ. ಮಂಜುನಾಥ ತಿಳಿಸಿದರು.

ಪ್ರಧಾನಿ ಮೋದಿಗೆ ಕೇಜ್ರಿವಾಲ್ ಪತ್ರ

ನವದೆಹಲಿ (ಪಿಟಿಐ): ರಾಷ್ಟ್ರ ರಾಜಧಾನಿಯು ವಿದ್ಯುತ್ ಬಿಕ್ಕಟ್ಟನ್ನು ಎದುರಿಸುವ ಸಂಭವ ಇದೆ. ಇಂತಹ ಪರಿಸ್ಥಿತಿ ನಿವಾರಣೆಗೆ ತಮ್ಮ ಸರ್ಕಾರ ಸಾಕಷ್ಟು ಕ್ರಮಗಳನ್ನು ಕೈಗೊಳ್ಳುತ್ತಿದೆ. ಆದರೆ ಮತ್ತಷ್ಟು ನೆರವಿನ ಅಗತ್ಯವಿದೆ ಎಂದು ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಶನಿವಾರ ಹೇಳಿದ್ದಾರೆ.

ಈ ಕುರಿತು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪತ್ರ ಬರೆದಿರುವ ಅವರು, ನಗರಕ್ಕೆ ವಿದ್ಯುತ್ ಪೂರೈಸುವ ವಿದ್ಯುತ್ ಘಟಕಗಳಿಗೆ ಸಮರ್ಪಕವಾಗಿ ಕಲ್ಲಿದ್ದಲು ಮತ್ತು ಅನಿಲ ಪೂರೈಕೆ ಮಾಡಲು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದ್ದಾರೆ.

ಸಂಯುಕ್ತ ಕಿಸಾನ್ ಮೋರ್ಚಾ ಆರೋಪ; ಅ. 11ರಿಂದ 26ರವರೆಗೆ ಸರಣಿ ಕಾರ್ಯಕ್ರಮ ಆಯೋಜನೆ

‘ಲಖಿಂಪುರ ಘಟನೆ ಭಯೋತ್ಪಾದನಾ ದಾಳಿ’

ನವದೆಹಲಿ (ಪಿಟಿಐ): ಕೇಂದ್ರ ಸಚಿವ ಅಜಯ್ ಮಿಶ್ರಾ ಮತ್ತು ಅವರ ಪುತ್ರನನ್ನು ಬಂಧಿಸುವಂತೆ ಸಂಯುಕ್ತ ಕಿಸಾನ್ ಮೋರ್ಚಾ (ಎಸ್‌ಕೆಎಂ) ಶನಿವಾರ ಆಗ್ರಹಿಸಿದೆ. ಲಖಿಂಪುರ-ಖೇರಿ ಘಟನೆಯು ‘ಪೂರ್ವನಿಯೋಜಿತ ಕೃತ್ಯ’ ಹಾಗೂ ‘ಭಯೋತ್ಪಾದನಾ ದಾಳಿ’ ಎಂದು ಆರೋಪಿಸಿದೆ.

ತಮ್ಮ ಬೇಡಿಕೆ ಈಡೇರದಿದ್ದರೆ ಅಕ್ಟೋಬರ್ 11ರೊಳಗೆ ಲಖಿಂಪುರ ಖೇರಿಯಿಂದ ‘ಶಹೀದ್ ಕಿಸಾನ್ ಯಾತ್ರೆ’ ಆರಂಭಿಸುವುದಾಗಿ ಎಚ್ಚರಿಕೆ ನೀಡಿದೆ. ಅಂದು ಮೃತ ರೈತರ ಅಸ್ಥಿಯೊಂದಿಗೆ ಮೆರವಣಿಗೆ ನಡೆಸಲು ನಿರ್ಧರಿಸಿದೆ.

ಅಕ್ಟೋಬರ್ 12ರಂದು ಪ್ರಾರ್ಥನಾ ಸಭೆ ನಡೆಸುವಂತೆ ರೈತ ಸಂಘಟನೆಗಳಿಗೆ ಕರೆ ನೀಡಿದ್ದು, ಅಂದು ಸಂಜೆ ಮನೆಯ ಹೊರಗಡೆ ಮೇಣದಬತ್ತಿ ಹಚ್ಚುವಂತೆ ಕೋರಿದೆ. ಲಖಿಂಪುರ ಖೇರಿಯ ಟಿಕೋನಾದಲ್ಲಿ ಮುಖ್ಯ ಪ್ರಾರ್ಥನಾ ಸಭೆ ಜರುಗಲಿದೆ. ಘಟನೆಯಲ್ಲಿ ಮೃತರಾದ ನಾಲ್ವರು ರೈತರು ಹಾಗೂ ಒಬ್ಬ ಪತ್ರಕರ್ತರಿಗೆ ನಮನ ಸಲ್ಲಿಸಲಾಗುತ್ತದೆ.

ಹಿಂಸಾಚಾರ ಖಂಡಿಸಿ ಅಕ್ಟೋಬರ್ 15ರಂದು ದಸರಾ ಸಂದರ್ಭದಲ್ಲಿ ಪ್ರಧಾನಿ ನರೇಂದ್ರ ಮೋದಿ ಹಾಗೂ ಗೃಹಸಚಿವ ಅಮಿತ್ ಶಾ ಅವರ ಪ್ರತಿಕೃತಿಯದನ್ನು ದಹಿಸಲಾಗುವುದು ಎಂದು ಸಂಘಟನೆ ತಿಳಿಸಿದೆ.

ಅಕ್ಟೋಬರ್ 18ರಂದು ಬೆಳಿಗ್ಗೆ 10ರಿಂದ ಸಂಜೆ 4 ಗಂಟೆವರೆಗೆ ದೇಶದಾದ್ಯಂತ ‘ರೈಲು ತಡೆ’ ನಡೆಸಲು ಕರೆ ಕೊಟ್ಟಿದೆ. ಹಾಗೆಯೇ ಅಕ್ಟೋಬರ್ 26ರಂದು ಲಖನೌನಲ್ಲಿ ಮಹಾಪಂಚಾಯತ್ ನಡೆಸಲಾಗುತ್ತಿದೆ.

ತಪ್ಪಿತಸ್ಥರನ್ನು ರಕ್ಷಿಸುತ್ತಿರುವ ಹಾಗೂ ಸಂಚು ರೂಪಿಸಿರುವ ಅಜಯ್ ಮಿಶ್ರಾ ಅವರನ್ನು ಸಂಪುಟದಿಂದ ಕೈಬಿಡಬೇಕು ಎಂದು ಯೋಗೇಂದ್ರ ಯಾದವ್ ಅವರು ಸುದ್ದಿಗೋಷ್ಠಿಯಲ್ಲಿ ಆಗ್ರಹಿಸಿದ್ದಾರೆ.


ದೆಹಲಿಯಲ್ಲಿ ಶನಿವಾರ ಯುವ ಕಾಂಗ್ರೆಸ್ ಸದಸ್ಯರು ಪ್ರತಿಭಟನೆ ನಡೆಸಿದರು

ಬಿಜೆಪಿ ಕಾರ್ಯಕರ್ತರಾಗಲೀ ಅಥವಾ ರೈತರಾಗಲೀ, ಜೀವಹಾನಿಯಾಗಿರುವುದಕ್ಕೆ ದುಃಖವಾಗಿದೆ. ಇದು ದುರದೃಷ್ಟಕರ
ಯೋಗೇಂದ್ರ ಯಾದವ್, ಎಸ್‌ಕೆಎಂ ನಾಯಕ

ಅಪರಾಧಿಗಳಿಗೆ ಪುಷ್ಪಗುಚ್ಛ ನೀಡಲಾಗುತ್ತಿದೆ. ರೈತರನ್ನು ಹತ್ತಿಕ್ಕಿದ ರೀತಿಯಲ್ಲೇ, ಈಗ ಕಾನೂನುಗಳನ್ನು ಹತ್ತಿಕ್ಕಲು ಸಿದ್ಧತೆಗಳು ನಡೆಯುತ್ತಿವೆ
ಅಖಿಲೇಶ್ ಯಾದವ್, ಎಸ್‌ಪಿ ಮುಖ್ಯಸ್ಥ

‘ಪ್ರತಿಭಟನೆ ನಡೆಸುವ ರೈತರ ವಿರುದ್ಧ ಸರ್ಕಾರವು ಹಿಂಸೆಯ ವಿಧಾನವನ್ನು ಅಳವಡಿಸಿಕೊಂಡಿದೆ. ಆದರೆ ನಾವು ಹಿಂಸೆಯ ಹಾದಿಯನ್ನು ಹಿಡಿಯುವುದಿಲ್ಲ’ ಎಂದು ರೈತ ಮುಖಂಡ ಪ್ರತಿಪಾದಿಸಿದ್ದಾರೆ.

‘ಈ ಘಟನೆಯು ಇದ್ದಕ್ಕಿದ್ದಂತೆ ಜರುಗಿದ್ದಲ್ಲ. ಸೆಪ್ಟೆಂಬರ್ 25ರಂದು ಲಖಿಂಪುರ ಖೇರಿಯಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ಕೇಂದ್ರ ಸಚಿವ ಅಜಯ್ ಮಿಶ್ರಾ ಕೆಲವು ಟೀಕೆಗಳನ್ನು ಮಾಡಿದರು. ಇದು ಅಕ್ಟೋಬರ್ 3ರಂದು ಏನಾಯಿತು ಎಂಬುದರ ಹಿನ್ನೆಲೆಯನ್ನು ವಿವರಿಸುತ್ತದೆ. ಈ ವಿಡಿಯೊ ಫೇಸ್‌ಬುಕ್‌ನಲ್ಲಿದೆ. ಈ ಘಟನೆಯು ಭಯೋತ್ಪಾದಕ ದಾಳಿ ಮತ್ತು ಪೂರ್ವ ನಿಯೋಜಿತ ಪಿತೂರಿಯ ಭಾಗವಾಗಿದೆ’ ಎಂದು ರೈತ ನಾಯಕ ದರ್ಶನ್ ಪಾಲ್ ಆರೋಪಿಸಿದರು.

ಕೇಂದ್ರ ಸಚಿವರ ಪುತ್ರ ಆಶಿಶ್ ಮಿಶ್ರಾ ಅವರು ಕಾರಿನಲ್ಲಿದ್ದರು ಎಂದು ರೈತ ಸಂಘಟನೆ ಆರೋಪಿಸಿದೆ. ಆದರೆ ಸಚಿವರು ಇದನ್ನು ನಿರಾಕರಿಸಿದ್ದಾರೆ. ಅವರು ಬೇರೊಂದು ಕಾರ್ಯಕ್ರಮದಲ್ಲಿದ್ದರು ಎಂದು ತಿಳಿಸುವ ಸೂಕ್ತ ಪುರಾವೆಗಳನ್ನು ಒದಗಿಸುವುದಾಗಿ ಸಚಿವರು ಹೇಳಿದ್ದಾರೆ.

ಸಿಧು ಧರಣಿ ಅಂತ್ಯ: ಸಚಿವರ ಪುತ್ರ ವಿಚಾರಣೆ ಹಾಜರಾದ ಹಿನ್ನೆಲೆಯಲ್ಲಿ, ಪಂಜಾಬ್ ಕಾಂಗ್ರೆಸ್ ಘಟಕದ ಮುಖ್ಯಸ್ಥ ನವಜೋತ್ ಸಿಂಗ್ ಸಿಧು ಅವರು ತಮ್ಮ ಮೌನ ಪ್ರತಿಭಟನೆಯನ್ನು ಅಂತ್ಯಗೊಳಿಸಿದ್ದಾರೆ.

ಶುಕ್ರವಾರ ಸಂಜೆ 6.15ರಿಂದ ಸಿಧು ಅವರು ಸ್ಥಳೀಯ ಪತ್ರಕರ್ತ ರಾಮ್ ಕಶ್ಯಪ್ ಅವರ ಮನೆಯ ಹೊರಗೆ ಮೌನ ಧರಣಿ ಆರಂಭಿಸಿದ್ದರು. ಶನಿವಾರ ಬೆಳಿಗ್ಗೆ 11.30ರ ಸುಮಾರಿಗೆ ಅಂತ್ಯಗೊಳಿಸಿದರು. ಅಕ್ಟೋಬರ್ 3ರಂದು ನಡೆದ ಘಟನೆಯಲ್ಲಿ ಕಶ್ಯಪ್ ಅವರೂ ಸಹ ಮೃತಪಟ್ಟಿದ್ದರು.

ಆಶಿಶ್ ಮಿಶ್ರಾ ಬಂಧನಕ್ಕೆ ಕಾಂಗ್ರೆಸ್ ಆಗ್ರಹ

ಹಿಂಸಾಚಾರ ಪ್ರಕರಣಕ್ಕೆ ಸಂಬಂಧಿಸಿದಂತೆ ಗೃಹ ಸಚಿವ ಅಜಯ್ ಮಿಶ್ರಾ ರಾಜೀನಾಮೆ ಮತ್ತು ಅವರ ಪುತ್ರ ಆಶಿಶ್ ಅವರನ್ನು ಬಂಧಿಸುವಂತೆ ಒತ್ತಾಯಿಸಿ ಭಾರತೀಯ ಯುವ ಕಾಂಗ್ರೆಸ್ ಸದಸ್ಯರು ಶನಿವಾರ ದೆಹಲಿಯಲ್ಲಿ ಪ್ರತಿಭಟನೆ ನಡೆಸಿದರು.

ಯುವಕಾಂಗ್ರೆಸ್ ರಾಷ್ಟ್ರೀಯ ಅಧ್ಯಕ್ಷ ಶ್ರೀನಿವಾಸ್ ಬಿ.ವಿ. ನೇತೃತ್ವದಲ್ಲಿ ಪ್ರತಿಭಟನಾಕಾರರು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ನಿವಾಸ ಕೃಷ್ಣ ಮೆನನ್ ಮಾರ್ಗದಲ್ಲಿ ಮೆರವಣಿಗೆ ಹೊರಟರು. ಆದರೆ ಪೊಲೀಸರು ತಡೆದು, ಪ್ರತಿಭಟನಾ ಸ್ಥಳದಲ್ಲಿ ಬ್ಯಾರಿಕೇಡ್‌ಗಳನ್ನು ಅಳವಡಿಸಿದರು.

ಲಖಿಂಪುರ್ ಖೇರಿಯಲ್ಲಿ ನಡೆದ ಹಿಂಸಾತ್ಮಕ ಘರ್ಷಣೆಯಲ್ಲಿ ಮೃತಪಟ್ಟ ರೈತರಿಗೆ ನ್ಯಾಯ ದೊರಕಿಸಲು ಹಾಗೂ ಸಚಿವರ ಪುತ್ರನನ್ನು ತಕ್ಷಣ ಬಂಧಿಸುವಂತೆ ಪ್ರತಿಭಟನಕಾರರು ಒತ್ತಾಯಿಸಿದರು.

ಕಾಂಗ್ರೆಸ್ ಸದಸ್ಯರು ಸುನೇಹ್ರಿ ಬಾಗ್ ರಸ್ತೆಯಲ್ಲಿ ಜಮಾಯಿಸಿದರು. ಅವರಿಗೆ ಮುಂದೆ ಸಾಗಲು ಅನುಮತಿ ನೀಡಲು ಪೊಲೀಸರು ನಿರಾಕರಿಸಿದರು.

ಶ್ರೀನಿವಾಸ್ ಬಿ.ವಿ. ಸೇರಿದಂತೆ ಐವರು ಪ್ರತಿಭಟನಕಾರರನ್ನು ಬಂಧಿಸಿ, ಮಂದಿರ ಮಾರ್ಗವಾಗಿ ಪೊಲೀಸ್ ಠಾಣೆಗೆ ಕರೆದೊಯ್ಯಲಾಯಿತು. ಪ್ರಕರಣ ಕೂಡ ದಾಖಲಾಗಿದೆ.

ಅಪರಾಧಿಗಳಲ್ಲ: ಟಿಕಾಯತ್

ಉತ್ತರ ಪ್ರದೇಶದ ಲಖಿಂಪುರ ಖೇರಿಯಲ್ಲಿ ಬಿಜೆಪಿ ಕಾರ್ಯಕರ್ತರನ್ನು ಹತ್ಯೆ ಮಾಡಿದವರನ್ನು ತಾವು ಅಪರಾಧಿಗಳೆಂದು ಪರಿಗಣಿಸುವುದಿಲ್ಲ ಎಂದು ಭಾರತೀಯ ಕಿಸಾನ್ ಯೂನಿಯನ್ ನಾಯಕ ರಾಕೇಶ್ ಟಿಕಾಯತ್ ಶನಿವಾರ ಹೇಳಿದ್ದಾರೆ.

ಅಕ್ಟೋಬರ್ 3ರಂದು ಲಖಿಂಪುರ ಖೇರಿಯ ಟಿಕೊನಿಯಾ-ಬನ್ಬೀರ್‌ಪುರ ರಸ್ತೆಯಲ್ಲಿ ಉತ್ತರ ಪ್ರದೇಶ ಉಪಮುಖ್ಯಮಂತ್ರಿ ಕೇಶವ ಪ್ರಸಾದ್ ಮೌರ್ಯ ಅವರ ಭೇಟಿಯ ವಿರುದ್ಧ ಪ್ರತಿಭಟನೆ ನಡೆಸುತ್ತಿದ್ದ ಪ್ರತಿಭಟನನಿರತ ರೈತರ ಗುಂಪಿನ ಮೇಲೆ ಎಸ್‌ಯುವಿ ನುಗ್ಗಿಸಲಾಗಿತ್ತು. ನಾಲ್ವರು ರೈತರು ಮೃತಪಟ್ಟಿದ್ದರು. ಈ ಬಳಿಕ ಹಿಂಸಾಚಾರ ನಡೆದಿತ್ತು. ರೈತರು, ಬಿಜೆಪಿ ಮುಖಂಡರು, ಪತ್ರಕರ್ತ ಸೇರಿ ಒಟ್ಟು ಎಂಟು ಮಂದಿ ಮೃತಪಟ್ಟಿದ್ದರು.

‘ಲಖಿಂಪುರ ಖೇರಿಯಲ್ಲಿ ನಾಲ್ವರು ರೈತರನ್ನು ಹತ್ಯೆಗೈದ ನಂತರ ಬಿಜೆಪಿ ಕಾರ್ಯಕರ್ತರ ಹತ್ಯೆ ನಡೆದಿರುವುದು ಕ್ರಿಯೆಗೆ ಪ್ರತಿಕ್ರಿಯೆಯಷ್ಟೇ. ಹತ್ಯೆಯಲ್ಲಿ ಭಾಗಿಯಾದವರನ್ನು ನಾನು ಅಪರಾಧಿಗಳೆಂದು ಪರಿಗಣಿಸುವುದಿಲ್ಲ’ ಎಂದು ಅವರು ಸ್ಪಷ್ಟಪಡಿಸಿದ್ದಾರೆ.

ಪ್ರಧಾನಿ ಕ್ಷೇತ್ರದಿಂದ ಕಾಂಗ್ರೆಸ್ ‘ಕಿಸಾನ್ ನ್ಯಾಯ’ ಸಮಾವೇಶ

ಲಖನೌ: ಲಖಿಂಪುರ-ಖೇರಿಯಲ್ಲಿ ನಡೆದ ಹಿಂಸಾಚಾರದಿಂದಾಗಿ ಬಿಜೆಪಿ ವಿರುದ್ಧ ಎದ್ದಿರುವ ಆಕ್ರೋಶದ ಲಾಭ ಪಡೆಯಲು ಕಾಂಗ್ರೆಸ್ ಕಾರ್ಯತಂತ್ರ ರೂಪಿಸಿದೆ.

ಮುಂಬರಲಿರುವ ಉತ್ತರ ಪ್ರದೇಶ ವಿಧಾನಸಭಾ ಚುನಾವಣೆಯ ಪ್ರಚಾರ ಸಮಾವೇಶವನ್ನು ಪ್ರಧಾನಿ ನರೇಂದ್ರ ಮೋದಿ ಅವರ ಲೋಕಸಭಾ ಕ್ಷೇತ್ರ ವಾದವಾರಾಣಸಿಯಿಂದಲೇಭಾನುವಾರ ದಿಂದ (ಅ.10) ಆರಂಭಿಸಲು ಕಾಂಗ್ರೆಸ್ ನಿರ್ಧರಿಸಿದೆ. ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಈ ಸಮಾವೇಶದಲ್ಲಿ ಪಾಲ್ಗೊಳ್ಳಲಿದ್ದಾರೆ.

ಈ ರ‍್ಯಾಲಿಗೆ ಮೊದಲು ‘ಪ್ರತಿಜ್ಞಾ ರ‍್ಯಾಲಿ’ ಎಂದು ಹೆಸರಿಡಲಾಗಿತ್ತು. ಆದರೆ ಲಖಿಂಪುರ-ಖೇರಿ ಹಿಂಸಾಚಾರದಲ್ಲಿ ರೈತರೂ ಸೇರಿ ಎಂಟು ಜನರು ಮೃತಪಟ್ಟಿದ್ದಾರೆ.

ಇದರೊಂದಿಗೆ, ಮೂರು ಕೃಷಿ ಕಾಯ್ದೆಗಳನ್ನು ವಿರೋಧಿಸಿ ರೈತರು ಪ್ರತಿಭಟನೆ ನಡೆಸುತ್ತಿರುವುದರಿಂದ ಈ ಸಮಾವೇಶವನ್ನು ‘ಕಿಸಾನ್ ನ್ಯಾಯ’ ಎಂದು ಕರೆಯಲಾಗಿದೆ.

‘ಬಿಜೆಪಿ ನೇತೃತ್ವದ ಸರ್ಕಾರವು ಇತರ ಕ್ಷೇತ್ರಗಳಲ್ಲಿ ವಿಫಲವಾಗಿರುವುದರ ಜೊತೆಗೆ ಅದರ ನೀತಿಗಳು ಹೇಗೆ ರೈತ ವಿರೋಧಿ ಆಗಿವೆ ಎಂಬುದನ್ನು ನಾವು ಬಯಲಿಗೆಳೆಯುತ್ತೇವೆ’ ಎಂದು ಉತ್ತರ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಅಜಯ್ ಕುಮಾರ್ ಲಾಲೂ ಶನಿವಾರ ವಾರಾಣಸಿಯಲ್ಲಿ ಹೇಳಿದ್ದಾರೆ.

ಪ್ರಿಯಾಂಕಾ ಗಾಂಧಿ ಅವರನ್ನು ಅತಿಥಿ ಗೃಹದಲ್ಲಿ ಬಂಧಿಸಿದ್ದ ವೇಳೆ ಅವರು ಅತಿಥಿ ಗೃಹದ ಕಸ ಗುಡಿಸಿದ್ದ ಕುರಿತು ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ವ್ಯಂಗ್ಯವಾಡಿದ್ದರು. ಅದಕ್ಕೂ ತಾವು ಉತ್ತರಿಸುವುದಾಗಿ ಅವರು ಹೇಳಿದ್ದಾರೆ.

ಮುಂಬರುವ ದಿನಗಳಲ್ಲಿ, ರಾಜ್ಯದ ಹಲವೆಡೆ ಇಂಥದೇ ಸಮಾವೇಶಗಳನ್ನು ನಡೆಸುವುದಾಗಿ ಕಾಂಗ್ರೆಸ್ ಹೇಳಿದೆ.

ಕಾಂಗ್ರೆಸ್‌ಗೆ ವರವಾದೀತೇ ಪೊರಕೆ?

ಸಿಎಂ ಯೋಗಿ ವ್ಯಂಗ್ಯ; ಮತ್ತೆ ಕಸಗುಡಿಸಿ ತಿರುಗೇಟು ನೀಡಿದ ಪ್ರಿಯಾಂಕಾ

• ಸಂಜಯ್ ಪಾಂಡೆ

ಲಖನೌ: ಉತ್ತರಪ್ರದೇಶದಲ್ಲಿ ಇದೀಗ ಪೊರಕೆಯದೇ ಮಾತು. ನೆಲವನ್ನು ಸ್ವಚ್ಛಗೊಳಿಸುವ ಪೊರಕೆಯು, ಚುನಾವಣೆಯಲ್ಲಿ ಮತಗಳನ್ನೂ ಬಾಚಿಕೊಳ್ಳಲೂ ಬಳಕೆಯಾದೀತೇ? ಹೌದು. ಸದ್ಯಕ್ಕೆ ಯಾರಿಗಿಲ್ಲದಿದ್ದರೂ ಕಾಂಗ್ರೆಸ್ ಪಕ್ಷಕ್ಕಂತೂ ಅಂಥದೊಂದು ಹಸನಾದ ಅವಕಾಶ ಒದಗಿ ಬಂದಿದೆ.

ಕಸಗುಡಿಸುವ ಕೆಲಸದ ವಿಷಯವಾಗಿ, ಕಾಂಗ್ರೆಸ್‌ನ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಮತ್ತು ಉತ್ತರಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರ ನಡುವೆ ನಡಿದಿರುವ ವಾಗ್ಯುದ್ಧವನ್ನು ಗಮನಿಸಿದರೆ, ಈ ಪೊರಕೆಯು ರಾಜ್ಯದಲ್ಲಿ ಮುಂಬರಲಿರುವ ವಿಧಾನಸಭಾ ಚುನಾವಣೆಯ ಫಲಿತಾಂಶದ ಮುನ್ಸೂಚನೆಯನ್ನೂ ನೀಡುವಂತಿದೆ.

ಉತ್ತರ ಪ್ರದೇಶದಲ್ಲಿ, ಮುಂದಿನ ವರ್ಷ ಮಾರ್ಚ್‌ನಲ್ಲಿ ಚುನಾವಣೆ ನಡೆಯಲಿದೆ.

ಲಖಿಂಪುರ ಖೇರಿ ಹಿಂಸಾಚಾರ ಪ್ರಕರಣದಲ್ಲಿ ಮೃತಪಟ್ಟ ರೈತರ ಕುಟುಂಬದವರನ್ನು ಭೇಟಿಯಾಗಲೆಂದು ಹೊರಟಿದ್ದ ಪ್ರಿಯಾಂಕಾ ಅವರನ್ನು ಬಂಧಿಸಿ, ಕಳೆದ ಭಾನುವಾರ ರಾತ್ರಿ ಸೀತಾಪುರ ಜಿಲ್ಲೆಯ ಅತಿಥಿಗೃಹದಲ್ಲಿ ಇರಿಸಲಾಗಿತ್ತು. ಆಗ ಅವರು, ತಮ್ಮ ಪೊರಕೆ ಹಿಡಿದು ತಮ್ಮನ್ನುಇರಿಸಲಾಗಿದ್ದ ಕೊಠಡಿಯನ್ನು ಸ್ವಚ್ಛಗೊಳಿಸಿದ್ದರು. ಅವರು ಕಸಗುಡಿಸಿದ ಚಿತ್ರವು ಸಾಮಾಜಿಕ ಜಾಲತಾಣಗಳಲ್ಲಿ ಸಾಕಷ್ಟು ವೈರಲ್ ಆಗಿತ್ತು.

ಈ ಮಧ್ಯೆ ಗುರುವಾರ ಖಾಸಗಿ ಸುದ್ದಿವಾಹಿನಿಯೊಂದಕ್ಕೆ ಸಂದರ್ಶನ ನೀಡಿದ್ದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್, ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿ, ‘ಜನತೆ ಅವರನ್ನು ಆ ಕೆಲಸಕ್ಕೇ ಯೋಗ್ಯರೆಂದು ಪರಿಗಣಿಸಿದ್ದಾರೆ, ಅದಕ್ಕೇ ಲಾಯಕ್ಕಾಗಿ ಮಾಡಿದ್ದಾರೆ’ ಎಂದು ಹೇಳಿಕೆ ನೀಡಿದ್ದರು.



ಕಾಂಗ್ರೆಸ್ ಪಕ್ಷದ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಅವರನ್ನು ದುರ್ಗಾ ಮಾತೆಗೆ ಹೋಲಿಸಿದ ಭಿತ್ತಿಪತ್ರಗಳನ್ನು ವಾರಾಣಸಿಯಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಶನಿವಾರ ಪ್ರದರ್ಶಿಸಿದರು

ಆದಿತ್ಯನಾಥ್ ಅವರ ಈ ಹೇಳಿಕೆಯನ್ನೇ ಅಸ್ತ್ರವಾಗಿಸಿಕೊಂಡ ಪ್ರಿಯಾಂಕಾ, ಈ ಅವಕಾಶವನ್ನು ಬಳಸಿಕೊಳ್ಳಲು ತಡ ಮಾಡಲಿಲ್ಲ. ಅವರ ಹೇಳಿಕೆಗೆ ಪ್ರತಿಕ್ರಿಯೆಯಾಗಿ, ಪರಿಶಿಷ್ಟ ಸಮುದಾಯದವರು ವಾಸಿಸುವ ಲವಕುಶ ನಗರಕ್ಕೆ ಶುಕ್ರವಾರವೇ ಭೇಟಿ ನೀಡಿ, ಮತ್ತೆ ಪೊರಕೆ ಹಿಡಿದರು. ‘ಕಸಗುಡಿಸುವುದು ಸರಳತೆ ಹಾಗೂ ಆತ್ಮಾಭಿಮಾನದ ಸಂಕೇತ’ ಎಂದೂ ತಿರುಗೇಟು ನೀಡಿದರು. ಲವಕುಶ ನಗರದಲ್ಲಿ ಅವರು ಕಸಗುಡಿಸಿದ ಚಿತ್ರಗಳು ಮತ್ತೊಮ್ಮೆ ಸಾಮಾಜಿಕ ಮಾಧ್ಯಮಗಳಲ್ಲಿ ವೈರಲ್ ಆದವು.

ಪ್ರಿಯಾಂಕಾ ಅವರು ಸ್ಥಳೀಯರೊಂದಿಗೆ ಬೆರೆತು, ಮಹರ್ಷಿ ವಾಲ್ಮೀಕಿ ದೇವಸ್ಥಾನದ ಆವರಣವನ್ನು ಸ್ವಚ್ಛಗೊಳಿಸಿದ್ದಾರೆ. ದೇವಸ್ಥಾನದಲ್ಲಿ ಪೂಜೆಯನ್ನೂ ಸಲ್ಲಿಸಿದ್ದಾರೆ.

‘ಕಸಗುಡಿಸುವುದಕ್ಕೇ ಲಾಯಕ್ಕು’ ಎಂಬ ಹೇಳಿಕೆ ಬಗ್ಗೆ ಸ್ಥಳೀಯರೊಂದಿಗೆ ಮಾತನಾಡಿದ್ದ ಪ್ರಿಯಾಂಕಾ, ‘ಹೀಗೆ ಹೇಳುವ ಮೂಲಕ ಅವರು ನನ್ನನ್ನು ಅವಮಾನಿಸಿಲ್ಲ. ಬದಲಾಗಿ, ಸಚ್ಛತಾ ಕೆಲಸ ಮಾಡುವ ಕೋಟ್ಯಂತರ ದಲಿತ ಸೋದರ-ಸೋದರಿಯರಾದ ನಿಮ್ಮನ್ನು ಅವಮಾನಿಸಿದ್ದಾರೆ’ ಎಂದು ಹೇಳಿದ್ದಾರೆ. ‘ಪೊರಕೆ ಹಿಡಿಯುವುದು, ಕಸಗುಡಿಸುವುದು ಆತ್ಮಾಭಿಮಾನದ ಸಂಕೇತ ಎಂಬುದನ್ನು ಯೋಗೀಜಿ ತಿಳಿದುಕೊಳ್ಳಲಿ’ ಎಂದು ಕುಟುಕಿದ್ದಾರೆ.

‘ಇಂಥ ಮಾತು ಆಡುವ ಮೂಲಕ, ದಲಿತರ ಬಗೆಗೆ ತಮ್ಮ ಮನಸ್ಥಿತಿ ಎಂಥದು ಎಂಬುದನ್ನು ಉತ್ತರಪ್ರದೇಶದ ಮುಖ್ಯಮಂತ್ರಿ ರುಜುವಾತು ಮಾಡಿದ್ದಾರೆ. ದೇಶವು, ಕೋಟ್ಯಂತರ ಮಹಿಳೆಯರ ಹಾಗೂ ದಲಿತರ ಅವಮಾನವನ್ನು ಸಹಿಸದು‘ ಎಂದು ಶುಕ್ರವಾರ ಟ್ವೀಟ್ ಮಾಡಿದ್ದ ಪ್ರಿಯಾಂಕಾ, ಪಕ್ಷದ ಎಲ್ಲ ಜಿಲ್ಲಾ ಸಮಿತಿಗಳ ವತಿಯಿಂದ ರಾಜ್ಯದ ಎಲ್ಲ ವಾಲ್ಮೀಕಿ ದೇವಾಲಯಗಳ ಆವರಣದಲ್ಲೂ ಶನಿವಾರ ಸ್ವಚ್ಛತಾ ಕೆಲಸ ನಡೆಯಲಿದೆ ಟ್ವೀಟ್ ಮಾಡಿದ್ದರು. ಜೊತೆಗೆ ಲವಕುಶ ನಗರದಲ್ಲಿ ಸ್ವಚ್ಛತಾ ಕೆಲಸದ ವಿಡಿಯೊವನ್ನೂ ಟ್ಯಾಗ್ ಮಾಡಿದ್ದರು.

‘ಮಹಾತ್ಮ ಗಾಂಧೀಜಿ ಕೂಡ ಕಸಗುಡಿಸುತ್ತಿದ್ದರು. ಈ ದೇಶದ ಮಹಿಳೆಯರು ನಿತ್ಯವೂ ಈ ಕೆಲಸ ಮಾಡುತ್ತಾರೆ’ ಎಂದು ಉತ್ತರ ಪ್ರದೇಶದ ಕಾಂಗ್ರೆಸ್ ಅಧ್ಯಕ್ಷ ಅಜಯ ಕುಮಾರ್ ಲಾಲೂ ಶನಿವಾರ ಪ್ರತಿಕ್ರಿಯಿಸಿದ್ದಾರೆ. ‘ಮುಖ್ಯಮಂತ್ರಿ ಆದಿತ್ಯನಾಥ್ ಅವರ ಹೇಳಿಕೆಯು, ಅವರ ‘ದಲಿತ ವಿರೋಧಿ’ ಹಾಗೂ ‘ಮಹಿಳಾ ವಿರೋಧಿ’ ಮನಸ್ಥಿತಿಯನ್ನು ತೋರಿಸುತ್ತದೆ‘ ಎಂದು ಅವರು ಟೀಕಿಸಿದ್ದಾರೆ.

‘ಕಸಗುಡಿಸುವುದು ಸ್ವಾಭಿಮಾನದ ಕೆಲಸ. ನಿಮ್ಮ ಆಲೋಚನೆ ಬದಲಿಸಿಕೊಳ್ಳಿ’ ಎಂದು ಕಾಂಗ್ರೆಸ್ ಟ್ವೀಟ್ ಮಾಡಿದೆ.

ತಮ್ಮ ಪಕ್ಷವು ಯಾವಾಗಲೂ ಪರಿಶಿಷ್ಟ ಸಮುದಾಯದವರೊಂದಿಗೆ ಇದೆ ಎಂಬ ಸಂದೇಶವನ್ನು ಪ್ರಿಯಾಂಕಾ ರವಾನಿಸಿದ್ದಾರೆ ಎಂಬುದು ಕಾಂಗ್ರೆಸ್ ಮುಖಂಡರ ಅಭಿಪ್ರಾಯವಾಗಿದೆ.

ಮುಖ್ಯಾಂಶಗಳು

- ಸ್ವಚ್ಛತಾ ಕಾರ್ಮಿಕರಿಗೆ ಮಾಡಿದ ಅವಮಾನ: ಪ್ರಿಯಾಂಕಾ
- ದಲಿತ-ಮಹಿಳಾ ವಿರೋಧಿ ಮನಸ್ಥಿತಿ: ಟೀಕೆ
- ಆಲೋಚನೆ ಬದಲಿಸಿಕೊಳ್ಳಿ: ಕಾಂಗ್ರೆಸ್

ಐಎಸ್‌ಪಿಎಗೆ ನಾಳೆ ಚಾಲನೆ

ನವದೆಹಲಿ (ಪಿಟಿಐ): ಭಾರತೀಯ ಬಾಹ್ಯಾಕಾಶ ಕ್ಷೇತ್ರದ ಧ್ವನಿಯಾಗಲು ಬಯಸುತ್ತಿರುವ ಇಂಡಿಯನ್ ಸ್ಪೇಸ್‌ಅಸೋಸಿಯೇಷನ್‌ಗೆ (ಐಎಸ್‌ಪಿಎ) ಇದೇ 11 ರಂದು ಪ್ರಧಾನಿ ನರೇಂದ್ರ ಮೋದಿ ಅವರು ಚಾಲನೆ ನೀಡಲಿದ್ದಾರೆ.

ಇದೇ ಸಂದರ್ಭ ಅವರು ಬಾಹ್ಯಾಕಾಶ ಉದ್ಯಮದ ಪ್ರತಿನಿಧಿಗಳೊಂದಿಗೆ ಸಂವಾದ ನಡೆಸಲಿದ್ದಾರೆ ಎಂದು ಪ್ರಧಾನಿ ಕಚೇರಿ ಶನಿವಾರ ತಿಳಿಸಿದೆ.

‘ಆತ್ಮನಿರ್ಭರ ಭಾರತ’ದ ದೃಷ್ಟಿಕೋನವನ್ನು ಪ್ರತಿಧ್ವನಿಸುತ್ತಾ, ಐಎಸ್‌ಪಿಎ ಬಾಹ್ಯಾಕಾಶ ಕ್ಷೇತ್ರದಲ್ಲಿ ಭಾರತವನ್ನು ಸ್ವಾವಲಂಬಿಯಾಗಿಸಲು, ತಾಂತ್ರಿಕವಾಗಿ ಮುಂದುವರಿಸಲು ಮತ್ತು ಪ್ರಮುಖ ಪಾಲುಗಾರನ್ನಾಗಿಸಲು ಕೈಜೋಡಿಸಲಿದೆ ಎಂದು ಅದು ಹೇಳಿದೆ.


ಮೋದಿ

ಐಎಸ್‌ಪಿಎ ಸಂಸ್ಥಾಪಕ ಸದಸ್ಯರಾಗಿ ಲಾರ್ಸನ್ ಮತ್ತು ಟೂಬ್ರೊ, ನೆಲ್ಕೋ (ಟಾಟಾ ಗ್ರೂಪ್), ಒನ್‌ವೆಬ್, ಭಾರತಿ ಏರ್‌ಟೆಲ್, ಮ್ಯಾಪ್‌ಮಿಂಡಿಯಾ, ವಾಲ್‌ಚಂದನಗರ್ ಇಂಡಸ್ಟ್ರೀಸ್, ಅನಂತ್ ಟೆಕ್ನಾಲಜಿ ಲಿಮಿಟೆಡ್ ಸೇರಿವೆ. ಪರಿಣತ ಸದಸ್ಯರಾಗಿ ಗೋದ್ರೆಜ್, ಹ್ಯೂಸ್ ಇಂಡಿಯಾ, ಅಜಿಸ್ಟಾ-ಬಿಎಸ್‌ಟಿ ಏರೋಸ್ಪೇಸ್ ಪ್ರೈವೇಟ್ ಲಿಮಿಟೆಡ್, ಬಿಇಎಲ್, ಸೆಂಟಮ್ ಎಲೆಕ್ಟ್ರಾನಿಕ್ಸ್ ಮತ್ತು ಮ್ಯಾಕ್ಸರ್ ಇಂಡಿಯಾ ಸೇರಿವೆ ಎಂದು ಪ್ರಧಾನಿ ಕಚೇರಿ ತಿಳಿಸಿದೆ.

ಭದ್ರತೆ ನೀಡುವವರೆಗೆ ಕೆಲಸಕ್ಕೆ ತೆರಳಲ್ಲ: ಕಾಶ್ಮೀರಿ ಸಿಖ್ಖರು

ಶ್ರೀನಗರ: ಕಾಶ್ಮೀರದಲ್ಲಿನ ಅಲ್ಪಸಂಖ್ಯಾತ ಸಮುದಾಯದವರಿಗೆ ಭದ್ರತೆ ನೀಡುವಲ್ಲಿ ಸರ್ಕಾರ ವಿಫಲವಾಗಿದೆ ಎಂದು ಆರೋಪಿಸಿರುವ ಇಲ್ಲಿಯ ಗುರುದ್ವಾರ ಪ್ರಬಂಧಕ್ ಸಮಿತಿ (ಜಿಪಿಸಿ), ಸಿಖ್ ಸಮುದಾಯಕ್ಕೆ ಭದ್ರತೆ ನೀಡುವವರೆಗೂ ಆ ಸಮುದಾಯದ ಯಾವ ಸದಸ್ಯರೂ ತಮ್ಮ ಉದ್ಯೋಗಗಳಿಗೆ ತೆರಳುವುದಿಲ್ಲ ಎಂದು ಹೇಳಿದೆ.

ಗುಪ್ತಚರ ಇಲಾಖೆ ವರದಿ ಮಾಡಿದ ಬಳಿಕವೂ ಭದ್ರತೆ ನೀಡಲಿಲ್ಲ ಎಂದು ಜಿಪಿಸಿ ಶ್ರೀನಗರದ ಪ್ರಧಾನ ಕಾರ್ಯದರ್ಶಿ ನವತೇಜ್ ಸಿಂಗ್ ದೂರಿದ್ದಾರೆ.

24 ಸಂಸದೀಯ ಸ್ಥಾಯಿ ಸಮಿತಿಗಳ ಪುನರ್ ರಚನೆ

ನವದೆಹಲಿ: 24 ಸಂಸದೀಯ ಸ್ಥಾಯಿ ಸಮಿತಿಗಳನ್ನು ಶನಿವಾರ ಪುನರ್‌ರಚಿಸಲಾಗಿದೆ. ಹಿರಿಯ ಬಿಜೆಪಿ ನಾಯಕ ಸುಶೀಲ್ ಕುಮಾರ್ ಮೋದಿ ಅವರನ್ನು ಸಿಬ್ಬಂದಿ ಮತ್ತು ಕಾನೂನು ಸಮಿತಿಯ ಮುಖ್ಯಸ್ಥರನ್ನಾಗಿ ಮಾಡಲಾಗಿದೆ. ಈ ಹಿಂದಿನ ಸಮಿತಿಗಳ ಅಧ್ಯಕ್ಷರನ್ನೇ ಉಳಿಸಿಕೊಳ್ಳಲಾಗಿದೆ.

ಈ ಹಿಂದೆ ವಿಜ್ಞಾನ ಮತ್ತು ತಂತ್ರಜ್ಞಾನ ಮತ್ತು ನಗರಾಭಿವೃದ್ಧಿ ಸಮಿತಿಗಳ ಸದಸ್ಯರಾಗಿದ್ದ ಸುಶೀಲ್ ಮೋದಿ ಅವರನ್ನು ಈ ಬಾರಿ ಸಿಬ್ಬಂದಿ, ಸಾರ್ವಜನಿಕ ಕುಂದುಕೊರತೆಗಳು ಮತ್ತು ಕಾನೂನು ಮತ್ತು ನ್ಯಾಯ ಸಮಿತಿಗೆ ವರ್ಗಾಯಿಸಲಾಗಿದೆ. ಭೂಪೇಂದರ್ ಯಾದವ್ ಅವರು ಕೇಂದ್ರ ಸಚಿವರಾಗಿರುವ ಕಾರಣ, ಅವರ ಸ್ಥಾನಕ್ಕೆ ಸುಶೀಲ್ ಅವರನ್ನು ಕರೆತರಲಾಗಿದೆ.

ಶಶಿ ತರೂರ್ ಅವರು ಮಾಹಿತಿ ತಂತ್ರಜ್ಞಾನ ಸ್ಥಾಯಿ ಸಮಿತಿಯ ಮುಖ್ಯಸ್ಥರಾಗಿ ಮುಂದುವರಿದಿದ್ದಾರೆ. ಬಿಜೆಪಿ ಸಂಸದ ನಿಶಿಕಾಂತ್ ದುಬೆ ಅವರನ್ನು ಸಮಿತಿಯಿಂದ ತೆಗೆದುಹಾಕಲು ಒತ್ತಾಯಿಸುವುದೂ ಸೇರಿದಂತೆ ಸರ್ಕಾರವನ್ನು ಪ್ರಶ್ನಿಸುವ ಮೂಲಕ ಸುದ್ದಿಯಲ್ಲಿದ್ದ ತರೂರ್ ಅವರನ್ನು ಇದೇ ಸಮಿತಿಯಲ್ಲಿ ಮುಂದುವರಿಸಲಾಗಿದೆ.

ಕಾಂಗ್ರೆಸ್‌ನ ಆನಂದ್ ಶರ್ಮಾ ಅವರು ಗೃಹ ಸಮಿತಿಯ ಮುಖ್ಯಸ್ಥರಾಗಿ ಮುಂದುವರಿಯಲಿದ್ದಾರೆ. ಜೈರಾಮ್ ರಮೇಶ್ ಅವರು ವಿಜ್ಞಾನ ಮತ್ತು ತಂತ್ರಜ್ಞಾನ ಸಮಿತಿಗೆ ಭರ್ತೃಹರಿ ಮಹತಾಬ್ ಅವರು ಕಾರ್ಮಿ ಸಮಿತಿಗೆ ಅಧ್ಯಕ್ಷರಾಗಲಿದ್ದಾರೆ.

ರಾಹುಲ್ ಗಾಂಧಿ ಸದಸ್ಯರಾಗಿರುವ ರಕ್ಷಣಾ ಸಮಿತಿಯ ಮುಖ್ಯಸ್ಥರಾಗಿ ಜುಯಲ್ ಓರಂ ಮುಂದುವರಿಯಲಿದ್ದಾರೆ. ಪಿ.ಪಿ. ಚೌಧರಿ ಅವರು ವಿದೇಶಾಂಗ ವ್ಯವಹಾರಗಳ ಸಮಿತಿ ಅಧ್ಯಕ್ಷಗಿರಿ ಉಳಿಸಿಕೊಂಡಿದ್ದಾರೆ. ಜಯಂತ್ ಸಿನ್ಹಾ ಮತ್ತೊಮ್ಮೆ ಹಣಕಾಸು ಸಮಿತಿಯ ಅಧ್ಯಕ್ಷರಾಗಿದ್ದು, ಇಲ್ಲಿ ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ಸದಸ್ಯರಾಗಿದ್ದಾರೆ.

ಸಾರಿಗೆ ಸಮಿತಿಯ ಸದಸ್ಯರಾಗಿದ್ದ ತೃಣಮೂಲ ಕಾಂಗ್ರೆಸ್‌ನ ಡೆರೆಕ್ ಒಬ್ರಿಯಾನ್ ಮತ್ತು ರಕ್ಷಣಾ ಸಮಿತಿಯಲ್ಲಿದ್ದ ಕಾಂಗ್ರೆಸ್‌ನ ಅಭಿಷೇಕ್ ಸಿಂಘ್ವಿ ಅವರನ್ನು ಗೃಹ ವ್ಯವಹಾರಗಳ ಸ್ಥಾಯಿ ಸಮಿತಿಗೆ ವರ್ಗಾಯಿಸಲಾಗಿದೆ. ಕೆ.ಸಿ. ವೇಣುಗೋಪಾಲ್ ಅವರು ರಕ್ಷಣಾ ಸಮಿತಿಯಲ್ಲಿ ಸಿಂಘ್ವಿ ಅವರ ಸ್ಥಾನ ಪಡೆದಿದ್ದಾರೆ.

ಪಕ್ಷಗಳ ಶಿಫಾರಸಿನ ಮೇರೆಗೆ ಹಲವಾರು ಸಂಸದರನ್ನು ಒಂದು ಸಮಿತಿಯಿಂದ ಇನ್ನೊಂದು ಸಮಿತಿಗೆ ಬದಲಾಯಿಸಲಾಗಿದೆ. ಪ್ರತಿ ಸಮಿತಿಯು ರಾಜ್ಯಸಭೆಯ 11 ಸದಸ್ಯರು ಮತ್ತು ಲೋಕಸಭೆಯ 20 ಸದಸ್ಯರನ್ನು ಹೊಂದಿದೆ.

ಮಹಾರಾಷ್ಟ್ರ ಸರ್ಕಾರದ ಸಚಿವ ನವಾಬ್ ಮಲಿಕ್ ಆರೋಪ; ಮಲಿಕ್ ವಿರುದ್ಧ ಮಾನನಷ್ಟ ಮೊಕದ್ದಮೆ: ಮೋಹಿತ್ ಭಾರತೀಯ

‘ಬಿಡುಗಡೆಯಾದವರಲ್ಲಿ ಬಿಜೆಪಿ ನಾಯಕ ಮೋಹಿತ್ ಬಾವ’

ಮುಂಬೈ (ಪಿಟಿಐ): ಇತ್ತೀಚೆಗೆ ಐಷಾರಾಮಿ ಹಡಗಿನ ಮೇಲಿನ ದಾಳಿಯ ವೇಳೆ ಮಾದಕ ವಸ್ತು ನಿಯಂತ್ರಣ(ಎನ್‌ಸಿಬಿ) ಅಧಿಕಾರಿಗಳು ಬಂಧಿಸಿದ್ದ 11 ಮಂದಿಯಲ್ಲಿ, ಮೂವರನ್ನು ಬಿಡಗಡೆ ಮಾಡಲಾಗಿದೆ. ಇವರಲ್ಲಿ ಒಬ್ಬರು ಬಿಜೆಪಿ ನಾಯಕ ಮೋಹಿತ್ ಭಾರತೀಯ ಸೋದರ ಸಂಬಂಧಿ ಎಂದು ಎನ್‌ಸಿಪಿ ನಾಯಕ, ಮಹಾರಾಷ್ಟ್ರ ಸರ್ಕಾರದ ಸಚಿವ ನವಾಬ್ ಮಲಿಕ್ ಆರೋಪಿಸಿದ್ದಾರೆ.

ಎನ್‌ಸಿಬಿ ಬಿಡುಗಡೆ ಮಾಡಿದ ಮೂವರು ವ್ಯಕ್ತಿಗಳಲ್ಲಿ ಮೋಹಿತ್ ಭಾರತೀಯ ಅವರ ಬಾವ ರಿಷಭ್ ಸಚ್‌ದೇವ್ ಒಬ್ಬರು. ಪ್ರತೀಕ್ ಗಬ್ಬಾ ಮತ್ತು ಅಮಿರ್ ಫರ್ನೀಚರ್‌ವಾಲಾ ಎಂಬುವವರು ಬಿಡುಗಡೆಯಾದ ಇನ್ನಿಬ್ಬರು. ಇವರು, ಬಾಲಿವುಡ್ ನಟ ಶಾರುಕ್ ಖಾನ್ ಅವರ ಪುತ್ರ ಆರ್ಯನ್ ಖಾನ್ ಅವರನ್ನು ಕ್ರೂಸ್ ಪಾರ್ಟಿಗೆ ಕರೆತಂದಿದ್ದವರು. ಸಚ್‌ದೇವ್ ಅವರೊಂದಿಗೆ ಈ ಇಬ್ಬರನ್ನೂ ಎನ್‌ಸಿಬಿಯವರು ಬಂಧಿಸಿದ ಎರಡು ಗಂಟೆಗಳ ನಂತರ ಬಿಡುಗಡೆ ಮಾಡಿದ್ದಾರೆ ಎಂದು ಅವರು ಶನಿವಾರ ಸುದ್ದಿಗೋಷ್ಠಿಯಲ್ಲಿ ದೂರಿದರು.

ಈ ಆರೋಪಕ್ಕೆ ಪ್ರತಿಕ್ರಿಯಿಸಿರುವ ಮೋಹಿತ್, ₹ 100 ಕೋಟಿ ಪರಿಹಾರ ಕೇಳಿ, ಮಲಿಕ್ ವಿರುದ್ಧ ಮಾನನಷ್ಟ ಮೊಕದ್ದಮೆ ಹೂಡುವುದಾಗಿ ಹೇಳಿದ್ದಾರೆ.


ನವಾಬ್ ಮಲಿಕ್

‘ಪ್ರತೀಕ್ ಮತ್ತು ಅಮಿರ್ ಅವರ ಹೆಸರುಗಳು ನ್ಯಾಯಾಲಯದ ವಿಚಾರಣೆಯಲ್ಲಿ ಕೇಳಿಬಂದಿವೆ. ಹಡಗಿನಲ್ಲಿ ಮಾದಕ ವಸ್ತುಗಳನ್ನು ವಶಪಡಿಸಿಕೊಂಡ ಪ್ರಕರಣದಲ್ಲಿ ಆರ್ಯನ್ ಖಾನ್ ಸೇರಿದಂತೆ ಒಟ್ಟು 18 ಜನರನ್ನು ಬಂಧಿಸಲಾಗಿದೆ. ಬಿಡುಗಡೆ ಮಾಡಿರುವ ಮೂವರ ಜೊತೆಗೆ, ಎನ್‌ಸಿಬಿ ಪ್ರಾದೇಶಿಕ ನಿರ್ದೇಶಕ ಸಮೀರ್ ವಾಂಖೇಡೆ ಅವರ ದೂರವಾಣಿ ಕರೆಗಳನ್ನು ಪರಿಶೀಲಿಸಬೇಕು’ ಎಂದು ಮಲಿಕ್ ಒತ್ತಾಯಿಸಿದರು.

‘ರಿಷಭ್ ಸಚ್‌ದೇವ ಬಂಧನವಾದಾಗ, ಅವರ ತಂದೆ ಮತ್ತು ಚಿಕ್ಕಪ್ಪ(ಅಂಕಲ್) ಇಬ್ಬರೂ ಎನ್‌ಸಿಬಿ ಕಚೇರಿಗೆ ಭೇಟಿ ನೀಡಿದ್ದಾರೆ. ಅಂದು ವಾಂಖೇಡೆ, ಮುಂಬೈ ಹಾಗೂ ದೆಹಲಿಯ ಬಿಜೆಪಿ ನಾಯಕರೊಂದಿಗೆ ದೂರವಾಣಿಯಲ್ಲಿ ಮಾತಾಡಿದ್ದಾರೆ. ಇದೆಲ್ಲವೂ ಸಚ್‌ದೇವ್ ಅವರ ತಂದೆಯ ದೂರವಾಣಿ ಮೂಲಕವೇ ನಡೆದಿವೆ‘ ಎಂದು ಅವರು ದೂರಿದ್ದಾರೆ.

ಮಲಿಕ್ ಪ್ರಕಾರ, ಮುಂಬೈ ಪೊಲೀಸರು ಕ್ರೂಸ್ ಹಡಗಿನಿಂದ 11 ಮಂದಿಯನ್ನು ಬಂಧಿಸಿದ್ದಾಗಿ ಮಾಹಿತಿ ನೀಡಿದ್ದರು. ಆದರೆ, ‘ಕ್ವಾಲಿ ಮಾಡಿದ ವೇಳೆ ಬಂಧಿಸಿದವರಲ್ಲಿ ಈ ಮೂವರ ಫೋನ್‌ಗಳನ್ನು ಏಕೆ ಪೊಲೀಸರು ವಶಪಡಿಸಿಕೊಳ್ಳಲಿಲ್ಲ’ ಎಂದು ಅವರು ಪ್ರಶ್ನಿಸಿದ್ದಾರೆ.

ಎನ್‌ಸಿಬಿಯವರು ಕ್ರೂಸ್ ಹಡಗಿನ ಮೇಲೆ ನಡೆಸಿರುವ ದಾಳಿ ನಕಲಿ, ಪೂರ್ವಯೋಜಿತ. ಇದು ಇಡೀ ಸಿನಿಮಾ ಕ್ಷೇತ್ರ ಮತ್ತು ಮಹಾರಾಷ್ಟ್ರ ಸರ್ಕಾರಕ್ಕೆ ಕೆಟ್ಟ ಹೆಸರು ತರುವುದಕ್ಕಾಗಿ ಮಾಡಿರುವ ಸಂಚು ಎಂದು ಮಲಿಕ್ ಆರೋಪಿಸಿದ್ದಾರೆ.

ಪ್ರಕರಣದಲ್ಲಿ ತಮ್ಮ ಅಳಿಯನನ್ನು ಬಂಧಿಸಿದ್ದರಿಂದ ತಾವು ಎನ್‌ಸಿಬಿ ವಿರುದ್ಧ ಕಿಡಿಕಾರುತ್ತಿರುವುದಾಗಿ ಬಿಜೆಪಿ ಆರೋಪಿಸುತ್ತಿದೆ. ಆದರೆ, ತಾವೆಂದೂ ಆತನನ್ನು ಬೆಂಬಲಿಸಿಲ್ಲ ಎಂದಿರುವ ಮಲಿಕ್, ಆತ ತನ್ನ ವಿರುದ್ಧದ ಪ್ರಕರಣದಲ್ಲಿ ತಾನೇ ಕಾನೂನು ಹೋರಾಟ ಮಾಡಲಿದ್ದಾನೆ ಎಂದು ಹೇಳಿದ್ದಾರೆ.

ಮಲಿಕ್ ಸುದ್ದಿಗೋಷ್ಠಿಯ ನಂತರ ಮೋಹಿತ್ ಭಾರತೀಯ ಪತ್ರಿಕಾ ಹೇಳಿಕೆಯನ್ನು ಬಿಡುಗಡೆ ಮಾಡಿದ್ದು, ‘ಮಲಿಕ್ ಅವರು ಡ್ರಗ್ ಪೆಡ್ಲರ್‌ಗಳನ್ನು ಬೆಂಬಲಿಸುತ್ತಿದ್ದಾರೆ ಹಾಗೂ ತಮ್ಮ ಸ್ಥಾನವನ್ನು ದುರ್ಬಳಕೆ ಮಾಡಿಕೊಳ್ಳುತ್ತಿದ್ದಾರೆ’ ಎಂದು ಆರೋಪಿಸಿದ್ದಾರೆ.

ನಿರ್ಮಾಪಕ ಇಮ್ತಿಯಾಜ್ ಖತ್ರಿ ನಿವಾಸದ ಮೇಲೆ ಎನ್‌ಸಿಬಿ ಶೋಧ

ಮುಂಬೈ (ಪಿಟಿಐ): ಹಡಗಿನಿಂದ ಮಾದಕ ಪದಾರ್ಥಗಳನ್ನು ವಶಪಡಿಸಿಕೊಂಡ ಪ್ರಕರಣಕ್ಕೆ ಸಂಬಂಧಿಸಿದಂತೆ, ಸಿನಿಮಾ ನಿರ್ಮಾಪಕ ಇಮ್ತಿಯಾಜ್ ಖತ್ರಿ ಅವರ ನಿವಾಸ ಮತ್ತು ಕಚೇರಿಯಲ್ಲಿ ಶನಿವಾರ ಎನ್‌ಸಿಬಿ ಶೋಧ ನಡೆಸಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

‘ಎನ್‌ಸಿಬಿಯ ಮುಂಬೈ ವಲಯದ ಘಟಕವು ಇಲ್ಲಿಯ ಬಾಂದ್ರಾದಲ್ಲಿರುವ ಖತ್ರಿ ಅವರ ನಿವಾಸ ಮತ್ತು ಕಚೇರಿಯಲ್ಲಿ ಶನಿವಾರ ಬೆಳಿಗ್ಗೆ ಶೋಧ ಕಾರ್ಯ ಆರಂಭಿಸಿದೆ’ ಎಂದು ಅವರು ಮಾಹಿತಿ ನೀಡಿದ್ದಾರೆ.

ಪ್ರಕರಣದಲ್ಲಿ ಬಂಧಿತರಾಗಿರುವ ಆರೋಪಿಗಳ ವಿಚಾರಣೆ ವೇಳೆಯಲ್ಲಿ ಖತ್ರಿ ಅವರ ಹೆಸರು ಪ್ರಸ್ತಾಪವಾಗಿದ್ದರಿಂದ, ಈ ದಾಳಿ ನಡೆದಿದೆ ಎಂದು ಅವರು ಹೇಳಿದ್ದಾರೆ.

ಮುಂಬೈ ಮಹಾನಗರದ ಡ್ರಗ್ಸ್ ಪೆಡ್ಲರ್‌ಗಳು ಮತ್ತು ಪೂರೈಕೆದಾರರ ಮೇಲೆ ಕಠಿಣ ಕ್ರಮ ತೆಗೆದುಕೊಳ್ಳಲು ಈ ರೀತಿಯ ದಾಳಿಗಳು ಮುಂದುವರಿಯಲಿವೆ ಎಂದು ಅವರು ಹೇಳಿದ್ದಾರೆ.

ಕಳೆದ ವಾರ ಮುಂಬೈ ಕರಾವಳಿ ತೀರದಲ್ಲಿ ಐಷಾರಾಮಿ ಹಡಗಿನ ಮೇಲೆ ನಡೆಸಿದ ದಾಳಿಯಲ್ಲಿ ಬಾಲಿವುಡ್ ನಟ ಶಾರುಕ್ ಖಾನ್ ಪುತ್ರ ಆರ್ಯನ್ ಖಾನ್ ಸೇರಿದಂತೆ ಒಟ್ಟು 18 ಜನರನ್ನು ಬಂಧಿಸಲಾಗಿದೆ ಎಂದು ಎನ್‌ಸಿಬಿ ಹೇಳಿದೆ.

ಧಾರ್ಮಿಕ, ರಾಜಕೀಯ ಹಿನ್ನೆಲೆ ಪರಿಗಣಿಸುವುದಿಲ್ಲ:ಎನ್‌ಸಿಬಿ

ಮುಂಬೈ: ‘ಎನ್‌ಸಿಬಿ ವೃತ್ತಿಪರ ಸಂಸ್ಥೆಯಾಗಿದೆ. ನಾವು ಆರೋಪಿಗಳ ರಾಜಕೀಯ ಹಿನ್ನೆಲೆ, ಧಾರ್ಮಿಕ ಹಿನ್ನೆಲೆಯನ್ನು ಪರಿಗಣಿಸುವುದಿಲ್ಲ. ನಾವು ನಮ್ಮ ಉದ್ಯೋಗವನ್ನು ವೃತ್ತಿಪರತೆಯಿಂದ ನಿರ್ವಹಿಸುತ್ತೇವೆ’ಎಂದು ಎನ್‌ಸಿಬಿ ಮುಂಬೈ ವಲಯ ನಿರ್ದೇಶಕ ಸಮೀರ್ ವಾಂಖೇಡೆ ಹೇಳಿದ್ದಾರೆ.

ಹಡಗಿನ ಮೇಲೆ ದಾಳಿ ನಡೆಸಿ, ಮಾದಕದ್ರವ್ಯ ವಶಪಡಿಕೊಂಡ ಪ್ರಕರಣದಲ್ಲಿ ನಟ ಶಾರುಕ್ ಖಾನ್ ಅವರ ಮಗನನ್ನು ವಶಕ್ಕೆ ತೆಗೆದುಕೊಂಡಿರುವ ಕುರಿತು ಎದ್ದಿರುವ ಊಹಾಪೋಹಗಳಿಗೆ ಎನ್‌ಸಿಬಿ ಉತ್ತರ ನೀಡಿದೆ.

‘ಎನ್‌ಸಿಬಿಗೆ ಸಂಬಂಧಿಸಿಲ್ಲದ ವ್ಯಕ್ತಿಗಳು, ಆರೋಪಿಗಳನ್ನು ಎನ್‌ಸಿಬಿ ಕಚೇರಿಗೆ ಕರೆದುಕೊಂಡು ಹೋದದ್ದು ಹೇಗೆ’ ಎಂದು ಎನ್‌ಸಿಪಿ ಕೇಳಿದ್ದ ಪ್ರಶ್ನೆಗೆ ಉತ್ತರಿಸಿದ ಹಿರಿಯ ಅಧಿಕಾರಿಯೊಬ್ಬರು, ಆ ಇಬ್ಬರೂ ಈ ಕಾರ್ಯಾಚರಣೆಯಲ್ಲಿ ಭಾಗಿಯಾಗಿದ್ದ ಸ್ವತಂತ್ರ ಸಾಕ್ಷಿಗಳು. ದಾಳಿ ನಡೆಯುವವರೆಗೆ ಅವರಿಬ್ಬರಿಗೆ ಎನ್‌ಸಿಬಿ ಜೊತೆ ಸಂಪರ್ಕ ಇರಲಿಲ್ಲ ಎಂದಿದ್ದಾರೆ.

ಶಾರುಕ್ ಕಾರು ಚಾಲಕನ ವಿಚಾರಣೆ

ಮಾದಕದ್ರವ್ಯ ಸೇವನೆ ಆರೋಪ ಹೊತ್ತಿರುವ ನಟ ಶಾರುಕ್ ಖಾನ್ ಅವರ ಮಗ ಆರ್ಯನ್ ಖಾನ್ ವಿರುದ್ಧ ಸಾಕ್ಷಿಗಳನ್ನು ಕಲೆಹಾಕುತ್ತಿರುವ ಎನ್‌ಸಿಬಿ, ಶಾರುಕ್ ಖಾನ್ ಅವರ ಕಾರು ಚಾಲಕರೊಬ್ಬರ ವಿಚಾರಣೆ ನಡೆಸಿದೆ. ಕ್ರೂಸ್ ಹಡಗು ಇರುವಲ್ಲಿಗೆ ಆರ್ಯನ್ ಖಾನ್ ಮತ್ತು ಆತನ ಸ್ನೇಹಿತರನ್ನು ಕಾರಿನಲ್ಲಿ ಕರೆದೊಯ್ದಿದ್ದ ಚಾಲಕನ ಹೇಳಿಕೆಯನ್ನು ಎನ್‌ಸಿಬಿ ದಾಖಲಿಸಿಕೊಂಡಿದೆ ಎಂದು ಎನ್‌ಡಿಟಿವಿ ವರದಿ ಮಾಡಿದೆ.

ನಾಡಪ್ರಭು ಕೆಂಪೇಗೌಡ ಬಡಾವಣೆ ಹೆಚ್ಚುವರಿ ಕಾಮಗಾರಿ: ಮೂಲಸೌಕರ್ಯ ವಿಳಂಬ–ನಿವೇಶನದಾರರಿಗೆ ಕಳವಳ

ಕಾಮಗಾರಿ ವೆಚ್ಚ ಭರಿಸಲು ಮೀನಮೇಷ

● ಪ್ರವೀಣ್ ಕುಮಾರ್ ಪಿ.ವಿ.

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಅಭಿವೃದ್ಧಿಪಡಿಸುತ್ತಿರುವ ನಾಡಪ್ರಭು ಕೆಂಪೇಗೌಡ ಬಡಾವಣೆಯಲ್ಲಿ ಅನುಮೋದಿತ ವಿಸ್ತೃತ ಯೋಜನಾ ವರದಿಯಲ್ಲಿರುವುದಕ್ಕಿಂತ (ಡಿಪಿಆರ್) ಹೆಚ್ಚುವರಿಯಾಗಿ ಮೂಲಸೌಕರ್ಯ ಕಾಮಗಾರಿಗಳನ್ನು ಕೈಗೊಳ್ಳಬೇಕಾಗಿದ್ದು, ಇದಕ್ಕೆ ₹ 672 ಕೋಟಿ ವೆಚ್ಚ ತಗಲುತ್ತದೆ ಎಂದು ಅಂದಾಜಿಸಲಾಗಿದೆ. ಈ ಹಣ ಬಿಡುಗಡೆಗೆ ಬಿಡಿಎ ಮೀನಾಮೇಷ ಎಣಿಸುತ್ತಿರುವುದರಿಂದ ಈ ಬಡಾವಣೆಯ ಕಾಮಗಾರಿಯೂ ವಿಳಂಬವಾಗುತ್ತಿದೆ. ಇದು ಈ ಬಡಾವಣೆಯ ನಿವೇಶನದಾರರ ಕಳವಳಕ್ಕೆ ಕಾರಣವಾಗಿದೆ.

ಹೆಚ್ಚುವರಿ ಕಾಮಗಾರಿಗಳ ವೆಚ್ಚ ಭರಿಸುವುದಕ್ಕೆ ಸಂಬಂಧಿಸಿ ಬಿಡಿಎ ಸ್ಪಷ್ಟ ನಿರ್ಧಾರ ತಳೆಯದಿರುವುದರಿಂದ ಗುತ್ತಿಗೆದಾರರು ಹೆಚ್ಚುವರಿ ಕಾಮಗಾರಿಗಳ ಅನುಷ್ಠಾನಕ್ಕೆ ಹಿಂದೇಟು ಹಾಕುತ್ತಿದ್ದಾರೆ. ಇದುವರೆಗೆ ಭೌತಿಕ ಕಾಮಗಾರಿ ಶೇ 50ರಷ್ಟು ಮಾತ್ರ ಪೂರ್ಣಗೊಂಡಿದೆ. ಹೆಚ್ಚುವರಿ ಕಾಮಗಾರಿಗೆ ಅನುದಾನ ಒದಗಿಸದಿದ್ದರೆ ಮೂಲಸೌಕರ್ಯ ಕಲ್ಪಿಸುವ ಕಾರ್ಯ ಪೂರ್ಣವಾಗದು ಎಂದು ಅಳಲು ತೋಡಿಕೊಳ್ಳುತ್ತಾರೆ ನಿವೇಶನದಾರರು.

ಸದ್ಯಕ್ಕೆ 10 ಬ್ಲಾಕ್‌ಗಳಿಗೆ ಕುಡಿಯುವ ನೀರು, ಒಳಚರಂಡಿ, ಹಾಗೂ ವಿದ್ಯುತ್ ಸಂಪರ್ಕ ಕಲ್ಪಿಸುವ ಕಾಮಗಾರಿಗಳ ಗುತ್ತಿಗೆ ನೀಡಲಾಗಿದೆ. 1, 2, 3, 4 ಹಾಗೂ 5ಎ ಬ್ಲಾಕ್‌ಗಳ ಮೂಲಸೌಕರ್ಯ




ಕೆಂಪೇಗೌಡ ಬಡಾವಣೆಯ ಬ್ಲಾಕ್–1ರ ನಿವೇಶನಗಳಿಗೆ ಮೂಲಸೌಕರ್ಯ ಕಲ್ಪಿಸುವ ಕಾಮಗಾರಿ ನಡೆಯುತ್ತಿದೆಪ್ರಜಾವಾಣಿ ಚಿತ್ರ/ಎಂ.ಎಸ್. ಮಂಜುನಾಥ್

ಕಲ್ಪಿಸುವ ₹806 ಕೋಟಿ ವೆಚ್ಚದ ಪ್ಯಾಕೇಜ್–1ರ ಗುತ್ತಿಗೆಯನ್ನು ಎಲ್ ಆ್ಯಂಡ್ ಟಿ ಕಂಪನಿಗೆ ಹಾಗೂ 5ಬಿ, 6, 7, 8, 9ನೇ ಬ್ಲಾಕ್‌ಗಳ ಮೂಲಸೌಕರ್ಯ ಕಲ್ಪಿಸುವ ಪ್ಯಾಕೇಜ್–2ರ ₹813 ಕೋಟಿ ವೆಚ್ಚದ ಗುತ್ತಿಗೆಯನ್ನು ಎಸ್‌ಪಿಎಂಎಲ್ ಅಮೃತ್ ಕಂಪನಿಗೆ ವಹಿಸಲಾಗಿದೆ. ಈ ಎರಡು ಪ್ಯಾಕೇಜ್‌ಗಳಲ್ಲಿ ನಿತ್ಯ 4.50 ಕೋಟಿ ಲೀ. ತ್ಯಾಜ್ಯ ನೀರನ್ನು ಸಂಸ್ಕರಿಸುವ ಸಾಮರ್ಥ್ಯದ ಒಟ್ಟು 10 ತ್ಯಾಜ್ಯನೀರು ಸಂಸ್ಕರಣಾ ಘಟಕಗಳನ್ನು (ಎಸ್‌ಟಿಪಿ), ತಲಾ 5.45 ಕೋಟಿ ಲೀ ಸಂಗ್ರಹ ಸಾಮರ್ಥ್ಯದ ನೆಲಮಟ್ಟದ 4 ಸಂಗ್ರಹಾಗಾರಗಳನ್ನು, ಕೊಳಚೆ ನೀರು ಶುದ್ಧೀಕರಿಸಿ ಪೂರೈಸಲು 8 ಓವರ್ ಹೆಡ್ ಟ್ಯಾಂಕ್‌ಗಳನ್ನು, ಕುಡಿಯುವ ನೀರು, ಒಳಚರಂಡಿ ಹಾಗೂ ವಿದ್ಯುತ್ ಪೂರೈಕೆ ಕೊಳವೆಮಾರ್ಗಗಳನ್ನು ನಿರ್ಮಿಸಬೇಕಿದೆ.

ಪ್ರಜಾವಾಣಿ ವಿಶೇಷ

ಬಿಡಿಎ ಈ ಬಡಾವಣೆಗಾಗಿ 4,043 ಎಕರೆ ಭೂಸ್ವಾಧೀನಕ್ಕೆ ಅಧಿಸೂಚನೆ ಹೊರಡಿಸಿತ್ತು. 2,252 ಎಕರೆಗಳಷ್ಟು ಜಾಗದಲ್ಲಿ ನಿರ್ಮಿಸುವ ನಿವೇಶನಗಳಿಗೆ ಕುಡಿಯುವ ನೀರು, ಒಳಚರಂಡಿ ಹಾಗೂ ವಿದ್ಯುತ್ ಪೂರೈಕೆ ಕಾಮಗಾರಿಗಳಿಗೆ ಡಿಪಿಆರ್ ಸಿದ್ಧಪಡಿಸಲಾಗಿತ್ತು. ಕೆಲವೆಡೆ ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಳ್ಳದ ಕಾರಣ ಸದ್ಯ 2,180 ಎಕರೆ ಪ್ರದೇಶದಲ್ಲಿ ಮಾತ್ರ ನಿವೇಶನಗಳನ್ನು ನಿರ್ಮಿಸಲಾಗಿದೆ. ನಿವೇಶನಗಳು ಅಲ್ಲಲ್ಲಿ ಹಂಚಿ ಹೋಗಿದ್ದು, ಅವುಗಳಿಗೆ ಮೂಲಸೌಕರ್ಯ ಕಲ್ಪಿಸುವಾಗ ಡಿಪಿಆರ್‌ನಲ್ಲಿರುವುದಕ್ಕಿಂತ ಹೆಚ್ಚುವರಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಬೇಕಾಗಿದೆ. ಹಸಿರು ನ್ಯಾಯಮಂಡಳಿ ಆದೇಶದ ಪ್ರಕಾರ ಕೆರೆ ಕಾಲುವೆಗಳ ಮೀಸಲು ಪ್ರದೇಶದಲ್ಲಿ ವ್ಯತ್ಯಾಸವಾಗಿದ್ದರಿಂದ ಎಸ್‌ಟಿಪಿಗಳ ಸ್ಥಳ ಬದಲಾವಣೆ ಮಾಡಲಾಗಿದೆ. ಇದು ಕಾಮಗಾರಿಗಳ ಪರಿಮಾಣದಲ್ಲಿ ವ್ಯತ್ಯಾಸಕ್ಕೆ ಕಾರಣವಾಗಿದೆ ಎನ್ನುತ್ತವೆ ಬಿಡಿಎ ಮೂಲಗಳು.



ಹೆಚ್ಚುವರಿ ಕಾಮಗಾರಿಗಳ ವೆಚ್ಚ ಭರಿಸುವ ಬಗ್ಗೆ ಬಿಡಿಎ ಸ್ಪಷ್ಟ ನಿರ್ಧಾರ ಕೈಗೊಳ್ಳಬೇಕು. ಮೂಲಸೌಕರ್ಯ ಕಲ್ಪಿಸುವುದು ವಿಳಂಬವಾದರೆ ಮತ್ತಷ್ಟು ಸಮಸ್ಯೆ ಎದುರಿಸಬೇಕಾಗುತ್ತದೆ

ಎನ್.ಶ್ರೀಧರ್, ಅಧ್ಯಕ್ಷರು, ನಾಡಪ್ರಭು ಕೆಂಪೇಗೌಡ ಬಡಾವಣೆ ನಿವೇಶನದಾರರ ಮುಕ್ತವೇದಿಕೆ

‘ಡಿಪಿಆರ್‌ನಲ್ಲೂ ಕಾಮಗಾರಿಗಳ ಪರಿಮಾಣಗಳನ್ನು ಸರಿಯಾಗಿ ಅಂದಾಜಿಸಿಲ್ಲ. ಪ್ಯಾಕೇಜ್–1ರಲ್ಲಿ ಮೂಲಸೌಕರ್ಯ ಕೊಳವೆಗಳ ಉದ್ದ 85 ಕಿ.ಮೀ ಎಂದು ಅಂದಾಜಿಸಲಾಗಿದೆ. ಆದರೆ, ಇಲ್ಲಿಗೆ 127 ಕಿ.ಮೀ ಉದ್ದದ ನೀರಿನ ಕೊಳವೆ ಅಳವಡಿಸಬೇಕಾಗಿದೆ. ಪ್ಯಾಕೇಜ್–2ರಲ್ಲಿ 65 ಕಿ.ಮೀ ಉದ್ದದ ಮೂಲಸೌಕರ್ಯ ಕೊಳವೆಮಾರ್ಗ ನಿರ್ಮಿಸಬೇಕಾಗುತ್ತದೆ ಎಂದು ಅಂದಾಜಿಸಲಾಗಿತ್ತು. ಆದರೆ, ಇಲ್ಲಿ 139 ಕಿ.ಮೀ ಉದ್ದದಷ್ಟು ನೀರಿನ ಕೊಳವೆ ಅಳವಡಿಸಬೇಕಿದೆ. ಕುಡಿಯುವ ನೀರು ಹಾಗೂ ಒಳಚರಂಡಿ ಕೊಳವೆಗಳನ್ನು ಅರ್ಧಕ್ಕೆ ನಿಲ್ಲಿಸಲಾಗದು. ಭೂಸ್ವಾಧೀನ ನಡೆಸದ ಪ್ರದೇಶಗಳ ಬಳಿ ಸುತ್ತಿ ಬಳಸಿ ಕೊಳವೆಗಳನ್ನು ಜೋಡಿಸಬೇಕಾಗುತ್ತಿದೆ. ಕತ್ತರಿಸಿದ ರಸ್ತೆಗಳ ದುರಸ್ತಿ ವೆಚ್ಚದ ಬಗ್ಗೆಯೂ ಡಿಪಿಆರ್‌ನಲ್ಲಿ ಉಲ್ಲೇಖವಿರಲಿಲ್ಲ. ಕೆಲವೆಡೆ ಹೆಚ್ಚುವರಿ ಪಂಪಿಂಗ್‌ಕೇಂದ್ರಗಳನ್ನು ನಿರ್ಮಿಸಬೇಕಾಗುತ್ತಿದೆ. ಈ ಎಲ್ಲ ವೆಚ್ಚಗಳು ಡಿಪಿಆರ್‌ನಲ್ಲಿ ಅಡಕವಾಗಿರಲಿಲ್ಲ’ ಎಂದು ವಿವರಿಸುತ್ತಾರೆ ಬಿಡಿಎ ಅಧಿಕಾರಿಗಳು.

‘ಡಿಪಿಆರ್ ಸಿದ್ಧಗೊಳ್ಳುವಾಗ ಬಿಡಿಎ 2,252 ಎಕರೆ ಜಾಗದಲ್ಲಿ 2,060 ಎಕರೆಯಲ್ಲಿ ನಿವೇಶನ ರಚಿಸಿ ಇನ್ನುಳಿದ ಜಾಗವನ್ನು ಬಹುಮಹಡಿ ಕಟ್ಟಡಕ್ಕೆ ಬಳಸಲು ನಿರ್ಧರಿಸಿತ್ತು. ಈ ಪ್ರಸ್ತಾವ ಕೈಬಿಟ್ಟು ಅಲ್ಲೂ ನಿವೇಶನಗಳನ್ನು ನಿರ್ಮಿಸಲಾಗುತ್ತಿದೆ. ಹಾಗಾಗಿ ನೀರು ಹಾಗೂ ಒಳಚರಂಡಿ ಸಂಪರ್ಕಗಳ ಸಂಖ್ಯೆ ಜಾಸ್ತಿಯಾಗಲಿದ್ದು, ವೆಚ್ಚವೂ ಹೆಚ್ಚಲಿದೆ. ಈಗ ಒಟ್ಟು 2,635 ಎಕರೆ 37 ಗುಂಟೆ ಜಾಗ ಎಂಜಿನಿಯರಿಂಗ್ ವಿಭಾಗಕ್ಕೆ ಹಸ್ತಾಂತರವಾಗಿದ್ದು, ಅಷ್ಟೂ ಜಾಗದಲ್ಲಿ ನಿವೇಶನ ರಚಿಸಲಾಗುತ್ತಿದೆ. ಹಾಗಾಗಿ ಡಿಪಿಆರ್‌ಗಿಂತ ಸುಮಾರು 575 ಎಕರೆಗಳಷ್ಟು ಹೆಚ್ಚು ಪ್ರದೇಶಕ್ಕೆ ಮೂಲಸೌಕರ್ಯ ಕಲ್ಪಿಸಬೇಕಿದೆ’ ಎಂದು ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರಕ್ಕೆ (ರೇರಾ) ನೀಡಿದ ವಾಗ್ದಾನ ಪ್ರಕಾರ ಬಿಡಿಎ ಈ ಬಡಾವಣೆಯಲ್ಲಿ ಹಂಚಿಕೆಯಾಗಿರುವ ನಿವೇಶನಗಳಿಗೆ 2021ರ ಡಿ. 31ರ ಒಳಗಾಗಿ ಸಕಲ ಮೂಲಸೌಕರ್ಯಗಳನ್ನು ಕಲ್ಪಿಸಬೇಕಿದೆ. ಇಲ್ಲದಿದ್ದರೆ ಬಿಡಿಎಗೆ ರೇರಾ ದಂಡ ವಿಧಿಸುವುದಕ್ಕೆ ಅವಕಾಶ ಇದೆ.

‘2 ವರ್ಷ ಕಳೆದರೂ ಸ್ಪಷ್ಟ ನಿರ್ಧಾರವಿಲ್ಲ’

ಹೆಚ್ಚುವರಿ ಕಾಮಗಾರಿಗಳ ಪ್ರಸ್ತಾವ 2019ರ ನವೆಂಬರ್‌ನಲ್ಲೇ ಸಿದ್ಧವಾಗಿತ್ತು. ಈ ಕುರಿತ ಪರಿಷ್ಕೃತ ಪ್ರಸ್ತಾಪಕ್ಕೆ ಬಿಡಿಎ ಆಡಳಿತ ಮಂಡಳಿ 2021ರ ಜ. 30ರಂದು ಅನುಮೋದನೆ ನೀಡಿದ್ದು, ಈಗಿನ ಗುತ್ತಿಗೆದಾರರಿಂದಲೇ ಈ ಕಾಮಗಾರಿ ನಡೆಸಲು ಸೂಚಿಸಿತ್ತು. ಹೆಚ್ಚುವರಿ ಅಂಶಗಳ ವೆಚ್ಚವನ್ನು ಜಲಮಂಡಳಿ, ಬೆಸ್ಕಾಂ ಅಧಿಕಾರಿಗಳು ಹಾಗೂ ಬಿಡಿಎ ಎಂಜಿನಿಯರಿಂಗ್ ಸದಸ್ಯರನ್ನು ಒಳಗೊಂಡ ತಾಂತ್ರಿಕ ಸಲಹಾ ಸಮಿತಿಯೂ ಕೂಲಂಕಷವಾಗಿ ಪರಿಶೀಲಿಸಿ, ಈ ಪ್ರಸ್ತಾವಕ್ಕೆ ಸಮ್ಮತಿ ಸೂಚಿಸಿದೆ. ಆದರೆ ಅನುದಾನ ಬಿಡುಗಡೆ ಬಗ್ಗೆ ಬಿಡಿಎ ಇನ್ನೂ ಸ್ಪಷ್ಟ ನಿರ್ಧಾರ ಕೈಗೊಂಡಿಲ್ಲ. ಹೆಚ್ಚುವರಿ ವೆಚ್ಚ ಭರಿಸದಿದ್ದರೆ ಮೂಲಗುತ್ತಿಗೆಯಲ್ಲಿರುವಷ್ಟೇ ಕಾಮಗಾರಿಗಳನ್ನು ನಿರ್ವಹಿಸುತ್ತೇವೆ ಎಂದು ಗುತ್ತಿಗೆದಾರರು ಬಿಡಿಎಗೆ ಪತ್ರ ಬರೆದಿದ್ದಾರೆ ಎಂದು ಪ್ರಾಧಿಕಾರದ ಮೂಲಗಳು ತಿಳಿಸಿವೆ.



ನಗರದ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿರುವ ‘ಗೋ ಏರ್’ ಕಂಪನಿ ಕೌಂಟರ್ ಎದುರು ಶನಿವಾರ ಸೇರಿದ್ದ ಪ್ರಯಾಣಿಕರು

‘ಗೋ ಏರ್’ ವಿಮಾನ 10 ಗಂಟೆ ತಡ; ಪ್ರಯಾಣಿಕರ ಆಕ್ರೋಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಿಂದ ಪಾಟ್ನಾಗೆ ಶನಿವಾರ ಹೊರಡಬೇಕಿದ್ದ ‘ಗೋ ಏರ್’ ವಿಮಾನ 10 ಗಂಟೆ ತಡವಾಗಿದ್ದರಿಂದ, ಪ್ರಯಾಣಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ನಗರದ ಕೆಂಪೇಗೌಡ ಅಂತರರಾಷ್ಟ್ರೀಯ ನಿಲ್ದಾಣದಿಂದ ವಿಮಾನ ಹೊರಡಬೇಕಿತ್ತು. ನಿಗದಿತ ಸಮಯಕ್ಕಿಂತಲೂ ಮುಂಚೆಯೇ ಪ್ರಯಾಣಿಕರು ಬಂದಿದ್ದರು. ಆದರೆ, ನಿಗದಿಯಂತೆ ವಿಮಾನ ಹಾರಾಟ ನಡೆಸಲಿಲ್ಲ.

‘ಗೋ ಏರ್’ ವಿಮಾನ ಕಂಪನಿ ಕೌಂಟರ್ ಎದುರು ಸೇರಿದ್ದ ಪ್ರಯಾಣಿಕರು, ವಿಮಾನ ತಡವಾದ ಬಗ್ಗೆ ವಿಚಾರಿಸಿದರು. ಸಿಬ್ಬಂದಿ ಪ್ರತಿಕ್ರಿಯೆ ನೀಡಲಿಲ್ಲ. ಆಕ್ರೋಶಗೊಂಡ ಪ್ರಯಾಣಿಕರು, ಸಿಬ್ಬಂದಿಯನ್ನು ತರಾಟೆಗೆ ತೆಗೆದುಕೊಂಡರು.

ಹೆಚ್ಚಿನ ಸಂಖ್ಯೆಯಲ್ಲಿದ್ದ ಪ್ರಯಾಣಿಕರು ಸಿಬ್ಬಂದಿ ಜೊತೆ ವಾಗ್ವಾದ ನಡೆಸಿದರು. ನಿಲ್ದಾಣದ ಹಿರಿಯ ಅಧಿಕಾರಿಗಳು ಮಧ್ಯಪ್ರವೇಶಿಸಿದರೂ ಸಮಾಧಾನವಾಗಲಿಲ್ಲ. ವಿಮಾನ ಕಂಪನಿಯ ವರ್ತನೆಗೆ ಪ್ರಯಾಣಿಕರು ಬೇಸರ ವ್ಯಕ್ತಪಡಿಸಿದರು.

‘ಕೂ’ ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಪ್ರಕಟಿಸಿರುವ ಜಿ.ಕುಮಾರ್, ‘10 ಗಂಟೆ ಕಾದರೂ ವಿಮಾನ ಹಾರಾಟ ನಡೆಸಲಿಲ್ಲ. ಈ ಬಗ್ಗೆ ಕೇಳಿದ್ದಕ್ಕೆ ಸಿಬ್ಬಂದಿ ಪ್ರಯಾಣಿಕರ ಜೊತೆಗೇ ವಾಗ್ವಾದ ನಡೆಸಿದರು’ ಎಂದು ಹೇಳಿಕೊಂಡಿದ್ದಾರೆ.

ವಿಮಾನ ತಡವಾದ ಬಗ್ಗೆ ಪ್ರತಿಕ್ರಿಯೆ ಪಡೆಯಲು ‘ಗೋ ಏರ್’ ಕಂಪನಿ ಪ್ರತಿನಿಧಿಗಳು ಸಂಪರ್ಕಕ್ಕೆ ಸಿಗಲಿಲ್ಲ.

ಶ್ರೀರಂಗಪಟ್ಟಣ ದಸರಾಕ್ಕೆ ಚುಂಚಶ್ರೀ ಚಾಲನೆ, ಬೆಳ್ಳಿರಥದಲ್ಲಿ ದೇವಿಯ ಮೆರವಣಿಗೆ

ಬೆದರಿದ ಆನೆ: ಜಂಬೂಸವಾರಿ ಸ್ಥಗಿತ

ಪ್ರಜಾವಾಣಿ ವಾರ್ತೆ

ಶ್ರೀರಂಗಪಟ್ಟಣ: ಮೂರು ದಿನಗಳ ‘ಶ್ರೀರಂಗಪಟ್ಟಣ ದಸರಾ ಉತ್ಸವ’ದ ಆರಂಭದಲ್ಲೇ ಅಂಬಾರಿ ಹೊತ್ತ ಆನೆ ‘ಗೋಪಾಲಸ್ವಾಮಿ’ಯು ಪಟಾಕಿ ಹಾಗೂ ವಾದ್ಯಗಳ ಸದ್ದಿಗೆ ಬೆದರಿದ್ದರಿಂದ ಜಂಬೂಸವಾರಿಯನ್ನು ಸ್ಥಗಿತಗೊಳಿಸಲಾಯಿತು. ನಂತರ ಚಾಮುಂಡೇಶ್ವರಿ ದೇವಿ ವಿಗ್ರಹವನ್ನು ಬೆಳ್ಳಿರಥದಲ್ಲಿ ಕೂರಿಸಿ ಮೆರವಣಿಗೆಯನ್ನು ಮುಂದುವರಿಸಲಾಯಿತು.

ಆದಿಚುಂಚನಗಿರಿ ಮಠದ ಡಾ. ನಿರ್ಮಲಾನಂದನಾಥ ಸ್ವಾಮೀಜಿ ಶನಿವಾರ ಕಿರಂಗೂರು ಬನ್ನಿ ಮಂಟಪದ ಬಳಿ ಪುಷ್ಪಾರ್ಚನೆ ಮಾಡಿ ಜಂಬೂಸವಾರಿಗೆ ಚಾಲನೆ ನೀಡಿದ ಕೆಲವೇ ಕ್ಷಣಗಳಲ್ಲಿ ಆನೆಗಳು ಬೆದರಿದವು. ಗೋಪಾಲಸ್ವಾಮಿ ಸ್ವಾಮಿ



ಆನೆ ಬೆದರಿದ ಕಾರಣ ಅಂಬಾರಿ ವಾಲಿತ್ತು

ಆನೆ ನಿಂತಲ್ಲೇ ಹಿಂದಕ್ಕೆ ಸುತ್ತು ಹಾಕಿತು. ಅಂಬಾರಿ ವಾಲಿದ್ದರಿಂದ ಆತಂಕ ಸೃಷ್ಟಿಯಾಯಿತು.

ಗಾಬರಿಗೊಂಡ ಜನ ಚೆಲ್ಲಾಪಿಲ್ಲಿಯಾಗಿ ಓಡಿ, ಏರ್ಪಟ್ಟ ನೂಕುನುಗ್ಗಲಿನಿಂದ ಕೆಲವರು ಬಿದ್ದರು. ಆನೆ ವೈದ್ಯರು, ಮಾವುತರು ಹಾಗೂ ಅರಣ್ಯ ಇಲಾಖೆ ಸಿಬ್ಬಂದಿಯ ಸಮಯಪ್ರಜ್ಞೆಯಿಂದಾಗಿ ಪರಿಸ್ಥಿತಿ ನಿಯಂತ್ರಣಕ್ಕೆ ಬಂತು. ಗೋಪಾಲಸ್ವಾಮಿ ಆನೆಗೆ ಕಾವೇರಿ ಆನೆ ಸಾಥ್ ನೀಡಿತ್ತು.

ವಾದ್ಯ, ಧ್ವನಿವರ್ಧಕ ಬಂದ್ ಮಾಡಿದ ನಂತರ ಆನೆ ಸಮಾಧಾನಗೊಂಡಿತು. ಆದರೂ ಮುನ್ನೆಚ್ಚರಿಕೆಯ ದೃಷ್ಟಿಯಿಂದ ಜಂಬೂಸವಾರಿಯನ್ನು ಸ್ಥಗಿತಗೊಳಿಸಲಾಯಿತು. ಉತ್ಸವಕ್ಕೆ 40ಕ್ಕೂ ಹೆಚ್ಚು ಕಲಾ ತಂಡಗಳು ಮೆರಗು ನೀಡಿದವು. ಶ್ರೀರಂಗನಾಥಸ್ವಾಮಿ ದೇವಾಲಯದವರೆಗೆ ನಡೆದ ಮೆರವಣಿಗೆಯಲ್ಲಿ ಸಾವಿರಾರು ಮಂದಿ ಪಾಲ್ಗೊಂಡಿದ್ದರು.

‘ಮೈಸೂರಿನಲ್ಲಿ ಗೋಪಾಲಸ್ವಾಮಿ ಆನೆಗೆ ಉತ್ತಮ ತರಬೇತಿ ನೀಡಲಾಗಿತ್ತು. ಆನೆಗಳ ಹತ್ತಿರಕ್ಕೆ ಬರಬಾರದೆಂಬ ಸೂಚನೆಯನ್ನು ಜನ ಪಾಲಿಸಲಿಲ್ಲ. ಜೊತೆಗೆ ಪಟಾಕಿ, ಧ್ವನಿವರ್ಧಕಗಳ ಸದ್ದು ತೀವ್ರವಾಗಿತ್ತು’ ಎಂದು ಆನೆ ವೈದ್ಯ ಡಾ.ರಮೇಶ್ ತಿಳಿಸಿದರು.

‘ಮೌಲ್ಯಾಧಾರಿತ ಜೀವನದಿಂದ ಬದುಕಿಗೆ ಬೆಲೆ’

ಕಡೇನಂದಿಹಳ್ಳಿ (ಶಿರಾಳಕೊಪ್ಪ): ‘ಮೌಲ್ಯಾಧಾರಿತ ಜೀವನ ಬದುಕಿಗೆ ಶ್ರೇಯಸ್ಸು ಮತ್ತು ಬೆಲೆ ತಂದು ಕೊಡುತ್ತದೆ. ಮನುಷ್ಯ ತಿಳಿದಿರುವುದಕ್ಕಿಂತ ತಿಳಿಯಬೇಕಾಗಿರುವುದು ಬಹಳಷ್ಟಿದೆ. ಸುಖ, ದುಃಖಗಳ ಸಮ್ಮಿಶ್ರಣವೇ ಜೀವನ’ ಎಂದು ಬಾಳೆಹೊನ್ನೂರು ರಂಭಾಪುರಿ ಪೀಠದ ವೀರಸೋಮೇಶ್ವರ ಶಿವಾಚಾರ್ಯ ಸ್ವಾಮೀಜಿ ಅಭಿಪ್ರಾಯಪಟ್ಟರು.

ಕಡೇನಂದಿಹಳ್ಳಿಯಲ್ಲಿ ನಡೆಯುತ್ತಿರುವ ಶರನ್ನವರಾತ್ರಿ ದಸರಾ ದರ್ಬಾರ್ ಅಂಗವಾಗಿ ನಡೆದ ಧರ್ಮ ಸಮಾರಂಭದ 3ನೇ ದಿನದ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

‘ಧಾರ್ಮಿಕ ಮತ್ತು ಸಾಮಾಜಿಕ ಮೌಲ್ಯಗಳು ಕಣ್ಮರೆಯಾದರೆ ಧರ್ಮ ಸಂಸ್ಕೃತಿ ಉಳಿಯಲಾರದು. ವೈಚಾರಿಕತೆಯ ಬಿರುಗಾಳಿಯಲ್ಲಿ ಸತ್ಯ, ಸಂಸ್ಕೃತಿ ಮತ್ತು ಧರ್ಮಾಚರಣೆಗಳು ನಾಶಗೊಳ್ಳಬಾರದು. ಸುಧಾರಣೆಯ



ಶಿರಾಳಕೊಪ್ಪ ಸಮೀಪದ ಕಡೇನಂದಿಹಳ್ಳಿಯಲ್ಲಿ ನಡೆಯುತ್ತಿರುವ ರಂಭಾಪುರಿ ಶ್ರೀ ದಸರಾ ದರ್ಬಾರ್ ಕಾರ್ಯಕ್ರಮದಲ್ಲಿ ಕೋಣಂದೂರಿನ ಸಾಧಕ ಕೆ.ಆರ್. ಪ್ರಕಾಶ ಅವರಿಗೆ ‘ರಂಭಾಪುರಿ ಯುವಸಿರಿ’ ಪ್ರಶಸ್ತಿ ನೀಡಲಾಯಿತು. ವಿಧಾನಪರಿಷತ್ ಸದಸ್ಯ ಆಯನೂರು ಮಂಜುನಾಥ್, ವಿವಿಧ ಮಠಾಧೀಶರು ಇದ್ದರು.

ಹೆಸರಿನಲ್ಲಿ ನಾಸ್ತಿಕ ಮನೋಭಾವ ಬೆಳೆಯಲು ಯಾರೂ ಅವಕಾಶ ಕೊಡಬಾರದು’ ಎಂದು ಕಿವಿಮಾತು ಹೇಳಿದರು.

ಅಕ್ಕಿಆಲೂರಿನ ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ‘ನವರಾತ್ರಿ ನಾಡಹಬ್ಬದ ಆಚರಣೆಯ ಬಗೆಗೆ ಉಪದೇಶಮೃತವನ್ನು ನೀಡುತ್ತ ಆದಿಶಕ್ತಿಯ ಶಕ್ತಿ ಅದ್ಭುತವಾದುದು. ಅಧರ್ಮದ ವಿರುದ್ಧ ಧರ್ಮದ ದಂಡಯಾತ್ರೆ ಕೈಗೊಂಡ ರಂಭಾಪುರಿ ಶ್ರೀಗಳ ಧ್ಯೇಯ ಧೋರಣೆಗಳು ನಮ್ಮೆಲ್ಲರ ಬಾಳಿಗೆ ಬೆಳಕು ತರುತ್ತವೆ’ ಎಂದು ಹೇಳಿದರು.

ನೀರಿನ ಲಭ್ಯತೆ: ಬೆರಳ ತುದಿಯಲ್ಲೇ ಮಾಹಿತಿ

ಕೋಲಾರ: ‘ಭೂಗರ್ಭದಲ್ಲಿ ನೀರಿನ ಲಭ್ಯತೆ ಶೋಧಿಸಿ ರೈತರಿಗೆ ತಮ್ಮ ಕೃಷಿ ಜಮೀನಿನಲ್ಲಿನ ನೀರಿನ ಮಾಹಿತಿಯನ್ನು ಮೊಬೈಲ್ ಆ್ಯಪ್ ಮೂಲಕ ಒದಗಿಸಲಾಗುತ್ತದೆ’ ಎಂದು ಸಣ್ಣ ನೀರಾವರಿ ಸಚಿವ ಜೆ.ಸಿ.ಮಾಧುಸ್ವಾಮಿ ಹೇಳಿದರು.

ಅಂತರ್ಜಲ ನಿರ್ದೇಶನಾಲಯ, ಸಣ್ಣ ನೀರಾವರಿ ಇಲಾಖೆ ಸಹಯೋಗದಲ್ಲಿ ಇಲ್ಲಿ ಶನಿವಾರ ಹಮ್ಮಿಕೊಂಡಿದ್ದ ಕರ್ನಾಟಕ ಅಂತರ್ಜಲ ಮೌಲೀಕರಣ-2020ರ ವರದಿ ಬಿಡುಗಡೆ ಸಮಾರಂಭ ಹಾಗೂ ಅಟಲ್ ಭೂಜಲ ಯೋಜನೆ ಸುಸ್ಥಿರ ಅಂತರ್ಜಲ ನಿರ್ವಹಣೆಯಲ್ಲಿ ಸಮುದಾಯದ ಸಹಭಾಗಿತ್ವ ಕುರಿತ ವಿಚಾರ ಸಂಕಿರಣ ಉದ್ಘಾಟಿಸಿ ಮಾತನಾಡಿದರು.

‘ರೈತರಿಗೆ ನೀರಾವರಿಗೆ ಸಂಬಂಧಿಸಿದ ಮಾಹಿತಿಯನ್ನು ನೇರವಾಗಿ ದಿಶಾ ಆ್ಯಪ್ ಮಾದರಿಯಲ್ಲಿ ಮಾಹಿತಿ ಪಡೆಯಬಹುದು’ ಎಂದು ವಿವರಿಸಿದರು.

ಸಂಕ್ಷಿಪ್ತ ಸುದ್ದಿ

ಚಿನ್ನದ ಪದಕ ವಿಜೇತೆ ಆತ್ಮಹತ್ಯೆ

ಮೈಸೂರು: ಎಂ.ಟೆಕ್‌ನಲ್ಲಿ 8 ತಿಂಗಳ ಹಿಂದೆಯಷ್ಟೇ ಚಿನ್ನದ ಪದಕ ಪಡೆದಿದ್ದ ಆಶಾ (31) ನೇಣು ಹಾಕಿಕೊಂಡು ಶುಕ್ರವಾರ ಆತ್ಮಹತ್ಯೆ ಮಾಡಿಕೊಂಡರು.

‘9 ವರ್ಷಗಳ ಹಿಂದೆ ನಾಗಪ್ರಸಾದ್ ಎಂಬುವವರನ್ನು ಪ್ರೀತಿಸಿ ವಿವಾಹವಾಗಿದ್ದ ಅವರಿಗೆ 6 ವರ್ಷದ ಮಗನಿದ್ದಾನೆ. ಇಲ್ಲಿನ ಸೂಯೆಜ್‌ಫಾರಂ ಎದುರಿನ ಅಪಾರ್ಟ್‌ಮೆಂಟ್‌ವೊಂದರಲ್ಲಿ ವಾಸವಿದ್ದ ಅವರು, ಈಚೆಗೆ ಖಾಸಗಿ ಕಾಲೇಜಿನಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ ಕೆಲಸಕ್ಕೆ ಸೇರಿದ್ದರು. ಸಾಯುವ ಮುನ್ನ ಪತಿಗೆ ಎಸ್‌ಎಂಎಸ್ ಕಳಿಸಿದ್ದರು. ಪತಿಯೊಂದಿಗಿನ ವೈಮನಸ್ಯವೇ ಕಾರಣ’ ಎಂದು ವಿದ್ಯಾರಣ್ಯಪುರಂ ಠಾಣೆ ಪೊಲೀಸರು ತಿಳಿಸಿದ್ದಾರೆ.

ಮಗುವಿನ ಹೂತಿದ್ದ ಶವ ಹೊರತೆಗೆಸಿದ ಪೊಲೀಸರು

ವಿಜಯಪುರ: ಪೋಕ್ಸೊ ಪ್ರಕರಣವೊಂದಕ್ಕೆ ಸಂಬಂಧಿಸಿದಂತೆ ಡಿಎನ್‌ಎ ಪರೀಕ್ಷೆಗಾಗಿ ತಿಪ್ಪೆಗುಂಡಿಯಲ್ಲಿ ಹೂತಿದ್ದ ಮಗುವಿನ ಮೃತದೇಹವನ್ನು ಉಪ ವಿಭಾಗಾಧಿಕಾರಿ ಅವರ ಅನುಮತಿ ಪಡೆದು ತಹಶೀಲ್ದಾರ್ ಸಮ್ಮುಖದಲ್ಲಿ ಹೊರತೆಗೆದು ಮರಣೋತ್ತರ ಪರೀಕ್ಷೆಗೆ ಒಳಪಡಿಸಲಾಗಿದೆ ಎಂದು ಸರ್ಕಲ್ ಇನ್‌ಸ್ಪೆಕ್ಟರ್ ಟಿ. ಶ್ರೀನಿವಾಸ್ ಮಾಹಿತಿ ನೀಡಿದರು.

ಹೋಬಳಿಯ ಗ್ರಾಮವೊಂದರಲ್ಲಿ ಗಾರೆ ಕೆಲಸಕ್ಕೆಂದು ಬಂದಿದ್ದ ಚಿಂತಾಮಣಿ ತಾಲ್ಲೂಕಿನ ಯುವಕನೊಬ್ಬ ಗ್ರಾಮದ ಅಪ್ರಾಪ್ತ ಯುವತಿಯನ್ನು ಮದುವೆಯಾಗುವುದಾಗಿ ನಂಬಿಸಿದ್ದ. ಬಳಿಕ ಆಕೆಯೊಂದಿಗೆ ದೈಹಿಕ ಸಂಪರ್ಕವಿಟ್ಟುಕೊಂಡು ಪರಾರಿಯಾಗಿದ್ದ. ಬಾಲಕಿ ಗರ್ಭಿಣಿಯಾದಾಗ ಪ್ರಕರಣ ಪ್ರಕರಣ ಬೆಳಕಿಗೆ ಬಂದಿತ್ತು.

ಆಕೆಗೆ ಪ್ರಸವವಾದ ನಂತರ ಮಗು ಜನಿಸುವಾಗಲೇ ಮೃತಪಟ್ಟಿದ್ದರಿಂದ ಗ್ರಾಮದ ತಿಪ್ಪೆಗುಂಡಿಯಲ್ಲಿ ಹೂತು ಹಾಕಲಾಗಿತ್ತು. ಈ ಬಗ್ಗೆ ಅ. 1ರಂದು ವಿಜಯಪುರ ಪೊಲೀಸ್ ಠಾಣೆಯಲ್ಲಿ ಅಪ್ರಾಪ್ತ ತಾಯಿ ದೂರು ನೀಡಿದ್ದು, ಪೊಲೀಸರು ಪೋಕ್ಸೊ ಪ್ರಕರಣ ದಾಖಲಿಸಿದ್ದರು.

ಹಾಸನ-ಸೊಲ್ಲಾಪುರ ರೈಲು ಸಂಚಾರ ರದ್ದು

ಕಲಬುರಗಿ: ಯಲಹಂಕ–ಪೆನುಕೊಂಡ ವಲಯದ ಜೋಡಿ ಮಾರ್ಗ ಕಾಮಗಾರಿ ಅಂಗವಾಗಿ ಹಿಂದುಪುರ–ದೇವರಪಲ್ಲಿ ಮಾರ್ಗದಲ್ಲಿ ಮೂರನೇ ಹಂತದಲ್ಲಿ ಹಳಿಗಳನ್ನು ಅಳವಡಿಸುವ ಕಾರ್ಯ ನಡೆಯಲಿರುವುದರಿಂದ ಇದೇ 16ರಿಂದ 20ರವರೆಗೆ ದಕ್ಷಿಣ ಮಧ್ಯ ರೈಲ್ವೆಯು ಸೊಲ್ಲಾಪುರ-ಹಾಸನ (01311) ರೈಲು ಸಂಚಾರವನ್ನು ರದ್ದುಗೊಳಿಸಿದೆ.

ಸೊಲ್ಲಾಪುರದಿಂದ ಹಾಸನಕ್ಕೆ ತೆರಳುವ ರೈಲು 16ರಿಂದ 19ರವರೆಗೆ ಸಂಚಾರ ಸ್ಥಗಿತಗೊಳಿಸಲಿದೆ. ಹಾಸನದಿಂದ ಸೊಲ್ಲಾಪುರಕ್ಕೆ (01312) ಬರುವ ರೈಲು ಅ 17ರಿಂದ 20ರವರೆಗೆ ಸಂಚಾರ ನಡೆಸುವುದಿಲ್ಲ ಎಂದು ರೈಲ್ವೆ ಪ್ರಕಟಣೆ ತಿಳಿಸಿದೆ.

ಕಡಲಾಮೆಯ ಕಳೇಬರ ಪತ್ತೆ



ಗೋಕರ್ಣ ಮೇನ್ ಬೀಚಿನಲ್ಲಿ ಪತ್ತೆಯಾದ ಕಡಲಾಮೆಯ ಮೃತದೇಹ

ಗೋಕರ್ಣ: ಮೇನ್ ಬೀಚಿನ ದಡದಲ್ಲಿ ಶನಿವಾರ ಕಡಲಾಮೆಯ ಮೃತದೇಹ ಪತ್ತೆಯಾಗಿದೆ. ಕಡಲಾಮೆ ಮೃತಪಟ್ಟು ಎರಡು ದಿನಗಳಾಗಿರಬಹುದು ಎಂದು ಅಂದಾಜಿಸಲಾಗಿದೆ.

ಬಿಸಿಲಿಗೆ ಆಮೆಯ ಮೈಯೆಲ್ಲ ಬಿರುಕು ಬಿಟ್ಟಿದೆ. ಮೀನುಗಾರರ ಬಲೆಗೆ ಸಿಲುಕಿ ಮೃತಪಟ್ಟಿರುವ ಸಾಧ್ಯತೆಯೂ ಇದೆ ಎಂದು ಅರಣ್ಯ ಇಲಾಖೆಯ ಅಧಿಕಾರಿಗಳು ತಿಳಿಸಿದ್ದಾರೆ.

ಗಾಂಜಾ ಪ್ರಕರಣ; ಪಿಐ ಸೇರಿ ಏಳು ಮಂದಿ ಅಮಾನತು

ಹುಬ್ಬಳ್ಳಿ: ವಶಪಡಿಸಿಕೊಂಡಿದ್ದ ಗಾಂಜಾ ಮಾರಾಟ ಮಾಡಿದ ಆರೋಪ ಎದುರಿಸುತ್ತಿರುವ ಇನ್‌ಸ್ಪೆಕ್ಟರ್, ಎಎಸ್‌ಐ ಹಾಗೂ ಕಾನ್‌ಸ್ಟೆಬಲ್ ಸೇರಿ ಏಳು ಮಂದಿಯನ್ನು ಹು–ಧಾ ಪೊಲೀಸ್ ಕಮಿಷನರ್ ಲಾಬೂರಾಮ್ ಅಮಾನತು ಮಾಡಿದ್ದಾರೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಕೊಯಿರಾ ಗ್ರಾಮದ ಕೆರೆ

ಸೋನೆ ಮಳೆಗೆ ಕೊಯಿರಾ ಕೆರೆ ಭರ್ತಿ

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: ಹಲವಾರು ವರ್ಷಗಳಿಂದ ತೀವ್ರ ಬರಗಾಲಕ್ಕೆ ತುತ್ತಾಗಿದ್ದ ತಾಲ್ಲೂಕಿನಲ್ಲಿ ಕುಡಿಯುವ ನೀರಿಗೂ ಜನರು ಪರದಾಡುವಂತಾಗಿತ್ತು. ಜಾನುವಾರುಗಳಿಗೆ ನೀರು ಒದಗಿಸಲು, ಜನರು ಕುಡಿಯುವ ನೀರಿಗಾಗಿ ಕೊಳವೆಬಾವಿಗಳನ್ನು ಅವಲಂಬಿಸಬೇಕಾದಂತಹ ಪರಿಸ್ಥಿತಿಯಿತ್ತು.

ಇತ್ತೀಚೆಗೆ ಬೀಳುತ್ತಿರುವ ಮಳೆಯಿಂದಾಗಿ ತಾಲ್ಲೂಕಿನ ಕೊಯಿರಾ ಗ್ರಾಮದ ಕೆರೆ ತುಂಬಿ ಕೋಡಿ ಹರಿದಿರುವುದು ಅಂತರ್ಜಲ ವೃದ್ಧಿಗೆ ಹೆಚ್ಚು ಸಹಕಾರಿಯಾಗಲಿದೆ ಎಂದು ರೈತರು ಸಂತಸ ವ್ಯಕ್ತಪಡಿಸಿದ್ದಾರೆ.

ಕೊಯಿರಾ ಗ್ರಾಮದ ಕೆರೆ ಅಭಿವೃದ್ಧಿಗೊಳಿಸಲು ಈ ಹಿಂದಿನ ಜಿಲ್ಲಾಧಿಕಾರಿ ಕೆರೆ ಹೂಳೆತ್ತುವ ಕಾರ್ಯಕ್ಕೆ ಚಾಲನೆ ಕೊಟ್ಟಿದ್ದರು. ನಂತರ ಬೆಂಗಳೂರಿನ ರಾಜಮಹಲ್ ವಿಲಾಸ್, ರೋಟರಿ ಸಂಸ್ಥೆಯಿಂದ ಕೆರೆ ಹೂಳೆತ್ತುವ ಕಾರ್ಯಕ್ಕೆ ಸಹಕಾರ ನೀಡಿದ್ದರು.

ಸುಮಾರು ₹80 ಲಕ್ಷ ವೆಚ್ಚದಲ್ಲಿ ಹೂಳೆತ್ತುವ ಕಾರ್ಯಕ್ಕೆ ಕ್ರಿಯಾಯೋಜನೆ ರೂಪಿಸಿ, ಅದರಲ್ಲಿ ₹20 ಲಕ್ಷ ಮೊತ್ತದ ಕಾಮಗಾರಿ ಮುಗಿಸಿದ್ದಾರೆ. ಕಳೆದ ಎರಡು, ಮೂರು ದಿನಗಳಿಂದ ಬೀಳುತ್ತಿರುವ ಉತ್ತಮ ಮಳೆಯಿಂದಾಗಿ ಕೊಯಿರಾ ಕೆರೆ ತುಂಬಿ ಕೋಡಿ ಹೋಗಿದೆ.ಈ ಕೆರೆ ಕೋಡಿ ಹೋಗಿದ್ದು,



ದೇವನಹಳ್ಳಿ ತಾಲ್ಲೂಕಿನಲ್ಲಿ ಸುರಿದಿರುವ ಮಳೆಯಿಂದಾಗಿ ಕೊಯಿರಾ ಗ್ರಾಮದ ಕೆರೆ ತುಂಬಿ ಕೋಡಿ ಹರಿಯುತ್ತಿರುವುದು

ಅರ್ಕಾವತಿ ನದಿ ಪಾತ್ರ ಇರುವುದರಿಂದ ರಾಮನಾಥಪುರ, ಅರುವನಹಳ್ಳಿ, ಬೀರಸಂದ್ರ ಕೆರೆ ಮಾರ್ಗವಾಗಿ ಹೆಸರಘಟ್ಟ ಕೆರೆಗೆ ನೀರು ಹರಿದು ಹೋಗಲಿದೆ. ರಾಜಕಾಲುವೆ ಸೇರಿದಂತೆ ಇನ್ನಿತರೆ ದುರಸ್ತಿ ಮಾಡಿದರೆ ಮತ್ತಷ್ಟು ನೀರು ಹರಿಯಲು ಸಾಧ್ಯವಾಗುತ್ತದೆ. ಕಳೆದ ವರ್ಷ ಕೆರೆ ತುಂಬಿತ್ತು. ಕೋಡಿ ಹೋಗಿರಲಿಲ್ಲ. ಈ ವರ್ಷ ಕೆರೆ ಕೋಡಿ ಹರಿದಿದೆ. ಕೆರೆ ತುಂಬಿ ತುಳುಕುತ್ತಿರುವುದನ್ನು ನೋಡಿ ಜನರು ಸಂತಸ ವ್ಯಕ್ತಪಡಿಸಿದರು.

ಜಿಲ್ಲೆಯಲ್ಲಿ ಯಾವುದೇ ನದಿ ಮೂಲಗಳು ಇಲ್ಲ. ಮಳೆ ಆಶ್ರಯದಲ್ಲಿಯೇ ಜನರು ಬದುಕು ಕಟ್ಟಿಕೊಂಡಿದ್ದಾರೆ. ಬೇಸಿಗೆ ಕಾಲದಲ್ಲಿ ನೀರಿನ ಅಭಾವದಿಂದಾಗಿ ತೋಟ ಮತ್ತು ಕೃಷಿಗಳಿಗೆ ಟ್ಯಾಂಕರ್ ಗಳ ಮೂಲಕ ನೀರನ್ನು ಹಾಯಿಸುತ್ತಾರೆ.

ಕೊಳವೆಬಾವಿಗಳು ಬತ್ತಿ ಹೋಗುತ್ತಿವೆ. ರೈತರು ಕೊಳವೆಬಾವಿಗಳನ್ನೇ ನಂಬಿಕೊಂಡಿದ್ದಾರೆ. ಉತ್ತಮ ಮಳೆಯಾಗಿರುವುದರಿಂದ ಕೆರೆ ತುಂಬಿದ್ದು, ಸುತ್ತಮುತ್ತಲಿನ ತೋಟಗಳ ಹತ್ತಿರ ಇರುವ ಬೋರ್‌ವೆಲ್‌ಗಳಲ್ಲಿ ನೀರಿನ ಅಂತರ್ಜಲಮಟ್ಟ ಹೆಚ್ಚಲು ಅನುಕೂಲವಾಗಿದೆ. ನಿರಂತರ ಮಳೆಯಿಂದಾಗಿ ರೈತರ ಕೃಷಿ ಚಟುವಟಿಕೆಗಳು ಗೆದರಿವೆ.

ಬೆಳಿಗ್ಗೆ 11 ಗಂಟೆಯಿಂದ ಮಧ್ಯಾಹ್ನ 2 ಗಂಟೆವರೆಗೆ ಮಳೆಯಾಗಿದ್ದರಿಂದ ಜನ ಜೀವನ ಅಸ್ತವ್ಯಸ್ತಗೊಂಡಿತ್ತು. ಮನೆಯಿಂದ ಹೊರಬಾರದೆ ಕೆಲವು ಜನರು ಮನೆಯಲ್ಲಿಯೇ ಇರಬೇಕಾಯಿತು.

ಎರಡನೇ ಶನಿವಾರ ಆಗಿದ್ದರಿಂದ ಜನಸಾಮಾನ್ಯರ ಓಡಾಟ ಕಡಿಮೆಯಿತ್ತು.

ಮುಖ್ಯಾಂಶಗಳು

- ಅರ್ಕಾವತಿ ನದಿ ಪಾತ್ರದ ಕೆರೆಗಳಿಗೆ ಹರಿದು ಬಂದ ನೀರು
- ಮಳೆ ಆಶ್ರಯದಲ್ಲಿಯೇ ಜನರು ಬದುಕು
- ಬೋರ್‌ವೆಲ್‌ಗಳಲ್ಲಿ ನೀರಿನ ಅಂತರ್ಜಲಮಟ್ಟ ಹೆಚ್ಚಲು ಅನುಕೂಲ

ಮಳೆಯಿಂದಾಗಿ ಗ್ರಾಮೀಣ ಮತ್ತು ನಗರ, ಪಟ್ಟಣ ಪ್ರದೇಶದ ರಸ್ತೆಗಳಲ್ಲಿ ನೀರು ನಿಂತಿದ್ದವು. ಎತ್ತರದ ಪ್ರದೇಶದಿಂದ ಹರಿದುಬಂದ ಮಳೆ ನೀರು ಚರಂಡಿಗಳಲ್ಲಿ ತುಂಬಿ ರಸ್ತೆಯಲ್ಲಿ ಹರಿಯುತ್ತಿದ್ದ ದೃಶ್ಯ ಕಂಡುಬಂದಿತು.

ಕೆಲವು ಕಡೆಗಳಲ್ಲಿ ಚರಂಡಿಗಳ ವ್ಯವಸ್ಥೆಯಿಲ್ಲದೆ, ರಸ್ತೆಗಳಲ್ಲಿಯೇ ನೀರು ನಿಲ್ಲುವಂತೆ ಆಗಿತ್ತು. ತಗ್ಗುಪ್ರದೇಶಗಳಲ್ಲಿನ ಮನೆಗಳಿಗೆ ನೀರು ನುಗ್ಗಿದ್ದವು

‘ಕೆರೆ ಹೂಳೆತ್ತಿರುವ ಪರಿಣಾಮ ಮಳೆನೀರು ಸಂಗ್ರಹವಾಗಿ ಮಳೆಯಿಂದಾಗಿ ನೀರು ಶೇಖರಣೆಯಾಗಿ ಕೋಡಿ ಹರಿದಿದೆ. ಇದರಿಂದ ಹೆಚ್ಚು ಸಂತಸ ತಂದಿದೆ. ರೈತರಿಗೆ ಕೆರೆ ತುಂಬಿರುವುದು ಸಂಜೀವಿನಿಯಾಗಿದಂತಾಗಿದೆ. ತಾಲ್ಲೂಕಿನಲ್ಲಿರುವ ಎಲ್ಲಾ ಕೆರೆಗಳಲ್ಲಿ ಹೂಳು ತೆಗೆಯುವುದರಿಂದ ಮತ್ತಷ್ಟು ಸಹಕಾರಿಯಾಗಲಿದೆ’ ಎಂದು ಮುಖಂಡ ಚಿಕ್ಕೇಗೌಡ ಹೇಳಿದರು.

ಚನ್ನಪಟ್ಟಣ ಮಾರುತಿ ಬಡಾವಣೆಯಲ್ಲಿ ಪ್ರಕರಣ: ಆತಂಕ

ಟ್ಯಾಂಕ್‌ನಲ್ಲಿ ಮಹಿಳೆಯ ಮೃತದೇಹ ಪತ್ತೆ

ಪ್ರಜಾವಾಣಿ ವಾರ್ತೆ

ಚನ್ನಪಟ್ಟಣ: ಪಟ್ಟಣದ ನ್ಯಾಯಾಲಯ ಹಿಂಭಾಗದ ಮಾರುತಿ ಬಡಾವಣೆಯ ಓವರ್‌ಹೆಡ್ ಟ್ಯಾಂಕ್‌ನಲ್ಲಿ ಶನಿವಾರ ಬೆಳಿಗ್ಗೆ ಮಹಿಳೆಯೊಬ್ಬರ ಮೃತದೇಹ ಪತ್ತೆಯಾಗಿದ್ದು, ಈ ಭಾಗದ ನಿವಾಸಿಗಳಲ್ಲಿ ಆತಂಕ ಸೃಷ್ಟಿಸಿದೆ.

ಮೂರು ವಾರ್ಡ್‌ಗಳ ಸಾವಿರಾರು ಮನೆಗಳಿಗೆ ನೀರು ಪೂರೈಸುವ 1 ಲಕ್ಷ ಲೀಟರ್‌ಗೂ ಅಧಿಕ ಸಾಮರ್ಥ್ಯದ ಟ್ಯಾಂಕ್‌ನಲ್ಲಿ ಕೊಳೆತ ಸ್ಥಿತಿಯಲ್ಲಿ ಮೃತದೇಹ ಪತ್ತೆಯಾಗಿದೆ. ಮೃತದೇಹದ ಅಂಗಾಂಗಗಳು ಟ್ಯಾಂಕ್‌ನ ದೊಡ್ಡ ಪೈಪ್‌ಗಳಲ್ಲಿ ದೊರೆತಿರುವ ಕಾರಣ ಈ ಮಹಿಳೆ ಹಲವು ದಿನಗಳ ಹಿಂದೆಯೇ ಟ್ಯಾಂಕ್‌ಗೆ ಬಿದ್ದು ಮೃತಪಟ್ಟಿರಬಹುದು ಎಂದು ಶಂಕಿಸಲಾಗಿದೆ. ಕಳೆದ ಮೂರ್ನಾಲ್ಕು ದಿನಗಳಿಂದ ಈ ಭಾಗದಲ್ಲಿ ವಾಸನೆಯುಕ್ತ ನೀರು ಸರಬರಾಜಾಗುತ್ತಿದ್ದುದು, ಇದಕ್ಕೆ ಪುಷ್ಟಿ ನೀಡಿದೆ.



ಕಾರ್ಯಾಚರಣೆ ನಡೆಸಿದ ಜಲಮಂಡಳಿ, ನಗರಸಭೆ ಮತ್ತು ಪೊಲೀಸ್ ಸಿಬ್ಬಂದಿ

ಪತ್ತೆಯಾಗಿದ್ದು ಹೀಗೆ: ವಾರ್ಡ್‌ಗಳಿಗೆ ನೀರು ಸರಬರಾಜು ಮಾಡುತ್ತಿದ್ದ ಟ್ಯಾಂಕ್‌ನಿಂದ ಶುಕ್ರವಾರ ಸಂಜೆಯೇ ನೀರು ಪೂರೈಕೆ ನಿಂತು ಹೋಗಿದೆ. ಇದನ್ನು ಗಮನಿಸಿದ ಹಲವರು ಜಲಮಂಡಳಿ, ನಗರಸಭೆ ಅಧಿಕಾರಿಗಳಿಗೆ ದೂರು ನೀಡಿದ್ದಾರೆ.

ಶನಿವಾರ ಓವರ್ ಹೆಡ್ ಟ್ಯಾಂಕ್ ಬಳಿಗೆ ಬಂದ ಜಲಮಂಡಳಿ ಹಾಗೂ ನಗರಸಭೆ ಸಿಬ್ಬಂದಿ ಟ್ಯಾಂಕ್ ಕೆಳಗೆ ಇದ್ದ ದೊಡ್ಡ ವಾಲ್ವ್ ಅನ್ನು ಬಿಚ್ಚಿದ್ದಾರೆ. ಆಗ ಮೃತದೇಹದ ಕಾಲು ಪೈಪ್‌ಗೆ ಅಡ್ಡವಾಗಿ ಸಿಕ್ಕಿಕೊಂಡಿರುವುದು ಗೋಚರವಾಗಿದೆ.

ಮೃತದೇಹದ ಕಾಲು ಸಿಕ್ಕಿದ ನಂತರ ಟ್ಯಾಂಕ್ ಮೇಲೇರಿ ಪರಿಶೀಲನೆ ನಡೆಸಲಾಯಿತು. ಆದರೂ ಮೃತದೇಹದ ಯಾವುದೇ ಅಂಗ ಪತ್ತೆಯಾಗಿಲ್ಲ. ನೀರಿನಲ್ಲಿ ಮೃತದೇಹ ಬೆರೆತು ಹೋಗಿರಬಹುದು ಎನ್ನಲಾಗಿದೆ.

ಆತ್ಮಹತ್ಯೆಯೋ, ಕೊಲೆಯೋ?: ಓವರ್‌ಹೆಡ್ ಟ್ಯಾಂಕ್ ಮೇಲೆ ಮಹಿಳೆಯ ಸೀರೆಗಳು, ಚಪ್ಪಲಿ, ಕೊಡೆ ದೊರೆತಿದೆ. ಹೀಗಾಗಿ, ಮಹಿಳೆಯೊಬ್ಬರು ಟ್ಯಾಂಕ್ ಒಳಗೆ ಬಿದ್ದು ಆತ್ಮಹತ್ಯೆ ಮಾಡಿಕೊಂಡಿರಬಹುದು ಎಂದು ಶಂಕಿಸಲಾಗಿದೆ.

ಆದರೆ, ಮಹಿಳೆಯೊಬ್ಬರು ಎತ್ತರದ ಟ್ಯಾಂಕ್ ಏರುವುದು ಅಸಾಧ್ಯ. ಹೀಗಾಗಿ, ಕೊಲೆ ಇರಬಹುದೇ ಎಂಬ ಶಂಕೆಯೂ ಇದೆ. ಸ್ಥಳದಲ್ಲಿ ತಹಶೀಲ್ದಾರ್ ನಾಗೇಶ್, ಡಿವೈಎಸ್ಪಿ ರಮೇಶ್ ಅವರೂ ಭೇಟಿ ನೀಡಿದ್ದರು.

ಬಜರಂಗದಳ ಕಾರ್ಯಕರ್ತರಿಂದ ಹಲ್ಲೆ: ಇಬ್ಬರ ಬಂಧನ

ಮಂಗಳೂರು: ಮೂಡುಬಿದಿರೆಯಲ್ಲಿ ಮುಸ್ಲಿಂ ಪುರುಷನೊಂದಿಗೆ ಪರಿಚಿತ ಹಿಂದೂ ಮಹಿಳೆಯರು ಕಾರಿನಲ್ಲಿ ಪ್ರಯಾಣಿಸಿದ್ದನ್ನು ಪ್ರಶ್ನಿಸಿದ ಬಜರಂಗದಳ ಕಾರ್ಯಕರ್ತರು, ಅವಾಚ್ಯ ಶಬ್ದಗಳಿಂದ ನಿಂದಿಸಿ, ಹಲ್ಲೆ ಮಾಡಿದ್ದಾರೆ.

ಶನಿವಾರ ಬೆಳಿಗ್ಗೆ ಉಡುಪಿ ಜಿಲ್ಲೆಯ ಕಾರ್ಕಳದ ಗೀತಾ ತನ್ನ ಸ್ನೇಹಿತೆ ಮಂಜುಳಾ ಅವರ ಜೊತೆ ತಮ್ಮ ಆ್ಯಕ್ಟಿವಾ ಸ್ಕೂಟಿಯಲ್ಲಿ ಮನೆಯಿಂದ ಮೂಡುಬಿದಿರೆಯ ಹನುಮಾನ್ ದೇವಸ್ಥಾನಕ್ಕೆ ಪೂಜೆಗೆಂದು ತೆರಳಿದ್ದರು. ಮಾರ್ಗಮಧ್ಯೆ ಸಾಣೂರು ಎಂಬಲ್ಲಿ ಗೀತಾ ಅವರ ಪರಿಚಯದ ಅಶ್ರಫ್ ಹಾಗೂ ಅವರ ಪತ್ನಿ ಸೌದ ಭೇಟಿಯಾಗಿದ್ದಾರೆ. ಮಾರುತಿ ಆಲ್ಟೊ ಕಾರು ನಿಲ್ಲಿಸಿದ ಅಶ್ರಫ್, ಗೀತಾ ಅವರೊಂದಿಗೆ ಮಾತಿಗಿಳಿದರು.

ಗೀತಾ ಹಾಗೂ ಮಂಜುಳಾ ಅವರನ್ನು ಅಶ್ರಫ್ ಕಾರಿನಲ್ಲಿ ಕೂರಿಸಿಕೊಂಡು, ಮೂಡುಬಿದಿರೆ ಕಡೆಗೆ ತೆರಳುತ್ತಿದ್ದರು. ಬೆಳಿಗ್ಗೆ 10.30ರ ಸುಮಾರಿಗೆ ಕಾರು ಕೆಸರುಗದ್ದೆ ತಲುಪುತ್ತಿದ್ದಂತೆ 2–3 ಬೈಕ್‌ಗಳಲ್ಲಿ ಬಂದ ಆರರಿಂದ ಎಂಟು ಮಂದಿ ಬಜರಂಗದಳ ಕಾರ್ಯಕರ್ತರು ಕಾರಿಗೆ ಅಡ್ಡ ಗಟ್ಟಿದ್ದಾರೆ.

ಕಾರಿನಲ್ಲಿ ಇದ್ದವರ ಮೇಲೆ ಹಲ್ಲೆ ಮಾಡಿ, ಮೊಬೈಲ್‌ನಲ್ಲಿ ಫೋಟೊ ಹಾಗೂ ವಿಡಿಯೊ ಚಿತ್ರೀಕರಣ ಮಾಡಿ ಮಾನಹಾನಿಗೆ ಯತ್ನಿಸಿದ್ದಾರೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.ಮೂಡುಬಿದಿರೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಇಬ್ಬರ ಬಂಧನ: ಪ್ರಕರಣದ ನಾಲ್ಕು ಮಂದಿ ಸಂತ್ರಸ್ತರು ಕೂಡ ಕಾರ್ಕಳದವರು. ಪ್ರಕರಣ ದಾಖಲಿಸಿಕೊಂಡು, ಇಬ್ಬರನ್ನು ಬಂಧಿಸಲಾಗಿದೆ. ಉಳಿದವರಿಗೆ ಶೋಧ ನಡೆಸಲಾಗಿದೆ ಎಂದು ನಗರ ಪೊಲೀಸ್ ಕಮಿಷನರ್ ಎನ್.ಶಶಿಕುಮಾರ್ ತಿಳಿಸಿದ್ದಾರೆ.

ಎತ್ತಿನಹೊಳೆ: ನೋಡಲ್ ಅಧಿಕಾರಿ ನೇಮಿಸಲು ಆಗ್ರಹ

ಸಕಲೇಶಪುರ: ‘ಬಯಲು ಸೀಮೆ ಜಿಲ್ಲೆಗಳಿಗೆ ನೀರು ಪೂರೈಸುವ ಎತ್ತಿನಹೊಳೆ ಯೋಜನೆಗೆ ವಿರೋಧವಿಲ್ಲ. ಆದರೆ ಆದರೆ, ಯೋಜನೆ ಆರಂಭವಾಗಿ ಹಲವು ವರ್ಷಗಳಾದರೂ, ಎಷ್ಟು ದಿನ ಜನರಿಗೆ ಕೊಳಚೆ ನೀರನ್ನೇ ಕುಡಿಸುತ್ತೀರಾ’ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಸರ್ಕಾರವನ್ನು ಪ್ರಶ್ನಿಸಿದರು.

ತಾಲ್ಲೂಕಿನ ಮಾರನಹಳ್ಳಿ ಬಳಿ ಶನಿವಾರ ಎತ್ತಿನಹೊಳೆ ಯೋಜನೆ ಕಾಮಗಾರಿ ಪರಿಶೀಲಿಸಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಯೋಜನೆ ಆರಂಭಿಸಿದ ಮೂರು ವರ್ಷದಲ್ಲಿ ನೀರು ಕೊಡುವುದಾಗಿ ಕಾಂಗ್ರೆಸ್ ಭರವಸೆ ನೀಡಿತ್ತು. ಏಳು ವರ್ಷವಾದರೂ ನೀರಿಲ್ಲ. ಮೊದಲ ಹಂತದ ಕಾಮಗಾರಿ ಪೂರ್ಣಗೊಳಿಸಿ ಪ್ರಾಯೋಗಿಕವಾಗಿ ನೀರು ಮೇಲೆತ್ತಬೇಕು. ರೈತರಿಗೆ ಪರಿಹಾರ ನೀಡಲು ಸರ್ಕಾರದ ಬಳಿ ಹಣವಿಲ್ಲ. ಆದರೆ ಗುತ್ತಿಗೆದಾರರಿಗೆ ಸಮಯಕ್ಕೆ ಸರಿಯಾಗಿ ಹಣ ಪಾವತಿಯಾಗುತ್ತಿದೆ’ ಎಂದು ಬೇಸರ ವ್ಯಕ್ತಪಡಿಸಿದರು.

‘ಯೋಜನೆ ನಿರ್ವಹಣೆಗೆ ವಿಶೇಷ ನೋಡಲ್ ಅಧಿಕಾರಿಯನ್ನು ನೇಮಿಸಬೇಕು. ವಿಸ್ತೃತ ಯೋಜನಾ ವರದಿಯೇ ಇಲ್ಲದಿರುವುದರಿಂದ ವೆಚ್ಚ ಹೆಚ್ಚಾಗುತ್ತಿದೆ. ₹8 ಸಾವಿರ ಕೋಟಿ ವೆಚ್ಚದ ಯೋಜನೆ ₹23 ಸಾವಿರ ಕೋಟಿ ತಲುಪಿದ್ದು, ಇನ್ನೂ ಹೆಚ್ಚಾಗಬಹುದು. ಈವರೆಗೂ ₹9 ಸಾವಿರ ಕೋಟಿ ವೆಚ್ಚವಾಗಿದೆ. ಜನರ ಹೆಸರಿನಲ್ಲಿ ಹಣ ದುರುಪಯೋಗವಾಗಬಾರದು’ ಎಂದು ಪ್ರತಿಪಾದಿಸಿದರು.



ಮೊದಲ ಕ್ವಾಲಿಫೈಯರ್ ಇಂದು; ಚೆನ್ನೈ ಸೂಪರ್ ಕಿಂಗ್ಸ್ – ಡೆಲ್ಲಿ ಕ್ಯಾಪಿಟಲ್ಸ್ ತಂಡಗಳ ಮುಖಾಮುಖಿ

ಫೈನಲ್ ಮೇಲೆ 'ಗುರು–ಶಿಷ್ಯ' ಕಣ್ಣು

ದುಬೈ (ಪಿಟಿಐ): ಈ ಬಾರಿಯ ಐಪಿಎಲ್ ಟೂರ್ನಿಯಲ್ಲಿ ಮೂರನೇ ಬಾರಿ 'ಗುರು–ಶಿಷ್ಯ'ರು ಮುಖಾಮುಖಿಯಾಗುತ್ತಿದ್ದಾರೆ. ಮಹೇಂದ್ರಸಿಂಗ್ ಧೋನಿ ನಾಯಕತ್ವದ ಚೆನ್ನೈ ಸೂಪರ್ ಕಿಂಗ್ಸ್ ತಂಡವು ಭಾನುವಾರ ನಡೆಯಲಿರುವ ಕ್ವಾಲಿಫೈಯರ್ ಪಂದ್ಯದಲ್ಲಿ ರಿಷಭ್ ಪಂತ್ ನಾಯಕತ್ವದ ಡೆಲ್ಲಿ ಕ್ಯಾಪಿಟಲ್ಸ್ ತಂಡದ ಮೇಲೆ ಮುಯ್ಯಿ ತೀರಿಸಿಕೊಳ್ಳುವ ಛಲದಲ್ಲಿದೆ.

ಈ ಟೂರ್ನಿಯ ಲೀಗ್ ಹಂತದಲ್ಲಿ ಎರಡೂ ಬಾರಿ ರಿಷಭ್ ತಮ್ಮ 'ಗುರು'ವಿನ ಬಳಗಕ್ಕೆ ಸೋಲಿನ ರುಚಿ ತೋರಿಸಿದ್ದಾರೆ. ಅಂಕಪಟ್ಟಿಯಲ್ಲಿ ಮೊದಲ ಸ್ಥಾನ ಪಡೆದು ಮೊದಲ ಕ್ವಾಲಿಫೈಯರ್ ಪ್ರವೇಶಿಸಿರುವ ಡೆಲ್ಲಿ ಬಳಗವು ಈ ಬಾರಿ ಟ್ರೋಫಿ ಜಯಿಸುವ ಛಲದಲ್ಲಿದೆ. ಹೋದ ಸಲ ಫೈನಲ್‌ನಲ್ಲಿ ಮುಂಬೈ ಇಂಡಿಯನ್ಸ್ ಎದುರು ಪಂತ್ ಬಳಗ ಮುಗ್ಗರಿಸಿತ್ತು.

ಆ ವರ್ಷ ಧೋನಿ ಬಳಗವು ಪ್ಲೇ ಆಫ್ ಕೂಡ ಪ್ರವೇಶಿಸದೇ ನಿರ್ಗಮಿಸಿತ್ತು. ಈಗ ಒಟ್ಟು 18 ಅಂಕಗಳೊಂದಿಗೆ ಎರಡನೇ ಸ್ಥಾನ ಪಡೆದು ಕ್ವಾಲಿಫೈಯರ್ ಕಣಕ್ಕಿಳಿಯುತ್ತಿದೆ. ತಂಡದ ಯುವ ಮತ್ತು ಅನುಭವಿಗಳು ಉತ್ತಮ ಫಾರ್ಮ್‌ನಲ್ಲಿರುವುದು ನಾಯಕನ ಆತ್ಮವಿಶ್ವಾಸ ಹೆಚ್ಚಿಸಿದೆ. ಆರಂಭಿಕ ಬ್ಯಾಟ್ಸ್‌ಮನ್ ಋತುರಾಜ್ ಗಾಯಕವಾಡ್, ಫಫ್ ಡುಪ್ಲೆಸಿ, ಅಂಬಟಿ ರಾಯುಡು ಬ್ಯಾಟಿಂಗ್ ಶಕ್ತಿಯಾಗಿದ್ದಾರೆ. ಆದರೆ, ಸುರೇಶ್ ರೈನಾ ಮತ್ತು ಧೋನಿ ಬ್ಯಾಟಿಂಗ್ ಲಯ ಕಂಡುಕೊಂಡರೆ ತಂಡ ಮತ್ತಷ್ಟು ಬಲಿಷ್ಠವಾಗುತ್ತದೆ. ಮೋಯಿನ್ ಅಲಿ, ರವೀಂದ್ರ ಜಡೇಜ ಮತ್ತು ಶಾರ್ದೂಲ್ ಠಾಕೂರ್ ಆಲ್‌ರೌಂಡ್ ಆಟವೂ ತಂಡದ ಯಶಸ್ಸಿನಲ್ಲಿ ಪ್ರಮುಖವಾಗಿದೆ. ಆದರೆ ಲೀಗ್ ಹಂತದ ಕೊನೆಯ ಮೂರು ಪಂದ್ಯಗಳಲ್ಲಿ ಧೋನಿ ಬಳಗವು ಸೋತಿತ್ತು.

ಆ ಸೋಲುಗಳಲ್ಲಿ ಆಗಿರುವ ಲೋಪಗಳನ್ನು ತಿದ್ದಿಕೊಂಡರೆ ಡೆಲ್ಲಿ ಎದುರು ಪುಟಿದೇಳಬಹುದು.

ಹೋದ ವಾರ ನಡೆದಿದ್ದ ಉಭಯ ತಂಡಗಳ ಮುಖಾಮುಖಿಯಲ್ಲಿ ಚೆನ್ನೈ ತಂಡವು ಕನ್ನಡಿಗ ರಾಬಿನ್ ಉತ್ತಪ್ಪ ಅವರಿಗೆ ಅವಕಾಶ ನೀಡಿತ್ತು. ಈ ಪಂದ್ಯದಲ್ಲಿ ಅವರಿಗೆ ಮತ್ತೊಂದು ಸಲ ತಮ್ಮ ಪ್ರತಿಭೆ ಸಾಬೀತು ಮಾಡುವ ಅವಕಾಶ ಸಿಗುವುದೇ ಎಂಬುದನ್ನು ಕಾದು ನೋಡಬೇಕು.

ಡೆಲ್ಲಿ ತಂಡವೂ ತನ್ನ ಕೊನೆಯ ಲೀಗ್ ಪಂದ್ಯದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ವಿರುದ್ಧ ಸೋತಿತ್ತು. ಬೆಂಗಳೂರು ತಂಡವು ಶ್ರೀಕರ್ ಭರತ್ ಮತ್ತು ಗ್ಲೆನ್ ಮ್ಯಾಕ್ಸ್‌ವೆಲ್ ಅವರ ಅರ್ಧಶತಕಗಳ ಬಲದಿಂದ ರೋಚಕ ಜಯ ಸಾಧಿಸಿತ್ತು. ಡೆಲ್ಲಿ ತಂಡದ ಬೌಲರ್‌ಗಳು ಕೊನೆಯ ಹಂತದ ಓವರ್‌ಗಳಲ್ಲಿ ಮುಗ್ಗರಿಸಿದ್ದರು. ಅದರಲ್ಲೂ ಕೊನೆಯ ಓವರ್‌ನಲ್ಲಿ ಜಯ ಕೈತಪ್ಪಿತ್ತು.

ಬ್ಯಾಟಿಂಗ್‌ನಲ್ಲಿ ಆರಂಭಿಕ ಜೋಡಿ ಶಿಖರ್ ಮತ್ತು ಪೃಥ್ವಿ ಉತ್ತಮ ಲಯದಲ್ಲಿದ್ದಾರೆ.

ಶ್ರೇಯಸ್ ಅಯ್ಯರ್, ರಿಷಭ್ ಪಂತ್ ಕೂಡ ಉತ್ತಮವಾಗಿ ಆಡುತ್ತಿದ್ದರೆ. ಆರ್. ಅಶ್ವಿನ್ ಆಲ್‌ರೌಂಡ್ ಆಟ ಮತ್ತು ಆವೇಶ್ ಖಾನ್ ಬೌಲಿಂಗ್‌ನಲ್ಲಿ ಯಶಸ್ಸಿನ ಓಟ ಮುಂದುವರಿಸಿದರೆ ರಿಷಭ್ ಬಳಗಕ್ಕೆ ಫೈನಲ್‌ಗೆ ರಹದಾರಿ ಖಚಿತ.

ಈ ಟೂರ್ನಿಯಲ್ಲಿ ಮುಖಾಮುಖಿ ಫಲಿತಾಂಶ
1 ಡೆಲ್ಲಿ ಕ್ಯಾಪಿಟಲ್ಸ್‌ಗೆ 7 ವಿಕೆಟ್‌ಗಳ ಜಯ
2 ಡೆಲ್ಲಿ ಕ್ಯಾಪಿಟಲ್ಸ್‌ಗೆ 3 ವಿಕೆಟ್‌ಗಳ ಜಯ
ಹೆಚ್ಚು ರನ್ ಹೊಡೆದ ಬ್ಯಾಟ್ಸ್‌ಮನ್
ಫಫ್ ಡು ಪ್ಲೆಸಿ (ಚೆನ್ನೈ) 546
ಶಿಖರ್ ಧವನ್ (ಡೆಲ್ಲಿ) 544
ಹೆಚ್ಚು ವಿಕೆಟ್ ಗಳಿಸಿದವರು
ಆವೇಶ್ ಖಾನ್ (ಡೆಲ್ಲಿ) 22
ಶಾರ್ದೂಲ್ ಠಾಕೂರ್ (ಚೆನ್ನೈ) 18

ಮುಖಾಮುಖಿ ಪಂದ್ಯಗಳು 25	
ಚೆನ್ನೈ ಜಯ	15
ಡೆಲ್ಲಿ ಜಯ	10

ಪಂದ್ಯ ಆರಂಭ ರಾತ್ರಿ 7.30

ಲೈವ್ ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ತಂಡಗಳು

ಚೆನ್ನೈ ಸೂಪರ್ ಕಿಂಗ್ಸ್: ಮಹೇಂದ್ರಸಿಂಗ್ ಧೋನಿ (ನಾಯಕ), ಫಫ್ ಡುಪ್ಲೆಸಿ, ಋತುರಾಜ್ ಗಾಯಕವಾಡ್, ಸುರೇಶ್ ರೈನಾ, ಅಂಬಟಿ ರಾಯುಡು, ದೀಪಕ್ ಚಾಹರ್, ಡ್ವೇನ್ ಬ್ರಾವೊ, ರವೀಂದ್ರ ಜಡೇಜ, ಶಾರ್ದೂಲ್ ಠಾಕೂರ್, ಇಮ್ರಾನ್ ತಾಹೀರ್, ಲುಂಗಿ ಗಿಡಿ, ಮಿಚೆಲ್ ಸ್ಯಾಂಟನರ್, ಮೋಯಿನ್ ಅಲಿ ಕೆ. ಗೌತಮ್, ರಾಬಿನ್ ಉತ್ತಪ್ಪ

ಡೆಲ್ಲಿ ಕ್ಯಾಪಿಟಲ್ಸ್: ರಿಷಭ್ ಪಂತ್ (ನಾಯಕ), ಪೃಥ್ವಿ ಶಾ, ಶಿಖರ್ ಧವನ್, ರಿಪಲ್ ಪಟೇಲ್, ಶಿಮ್ರೊನ್ ಹೆಟ್ಮೆಯರ್, ಶ್ರೇಯಸ್ ಅಯ್ಯರ್, ಸ್ಟೀವ್ ಸ್ಮಿತ್, ಎನ್ರಿಚ್ ನಾರ್ಕಿಯಾ, ಆವೇಶ್ ಖಾನ್, ಕಗಿಸೊ ರಬಾಡ, ಪ್ರವಣ ದುಬೆ, ಅಕ್ಷರ್ ಪಟೇಲ್, ಉಮೇಶ್ ಯಾದವ್, ಲಲಿತ್ ಯಾದವ್, ಆರ್. ಅಶ್ವಿನ್, ಮಾರ್ಕಸ್ ಸ್ಟೊಯಿನಿಸ್.



ರಿಷಭ್ ಪಂತ್



ಋತುರಾಜ್ ಗಾಯಕವಾಡ್



ಮಹೇಂದ್ರಸಿಂಗ್ ಧೋನಿ

ವಿಶ್ವಕಪ್ ಟೂರ್ನಿ: ಇಶಾನ್ ಆರಂಭಿಕ ಬ್ಯಾಟ್ಸ್‌ಮನ್?

ಅಬುಧಾಬಿ (ಪಿಟಿಐ): ಮುಂಬರುವ ಟ್ವೆಂಟಿ-20 ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ಯುವ ಬ್ಯಾಟ್ಸ್‌ಮನ್ ಇಶಾನ್ ಕಿಶನ್ ಭಾರತ ತಂಡದ ಆರಂಭಿಕ ಬ್ಯಾಟ್ಸ್‌ಮನ್ ಆಗಿ ಆಡುವ ಎಲ್ಲ ಸಾಧ್ಯತೆಗಳೂ ಇವೆ.

ಈ ವಿಷಯವನ್ನು ಸ್ವತಃ ಇಶಾನ್ ಅವರೇ ಹೇಳಿದ್ದಾರೆ. ಶುಕ್ರವಾರ ಐಪಿಎಲ್ ಲೀಗ್ ಹಂತದ ಕೊನೆಯ ಪಂದ್ಯದಲ್ಲಿ ಮುಂಬೈ ಇಂಡಿಯನ್ಸ್ ಪರ ಭರ್ಜರಿ ಬ್ಯಾಟಿಂಗ್ ಮಾಡಿದ್ದ ಇಶಾನ್ ಈ ಮಾತು ಹೇಳಿದ್ದಾರೆ.

'ಇದೇ ತಿಂಗಳು ಯುಎಇ ಹಾಗೂ ಒಮನ್‌ನಲ್ಲಿ ನಡೆಯಲಿರುವ ಟಿ20 ವಿಶ್ವಕಪ್‌ನಲ್ಲಿ ತಮ್ಮನ್ನು ಆರಂಭಿಕ ಬ್ಯಾಟ್ಸ್‌ಮನ್ ಆಗಿ ಪರಿಗಣಿಸಿರುವುದಾಗಿ ನಾಯಕ ವಿರಾಟ್ ಕೊಹ್ಲಿ ಈಚೆಗೆ ಹೇಳಿದ್ದಾರೆ. ನನಗೂ ಆರಂಭಿಕನಾಗಿ ಆಡುವುದು ಇಷ್ಟ. ಅದನ್ನೇ ವಿರಾಟ್ ಕೂಡ ತಿಳಿಸಿದ್ದಾರೆ. ಆದರೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಆಡುವಾಗ ಯಾವುದೇ ಕ್ರಮಾಂಕದಲ್ಲಿಯೂ ಕಣಕ್ಕಿಳಿಯಲು ಸಿದ್ಧರಾಗಿರಬೇಕು. ತಂಡಕ್ಕೆ ಅಗತ್ಯವಾದದ್ದನ್ನು ಕೊಡಲು ಬದ್ಧರಾಗಿರಬೇಕು' ಎಂದು ಇಶಾನ್ ಹೇಳಿದ್ದಾರೆ.



ಇಶಾನ್ ಕಿಶನ್

'ವಿಶ್ವಕಪ್‌ಗೂ ಮೊದಲು ಬ್ಯಾಟಿಂಗ್ ಲಯ ಕಂಡುಕೊಳ್ಳಲು ಸಾಧ್ಯವಾಗಿರುವುದರಿಂದ ನಿರಾಳವಾಗಿದ್ದೇನೆ. ಎದುರಾಗುವ ಎಲ್ಲ ಸನ್ನಿವೇಶಗಳನ್ನು ಎದುರಿಸಲು ಸಿದ್ದರಾಗಿರಬೇಕು. ಆ ಮನಸ್ಥಿತಿ ಕಾಪಾಡಿಕೊಳ್ಳುವುದು ಮುಖ್ಯ. ಕೆಟ್ಟ ಫಾರ್ಮ್ ಸಂದರ್ಭದಲ್ಲಿ ನಾನು ವಿರಾಟ್, ಹಾರ್ದಿಕ್ ಪಾಂಡ್ಯ ಹಾಗೂ ಕೆಪಿ (ಕೀರನ್ ಪೊಲಾರ್ಡ್) ಅವರೊಂದಿಗೆ ಸಮಾಲೋಚನೆ ನಡೆಸಿದ್ದೆ' ಎಂದು ವಿವರಿಸಿದರು.

ಪ್ಯಾರಿಸ್ ಒಲಿಂಪಿಕ್ಸ್‌ನಲ್ಲೂ ಆಡುವೆ: ಪಿ.ಆರ್. ಶ್ರೀಜೇಶ್

ನವದೆಹಲಿ (ಪಿಟಿಐ): ಮುಂಬರುವ ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿಯೂ ಆಡುತ್ತೇನೆ. ಎಲ್ಲಿಯವರೆಗೆ ತಂಡದವರು ತಮ್ಮನ್ನು ಹೊರಗೆ ಹಾಕುವುದಿಲ್ಲವೋ ಅಲ್ಲಿಯವರೆಗೆ ಭಾರತಕ್ಕಾಗಿ ಆಡುತ್ತೇನೆ ಎಂದು ಹಾಕಿ ತಂಡದ ಗೋಲ್‌ಕೀಪರ್ ಪಿ.ಆರ್. ಶ್ರೀಜೇಶ್ ಹೇಳಿದ್ದಾರೆ.

ಅಂತರರಾಷ್ಟ್ರೀಯ ಹಾಕಿ ಫೆಡರೇಷನ್ (ಎಫ್‌ಐಎಚ್) ವರ್ಷದ ಶ್ರೇಷ್ಠ ಗೋಲ್‌ಕೀಪರ್ ಪ್ರಶಸ್ತಿ ಸ್ವೀಕರಿಸಿದ ನಂತರ 'ಇಂಡಿಯಾ ಟುಡೆ ಕಾನ್‌ಕ್ಲೇವ್'ನಲ್ಲಿ ಭಾಗವಹಿಸಿದ್ದ ಶ್ರೀಜೇಶ್ ತಮ್ಮ ಮನದಿಂಗಿತ ವ್ಯಕ್ತಪಡಿಸಿದ್ದಾರೆ.

'21 ವರ್ಷಗಳಿಂದ ಹಾಕಿ ಆಡುತ್ತಿರುವೆ. ಆದ್ದರಿಂದ ನನ್ನ ಮನದಲ್ಲಿ ಯಾವಾಗಲೂ ಇನ್ನೊಂದು ಪಂದ್ಯ ಆಡಬೇಕು. ಮತ್ತೊಂದು ಒಲಿಂಪಿಕ್ಸ್‌ನಲ್ಲಿ ಸ್ಪರ್ಧಿಸಬೇಕು ಎಂಬ ಛಲ ಮತ್ತು ಆಸೆಗಳು ಇದ್ದೇ ಇರುತ್ತವೆ' ಎಂದಿದ್ದಾರೆ.

ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಭಾರತ ಹಾಕಿ ತಂಡದ ನಾಯಕ ಮನಪ್ರೀತ್ ಸಿಂಗ್, 'ಶ್ರೀಜೇಶ್ ಶ್ರೇಷ್ಠ ಗೋಲ್‌ಕೀಪರ್. ಅವರು ನಮ್ಮೆಲ್ಲರೊಂದಿಗೆ ಪ್ಯಾರಿಸ್‌ಗೆ ತೆರಳುವುದು ಖಚಿತ. ಅವರು ನಮ್ಮೊಂದಿಗೆ ಇದ್ದರೆ ತಂಡದ ಆತ್ಮವಿಶ್ವಾಸ ಉತ್ತುಂಗದಲ್ಲಿರುತ್ತದೆ. ನಮ್ಮ ಗೋಲುಪೆಟ್ಟಿಗೆ ರಕ್ಷಣೆಗೆ ಅವರಿರಲೇಬೇಕು' ಎಂದರು.

'ಈ ಬಾರಿ ಗೆದ್ದಿರುವ ಒಲಿಂಪಿಕ್ ಪದಕದ ವರ್ಣವನ್ನು ಮುಂದಿನ ಬಾರಿ ಬದಲಿಸಿಕೊಂಡು ಬರುವುದೇ ನಮ್ಮ ಮುಂದಿರುವ ಅತಿದೊಡ್ಡ ಗುರಿ' ಎಂದು ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಚಿನ್ನಕ್ಕೆ ಗುರಿ ಇಟ್ಟಿರುವುದನ್ನು ಸಿಂಗ್ ಸೂಚ್ಯವಾಗಿ ಹೇಳಿದರು.



ಪಿ.ಆರ್. ಶ್ರೀಜೇಶ್

33 ವರ್ಷದ ಶ್ರೀಜೇಶ್ ಈಚೆಗೆ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಭಾರತ ತಂಡವು ಕಂಚಿನ ಪದಕ ಜಯಿಸುವಲ್ಲಿ ಪ್ರಮುಖ ಪಾತ್ರವಹಿಸಿದ್ದರು. ಅವರ ಸಹ ಆಟಗಾರರಾಗಿದ್ದ ರೂಪಿಂದರ್ ಪಾಲ್ ಸಿಂಗ್, ಬೀರೇಂದ್ರ ಲಕ್ರಾ ಅವರು ಅಂತರರಾಷ್ಟ್ರೀಯ ಹಾಕಿ ಗೆ ವಿದಾಯ ಹೇಳಿದ್ದರು.

'ಮಹಿಳೆಯರ ತಂಡದ್ದು ಅಮೋಘ ಸಾಧನೆ. ಆದರೆ ಅವರ ಜೊತೆಗೆ ಅದೃಷ್ಟವಿರಲಿಲ್ಲ. ಆದ್ದರಿಂದ ಕೊಂಚದರಲ್ಲಿ ಪದಕ ಕೈತಪ್ಪಿ ಹೋಯಿತು. ಆದರೆ, ಈ ಸಾಧನೆ ಸಣ್ಣದೇನಲ್ಲ' ಎಂದು ಮನಪ್ರೀತ್ ಶ್ಲಾಘಿಸಿದರು.

ಬಾಕ್ಸಿಂಗ್: ನಾಳೆ ಆಯ್ಕೆ ಟ್ರಯಲ್ಸ್

ಬೆಂಗಳೂರು: ಕರ್ನಾಟಕ ಅಮೆಚೂರ್ ಬಾಕ್ಸಿಂಗ್ ಸಂಸ್ಥೆಯು ಎಲೀಟ್ ಮಹಿಳೆಯರ ರಾಷ್ಟ್ರೀಯ ಚಾಂಪಿಯನ್‌ಷಿಪ್‌ಗೆ ರಾಜ್ಯ ತಂಡವನ್ನು ಆಯ್ಕೆ ಮಾಡಲು ಅಕ್ಟೋಬರ್ 11ರಂದು ಟ್ರಯಲ್ಸ್ ಆಯೋಜಿಸಲಿದೆ.

ಕಂಠೀರವ ಕ್ರೀಡಾಂಗಣದ ಬಾಕ್ಸಿಂಗ್ ಹಾಲ್‌ನಲ್ಲಿ ಆಯ್ಕೆ ಟ್ರಯಲ್ಸ್ ನಡೆಯಲಿದೆ. ರಾಷ್ಟ್ರೀಯ ಚಾಂಪಿಯನ್ ಹರಿಯಾಣದಲ್ಲಿ ಅಕ್ಟೋಬರ್ 21ರಿಂದ 27ರವರೆಗೆ ನಡೆಯಲಿದೆ.

ಶೂಟಿಂಗ್: ಭಾರತ ಪಾರಮ್ಯ

ಲಿಮಾ (ಪಿಟಿಐ): ಭಾರತದ ಶೂಟರ್‌ಗಳು ಐಎಸ್‌ಎಸ್‌ಎಫ್ ವಿಶ್ವ ಜೂನಿಯರ್ ಚಾಂಪಿಯನ್‌ಷಿಪ್‌ನಲ್ಲಿ ಶನಿವಾರವೂ ಪಾರಮ್ಯ ಮುಂದುವರಿಸಿದರು. ಅನೀಷ್ ಭಾನ್ವಾಲಾ, ಆದರ್ಶ್ ಸಿಂಗ್ ಮತ್ತು ವಿಜಯವೀರ್ ಸಿಧು ಅವರನ್ನು ಒಳಗೊಂಡ ತಂಡ 25 ಮೀಟರ್ಸ್ ರ‍್ಯಾಪಿಡ್ ಫೈರ್ ಪಿಸ್ತೂಲು ವಿಭಾಗದಲ್ಲಿ ಚಿನ್ನ ಗೆದ್ದುಕೊಂಡಿತು. ಇದರೊಂದಿಗೆ ಭಾರತ ಪಾಯಿಂಟ್ ಪಟ್ಟಿಯ ಅಗ್ರಸ್ಥಾನಕ್ಕೇರಿತು.

ಭಾರತದ ಶೂಟರ್‌ಗಳು ಜರ್ಮನಿಯ ಫ್ಯಾಬಿಯನ್ ಒಟ್ಟೊ, ಫೆಲಿಕ್ಸ್ ಲೂಕಾ ಹೋಲ್‌ಫೊತ್ ಮತ್ತು ತೊಬಿಯಾಸ್ ಸೊಯೆಲ್ ಎದುರು ಜಯ ಗಳಿಸಿದರು. ಮಾನ್ವಿ ಸೋನಿ ಅವರು ಜೂನಿಯರ್ ಡಬಲ್ ಟ್ರ್ಯಾಪ್‌ನಲ್ಲಿ ಚಿನ್ನದ ಪದಕ ಗೆದ್ದುಕೊಂಡರು. ಭಾರತದ ಯೆಶಾಯ ಹಫೀಜ್ ಕಾಂಟ್ರಾಕ್ಟರ್ ವಿರುದ್ಧ ಅವರು ಫೈನಲ್‌ನಲ್ಲಿ ಜಯ ಗಳಿಸಿದರು. ಕಂಚಿನ ಪದಕ ಭಾರತದ ಹಿತಾಶ ಅವರ ಪಾಲಾಯಿತು. ವಿನಯ ಪ್ರತಾಪ್ ಸಿಂಗ್ ಚಂದ್ರಾವತ್ 120 ಸ್ಕೋರು ಕಲೆ ಹಾಕಿ ಪುರುಷರ ಡಬಲ್ಸ್ ಟ್ರ್ಯಾಪ್ ಸ್ಪರ್ಧೆಯಲ್ಲಿ ಚಿನ್ನಕ್ಕೆ ಗುರಿ ಇಟ್ಟರು. 114 ಸ್ಕೋರು ಗಳಿಸಿದ ಸಹಜ್‌ಪ್ರೀತ್ ಸಿಂಗ್ ಬೆಳ್ಳಿ ಗಳಿಸಿದರೆ ಮಯಂಕ್ ಶೊಕೀನ್ ಕಂಚಿನ ಪದಕ ತಮ್ಮದಾಗಿಸಿಕೊಂಡರು.



ಜಯ ಗಳಿಸಿದ ರಾಹಿಲ್ ಶೆಟ್ಟಿ ಅವರ ಸಂಭ್ರಮ

ರೇಸಿಂಗ್‌ನಲ್ಲಿ ರಾಹಿಲ್‌ಗೆ ಜಯ

ಚೆನ್ನೈ (ಪಿಟಿಐ): ಹೈದರಾಬಾದಿನ ರಾಹಿಲ್ ಶೆಟ್ಟಿ ಮತ್ತು ಕೆ.ವೈ. ಅಹಮದ್ ಇಲ್ಲಿ ನಡೆಯುತ್ತಿರು ಎಂಆರ್‌ಎಫ್ ಎಂಎಂಎಸ್‌ಸಿ ಎಫ್‌ಎಂಎಸ್‌ಸಿಐ ರಾಷ್ಟ್ರೀಯ ಮೋಟಾರ್ ಸೈಕಲ್ ರೇಸಿಂಗ್ ಚಾಂಪಿಯನ್‌ಷಿಪ್‌ನ ಪ್ರೀಮಿಯರ್ ಪ್ರೊ ಸ್ಟಾಕ್ ವಿಭಾಗದಲ್ಲಿ ಜಯಿಸಿದರು.

ಶನಿವಾರ ಶ್ರೀಪೆರಂಬುದೂರು ಬಳಿಯ ಎಂಎಂಆರ್‌ಟಿಯಲ್ಲಿ ನಡೆದ ಸ್ಪರ್ಧೆಯಲ್ಲಿ 23 ವರ್ಷದ ರಾಹಿಲ್ ಪ್ರೊ ಸ್ಟಾಕ್ 301–400 ಸಿಸಿ ವಿಭಾಗದಲ್ಲಿ ಆರ್‌ಎಸಿಆರ್ ಕ್ಯಾಸ್ಟ್ರಲ್ ಪವರ್ ರೇಸಿಂಗ್‌ನ ರಜಿನಿ ಕೃಷ್ಣನ್ ಅವರನ್ನು ಮೀರಿದರು. ಗಸ್ಟೊ ರೇಸಿಂಗ್‌ನ ರಾಹಿಲ್ ಅವರು ದೀರ್ಘ ಕಾಲದ ವಿಶ್ರಾಂತಿಯ ನಂತರ ರೇಸಿಂಗ್ ಮರಳಿದ್ದಾರೆ.

ಟಿವಿಎಸ್ ರೇಸಿಂಗ್‌ನ ಕೆ.ವೈ. ಅಹಮದ್ ಇದೇ ಮೊದಲ ಜಯ ದಾಖಲಿಸಿದರು. ಈ ವಿಭಾಗದಲ್ಲಿ ಮುಂಚೂಣಿ ರೇಸಿಂಗ್ ಸ್ಪರ್ಧಿಗಳಾದ ದೀಪಕ್ ರವಿಕುಮಾರ್ ಮತ್ತು ಹಾಲಿ ಚಾಂಪಿಯನ್ ಜಗನ್ ಕುಮಾರ್ ಅವರೊಂದಿಗೆ ಅಹಮದ್ ಸ್ಪರ್ಧಿಸಿದ್ದರು. ರಾಕ್‌ಸ್ಟಾರ್ ರೇಸಿಂಗ್ ಅನ್ಫಲ್ ಅಕ್ದರ್ ಅವರು ನೊವೈಸ್ (ಸ್ಟಾಕ್ 165ಸಿಸಿ) ವಿಭಾಗದಲ್ಲಿ ಎರಡನೇ ಬಾರಿ ಗೆದ್ದರು. 38 ರೈಡರ್‌ಗಳೊಂದಿಗೆ ಅವರು ಸ್ಪರ್ಧಿಸದ್ದರು.

ಸೋಹಾಗೆ ಪ್ರಶಸ್ತಿ



ಬೆಂಗಳೂರು: ನಗರದ ಸೋಹಾ ಸಾದಿಕ್ ಅವರು ಪಿಬಿಐ ಸಿಎಸ್‌ಇ ಎಐಟಿಎ ಮಹಿಳೆಯರ ಟೆನಿಸ್ ಟೂರ್ನಿಯ ಪ್ರಶಸ್ತಿ ಗೆದ್ದುಕೊಂಡರು. ರಾಜ್ಯ ಟೆನಿಸ್ ಸಂಸ್ಥೆಯ ಆಶ್ರಯದ ಟೂರ್ನಿಯ ಫೈನಲ್‌ನಲ್ಲಿ ಅವರು ಮಹಾರಾಷ್ಟ್ರದ ಆಕಾಂಕ್ಷಾ ವಿರುದ್ಧ 4-6, 6-3, 6-1ರಲ್ಲಿ ಗೆದ್ದರು.

ಮೊದಲ ಸೆಟ್‌ನಲ್ಲಿ ಸೋತರೂ ನಂತರ ಚೇತರಿಸಿಕೊಂಡು 4-6, 6-3, 6-1ರಲ್ಲಿ ಗೆಲುವು ಸಾಧಿಸಿದ ಸೋಹಾ ಈ ವರ್ಷದ ಮೂರನೇ ಸಿಂಗಲ್ಸ್ ಪ್ರಶಸ್ತಿ ಮುಡಿಗೇರಿಸಿಕೊಂಡರು. ಇದೇ ಟೂರ್ನಿಯ ಡಬಲ್ಸ್‌ನಲ್ಲೂ ಶುಕ್ರವಾರ ಅವರು ಪ್ರಶಸ್ತಿ ಗೆದ್ದುಕೊಂಡಿದ್ದರು. ಆ ಪಂದ್ಯದಲ್ಲಿ ಅವರಿಗೆ ಆಕಾಂಕ್ಷಾ ಜೋಡಿಯಾಗಿದ್ದರು.

ಮಹಿಳೆಯರ ಟಿ20: ಮಿಂಚಿದ ಭಾರತದ ಪೂಜಾ

ಆಸ್ಟ್ರೇಲಿಯಾಗೆ ಗೆಲುವು

ಗೋಲ್ಡ್ ಕೋಸ್ಟ್ (ಪಿಟಿಐ): ಭಾರತ ಮಹಿಳೆಯರ ಎದುರಿನ ಟಿ20 ಸರಣಿಯ ಎರಡನೇ ಪಂದ್ಯದಲ್ಲಿ ಆಸ್ಟ್ರೇಲಿಯಾ ಮಹಿಳಾ ತಂಡ ನಾಲ್ಕು ವಿಕೆಟ್‌ಗಳ ಜಯ ಸಾಧಿಸಿತು.

ಮೂರು ಪಂದ್ಯಗಳ ಸರಣಿಯ ಮೊದಲ ಪಂದ್ಯ ಮಳೆಯಿಂದಾಗಿ ರದ್ದಾಗಿತ್ತು. ಶನಿವಾರ ನಡೆದ ಎರಡನೇ ಪಂದ್ಯದಲ್ಲಿ ಭಾರತ ಒಂಬತ್ತು ವಿಕೆಟ್‌ಗಳಿಗೆ 118 ರನ್ ಗಳಿಸಿತ್ತು. ಆತಿಥೇಯರು 19.1 ಓವರ್‌ಗಳಲ್ಲಿ ಆರು ವಿಕೆಟ್‌ಗಳಿಗೆ 119 ರನ್ ಗಳಿಸಿದರು.

ಟಾಸ್ ಗೆದ್ದ ಆಸ್ಟ್ರೇಲಿಯಾ ನಾಯಕಿ ಮೆಗ್ ಲ್ಯಾನಿಂಗ್ ಭಾರತವನ್ನು ಬ್ಯಾಟಿಂಗ್‌ಗೆ ಆಹ್ವಾನಿಸಿದರು. ಸ್ಮೃತಿ ಮಂದಾನ ಮತ್ತು ಶಫಾಲಿ ವರ್ಮಾ ತಂಡದ ಮೊತ್ತ 12 ರನ್ ಆಗುವಷ್ಟರಲ್ಲಿ ಮರಳಿದರು. ಮೂರನೇ ಕ್ರಮಾಂಕದ ಜೆಮಿಮಾ ರಾಡ್ರಿಗಸ್ ಕೂಡ ಬೇಗನೇ ಔಟಾದರು.

ಯಾಷ್ಟಿಕಾ ಭಾಟಿಯಾ ಮತ್ತು ರಿಚಾ ಘೋಷ್ ಕೂಡ ವೈಫಲ್ಯ ಕಂಡರು. ನಾಯಕಿ ಹರ್ಮನ್‌ಪ್ರೀತ್ ಕೌರ್ ಐದು ಬೌಂಡರಿಗಳೊಂದಿಗೆ 28 ರನ್ ಗಳಿಸಿ ತಂಡದ ಗೌರವ ಉಳಿಸಲು ಪ್ರಯತ್ನಿಸಿದರು.

ಅಂತಿಮ ಓವರ್‌ಗಳಲ್ಲಿ ಪೂಜಾ ವಸ್ತ್ರಕಾರ್ (37; 26 ಎ, 3 ಬೌಂ, 2 ಸಿ) ಭರ್ಜರಿ ಬ್ಯಾಟಿಂಗ್ ಮೂಲಕ ಮಿಂಚಿ ತಂಡದ ಮೊತ್ತವನ್ನು ಮೂರಂಕಿ ದಾಟಿಸಿದರು.

ಹರ್ಮನ್‌ಪ್ರೀತ್, ದೀಪ್ತಿ ಶರ್ಮಾ ಮತ್ತು ಪೂಜಾ ಅವರನ್ನು ಹೊರತುಪಡಿಸಿದರೆ ಇತರ ಯಾರಿಗೂ ಎರಡಂಕಿ ಮೊತ್ತ ದಾಟಲು ಆಗಲಿಲ್ಲ. ಟೆಸ್ಟ್ ಮತ್ತು ಏಕದಿನ ತಂಡದ ನಾಯಕಿ ಮಿಥಾಲಿ ರಾಜ್ ಅವರಿಂದ 'ಚೋಟಾ ಹಾರ್ದಿಕ್' ಎಂದು ಕರೆಸಿಕೊಂಡಿರುವ ಪೂಜಾ ಎದುರಾಳಿ ಬೌಲರ್‌ಗಳನ್ನು ಕಾಡಿದರು.

ಸ್ಕೋರ್ ಕಾರ್ಡ್

ಭಾರತ 9ಕ್ಕೆ 118 (20 ಓವರ್)
ಸ್ಮೃತಿ ಸಿ ಕ್ಯಾರಿ ಬಿ ವಾಮ್ನಿಕ್ 1 (5 ಎ), ಶಫಾಲಿ ಸಿ ಡಾರ್ಲಿಂಗ್ಟನ್ ಬಿ ವಾಮ್ನಿಕ್ 3 (7 ಎ), ಜೆಮಿಮಾ ಸಿ ಡಾರ್ಲಿಂಗ್ಟನ್ ಬಿ ಮೋಲಿನೆಕ್ಸ್ 7 (13 ಎ), ಹರ್ಮನ್‌ಪ್ರೀತ್ ಸ್ಟಂಪ್ಡ್ ಹೀಲಿ ಬಿ ವಾರೆಹಂ 28 (20 ಎ, 4x5), ಯಾಷ್ಟಿಕಾ ರನೌಟ್ (ವಾರೆಹಂ/ಹೀಲಿ) 8 (11 ಎ, 4x1), ರಿಚಾ ಬಿ ಕ್ಯಾರಿ 2 (10 ಎ), ದೀಪ್ತಿ ರನೌಟ್ (ಮೆಗ್ರಾ/ಹೀಲಿ) 16 (19 ಎ, 4x1), ಪೂಜಾ ಔಟಾಗದೆ 37 (26 ಎ, 4x3, 6x2), ಶಿಖಾ ಬಿ ಗಾರ್ಡನರ್ 3 (1 ಎ), ರೇಣುಕಾ ಬಿ ಮೋಲಿನೆಕ್ಸ್ 1 (3 ಎ), ರಾಜೇಶ್ವರಿ ಔಟಾಗದೆ 0 (4 ಎ)
ಇತರೆ : (ಲೆಗ್ ಬೈ 2, ನೋಬಾಲ್ 1, ವೈಡ್ 11) 14
ವಿಕೆಟ್ ಪತನ: 1-5 (ಸ್ಮೃತಿ ಮಂದಾನ, 0.6), 2-12 (ಶಫಾಲಿ ವರ್ಮಾ, 2.5), 3-24 (ಜೆಮಿಮಾ ರಾಡ್ರಿಗಸ್, 5.3), 4-50 (ಹರ್ಮನ್‌ಪ್ರೀತ್ ಕೌರ್, 8.5), 5-52 (ಯಾಷ್ಟಿಕಾ ಭಾಟಿಯ, 9.4), 6-61 (ರಿಚಾ ಘೋಷ್, 11.6), 7-76 (ದೀಪ್ತಿ ಶರ್ಮಾ, 15.2), 8-78 (ಶಿಖಾ ಪಾಂಡೆ, 15.6), 9-81 (ರೇಣುಕಾ ಸಿಂಗ್, 16.6)
ಬೌಲಿಂಗ್: ತಾಯ್ಲಾ ವಾಮ್ನಿಕ್ 3-0-18-2, ಸೋಫಿ ಮೋಲಿನೆಕ್ಸ್ 4-0-11-2, ಎಲಿಸ್ ಪೆರಿ 2-0-17-0, ಆ್ಯಶ್ಲಿ ಗಾರ್ಡನರ್ 4-0-12-1, ಜಾರ್ಜಿಯಾ ವಾರೆಹಂ 2-0-14-1, ನಿಕೋಲಾ ಕ್ಯಾರಿ 3-0-25-1, ಹನಾ ಡಾರ್ಲಿಂಗ್ಟನ್ 2-0-19-0

ಆಸ್ಟ್ರೇಲಿಯಾ 6ಕ್ಕೆ 119 (19.1 ಓವರ್)
ಅಲಿಸಾ ಬಿ ಪಾಂಡೆ 4 (2 ಎ, 4x1), ಮೂನಿ ಸ್ಟಂಪ್ಡ್ ರಿಚಾ ಬಿ ರಾಜೇಶ್ವರಿ 34 (36 ಎ, 4x4), ಲ್ಯಾನಿಂಗ್ ಸಿ ರಿಚಾ ಬಿ ರಾಜೇಶ್ವರಿ 15 (20 ಎ, 4x2), ಗಾರ್ಡನರ್ ಸಿ ರಾಜೇಶ್ವರಿ ಬಿ ಹರ್ಮನ್‌ಪ್ರೀತ್ 1 (5 ಎ), ಎಲಿಸ್ ಸಿ ಹರ್ಮನ್‌ಪ್ರೀತ್ ಬಿ ದೀಪ್ತಿ 2 (4 ಎ), ತಹಲಿಯಾ ಔಟಾಗದೆ 42 (33ಎ, 4x6), ನಿಕೋಲಾ ಸ್ಟಂಪ್ಡ್ ರಿಚಾ ಬಿ ರಾಜೇಶ್ವರಿ 7 (8 ಎ), ಜಾರ್ಜಿಯಾ ವಾರೆಹಂ ಔಟಾಗದೆ 10 (7 ಎ, 4x2)
ಇತರೆ : (ಲೆಗ್‌ಬೈ 3, ವೈಡ್ 1) 4
ವಿಕೆಟ್ ಪತನ: 1-4 (ಅಲಿಸಾ ಹೀಲಿ, 0.2), 2-35 (ಮೆಗ್ ಲ್ಯಾನಿಂಗ್, 6.3), 3-38 (ಆ್ಯಶ್ಲಿ ಗಾರ್ಡನರ್, 7.5), 4-46 (ಎಲಿಸ್ ಪೆರಿ, 9.1), 5-71 (ಬೆಥ್ ಮೂನಿ, 13.1), 6-94 (ನಿಕೋಲಾ ಕ್ಯಾರಿ, 16.4)
ಬೌಲಿಂಗ್: ಶಿಖಾ ಪಾಂಡೆ 4-0-27-1, ರೇಣುಕಾ ಸಿಂಗ್ 4-1-27-0, ಪೂಜಾ ವಸ್ತ್ರಕಾರ್ 3.1-0-21-0, ರಾಜೇಶ್ವರಿ ಗಾಯಕವಾಡ್ 4-0-21-3, ಹರ್ಮನ್‌ಪ್ರೀತ್ ಕೌರ್ 2-0-9-1, ದೀಪ್ತಿ ಶರ್ಮಾ 2-0-11-1

ಫಲಿತಾಂಶ: ಆಸ್ಟ್ರೇಲಿಯಾ ಮಹಿಳೆಯರಿಗೆ 4 ವಿಕೆಟ್‌ಗಳ ಜಯ

ಸ್ಯಾಫ್ ಫುಟ್‌ಬಾಲ್ ಚಾಂಪಿಯನ್‌ಷಿಪ್: ಇಂದು ಭಾರತ–ನೇಪಾಳ ಹಣಾಹಣಿ

ಚೆಟ್ರಿ ಬಳಗಕ್ಕೆ ಗೆಲುವು ಅನಿವಾರ್ಯ

ಮಾಲಿ (ಪಿಟಿಐ): ಮೊದಲ ಎರಡೂ ಪಂದ್ಯಗಳಲ್ಲಿ ಸೋಲು ಕಂಡಿರುವ ಭಾರತ ತಂಡ ಸ್ಯಾಫ್ ಫುಟ್‌ಬಾಲ್ ಚಾಂಪಿಯನ್‌ಷಿಪ್‌ನ ಪಂದ್ಯದಲ್ಲಿ ಭಾನುವಾರ ನೇಪಾಳವನ್ನು ಎದುರಿಸಲಿದೆ. ನಾಕೌಟ್ ಹಂತ ಪ್ರವೇಶಿಸಬೇಕಾದರೆ ಸುನಿಲ್ ಚೆಟ್ರಿ ಬಳಗಕ್ಕೆ ಈ ಪಂದ್ಯದಲ್ಲಿ ಜಯ ಅನಿವಾರ್ಯ.

ಏಳು ಬಾರಿಯ ಚಾಂಪಿಯನ್ ಭಾರತ ಮೊದಲ ಪಂದ್ಯದಲ್ಲಿ ಬಾಂಗ್ಲಾದೇಶ ವಿರುದ್ಧ 1–1ರ ಡ್ರಾ ಮಾಡಿಕೊಂಡಿತ್ತು. ಶ್ರೀಲಂಕಾ ವಿರುದ್ಧ ನಡೆದ ಎರಡನೇ ಪಂದ್ಯ ಗೋಲುರಹಿತ ಡ್ರಾದಲ್ಲಿ ಕೊನೆಗೊಂಡಿತ್ತು. ಆದ್ದರಿಂದ ಪೂರ್ಣ ಪಾಯಿಂಟ್ ಸಂಪಾದಿಸಲು ಈವರೆಗೆ ಸಾಧ್ಯವಾಗಲಿಲ್ಲ. ಹೀಗಾಗಿ ತಂಡ ಸಂಕಷ್ಟಕ್ಕೆ ಸಿಲುಕಿದ್ದು ಉಳಿದಿರುವ ಎರಡು ಪಂದ್ಯಗಳಲ್ಲಿ ಜಯ ಗಳಿಸಿದರೆ ಮಾತ್ರ ಮುಂದಿನ ಹಂತಕ್ಕೇರಲು ಸಾಧ್ಯ.

ಭಾರತ ಮತ್ತು ನೇಪಾಳ ಕಳೆದ ತಿಂಗಳ ಮೊದಲ ವಾರದಲ್ಲಿ ಸತತ ಎರಡು ಸ್ನೇಹಪರ ಪಂದ್ಯಗಳನ್ನು ಆಡಿವೆ. ಮೊದಲ ಪಂದ್ಯ ಡ್ರಾಗೊಂಡಿದ್ದರೆ, ಎರಡನೇ ಪಂದ್ಯದಲ್ಲಿ ಭಾರತ 2–1ರ ಜಯ ಸಾಧಿಸಿತ್ತು.


'ಈಗಾಗಲೇ ನೇಪಾಳ ವಿರುದ್ಧ ಎರಡು ಪಂದ್ಯಗಳನ್ನು ತಂಡ ಆಡಿದೆ. ಹೀಗಾಗಿ ಸದ್ಯ ಆ ತಂಡದ ಸಾಮರ್ಥ್ಯ ಮತ್ತು ದೌರ್ಬಲ್ಯ ಏನೆಂದು ಗೊತ್ತು. ಭಾನುವಾರದ ಪಂದ್ಯದಲ್ಲಿ ಸುಲಭ ಜಯ ಗಳಿಸುವುದು ಸಾಧ್ಯ. ಅದು ಅನಿವಾರ್ಯ ಕೂಡ ಆಗಿದೆ' ಎಂದು ಕೋಚ್ ಇಗೊರ್ ಸ್ಟಿಮ್ಯಾಚ್ ಹೇಳಿದ್ದಾರೆ.

ಮಾಲ್ಡೀವ್ಸ್ ಮತ್ತು ಶ್ರೀಲಂಕಾ ಎದುರಿನ ಪಂದ್ಯಗಳಲ್ಲಿ ಜಯ ಗಳಿಸಿರುವ ನೇಪಾಳ ಸದ್ಯ ಆರು ಪಾಯಿಂಟ್‌ಗಳೊಂದಿಗೆ ಪಟ್ಟಿಯ ಅಗ್ರ ಸ್ಥಾನದಲ್ಲಿದೆ. ಭಾರತ ತಂಡ ಶನಿವಾರ ಅಭ್ಯಾಸ ನಡೆಸಿದ್ದು ಎಲ್ಲ 23 ಆಟಗಾರರು ಕೂಡ ಪಂದ್ಯಕ್ಕೆ ಲಭ್ಯ ಇದ್ದಾರೆ ಎಂದು ಪಂದ್ಯಪೂರ್ವ ಪತ್ರಿಕಾಗೋಷ್ಠಿಯಲ್ಲಿ ಮಿಡ್‌ಫೀಲ್ಡರ್ ಬ್ರೆಂಡನ್ ಫರ್ನಾಂಡಿಸ್ ತಿಳಿಸಿದ್ದಾರೆ.

> **ಮುಂದಿನ ಹಂತ ತಲುಪುವುದಕ್ಕೆ ಇನ್ನೂ ಅವಕಾಶ ಇದೆ. ಹೀಗಾಗಿ ತಂಡದ ಆಸೆ ಜೀವಂತವಾಗಿಯೇ ಇದೆ. ಪ್ರಶಸ್ತಿ ಗೆಲ್ಲುವ ಆಸೆ ಇನ್ನೂ ಕೈಚೆಲ್ಲಲಿಲ್ಲ.**
> **ಇಗೊರ್ ಸ್ಟಿಮ್ಯಾಚ್** ಭಾರತದ ಕೋಚ್

ಭಾರತ ಮಹಿಳೆಯರಿಗೆ ಬಹರೇನ್ ಎದುರಾಳಿ

ಮನಾಮ (ಪಿಟಿಐ): ಭಾರತ ಮತ್ತು ಬಹರೇನ್ ಮಹಿಳಾ ಫುಟ್‌ಬಾಲ್ ತಂಡಗಳ ನಡುವಿನ ಸ್ನೇಹಪರ ಸರಣಿಯ ಮೊದಲ ಪಂದ್ಯ ಭಾನುವಾರ ನಡೆಯಲಿದೆ. ಏಷ್ಯನ್ ಕಪ್‌ಗೂ ಮೊದಲು ವಿವಿಧ ದೇಶಗಳ ಜೊತೆ ಪಂದ್ಯಗಳನ್ನು ಆಡಲು ಸಜ್ಜಾಗಿರುವ ಭಾರತ ತಂಡ ಯುಎಇಯಿಂದ ನೇರವಾಗಿ ಬಹರೇನ್‌ಗೆ ತೆರಳಿದೆ. ಇತ್ತೀಚಿನ ಪಂದ್ಯಗಳಲ್ಲಿ ಭಾರತ ತಂಡ ಯುಎಇ ಎದುರು 1–4ರಲ್ಲಿ ಮತ್ತು ಟುನೀಷಿಯಾ ಎದುರು 0–1 ಅಂತರದಲ್ಲಿ ಸೋತಿತ್ತು. ಹೀಗಾಗಿ ಉತ್ತಮ ಸಾಮರ್ಥ್ಯ ತೋರುವ ಗುರಿಯೊಂದಿಗೆ ಭಾನುವಾರ ಕಣಕ್ಕೆ ಇಳಿಯಲಿದೆ. ಮಹಿಳೆಯರ ಏಷ್ಯನ್ ಕಪ್‌ಗೆ ಸಿದ್ಧವಾಗುತ್ತಿರುವ ತಂಡದ ದೌರ್ಬಲ್ಯಗಳನ್ನು ತಿಳಿಯಲು ಈ ಸರಣಿಗಳು ನೆರವಾಗಿವೆ ಎಂದು ನಾಯಕಿ ಆಶಾಲತಾ ದೇವಿ ಹೇಳಿದ್ದಾರೆ.



ಸುನಿಲ್ ಚೆಟ್ರಿ –ಟ್ವಿಟರ್ ಚಿತ್ರ

ಸಂಕ್ಷಿಪ್ತ ಸುದ್ದಿ

ಜರ್ಮನಿಗೆ ಜಯ

ಹ್ಯಾಂಬರ್ಗ್ (ರಾಯಿಟರ್ಸ್): ಬದಲಿ ಆಟಗಾರ ಥಾಮಸ್ ಮಿಲ್ಲರ್ 81ನೇ ನಿಮಿಷದಲ್ಲಿ ಹೊಡೆದ ಗೋಲು ಜರ್ಮನಿಗೆ ಗೆಲುವಿನ ಕಾಣಿಕೆಯಾಯಿತು.

ಶುಕ್ರವಾರ ರಾತ್ರಿ ನಡೆದ ವಿಶ್ವಕಪ್ ಕ್ವಾಲಿಫೈಯರ್ ಫುಟ್‌ಬಾಲ್ ಪಂದ್ಯ ದಲ್ಲಿ ಜರ್ಮನಿ 2–1ರಿಂದ ರೊಮೆನಿಯಾದ ವಿರುದ್ಧ ಜಯಿಸಿತು. ಇದರೊಂದಿಗೆ ಜರ್ಮನಿ ಆಡಿದ ಎಲ್ಲ ನಾಲ್ಕು ಪಂದ್ಯಗಳನ್ನೂ ಜಯಿಸಿದೆ. ನೂತನ ಕೋಚ್ ಹ್ಯಾನ್ಸಿ ಫ್ಲಿಕ್ ಅವರ ಮಾರ್ಗದರ್ಶನದಲ್ಲಿ ತಂಡವು ಗುಂಪಿನಲ್ಲಿ ಅಗ್ರಸ್ಥಾನಕ್ಕೇರಿದೆ.

'ಮೊಟೇರಾ ಸೂಕ್ತ'

ನವದೆಹಲಿ (ಪಿಟಿಐ): ಭಾರತದಲ್ಲಿ 2036ರಲ್ಲಿ ಒಲಿಂಪಿಕ್ಸ್ ಆಯೋಜನೆಗಾಗಿ ಮಾತುಕತೆ ನಡೆಯುತ್ತಿದೆ. ಈ ಮಹಾಮೇಳ ಆಯೋಜನೆಗೆ ಅಹಮದಾಬಾದಿನ ಮೊಟೇರಾ ಕ್ರೀಡಾಂಗಣ ಸೂಕ್ತವಾಗಿದೆ ಎಂದು ಭಾರತ ಒಲಿಂಪಿಕ್ ಸಂಸ್ಥೆ (ಐಒಸಿ) ಅಧ್ಯಕ್ಷ ನರಿಂದರ್ ಬಾತ್ರಾ ಹೇಳಿದ್ದಾರೆ.

'2036ರ ಒಲಿಂಪಿಕ್ಸ್ ಆಯೋಜನೆಗಾಗಿ ಭಾರತ ಬಿಡ್ ಸಲ್ಲಿಸಲಿದೆ. ಆದರೆ ಈಗಲೇ ಖಚಿತವಾಗಿ ಆಗಿಯೇ ಬಿಡುತ್ತದೆ ಎಂದು ಹೇಳಲು ಸಾಧ್ಯವಿಲ್ಲ. ಆದರೆ, ಬಿಡ್ ಪ್ರಸ್ತಾವದಲ್ಲಿ ಮೊಟೇರಾ ಕ್ರೀಡಾಂಗಣದಲ್ಲಿ ಉದ್ಘಾಟನಾ ಸಮಾರಂಭ ನಡೆಸುವ ಕುರಿತು ತಿಳಿಸಲಾಗುವುದು' ಎಂದು ಬಾತ್ರಾ ಸ್ಪಷ್ಟಪಡಿಸಿದರು.

ಸ್ವಿಮ್‌ಲೈಫ್ ಪಾರಮ್ಯ

ಬೆಂಗಳೂರು: ಸ್ವಿಮ್‌ಲೈಫ್ ಈಜು ಕೇಂದ್ರದ ಕ್ರೀಡಾಪಟುಗಳು ರಾಜ್ಯ ಈಜು ಸಂಸ್ಥೆಯ ಆಶ್ರಯದಲ್ಲಿ ಶನಿವಾರ ಇಲ್ಲಿ ಆರಂಭಗೊಂಡಿರುವ ಮಾಸ್ಟರ್ಸ್ ಚಾಂಪಿಯನ್‌ಷಿಪ್‌ನಲ್ಲಿ ಪಾರಮ್ಯ ಮೆರೆದರು. ಬೆಂಗಳೂರಿನ ಈಜುಪಟುಗಳು ಕೂಡ ಗಮನ ಸೆಳೆದರು.

ಒಟ್ಟು 29 ವಿಭಾಗಗಳಲ್ಲಿ ಸ್ವಿಮ್‌ಲೈಫ್ ಈಜುಪಟುಗಳು ಪ್ರಥಮ ಸ್ಥಾನ ಗಳಿಸಿದರೆ 20 ವಿಭಾಗಗಳಲ್ಲಿ ಎರಡನೇ ಸ್ಥಾನ ಗಳಿಸಿದರು. 10 ವಿಭಾಗಗಳ ಮೂರನೇ ಸ್ಥಾನ ಈ ಕೇಂದ್ರದ ಪಾಲಾಯಿತು. ಕೆಲವು ವಿಭಾಗಗಳಲ್ಲಿ ಮೊದಲ ಮೂರು ಪ್ರಶಸ್ತಿಗಳನ್ನೂ ಗೆದ್ದುಕೊಂಡರು.

ಸ್ಪರ್ಧೆಯಲ್ಲಿ ಮೈಸೂರು, ಉಡುಪಿ, ಮಂಡ್ಯ, ಜಮಖಂಡಿ, ಬಳ್ಳಾರಿ, ಶಿವಮೊಗ್ಗ ಮುಂತಾದ ಕಡೆಗಳ ಈಜುಪಟು ಮತ್ತು ರಾಜ್ಯ ಪೊಲೀಸ್ ಇಲಾಖೆಯ ಈಜುಪಟುಗಳು ಪಾಲ್ಗೊಂಡಿದ್ದಾರೆ. ಭಾನುವಾರ ಮುಕ್ತಾಯಗೊಳ್ಳಲಿದೆ.

ಸಂಕ್ಷಿಪ್ತ ಸುದ್ದಿ

ಫೇಸ್‌ಬುಕ್ ಸೇವೆಯಲ್ಲಿ ಮತ್ತೊಮ್ಮೆ ವ್ಯತ್ಯಯ

ನ್ಯೂಯಾರ್ಕ್ (ರಾಯಿಟರ್ಸ್): ಫೇಸ್‌ಬುಕ್ ಮತ್ತು ಇನ್‌ಸ್ಟಾಗ್ರಾಂ ಸೇವೆಯಲ್ಲಿ ಎರಡು ಗಂಟೆ ಕಾಲ ವ್ಯತ್ಯಯವಾಗಿದ್ದಕ್ಕಾಗಿ ತನ್ನ ಬಳಕೆದಾರರಲ್ಲಿ ಫೇಸ್‌ಬುಕ್ ಕ್ಷಮೆ ಯಾಚಿಸಿದೆ.

ಈ ವಾರ ಎರಡನೇ ಬಾರಿ ಉಂಟಾದ ಸೇವೆಯಲ್ಲಿನ ವ್ಯತ್ಯಯಕ್ಕೆ ಮತ್ತೊಂದು ದೋಷಯುಕ್ತ ಸಂರಚನಾ ಬದಲಾವಣೆಯೇ ಕಾರಣ ಎಂದು ಕಂಪನಿ ಹೇಳಿದೆ.

ತನ್ನ ಸಾಮಾಜಿಕ ಮಾಧ್ಯಮ ವೇದಿಕೆಗಳಾದ ಇನ್‌ಸ್ಟಾಗ್ರಾಂ, ಮೆಸೆಂಜರ್ ಮತ್ತು ವರ್ಕ್‌ಪ್ಲೇಸ್ ಸೇವೆಗಳ ಮೇಲೂ ಶನಿವಾರ ಪರಿಣಾಮ ಉಂಟಾಗಿತ್ತು ಎಂದು ಎಂಬುದನ್ನು ಸಹ ಕಂಪನಿ ಖಚಿತಪಡಿಸಿದೆ.

ಪ್ರಪಂಚದ ಅತ್ಯಂತ ಜನಪ್ರಿಯ ಸಾಮಾಜಿಕ ಮಾಧ್ಯಮಗಳಾದ ಫೇಸ್‌ಬುಕ್, ಇನ್‌ಸ್ಟಾಗ್ರಾಮ್, ವಾಟ್ಸ್‌ಆ್ಯಪ್ ಮತ್ತು ಫೇಸ್‌ಬುಕ್ ಮೆಸೆಂಜರ್‌ಗಳು ಅ.4ರ ಸಂಜೆಯಿಂದ ಸ್ಥಗಿತಗೊಂಡಿದ್ದವು. ಆ್ಯಪ್‌ಗಳ ಸೇವೆ ಪುನರಾರಂಭವಾಗುತ್ತಿದ್ದಂತೆ ಫೇಸ್‌ಬುಕ್ ಸಂಸ್ಥಾಪಕ ಮಾರ್ಕ್ ಜುಕರ್‌ಬರ್ಗ್ ಕ್ಷಮೆ ಯಾಚಿಸಿದ್ದರು.

ಇಂದಿನಿಂದ ಸಚಿವ ಜೈಶಂಕರ್ ವಿದೇಶ ಪ್ರವಾಸ

ನವದೆಹಲಿ (ಪಿಟಿಐ): ಭಾನುವಾರದಿಂದ (ಅಕ್ಟೋಬರ್ 10) ಇದೇ 13 ರವರೆಗೆ ನಾಲ್ಕು ದಿನಗಳ ಕಾಲ ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಅವರು ಕಿರ್ಗಿಸ್ತಾನ, ಕಜಕಿಸ್ತಾನ ಮತ್ತು ಅರ್ಮೇನಿಯಾ ದೇಶಗಳಿಗೆ ಭೇಟಿ ನೀಡಲಿದ್ದಾರೆ.

ಈ ವೇಳೆ ಅವರು ರಾಷ್ಟ್ರಗಳ ನಡುವೆ ದ್ವಿಪಕ್ಷೀಯ ಸಂಬಂಧವನ್ನು ವೃದ್ಧಿಸುವ ಮತ್ತು ಅಫ್ಗಾನಿಸ್ತಾನದ ಬೆಳವಣಿಗೆಗಳು ಸೇರಿದಂತೆ ಪ್ರಮುಖ ಪ್ರಾದೇಶಿಕ ಸಮಸ್ಯೆಗಳ ಕುರಿತು ಚರ್ಚಿಸಲಿದ್ದಾರೆ.

‘ಮೂರು ದೇಶಗಳ ಜೊತೆಗಿನ ಈ ಭೇಟಿಯು ನಮ್ಮ ದ್ವಿಪಕ್ಷೀಯ ಬಾಂಧವ್ಯದಲ್ಲಿನ ಪ್ರಗತಿಯನ್ನು ಪರಿಶೀಲಿಸುತ್ತದೆ. ಈ ಪ್ರದೇಶಗಳ ಬೆಳವಣಿಗೆಗಳ ಬಗ್ಗೆ ಅಭಿಪ್ರಾಯಗಳನ್ನು ಹಂಚಿಕೊಳ್ಳಲು ಅವಕಾಶ ಒದಗಿಸುತ್ತದೆ’ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯವು (ಎಂಇಎ) ಸಚಿವರ ಭೇಟಿ ಕುರಿತು ಶನಿವಾರ ಹೇಳಿದೆ.

ಎಸ್‌ಐಬಿಎಸ್‌ಟಿಸಿಗೆ ಮಹಾಬಲೇಶ್ವರ ಅಧ್ಯಕ್ಷ

ಮಂಗಳೂರು: ಸದರ್ನ್ ಇಂಡಿಯಾ ಬ್ಯಾಂಕ್ಸ್ ಸ್ಟಾಫ್ ಟ್ರೈನಿಂಗ್ ಕಾಲೇಜಿನ (ಎಸ್‌ಐಬಿಎಸ್‌ಟಿಸಿ) ಅಧ್ಯಕ್ಷರಾಗಿ ಕರ್ಣಾಟಕ ಬ್ಯಾಂಕಿನ ವ್ಯವಸ್ಥಾಪಕ ನಿರ್ದೇಶಕ, ಸಿಇಒ ಮಹಾಬಲೇಶ್ವರ ಎಂ.ಎಸ್. ಅವರು ಮೂರು ವರ್ಷಗಳ ಅವಧಿಗೆ ಆಯ್ಕೆಯಾಗಿದ್ದಾರೆ. ಇದಕ್ಕೂ ಮೊದಲು ಕರ್ಣಾಟಕ ಬ್ಯಾಂಕಿನ ಅಧ್ಯಕ್ಷ ಪಿ. ಜಯರಾಮ ಭಟ್ ಅವರು ಈ ಸಂಸ್ಥೆಯ ಅಧ್ಯಕ್ಷರಾಗಿದ್ದರು.


ಮಹಾಬಲೇಶ್ವರ

‘ಈ ಸಂಸ್ಥೆಯ ಅಧ್ಯಕ್ಷನಾಗಿ ಆಗಿ ಆಯ್ಕೆಯಾಗುತ್ತಿರುವುದು ಕರ್ಣಾಟಕ ಬ್ಯಾಂಕಿನ ಕಿರೀಟಕ್ಕೆ ಸಂದ ಮತ್ತೊಂದು ಹೊನ್ನಗರಿ. ಈ ಮುನ್ನ ಅಧ್ಯಕ್ಷರಾಗಿದ್ದ ಜಯರಾಮ ಭಟ್ ಅವರ ಮಾರ್ಗದರ್ಶನವು ನನಗಿದೆ. ಗುರುತರ ಜವಾಬ್ದಾರಿಯನ್ನು ಸಮರ್ಥವಾಗಿ ನಿಭಾಯಿಸುವ ಭರವಸೆ ಇದೆ’ ಎಂದು ಮಹಾಬಲೇಶ್ವರ ಎಂ.ಎಸ್. ತಿಳಿಸಿದ್ದಾರೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹430
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹440

ರಾಮನಗರ ರೇಷ್ಮೆ ಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹221-457
ದ್ವಿತಳಿ (ಬಿ.ವಿ)	₹271-533

ಮೂಡಿಗೆರೆ ಕಾಫಿ

	ಮುದ್ರೆಮನೆ
ಎಪಿ	13650
ಎಸಿ	6325
ಆರ್‌ಪಿ	6100
ಆರ್‌ಸಿ	3535

ಮುಂಬೈ ಧಾರಣೆ

ಶೇಂಗಾ

9-10-2021

ಜಾವಾ 70/80(ಹೊಸ)	11500-11600
ಜಾವಾ 80/90(ಹೊಸ)	11200-11300
ದಪ್ಪ ಮಧ್ಯಪ್ರದೇಶ(ಹೊಸ)	10800-10900
ದಪ್ಪ ಗುಜರಾತ್(ಹೊಸ)	9800-9900

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1530 (1500)
ಒಂದು ವಾರದ ಡೆಲಿವರಿ	1525 (1495)
ಸೋಯಾ ಕಚ್ಚಾ	1327 (1332)
ಪಾಮ್ ವಾರದ ಡೆಲಿವರಿ	1238 (1233)
ಸೂರ್ಯಕಾಂತಿ ಎಣ್ಣೆ ಕಚ್ಚಾ	1360 (1350)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ
46,750 (47,100)
ಬೆಳ್ಳಿ ಕೆ.ಜಿ 61,500 (62,000)

ಆವರಣದಲ್ಲಿ ಹಿಂದಿನ ದಿನದ ಧಾರಣೆ


ಹೈದರಾಬಾದ್‌ನಲ್ಲಿ ಸುರಿದ ಭಾರಿ ಮಳೆಯಿಂದ ಜಲಾವೃತವಾದ ನಿಜಾಮ್ ಶಾಹಿ ರಸ್ತೆಯಲ್ಲಿ ವಾಹನಗಳು ಸಂಚರಿಸಿದವು —ಪಿಟಿಐ ಚಿತ್ರ

ಹೈದರಾಬಾದ್: ಭಾರಿ ಮಳೆ, ತಗ್ಗು ಪ್ರದೇಶಗಳು ಜಲಾವೃತ

ಹೈದರಾಬಾದ್ (ಪಿಟಿಐ): ನಗರದಲ್ಲಿ ಸುರಿದ ಭಾರಿ ಮಳೆಯಿಂದ ಹೈದರಾಬಾದ್‌ನ ತಗ್ಗುಪ್ರದೇಶಗಳಿಗೆ ನೀರು ನುಗ್ಗಿ ಪ್ರವಾಹ ಪರಿಸ್ಥಿತಿ ಉಂಟಾಗಿದೆ.

ತೆಲಂಗಾಣ ರಾಜ್ಯ ಅಭಿವೃದ್ಧಿ ಯೋಜನಾ ಸೊಸೈಟಿಯು ಮಳೆಯ ಅಂಕಿ ಅಂಶಗಳನ್ನು ನೀಡಿದೆ. ಇದರ ಪ್ರಕಾರ ಸರೂರುನಗರದಲ್ಲಿರುವ ಲಿಂಗೋಜಿಗುಡ ವಾರ್ಡ್ ಕಚೇರಿಯಲ್ಲಿ 131.5 ಮಿಮೀ ಮಳೆಯಾಗಿದೆ. ಶುಕ್ರವಾರ ರಾತ್ರಿ 8.30ರಿಂದ ಶನಿವಾರ ಬೆಳಿಗ್ಗೆ 6 ಗಂಟೆಗಳ ಅವಧಿಯಲ್ಲಿ ಇಲ್ಲಿನ ಹಲವು ಪ್ರದೇಶಗಳಲ್ಲಿ ಮಳೆಯಾಗಿದೆ.

ನಿರಂತರ ಮಳೆಯಿಂದ ಹಯಾತ್ ನಗರದ ವಿವಿಧ ವಸತಿ ಕಾಲೋನಿಗಳಲ್ಲಿ ಮಳೆಯ ನೀರು ಮನೆಗಳಿಗೆ ನುಗ್ಗಿದೆ. ಕೆಲವು ನಿವಾಸಿಗಳ ಗೃಹದಲ್ಲಿನ ವಸ್ತುಗಳು ನೀರಿನಲ್ಲಿ ಕೊಚ್ಚಿ ಹೋಗಿವೆ.

ಚಿಂತಾಲ್ಕುಂಟಾದಲ್ಲಿ ಶುಕ್ರವಾರ ತಡರಾತ್ರಿ ವ್ಯಕ್ತಿಯೊಬ್ಬ ಬೈಕ್ ಸಮೇತ ಒಳಚರಂಡಿಗೆ ಬಿದ್ದಿದ್ದಾನೆ. ರಕ್ಷಣಾ ಸಿಬ್ಬಂದಿ ನಡೆಸಿದ ಪ್ರಯತ್ನದಿಂದ ವ್ಯಕ್ತಿಯನ್ನು ರಕ್ಷಿಸಲಾಗಿದ್ದು ಆತ ಸುರಕ್ಷಿತವಾಗಿ ಮನೆ ತಲುಪಿದ್ದಾನೆ ಎಂದು ಅಧಿಕೃತ ಮೂಲಗಳು ತಿಳಿಸಿವೆ.

ಶುಕ್ರವಾರ ರಾತ್ರಿ ಸುರಿದ ಮಳೆಯಿಂದ ಚಿತ್ರಮಂದಿರದ ಗೋಡೆ ಕುಸಿದು ಅಲ್ಲಿ ನಿಲ್ಲಿಸಿದ್ದ ಹಲವು ದ್ವಿಚಕ್ರ ವಾಹನಗಳು ಹಾನಿಗೀಡಾಗಿವೆ.

ಹಗಲಿನ ವೇಳೆ ಭಾರಿ ಮಳೆಯ ಮುನ್ಸೂಚನೆಯನ್ನು ಗಮನದಲ್ಲಿಟ್ಟುಕೊಂಡು ಜಾಗರೂಕರಾಗಿರಬೇಕು. ನಾಗರಿಕರು ತುರ್ತು ಕೆಲಸವಿದ್ದರೆ ಮಾತ್ರ ಮನೆಯಿಂದ ಹೊರಗೆ ಬರಬೇಕು ಎಂದು ಹೈದರಾಬಾದ್ ಪಾಲಿಕೆಯು ಶನಿವಾರ ಹೊರಡಿಸಿದ ಪತ್ರಿಕಾ ಪ್ರಕಟಣೆಯಲ್ಲಿ ಸೂಚಿಸಿದೆ.

ತೆಲಂಗಾಣದ ಹಲವು ಸ್ಥಳಗಳಲ್ಲಿ ಉತ್ತಮ ಮಳೆಯಾಗಿದೆ. ರಂಗ ರೆಡ್ಡಿ ಜಿಲ್ಲೆಯ ಸರೌನಗರದಲ್ಲಿ 15 ಸೆಂ.ಮೀ., ಶಾಡ್‌ನಗರದಲ್ಲಿ 10 ಸೆಂ.ಮೀ. ಮಳೆಯಾಗಿದೆ ಎಂದು ಹವಾಮಾನ ಇಲಾಖೆ ಹೇಳಿದೆ.

ದಕ್ಷಿಣ ಭಾರತದಲ್ಲಿ ಪೀಠ ಸ್ಥಾಪನೆ ಬೇಡಿಕೆ: ವಿವರ ಬಹಿರಂಗಪಡಿಸಲು ‘ಸುಪ್ರೀಂ’ ನಕಾರ

ಪ್ರಜಾವಾಣಿ ವಾರ್ತೆ

ನವದೆಹಲಿ: ದಕ್ಷಿಣ ಭಾರತದಲ್ಲಿ ಸುಪ್ರೀಂಕೋರ್ಟ್‌ನ ಪೀಠ ಸ್ಥಾಪನೆ ಕೋರಿ ಸಲ್ಲಿಕೆಯಾಗಿದ್ದ ಅರ್ಜಿ, ಕೈಗೊಂಡ ಕ್ರಮಗಳ ಕುರಿತ ವರದಿ ಹಾಗೂ ಈ ಸಂಬಂಧ ಬಾರ್ ಕೌನ್ಸಿಲ್‌ನ ಕೆಲ ಸದಸ್ಯರು ನಡೆಸಿದ್ದ ಸಭೆಯ ವಿವರಗಳನ್ನು ಬಹಿರಂಗಪಡಿಸಲು ಸುಪ್ರೀಂಕೋರ್ಟ್ ನಿರಾಕರಿಸಿದೆ.

ಮಹಾರಾಷ್ಟ್ರದ ಉಲ್ಲಾಸ್‌ನಗರದ ವಕೀಲ ಅಮೃತಪಾಲ್ ಸಿಂಗ್ ಖಾಲ್ಸಾ ಎಂಬುವವರು ವಿವರಗಳನ್ನು ಕೋರಿ ಆರ್‌ಟಿಐ ಅಡಿ ಅರ್ಜಿ ಸಲ್ಲಿಸಿದ್ದರು.



‘ಮೂರನೇ ಪಕ್ಷಗಾರರರೊಂದಿಗಿನ ನಂಬಿಕೆಗೆ ಸಂಬಂಧಿಸಿದ ವಿಷಯ ಇದಾಗಿದೆ. ಈ ಮಾಹಿತಿಯನ್ನು ನೀಡುವುದಕ್ಕೆ ಪಾರದರ್ಶಕತೆ ಕಾಯ್ದೆಯಡಿ ವಿನಾಯಿತಿಯನ್ನೂ ನೀಡಲಾಗಿದೆ’ ಎಂದು ಆರ್‌ಟಿಐ ಅರ್ಜಿಗೆ ನೀಡಿರುವ ಉತ್ತರದಲ್ಲಿ ಸುಪ್ರೀಂಕೋರ್ಟ್ ತಿಳಿಸಿದೆ.

ಬಾರ್ ಕೌನ್ಸಿಲ್‌ನ ಸದಸ್ಯರ ನಿಯೋಗವೊಂದು ಜುಲೈ 26ರಂದು ಉಪರಾಷ್ಟ್ರಪತಿ ಎಂ.ವೆಂಕಯ್ಯ ನಾಯ್ಡು ಹಾಗೂ ಸುಪ್ರೀಂಕೋರ್ಟ್‌ನ ಮುಖ್ಯನ್ಯಾಯಮೂರ್ತಿಗಳನ್ನು ಭೇಟಿ ಮಾಡಿ, ದಕ್ಷಿಣ ಭಾರತದಲ್ಲಿ ಸುಪ್ರೀಂಕೋರ್ಟ್‌ನ ಪೀಠ ಸ್ಥಾಪಿಸಬೇಕು ಎಂಬ ಬೇಡಿಕೆ ಕುರಿತು ಕ್ರಮ ಕೈಗೊಳ್ಳುವಂತೆ ಮನವಿ ಸಲ್ಲಿಸಿತ್ತು. ಕೌನ್ಸಿಲ್‌ನ ಸದಸ್ಯರಾಗಿರುವ ದಕ್ಷಿಣ ರಾಜ್ಯಗಳಾದ ತಮಿಳುನಾಡು, ಕರ್ನಾಟಕ, ಕೇರಳ, ಆಂಧ್ರಪ್ರದೇಶ ಹಾಗೂ ತೆಲಂಗಾಣದ ವಕೀಲರು ಈ ನಿಯೋಗದಲ್ಲಿದ್ದರು.

‘ಹಬ್ಬಗಳಲ್ಲಿ ಕೋವಿಡ್ ನಿಯಂತ್ರಣ ಹಳಿತಪ್ಪಬಹುದು, ಎಚ್ಚರಿಕೆ ಅಗತ್ಯ’

ನವದೆಹಲಿ (ಪಿಟಿಐ): ಕೋವಿಡ್ ಮಾರ್ಗಸೂಚಿಗಳನ್ನು ಅನುಸರಿಸಿ ಹಬ್ಬಗಳನ್ನು ಆಚರಿಸದಿದ್ದರೆ ಈಗಿನ ಸೋಂಕಿನ ನಿಯಂತ್ರಣವು ಹಳಿ ತಪ್ಪಬಹುದು ಎಂದು ಕೇಂದ್ರ ಆರೋಗ್ಯ ಸಚಿವ ಮನಸುಖ್ ಮಾಂಡವೀಯ ಶನಿವಾರ ಎಚ್ಚರಿಸಿದ್ದಾರೆ.

ಹಂಚಿಕೆಯಲ್ಲಿ ಹಿಂದಿರುವ 19 ರಾಜ್ಯಗಳು ತಮ್ಮ ಲಸಿಕೆ ನೀಡುವ ವೇಗ ಹೆಚ್ಚಿಸಬೇಕಿದೆ. ಇದರಿಂದ ಮುಂದಿನ ದಿನಗಳಲ್ಲಿ ಭಾರತವು 100 ಕೋಟಿ ಲಸಿಕೆ ಡೋಸ್‌ಗಳ ಗುರಿ ತಲುಪಲಿದೆ ಎಂದೂ ಅವರು ಹೇಳಿದರು.

ಭಾರತವು ಈವರೆಗೆ ಸುಮಾರು 94 ಕೋಟಿ ಕೋವಿಡ್ ಲಸಿಕೆಯ ಡೋಸ್‌ಗಳನ್ನು ಹಂಚಿಕೆ ಮಾಡಿದೆ.

ಎಲ್ಲಾ ಪ್ರಮುಖ ರಾಜ್ಯಗಳ ರಾಷ್ಟ್ರೀಯ ಆರೋಗ್ಯ ಮಿಷನ್‌ನ ಪ್ರಧಾನ ಕಾರ್ಯದರ್ಶಿಗಳು ಮತ್ತು ನಿರ್ದೇಶಕರೊಂದಿಗಿನ ಸಭೆಯಲ್ಲಿ ಸಚಿವ ಮಾಂಡವೀಯ ಅವರು ಕೋವಿಡ್ ಲಸಿಕೆಯ ಪ್ರಗತಿಯನ್ನು ಪರಿಶೀಲಿಸಿ ಮಾತನಾಡಿದರು.

ಲಸಿಕಾ ಅಭಿಯಾನದ ಮೂಲಕ ಭಾರತದಲ್ಲಿ 100 ಕೋಟಿ ಲಸಿಕೆಯ ಡೋಸ್‌ಗಳನ್ನು ನೀಡುವುದು ತಕ್ಷಣದ ಗುರಿಯಾಗಿದೆ ಎಂದು ಹೇಳಿದರು

ಕೇಂದ್ರದ ಖಾಸಗೀಕರಣ ನೀತಿಯ ಸಮರ್ಥನೆ

ಬಹುತೇಕ ಕೇಂದ್ರೋದ್ಯಮಗಳು ಖಾಸಗಿ ವಲಯದ ಸೃಷ್ಟಿ: ಸನ್ಯಾಲ್

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರವು ಖಾಸಗಿಯವರಿಗೆ ಮಾರಾಟ ಮಾಡಲು ಹೊರಟಿರುವ ಸರ್ಕಾರಿ ಸ್ವಾಮ್ಯದ ಬಹುತೇಕ ಕಂಪನಿಗಳು (ಪಿಎಸ್‌ಯು) ಹಿಂದೆ ಖಾಸಗಿಯವರಿಂದಲೇ ಜನ್ಮತಾಳಿದ್ದವು ಎಂದು ಹೇಳುವ ಮೂಲಕ ಕೇಂದ್ರ ಹಣಕಾಸು ಸಚಿವಾಲಯದ ಮುಖ್ಯ ಆರ್ಥಿಕ ಸಲಹೆಗಾರ ಸಂಜೀವ್ ಸನ್ಯಾಲ್ ಅವರು ಖಾಸಗೀಕರಣ ನೀತಿಯನ್ನು ಸಮರ್ಥಿಸಿಕೊಂಡಿದ್ದಾರೆ.

‘ಪಿಎಸ್‌ಯು’ಗಳನ್ನು ಸರ್ಕಾರದ ಶ್ರಮದ ಮೂಲಕ ಕಟ್ಟಲಾಗಿದೆ ಎಂದು ನೀವು (ಪ್ರತಿಪಕ್ಷ) ಹೇಳುತ್ತೀರಿ. ಆದರೆ, ನಾವು ಖಾಸಗಿಯವರಿಗೆ ಮಾರಾಟ ಮಾಡಲು ಪ್ರಯತ್ನಿಸುತ್ತಿರುವ ಹೆಚ್ಚಿನವು ವಾಸ್ತವವಾಗಿ ಖಾಸಗಿ ವಲಯದಿಂದಲೇ ನಿರ್ಮಾಣ ಆಗಿರುವಂಥವು’ ಎಂದು ಹೇಳಿದ್ದಾರೆ.

ಇದಕ್ಕೆ ಒಂದು ಉದಾಹರಣೆಯನ್ನೂ ನೀಡಿದ ಅವರು, ಏರ್ ಇಂಡಿಯಾವನ್ನು ಖಾಸಗಿ ವಲಯದಿಂದ ಪಡೆದು 1953ರಲ್ಲಿ ರಾಷ್ಟ್ರೀಕರಣಗೊಳಿಸಲಾಯಿತು ಎಂದಿದ್ದಾರೆ.


ಸಂಜೀವ್ ಸನ್ಯಾಲ್

‘1969ರಲ್ಲಿ ಬ್ಯಾಂಕ್‌ಗಳ ರಾಷ್ಟ್ರೀಕರಣ ಮಾಡಲಾಯಿತು. ಆದ್ದರಿಂದ, ಈ ಸಂಸ್ಥೆಗಳು ದೇಶದ ಅಧಿಕಾರಿಗಳ ಶ್ರಮದಿಂದ ನಿರ್ಮಿಸಲ್ಪಟ್ಟಿವೆ ಎಂದು ಕೆಲವರು ಹೇಳುವಾಗ, ಇವುಗಳನ್ನು ಖಾಸಗಿ ಕಂಪನಿಗಳು ಸ್ಥಾಪಿಸಿದ್ದು ಎಂದು ನಾನು ನಿಮಗೆ ತಿಳಿಸಲು ಬಯಸುತ್ತೇನೆ’ ಎಂದು ಕಾರ್ಯಕ್ರಮವೊಂದರಲ್ಲಿ ಹೇಳಿದ್ದಾರೆ.

ಖಾಸಗೀಕರಣ ಮಾಡುವ ಸಲುವಾಗಿ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಪ್ರಮುಖ ಮತ್ತು ಪ್ರಮುಖ ಅಲ್ಲದ ವಲಯಗಳು ಯಾವುವು ಎನ್ನುವುದನ್ನು ಈಗಾಗಲೇ ಗುರುತಿಸಿದ್ದಾರೆ. ಪ್ರಮುಖ ವಲಯಗಳಲ್ಲಿ ಸರ್ಕಾರವು ಕನಿಷ್ಠ ಉಪಸ್ಥಿತಿಯನ್ನು ಹೊಂದಲಿದೆ.

ಎಲ್ಲಿ ಅಗತ್ಯ ಇದೆಯೋ ಅಲ್ಲಿ ಸರ್ಕಾರಿ ಸ್ವಾಮ್ಯದ ಸಂಸ್ಥೆಯನ್ನು ಸೃಷ್ಟಿಸಲು ಸರ್ಕಾರ ಹಿಂಜರಿಯುವುದಿಲ್ಲ ಎಂದೂ ಅವರು ಹೇಳಿದ್ದಾರೆ. ಈಚೆಗಷ್ಟೇ ‘ಅಭಿವೃದ್ಧಿ ಹಣಕಾಸು ಸಂಸ್ಥೆ’ಯನ್ನು (ಡಿಎಫ್‌ಐ) ಆರಂಭಿಸಿರುವುದನ್ನು ಅವರು ಉದಾಹರಣೆಯಾಗಿ ನೀಡಿದರು.

ಬ್ಯಾಂಕಿಂಗ್ ವಲಯದ ಕುರಿತು ಮಾತನಾಡಿದ ಅವರು, ‘ಇದು ಪ್ರಮುಖ ವಲಯದ ಭಾಗವಾಗಿದ್ದು, ಸರ್ಕಾರವು ಈ ವಲಯದಲ್ಲಿ ತನ್ನ ಅಸ್ತಿತ್ವ ಹೊಂದಿರಲಿದೆ. ಇದಕ್ಕೆ ಕೆಲವು ಕಾರಣಗಳಿವೆ. ಖಾಸಗಿ ವಲಯದ ಬ್ಯಾಂಕ್‌ಗಳಲ್ಲಿ ಸಮಸ್ಯೆಗಳಿವೆ. ನಾವು ಯೆಸ್ ಬ್ಯಾಂಕ್‌ನಂತಹ ಕೆಲವು ನಿದರ್ಶನಗಳನ್ನು ನೋಡಿದ್ದೇವೆ’ ಎಂದು ತಿಳಿಸಿದ್ದಾರೆ.

ಮುಂಬೈನಲ್ಲಿಯೂ ₹ 100ರ ಗಡಿ ದಾಟಿದ ಡೀಸೆಲ್ ದರ

ನವದೆಹಲಿ (ಪಿಟಿಐ): ದೇಶದಾದ್ಯಂತ ಸತತ ಐದನೇ ದಿನವೂ ಇಂಧನ ದರ ಹೆಚ್ಚಾಗಿದೆ. ಶನಿವಾರ ಪೆಟ್ರೋಲ್ ದರ ಲೀಟರಿಗೆ 30 ಪೈಸೆ ಮತ್ತು ಡೀಸೆಲ್ ದರ ಲೀಟರಿಗೆ 35 ಪೈಸೆ ಹೆಚ್ಚಿಸಿವೆ.

ಶನಿವಾರದ ದರ ಏರಿಕೆಯಿಂದಾಗಿ ಮುಂಬೈನಲ್ಲಿ ಡೀಸೆಲ್ ದರವು ಲೀಟರಿಗೆ ₹ 100ರ ಗಡಿ ದಾಟಿದ್ದು, ₹100.29ರಂತೆ ಮಾರಾಟವಾಯಿತು. ಪೆಟ್ರೋಲ್ ದರ ₹ 109.83ರಷ್ಟಾಗಿದೆ. ದೆಹಲಿಯಲ್ಲಿ ಪೆಟ್ರೋಲ್ ದರ ₹ 103.84 ಮತ್ತು ಡೀಸೆಲ್ ದರ ₹ 92.47ರಷ್ಟಾಗಿದೆ.

ಬೆಂಗಳೂರಿನಲ್ಲಿ ಪೆಟ್ರೋಲ್ ದರ ಲೀಟರಿಗೆ ₹ 107.41 ಮತ್ತು ಡೀಸೆಲ್ ದರ ಲೀಟರಿಗೆ ₹ 98.11ಕ್ಕೆ ಏರಿಕೆ ಆಗಿದೆ. ಸ್ಥಳೀಯ ಮಾರಾಟ ತೆರಿಗೆಗೆ ಅನುಗುಣವಾಗಿ ರಾಜ್ಯದಿಂದ ರಾಜ್ಯಕ್ಕೆ ಬೆಲೆಯಲ್ಲಿ ವ್ಯತ್ಯಾಸ ಆಗುತ್ತದೆ.

‘ಒಪೆಕ್ +’ ಒಕ್ಕೂಟ ಪ್ರತಿ ದಿನಕ್ಕೆ 4 ಲಕ್ಷ ಬ್ಯಾರಲ್‌ಗಿಂತಲೂ ಹೆಚ್ಚಿನ ಪ್ರಮಾಣದಲ್ಲಿ ಕಚ್ಚಾ ತೈಲ ಉತ್ಪಾದನೆ ಮಾಡದೇ ಇರಲು ನಿರ್ಧರಿಸಿವೆ. ಇದರಿಂದಾಗಿ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲ ದರವು ಬ್ಯಾರಲ್‌ಗೆ ₹ 82 ಡಾಲರ್‌ಗಳಿಗೆ ಏರಿಕೆ ಆಗಿದೆ. ಈ ಕಾರಣದಿಂದಾಗಿ ದೇಶದಲ್ಲಿ ಇಂಧನ ದರ ಹೆಚ್ಚಾಗುತ್ತಿದೆ.

ಅಟ್ಲಾಂಟಾ: ಲಘು ವಿಮಾನ ಅಪಘಾತ, ನಾಲ್ವರ ಸಾವು

ಚಂಬ್ಲೀ (ಅಮೆರಿಕ)(ಎಪಿ): ಅಟ್ಲಾಂಟಾದ ಈಶಾನ್ಯ ಭಾಗದ ಉಪನಗರದಲ್ಲಿರುವ ವಿಮಾನ ನಿಲ್ದಾಣದಿಂದ ಹಾರಾಟ ಆರಂಭಿಸಿದ (ಟೇಕ್ ಆಫ್) ಲಘು ವಿಮಾನವೊಂದು, ಅದೇ ಪ್ರದೇಶದಲ್ಲಿ ಅಪಘಾತಕ್ಕೀಡಾಗಿದೆ. ಈ ದುರಂತದಲ್ಲಿ ನಾಲ್ವರು ಮೃತಪಟ್ಟಿದ್ದಾರೆ.

ಸಿಂಗಲ್ ಎಂಜಿನ್ ಸೆಸ್ನಾ 210 ವಿಮಾನವು ಶುಕ್ರವಾರ ಮಧ್ಯಾಹ್ನ 1.10ರ ಸುಮಾರಿಗೆ ಡೆಕಾಲ್ಬ್-ಪೀಚ್‌ಟ್ರೀ ವಿಮಾನ ನಿಲ್ದಾಣದಲ್ಲಿ ಅಪಘಾತಕ್ಕೀಡಾಗಿ, ಬೆಂಕಿ ಹೊತ್ತಿಕೊಂಡಿತು ಎಂದು ಫೆಡರಲ್ ಏವಿಯೇಷನ್ ಅಡ್ಮಿನಿಸ್ಟ್ರೇಷನ್ ತಿಳಿಸಿದೆ.

ಒಳನುಸುಳುವಿಕೆ ಮಟ್ಟಹಾಕಲು ಸೇನಾಪಡೆಗಳು ಸಮರ್ಥ: ಜ. ನರವಣೆ

‘ಕಾಶ್ಮೀರದೊಳಗೆ ನುಸುಳಲು ಅಫ್ಗನ್ ಉಗ್ರರ ಯತ್ನ ಸಾಧ್ಯತೆ’

ನವದೆಹಲಿ (ಪಿಟಿಐ): ‘ಅಫ್ಗಾನಿಸ್ತಾನ ಸಹಜ ಸ್ಥಿತಿಗೆ ಮರಳಿದ ನಂತರ ಅಫ್ಗನ್ ಮೂಲದ ಉಗ್ರರು ಜಮ್ಮು–ಕಾಶ್ಮೀರದೊಳಗೆ ನುಸುಳಲು ಯತ್ನಿಸುವ ಸಾಧ್ಯತೆಗಳಿವೆ’ ಎಂದು ಸೇನಾಪಡೆ ಮುಖ್ಯಸ್ಥ ಜನರಲ್ ಎಂ.ಎಂ.ನರವಣೆ ಶನಿವಾರ ಹೇಳಿದರು.

‘ಎರಡು ದಶಕಗಳ ಹಿಂದೆ ಅಫ್ಗಾನಿಸ್ತಾನದಲ್ಲಿ ತಾಲಿಬಾನ್‌ನ ಆಡಳಿತ ಇತ್ತು. ಆಗಲೂ ಇಂಥ ಘಟನೆಗಳು ನಡೆದಿದ್ದವು. ಹೀಗಾಗಿ ಒಳನುಸುಳುವಿಕೆ ಯತ್ನಗಳು ಮತ್ತೆ ಮರುಕಳಿಸುವ ಸಾಧ್ಯತೆಗಳನ್ನು ತಳ್ಳಿಹಾಕುವಂತಿಲ್ಲ’ ಎಂದರು.


‘ಇಂಡಿಯಾ ಟುಡೆ’ ನಿಯತಕಾಲಿಕೆ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ‘ಇಂಥ ಯಾವುದೇ ಪರಿಸ್ಥಿತಿಯನ್ನು ಎದುರಿಸಲು ಭಾರತೀಯ ಸೇನಾಪಡೆಗಳು ಸನ್ನದ್ಧವಾಗಿವೆ. ಒಳನುಸುಳುವಿಕೆಯನ್ನು ಮಟ್ಟ ಹಾಕುವ ಕಾರ್ಯತಂತ್ರ ಹಾಗೂ ಉಗ್ರರ ಚಟುವಟಿಕೆಗಳ ಮೇಲೆ ನಿಗಾ ಇಡುವ ವ್ಯವಸ್ಥೆಯನ್ನು ಭದ್ರತಾಪಡೆಗಳು ಹೊಂದಿವೆ’ ಎಂದು ಹೇಳಿದರು.

‘ಚೀನಾದ ಸೇನಾ ನಿಯೋಜನೆ ಕಳವಳಕಾರಿ ಸಂಗತಿ’

ಪೂರ್ವ ಲಡಾಖ್ ಪ್ರದೇಶದಲ್ಲಿ ಚೀನಾ ಸೇನಾ ನಿಯೋಜನೆಯನ್ನು ಬಲಗೊಳಿಸುತ್ತಿರುವುದು ಕಳವಳಕಾರಿ ಸಂಗತಿ ಎಂದಿರುವ ಸೇನಾ ಮುಖ್ಯಸ್ಥ ಜನರಲ್ ನರವಣೆ, ‘ಗಡಿಭಾಗದಲ್ಲಿ ನಡೆಯುತ್ತಿರುವ ಚೀನಾದ ಎಲ್ಲ ಚಟುವಟಿಕಗಳ ಮೇಲೆ ಭಾರತ ತೀವ್ರ ನಿಗಾ ಇರಿಸಿದೆ’ ಎಂದು ಹೇಳಿದ್ದಾರೆ.

ಕಳೆದ ಕೆಲವು ದಿನಗಳಿಂದ ಪೂರ್ವ ಲಡಾಖ್‌ನಲ್ಲಿ ಚೀನಾ ಸೇನೆ ಬಲಪಡಿಸುತ್ತಿದೆ. ಜತೆಗೆ ಬೃಹತ್ ಪ್ರಮಾಣದ ಸೇನೆಯನ್ನು ನಿಯೋಜಿಸಲು ಅಗತ್ಯವಾದ ಮೂಲ ಸೌಕರ್ಯಗಳನ್ನು ಕಲ್ಪಿಸುತ್ತಿದೆ ಎಂದು ಅವರು ತಿಳಿಸಿದ್ದಾರೆ.

ಚೀನಾ, ಚಳಿಗಾಲದ ಎರಡನೇ ಅವಧಿಯಲ್ಲೂ ತನ್ನ ಸೇನಾ ನಿಯೋಜನೆಯನ್ನು ಮುಂದುವರಿಸಿದರೆ, ಪಾಕಿಸ್ತಾನದ ಎಲ್‌ಒಸಿಯಲ್ಲಿನ (ಗಡಿ ನಿಯಂತ್ರಣ ರೇಖೆ) ಪರಿಸ್ಥಿತಿ ಇಲ್ಲಿಯೂ ತಲೆದೋರಬಹುದು ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.


ನರವಣೆ

‘ಚೀನಾ ತನ್ನ ಸೇನೆ ನಿಯೋಜನೆಯನ್ನು ಮುಂದುವರಿಸಿದರೆ, ನಮ್ಮ ಬದಿಯಲ್ಲಿ ಭಾರತೀಯ ಸೇನೆಯೂ ತನ್ನ ಅಸ್ತಿತ್ವ ವನ್ನು ಉಳಿಸಿಕೊಳ್ಳಲಿದೆ. ಇದು ಪಿಎಲ್‌ಎ ಕೈಗೊಂಡಿರುವ ಕ್ರಮಗಳಿಗಿಂತ ಉತ್ತಮವಾಗಿದೆ’ ಎಂದು ನರವಣೆ ಹೇಳಿದರು.

ಭಾರತ ಮತ್ತು ಚೀನಾದ ಸೇನಾಪಡೆಗಳು ಪೂರ್ವ ಲಡಾಖ್‌ನ ವಾಸ್ತವ ನಿಯಂತ್ರಣ ರೇಖೆಯ (ಎಲ್‌ಎಸಿ) ಉದ್ದಕ್ಕೂ ಸುಮಾರು 17 ತಿಂಗಳು ನಿಯೋಜನೆಗೊಂಡಿದ್ದರೂ, ಸಂಘರ್ಷಗಳಿಂದ ದೂರವಿದ್ದು, ಸರಣಿ ಮಾತುಕತೆಗಳ ಮೂಲಕ ಸಮಸ್ಯೆ ಬಗೆಹರಿಸಿಕೊಳ್ಳಲು ಪ್ರಯತ್ನಿಸಿವೆ.

‘ಕಾಶ್ಮೀರದಲ್ಲಿ ನಡೆಯುತ್ತಿರುವ ನಾಗರಿಕರ ಹತ್ಯೆಗಳಿಗೂ, ಅಫ್ಗಾನಿಸ್ತಾನ ತಾಲಿಬಾನಿಗಳ ವಶವಾಗಿರುವುದಕ್ಕೂ ಸಂಬಂಧ ಇದೆಯೇ’ ಎಂಬ ಪ್ರಶ್ನೆಗೆ, ‘ಈ ಎರಡು ವಿದ್ಯಮಾನಗಳಿಗೆ ಸಂಬಂಧ ಇದೆ ಎಂಬುದಾಗಿ ಹೇಳಲಾಗದು’ ಎಂದು ಜನರಲ್ ನರವಣೆ ಉತ್ತರಿಸಿದರು.

‘ಪಾಕಿಸ್ತಾನದ ಮೂಲಕ ಅಫ್ಗನ್ ಮೂಲದ ಉಗ್ರರು ಜಮ್ಮು–ಕಾಶ್ಮೀರವನ್ನು ಪ್ರವೇಶಿಸುವ ಸಾಧ್ಯತೆಗಳೂ ಇವೆ. ಇದರಿಂದ ಲಷ್ಕರ್‌–ಎ–ತಯಬಾ, ಜೈಷ್–ಎ–ಮೊಹಮ್ಮದ್‌ನಂತಹ ಸಂಘಟನೆಗಳಿಂದ ಭಯೋತ್ಪಾದನಾ ಕೃತ್ಯಗಳು ಹೆಚ್ಚಾಗಬಹುದು. ಇದು ನಿಜಕ್ಕೂ ಕಳವಳಕಾರಿ ಹಾಗೂ ಖಂಡನೀಯ’ ಎಂದು ಹೇಳಿದರು.

ಸೆಂಟ್ರಲ್ ವಿಸ್ತಾ: ಕಾಲಮಿತಿಯಲ್ಲಿ ಪೂರ್ಣ

ಇಂಡಿಯಾ ಟುಡೆ ಸಮಾವೇಶದಲ್ಲಿ ಕೇಂದ್ರ ಸಚಿವ ಹರ್ದೀಪ್ ಸಿಂಗ್ ಪುರಿ ಮಾಹಿತಿ

ನವದೆಹಲಿ (ಪಿಟಿಐ): ನೂತನ ಸಂಸತ್ ಭವನ ನಿರ್ಮಾಣ ಕಾಲಮಿತಿಯಲ್ಲಿ ಪೂರ್ಣಗೊಳ್ಳಲಿದೆ ಎಂದು ಕೇಂದ್ರ ಸಚಿವ ಹರ್ದೀಪ್ ಸಿಂಗ್ ಪುರಿ ಶನಿವಾರ ಹೇಳಿದರು.

ರಾಷ್ಟ್ರಪತಿ ಭವನದಿಂದ ಇಂಡಿಯಾ ಗೇಟ್ ವರೆಗೆ ಪುನಾಭಿವೃದ್ಧಿ ಕಾರ್ಯಗಳೂ ಸರಿಯಾದ ಸಮಯದಲ್ಲಿ ಮುಗಿಯಲಿವೆ ಎಂದೂ ಅವರು ಹೇಳಿದರು.

ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರದ ಮಹಾತ್ವಾಕಾಂಕ್ಷೆಯ ಸೆಂಟ್ರಲ್ ವಿಸ್ತಾ ಅವೆನ್ಯೂ ಪುನರಾಭಿವೃದ್ಧಿ ಯೋಜನೆಯ ಭಾಗವಾಗಿ ಇವುಗಳ ನಿರ್ಮಾಣ ಮಾಡಲಾಗುತ್ತಿದೆ.

ಪ್ರಸ್ತುತ ಸಂಸತ್ ಭವನ ಅಸುರಕ್ಷಿತವಾಗಿದೆ. ಇದು ನಿರ್ಮಾಣವಾದಾಗ ಭೂಕಂಪ ವಲಯ 2 ರಲ್ಲಿತ್ತು. ಆದರೆ ಈಗ ಆ ಪ್ರದೇಶವು ಭೂಕಂಪ ವಲಯದ ನಾಲ್ಕರಲ್ಲಿದೆ. ಆದ್ದರಿಂದ ಹೊಸ ಸಂಸತ್ ಭವನ ಅಗತ್ಯವಿದೆ ಎಂದು ಸಚಿವ ಪುರಿ ಅವರು ಹೊಸ ಸಂಸತ್ ಭವನ ನಿರ್ಮಾಣವನ್ನು ಸಮರ್ಥಿಸಿಕೊಂಡರು.

ಇಂಡಿಯಾ ಟುಡೆ ಸಮಾವೇಶ 2021ರಲ್ಲಿ ನಡೆದ ಸಂವಾದದಲ್ಲಿ ಮಾತನಾಡಿದ ಸಚಿವರು, ಈಗ ಅಸ್ತಿತ್ವದಲ್ಲಿರುವ ಕಟ್ಟಡವನ್ನು ಸಂಸತ್‌ಭವನವಾಗಿ ವಿನ್ಯಾಸಗೊಳಿಸಲಾಗಿಲ್ಲ. ಆದ್ದರಿಂದ ಇಲ್ಲಿ ಹೆಚ್ಚಿನ ಸಂಸತ್ ಸದಸ್ಯರಿಗೆ ಸ್ಥಳಾವಕಾಶವಿಲ್ಲ. ಇದು ವಸಾಹಾತುಶಾಹಿ ಆಡಳಿತದಲ್ಲಿ ಸಭೆ ನಡೆಸುವ ಕೇಂದ್ರವಾಗಿತ್ತು ಎಂದು ಹೇಳಿದರು.

‘ದೇಶ ಸ್ವತಂತ್ರವಾದ ನಂತರ ಸಂಸತ್ ಸದಸ್ಯರ ಸಂಖ್ಯೆಯೂ ಹೆಚ್ಚುತ್ತಿದೆ. ಆದ್ದರಿಂದ ಆಂತರಿಕವಾಗಿ ಹೊಂದಾಣಿಕೆ ಮಾಡಲಾಗಿದೆ. ರಚನಾತ್ಮಕ ದೃಷ್ಟಿಕೋನದಿಂದ ಇದು ಅಸುರಕ್ಷಿತ ಕಟ್ಟಡವಾಗಿದೆ. ಇದು ಭೂಕಂಪದ ವಲಯದಲ್ಲಿದೆ. ಆದ್ದರಿಂದ ನಾವು ಭಯವನ್ನು ಸೃಷ್ಟಿಸಲು ಬಯಸುವುದಿಲ್ಲ’ ಎಂದು ಹೇಳಿದರು.

ಬೀದರ್: ಟೊಮೆಟೊ ಬೆಲೆ ಕೆ.ಜಿಗೆ ₹100



ಪ್ರಜಾವಾಣಿ ವಾರ್ತೆ

ಬೀದರ್: ನಗರದಲ್ಲಿ ಶನಿವಾರ ಟೊಮೆಟೊ ಬೆಲೆ ಕೆ.ಜಿ.ಗೆ ದಿಢೀರ್ ₹ 100ಕ್ಕೆ ಏರಿಕೆ ಆಗಿ ಗ್ರಾಹಕರು ಹುಬ್ಬೇರಿಸುವಂತೆ ಮಾಡಿತು.

ತರಕಾರಿ ಸಗಟು ಮಾರುಕಟ್ಟೆಗೆ ಬೀದರ್, ಭಾಲ್ಕಿ ಹಾಗೂ ಚಿಟಗುಪ್ಪ ತಾಲ್ಲೂಕುಗಳಿಂದ ಟೊಮೆಟೊ ಬರುತ್ತದೆ. ಹೈದರಾಬಾದ್‌ನಿಂದಲೂ ಆವಕವಾಗುತ್ತದೆ. ಜಿಲ್ಲೆಯಲ್ಲಿ ಮಳೆಯಿಂದಾಗಿ ಟೊಮೆಟೊ ಬೆಳೆ ಹಾಳಾಗಿದೆ. ಹೊರಗಿನಿಂದ ಕಡಿಮೆ ಪ್ರಮಾಣದಲ್ಲಿ ಆವಕವಾಗಿದ್ದರಿಂದ ಬೆಲೆ ಹೆಚ್ಚಳವಾಯಿತು ಎಂದು ವರ್ತಕರು ಹೇಳಿದರು.

ಕಲಬುರಗಿ ನಗರದಲ್ಲಿ ಟೊಮೊಟೊ ಪ್ರತಿ ಕೆ.ಜಿ.ಗೆ ₹60ರ ವರೆಗೆ ಮಾರಾಟವಾಯಿತು. ಈ ವರೆಗೆ ಬೆಲೆ₹ 30ರ ಆಸುಪಾಸಿನಲ್ಲಿತ್ತು.

‘ಬೆಲೆ ಏರಿಕೆ ತಾತ್ಕಾಲಿಕ. ಆವಕ ಹೆಚ್ಚಳವಾಗಿ ಬೆಲೆ ಸಹಜ ಸ್ಥಿತಿಗೆ ಬರಲಿದೆ’ ಎಂದು ವರ್ತಕರು ತಿಳಿಸಿದರು.

ಅಕ್ರಮ ಹಣ ವರ್ಗಾವಣೆ: ದೆಹಲಿ ಕೋರ್ಟ್ ಆದೇಶ

‘ಇ.ಡಿ ವಶಕ್ಕೆ ನಟಿ ಲೀನಾ ಚಂದ್ರಶೇಖರ್ ದಂಪತಿ’

ನವದೆಹಲಿ (ಪಿಟಿಐ): ಅಕ್ರಮ ಹಣ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿ ನಟಿ ಲೀನಾ ಮಾರಿಯಾ ಪಾಲ್ ಹಾಗೂ ಪತಿ ಸುಕೇಶ್ ಚಂದ್ರಶೇಖರ್ ಅವರನ್ನು ಜಾರಿ ನಿರ್ದೇಶನಾಲಯ (ಇ.ಡಿ) ಕಸ್ಟಡಿಗೆ ನೀಡಿ ದೆಹಲಿಯ ಸ್ಥಳೀಯ ಕೋರ್ಟ್ ಶನಿವಾರ ಆದೇಶಿಸಿತು.

ಫೋರ್ಟಿಸ್ ಹೆಲ್ತ್‌ಕೇರ್‌ನ ಮಾಜಿ ಪ್ರವರ್ತಕ ಶಿವಿಂದರ್ ಮೋಹನ್ ಸಿಂಗ್ ಅವರ ಪತ್ನಿ ಅದಿತಿ ಸಿಂಗ್ ಅವರಿಗೆ ₹200 ಕೋಟಿ ವಂಚಿಸಿ, ಅಕ್ರಮ ಹಣ ವರ್ಗಾವಣೆ ಮಾಡಿರುವ ಆರೋಪ ಲೀನಾ–ಚಂದ್ರಶೇಖರ್ ವಿರುದ್ಧ ಇದೆ.

ವಂಚನೆ ಹಾಗೂ ಅಕ್ರಮ ಹಣ ವರ್ಗಾವಣೆ ಆರೋಪಗಳಿಗೆ ಸಂಬಂಧಿಸಿದ ಬೇರೊಂದು ಪ್ರಕರಣದಲ್ಲಿ ದೆಹಲಿ ಪೊಲೀಸರು ಇವರಿಬ್ಬರನ್ನು ಈ ಮೊದಲೇ ಬಂಧಿಸಿ, ರೋಹಿಣಿ ಜೈಲಿನಲ್ಲಿರಿಸಿದ್ದರು. ಇ.ಡಿ ಅಧಿಕಾರಿಗಳು ಶನಿವಾರ ಇಬ್ಬರನ್ನು ಬಂಧನಕ್ಕೊಳಪಡಿಸಿ, ನಂತರ ಸ್ಥಳೀಯ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದರು.

‘ವಿಚಾರಣೆಗಾಗಿ ಇಬ್ಬರನ್ನು 14 ದಿನಗಳ ಕಾಲ ಇ.ಡಿ ಕಸ್ಟಡಿಗೆ ನೀಡಬೇಕು’ ಎಂದು ಇ.ಡಿ ಪರ ವಾದ ಮಂಡಿಸಿದ ವಿಶೇಷ ಸರ್ಕಾರಿ ವಕೀಲ ಅತುಲ್ ತ್ರಿಪಾಠಿ ಕೋರಿದರು.

ಅರ್ಜಿ ವಿಚಾರಣೆ ನಡೆಸಿದ ವಿಶೇಷ ನ್ಯಾಯಾಧೀಶ ಅನಿಲ್ ಅಂಟಿಲ್, ಇಬ್ಬರು ಆರೋಪಿಗಳನ್ನು ಮೂರು ದಿನ ಕಾಲ ಇ.ಡಿ ಕಸ್ಟಡಿಗೆ ನೀಡಿ ಆದೇಶಿಸಿದರು.

ಕಳೆದ ಆಗಸ್ಟ್‌ನಲ್ಲಿ ಚೆನ್ನೈನಲ್ಲಿರುವ ಚಂದ್ರಶೇಖರ್‌ಗೆ ಸೇರಿದ ಮನೆ, ಕಚೇರಿಗಳ ಮೇಲೆ ಇ.ಡಿ ನಡೆಸಿದ ದಾಳಿ ಸಂದರ್ಭದಲ್ಲಿ ₹ 82.5 ಲಕ್ಷ ನಗದು ಹಾಗೂ 12ಕ್ಕೂ ಅಧಿಕ ಐಷಾರಾಮಿ ಕಾರುಗಳನ್ನು ಜಪ್ತಿ ಮಾಡಲಾಗಿತ್ತು.

ಚಂದ್ರಶೇಖರ್ ವಿರುದ್ಧದ ಪ್ರಕರಣಕ್ಕೆ ಸಂಬಂಧಿಸಿ ಇ.ಡಿ ಅಧಿಕಾರಿಗಳು ಈಗಾಗಲೇ ನಟಿ ಜಾಕ್ವೆಲಿನ್ ಫರ್ನಾಂಡಿಸ್ ಹೇಳಿಕೆಯನ್ನು ದಾಖಲಿಸಿಕೊಂಡಿದ್ದಾರೆ.

ಐಟಿ ದಾಳಿ: ದಾಖಲೆ ರಹಿತ ₹550 ಕೋಟಿ ಆದಾಯ ಪತ್ತೆ,

ನವದೆಹಲಿ (ಪಿಟಿಐ): ಹೈದರಾಬಾದ್ ಮೂಲದ ಹೆಟೆರೊ ಫಾರ್ಮಸುಟಿಕಲ್ಸ್ ಸಮೂಹ ಸಂಸ್ಥೆಯ ಮೇಲೆ ದಾಳಿ ನಡೆಸಿರುವ ಆದಾಯ ತೆರಿಗೆ ಇಲಾಖೆಯ ಅಧಿಕಾರಿಗಳು, ₹550 ಕೋಟಿ ಮೊತ್ತದ ದಾಖಲೆ ರಹಿತ ಆದಾಯವನ್ನು (ಲೆಕ್ಕವಿಲ್ಲದ) ಪತ್ತೆ ಮಾಡಿದ್ದು, ₹142 ಕೋಟಿಗೂ ಅಧಿಕ ನಗದನ್ನು ವಶಪಡಿಸಿಕೊಂಡಿರುವುದಾಗಿ ಅಧಿಕೃತ ಮೂಲಗಳು ಶನಿವಾರ ತಿಳಿಸಿವೆ.

ದಾಳಿಗೆ ಸಂಬಂಧಿಸಿದಂತೆ ಕಂಪನಿಯ ಅಧಿಕಾರಿಗಳು ತಕ್ಷಣಕ್ಕೆ ಪ್ರತಿಕ್ರಿಯೆಗೆ ಲಭ್ಯವಾಗಿಲ್ಲ. ಅಕ್ಟೋಬರ್ 6ರಂದು ದೇಶದ ವಿವಿದ ರಾಜ್ಯಗಳಲ್ಲಿನ ಸುಮಾರು 50 ಸ್ಥಳಗಳ ಮೇಲೆ ತೆರಿಗೆ ಇಲಾಖೆ ದಾಳಿ ನಡೆಸಿದೆ.

‘ಶೋಧದ ಸಮಯದಲ್ಲಿ, ಹಲವಾರು ಬ್ಯಾಂಕ್ ಲಾಕರ್‌ಗಳು ಪತ್ತೆಯಾಗಿದ್ದವು. ಅದರಲ್ಲಿ 16 ಲಾಕರ್‌ಗಳನ್ನು ಪರಿಶೀಲಿಸಲಾಗಿದೆ. ಈವರೆಗೆ ದಾಳಿಯಲ್ಲಿ ದಾಖಲೆ ರಹಿತವಾಗಿ ಪತ್ತೆಯಾದ ₹ 142.87 ಕೋಟಿ ನಗದನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಕೇಂದ್ರೀಯ ನೇರ ತೆರಿಗೆಗಳ ಮಂಡಳಿ (ಸಿಬಿಡಿಟಿ) ಹೇಳಿಕೆಯಲ್ಲಿ ತಿಳಿಸಿದೆ.

‘ಕಾವೇರಿ, ಉಪನದಿಗಳ ಮಾಲಿನ್ಯ ತಡೆಗೆ ಸಮಿತಿ’

ಚೆನ್ನೈ(ಪಿಟಿಐ): ಕಾವೇರಿ ನದಿ ಮತ್ತು ಅದರ ಉಪನದಿಗಳಿಗೆ ಹಾನಿಕಾರಕ ತ್ಯಾಜ್ಯ ಸೇರ್ಪಡೆಯಾಗುತ್ತಿರುವ ಸಮಸ್ಯೆ ಪರಿಶೀಲಿಸಲು ಐದು ಸಮಿತಿಗಳನ್ನು ರಚಿಸಲಾಗಿದೆ ಎಂದು ತಮಿಳುನಾಡು ಸರ್ಕಾರ ಶನಿವಾರ ಹೇಳಿದೆ.

ಜಲಸಂಪನ್ಮೂಲಗಳನ್ನು ರಕ್ಷಿಸಲು ನಿರಂತರ ಪ್ರಯತ್ನಗಳು ನಡೆಯುತ್ತಿವೆ. ಮಾಲಿನ್ಯದ ಮಟ್ಟ ನಿರ್ಧರಿಸಲು ಮತ್ತು ಸೂಕ್ತ ಕ್ರಮಗಳನ್ನು ಕೈಗೊಳ್ಳಲು ನೀರಿನ ಮಾದರಿಗಳನ್ನು ಹಲವಾರು ಪ್ರದೇಶಗಳಿಂದ ಸಂಗ್ರಹಿಸಲಾಗಿದೆ ಎಂದು ರಾಜ್ಯ ಪರಿಸರ ಮತ್ತು ಹವಾಮಾನ ಬದಲಾವಣೆ ಸಚಿವ ಶಿವ ವಿ. ಮೆಯ್ಯಾನಾಥನ್ ಹೇಳಿದರು.

ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಮಾರ್ಗದರ್ಶನದಲ್ಲಿ ರಾಜ್ಯದಲ್ಲಿ ಕಾವೇರಿ ಸೇರಿದಂತೆ ಇತರ ನದಿಗಳ ಮಾಲಿನ್ಯ ತಡೆಗಟ್ಟಲು ರಾಜ್ಯ ಸರ್ಕಾರ ದಿಟ್ಟ ಕ್ರಮಗಳನ್ನು ಕೈಗೊಳ್ಳುತ್ತಿದೆ. ಈರೋಡ್, ಕುಮಾರಪಾಳ್ಯಂ, ಪಳ್ಳಿಪಾಳ್ಯಂ, ಕರೂರ್ ಮತ್ತು ತಿರುಪುರ್‌ನಲ್ಲಿನ ಡೈಯಿಂಗ್ ಘಟಕಗಳಿಂದ ಸಂಸ್ಕರಿಸದ ತ್ಯಾಜ್ಯಗಳನ್ನು ಕಾವೇರಿ ಮತ್ತು ಅದರ ಉಪನದಿಗಳಿಗೆ ಬಿಡಲಾಗಿದೆಯೇ ಎಂಬುದನ್ನು ಪರಿಶೀಲಿಸಲು ತಮಿಳುನಾಡು ಮಾಲಿನ್ಯ ನಿಯಂತ್ರಣ ಮಂಡಳಿ (ಟಿಎನ್‌ಪಿಸಿಬಿ) ಒಳಗೊಂಡ ಐದು ಸಮಿತಿಗಳನ್ನು ಅ.6 ರಂದು ರಚಿಸಲಾಗಿದೆ ಎಂದು ಸಚಿವರು ಹೇಳಿದರು.

ಸಮಿತಿಗಳು ಈ ಪ್ರದೇಶಗಳಲ್ಲಿನ ಘಟಕಗಳನ್ನು ಪರಿಶೀಲಿಸುತ್ತಿವೆ. ಜೊತೆಯಲ್ಲಿ, ಟಿಎನ್‌ಪಿಸಿಬಿ ಮತ್ತು ಐಐಟಿ(ಎಂ) ತಂಡದ ಎಂಜಿನಿಯರ್‌ಗಳು ಅ.9ರಂದು ಮೆಟ್ಟೂರಿನಿಂದ ಮೈಲಾಡುತುರೈವರೆಗೆ ವಿವಿಧ ಸ್ಥಳಗಳಲ್ಲಿ ನೀರಿನ ಮಾದರಿಗಳನ್ನು ಸಂಗ್ರಹಿಸಿದ್ದಾರೆ. ಐಐಟಿ ಮದ್ರಾಸ್ ನಡೆಸಿದ ಅಧ್ಯಯನದಲ್ಲಿ ಕಾವೇರಿ ನದಿ ಔಷಧಿಯ ತ್ಯಾಜ್ಯ, ಪ್ಲಾಸ್ಟಿಕ್, ಭಾರ ಲೋಹಗಳು ಮತ್ತು ಕೀಟನಾಶಕಗಳಿಂದ ಕಲುಷಿತವಾಗಿರುವುದು ಕಂಡುಬಂದಿದೆ ಎಂದರು.

ಕೇಂದ್ರ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಯುನೈಟೆಡ್ ಕಿಂಗ್‌ಡಮ್ ನೈಸರ್ಗಿಕ ಪರಿಸರ ಸಂಶೋಧನಾ ಮಂಡಳಿಯ ಜಂಟಿ ಅನುದಾನದಲ್ಲಿ ಈ ಅಧ್ಯಯನ ನಡೆದಿದೆ ಎಂದು ಸಚಿವರು ಹೇಳಿದರು.

ಸಹಕಾರ ವೃದ್ಧಿಗೆ ಭಾರತ, ಡೆನ್ಮಾರ್ಕ್ ನಿರ್ಧಾರ

ನವದೆಹಲಿ (ಪಿಟಿಐ): ಆರೋಗ್ಯ, ನವೀಕರಿಸಬಹುದಾದ ಇಂಧನ, ಕೃಷಿ, ನೀರು ನಿರ್ವಹಣೆ ಹಾಗೂ ಹವಾಮಾನ ಬದಲಾವಣೆ ಕ್ಷೇತ್ರಗಳಲ್ಲಿ ದ್ವಿಪಕ್ಷೀಯ ಸಹಕಾರ ವಿಸ್ತರಿಸಲು ಡೆನ್ಮಾರ್ಕ್ ಹಾಗೂ ಭಾರತ ಶನಿವಾರ ಸಮ್ಮತಿಸಿದವು.

ಮೂರು ದಿನಗಳ ಭಾರತ ಪ್ರವಾಸ ಆರಂಭಿಸಿರುವ ಡೆನ್ಮಾರ್ಕ್ ಪ್ರಧಾನಿ ಮೆಟ್ಟೆ ಫ್ರೆಡೆರಿಕ್ಸನ್ ಹಾಗೂ ಪ್ರಧಾನಿ ನರೇಂದ್ರ ಮೋದಿ ಅವರ ನಡುವಿನ ಮಾತುಕತೆ ಫಲಪ್ರದವಾಗಿದ್ದು, ದ್ವಿಪಕ್ಷೀಯ ಸಂಬಂಧ ವೃದ್ಧಿಗೆ ಉಭಯ ನಾಯಕರು ಒತ್ತು ನೀಡಿದರು ಎಂದು ಮಾಧ್ಯಮ ಪ್ರಕಟಣೆ ತಿಳಿಸಿದೆ.

‘ಇಂಡಿಯಾ–ಡೆನ್ಮಾರ್ಕ್ ಗ್ರೀನ್ ಸ್ಟ್ರಾಟೆಜಿಕ್ ಪಾರ್ಟನರ್‌ಶಿಪ್’ ನಡಿ ಕೈಗೊಂಡ ಕಾರ್ಯಕ್ರಮಗಳ ಪ್ರಗತಿಯನ್ನು ಪರಿಶೀಲಿಸಲಾಯಿತು. ವಿವಿಧ ಕ್ಷೇತ್ರಗಳಿಗೆ ಸಂಬಂಧಿಸಿದ ಉಭಯ ದೇಶಗಳ ಸಹಕಾರವನ್ನು ಮತ್ತಷ್ಟೂ ವಿಸ್ತರಿಸಲು ಒಪ್ಪಿಗೆ ನೀಡಲಾಯಿತು ಎಂದು ಪ್ರಧಾನಿ ಹೇಳಿದರು’.

ವಿಜ್ಞಾನ ಮತ್ತು ತಂತ್ರಜ್ಞಾನ, ಹವಾಮಾನ ಬದಲಾವಣೆ ಹಾಗೂ ಕೌಶಲಾಭಿವೃದ್ಧಿ ಕ್ಷೇತ್ರಗಳಲ್ಲಿ ಸಹಕಾರ ವೃದ್ಧಿಗಾಗಿ ಹಲವು ಒಪ್ಪಂದಗಳಿಗೆ ಉಭಯ ನಾಯಕರು ಅಂಕಿತ ಹಾಕಿದರು ಎಂದೂ ಪ್ರಕಟಣೆ ತಿಳಿಸಿದೆ.



ಮೈಸೂರು ದಸರಾದಲ್ಲಿ ಜಂಬೂ ಸವಾರಿ ನಂತರದ ಪ್ರಮುಖ ಆಕರ್ಷಣೆ ಎಂದರೆ ನಾಡ ಕುಸ್ತಿ ಪ್ರಜಾವಾಣಿ ಚಿತ್ರ : ಅನೂಪ್ ರಾಘ್. ಟಿ.

ರಕ್ತಸಿಕ್ತ ದಸರಾ!

ಎಸ್. ಪ್ರಕಾಶ ಬಾಬು

ಭಾರತೀಯರಲ್ಲಿ ಬೇರು ಬಿಟ್ಟ ಅಸ್ಪೃಶ್ಯ ಮನೋಭಾವವನ್ನು ಬುಡಸಮೇತ ಕೀಳಲು ಮಾಡುತ್ತಿರುವ ಪ್ರಯತ್ನಗಳೆಲ್ಲಾ ವಿಫಲವಾಗಿವೆ. ಇದಕ್ಕೆ 1953ರಲ್ಲಿ ದಸರಾ ಕುಸ್ತಿ ಸಂದರ್ಭದಲ್ಲಿ ಮೈಸೂರು ಮಹಾರಾಜರು ದಲಿತ ಕುಸ್ತಿ ಪಟುಗಳಿಗೆ ಇತರರಂತೆ ಸಮಾನ ಅವಕಾಶ ನೀಡಿದಾಗ ನಡೆದ ದುರ್ಘಟನೆಯೇ ಸಾಕ್ಷಿ.


ಈ ದುರ್ಘಟನೆಗೆ ಕಾರಣವಾಗಿದ್ದಿಷ್ಟೆ: ಸ್ವಾತಂತ್ರ್ಯ ಹೋರಾಟಗಾರರಾದ ತಗಡೂರು ರಾಮಚಂದ್ರರಾವ್ ಅವರು ಮೈಸೂರು ದಸರಾ ಕುಸ್ತಿ ಸ್ಪರ್ಧೆಗಳಲ್ಲಿ ದಲಿತ ಕುಸ್ತಿ ಪಟುಗಳಿಗೆ ಅವಕಾಶಕೊಡಬೇಕು ಅಂತ ಮಹಾರಾಜರನ್ನು ಬಹಳ ವರ್ಷಗಳಿಂದ ಒತ್ತಾಯಿಸುತ್ತಿದ್ದರು. ಆದರೆ ಮಹಾರಾಜರು ಅಂದಿನ ಸಾಮಾಜಿಕ ಕಟ್ಟುಪಾಡುಗಳಿಂದ ಬರುವ ವಿರೋಧಕ್ಕಾಗಿ ದಲಿತ ಕುಸ್ತಿಪಟುಗಳನ್ನು ಸವರ್ಣೀಯ ಕುಸ್ತಿ ಪಟುಗಳೊಂದಿಗೆ ಸೆಣಸಲು ಅವಕಾಶ ನೀಡಿರಲಿಲ್ಲ.

ಪ್ರದೇಶ ಕಾಂಗ್ರೆಸ್ ಅಧ್ಯಕ್ಷರಾದ ಸಾಹುಕಾರ್ ಚೆನ್ನಯ್ಯನವರು 1953ರಲ್ಲಿ ಮೈಸೂರು ಜಿಲ್ಲಾ ಕುಸ್ತಿ ಸಮಿತಿಯ ಅಧ್ಯಕ್ಷರೂ ಆಗಿದ್ದರು. ಅವರು ಪಕ್ಷದ ತತ್ವ-ಸಿದ್ಧಾಂತದಂತೆ ಜಾತ್ಯತೀತ ಮನೋಭಾವ ಎತ್ತಿ ಹಿಡಿಯಲು ದಸರಾ ಕುಸ್ತಿಯಲ್ಲಿ ದಲಿತ ಕುಸ್ತಿ ಪಟುಗಳು ಸವರ್ಣೀಯ ಕುಸ್ತಿ ಪಟುಗಳೊಂದಿಗೆ ಸ್ಪರ್ಧಿಸಲು ಅವಕಾಶ ನೀಡಬೇಕೆಂದು ಒತ್ತಾಯಿಸಿದರು. ಇದಕ್ಕೆ ಮಹಾರಾಜರೂ ಒಪ್ಪಿದರು. ಆದರೆ ಪಟ್ಟಭದ್ರ ಸವರ್ಣೀಯ ಕುಸ್ತಿಪಟುಗಳು ಒಪ್ಪಲಿಲ್ಲ.

ಆಗ ದಸರಾ ಕುಸ್ತಿ ಪಂದ್ಯಾವಳಿ ಈಗಿನಂತೆ ದೊಡ್ಡಕೆರೆ ಮೈದಾನದಲ್ಲಿ ನಡೆಯುತ್ತಿರಲಿಲ್ಲ. ಅಂಬಾವಿಲಾಸ ಅರಮನೆಯ ಒಳಾವರಣದಲ್ಲಿ ಮಹಾರಾಜರ ಸಮ್ಮುಖದಲ್ಲಿ ನಡೆಯುತ್ತಿತ್ತು. ಅಧಿಕೃತ ಘೋಷಣೆಯಂತೆ, 1953ರ ಅಕ್ಟೋಬರ್ 8ರ ಗುರುವಾರ, ನವರಾತ್ರಿ ಮೊದಲ ದಿನ, ಮಧ್ಯಾಹ್ನ ಮೂರು ಗಂಟೆಗೆ 101 ಜೊತೆ ಕುಸ್ತಿ ಪಂದ್ಯಗಳು ನಡೆಯಬೇಕಿದ್ದವು. ದಸರಾ ಕುಸ್ತಿ ಮಧ್ಯಾಹ್ನ ಆರಂಭವಾಗುವುದಕ್ಕಿಂತ ಮೊದಲೇ ಬೆಳಿಗ್ಗೆಯಿಂದಲೇ ಸವರ್ಣೀಯ ಕುಸ್ತಿ ಪಟುಗಳು ಮತ್ತು ಅವರ ಬೆಂಬಲಿಗರು ಅಠಾರ ಕಚೇರಿ (ಈಗಿನ ಜಿಲ್ಲಾಧಿಕಾರಿ ಕಚೇರಿ) ಮುಂದೆ ಗುಂಪುಗೂಡಿ ಪ್ರತಿಭಟನಾ ಮೆರವಣಿಗೆ ಹೊರಟರು.

ಮೈಸೂರು ಮತ್ತು ಪರ ಊರಿನ ಗರಡಿ ಸಂಘದ ಸವರ್ಣೀಯ ಕುಸ್ತಿ ಪಟುಗಳಿದ್ದ ಗುಂಪು ಬೆಳ್ಳಿ ಕಟ್ಟೆಗೆ ಮೀಸಲು ರಸ್ತೆ (ಈಗಿನ ದೇವರಾಜ ಅರಸ್ ರಸ್ತೆ) ಮೂಲಕ ಸಯ್ಯಾಜಿರಾವ್ ರಸ್ತೆಯಲ್ಲಿರುವ ದೇವರಾಜ ಮಾರುಕಟ್ಟೆಯ ಕಾಂಗ್ರೆಸ್ ಕಚೇರಿ ಬಳಿ ಬಂದಾಗ, ಸಾಹುಕಾರ್ ಚೆನ್ನಯ್ಯನವರ ಆಪ್ತರಾದ ಗಾಂಧಿವಾದಿ ಯು.ಎಲ್.ರಾಮಚಂದ್ರ ರಾವ್ ಅವರ ಬಟ್ಟೆ ಅಂಗಡಿಗೆ ನುಗ್ಗಿ, ಅವರು ಧರಿಸಿದ್ದ ಗಾಂಧಿ ಟೋಪಿ ಕಿತ್ತು ಎಸೆದು ಅವಮಾನಿಸಿದರು.

ಗಲಾಟೆ ಸದ್ದು ಕೇಳಿ ಕಾಂಗ್ರೆಸ್ ಕಚೇರಿಯಿಂದ ಹೊರಬಂದ ಸಾಹುಕಾರ್ ಚೆನ್ನಯ್ಯ, ಮೈಸೂರು ಕುಸ್ತಿಸಂಘದ ಕಾರ್ಯದರ್ಶಿ ಎ.ಶಿವಣ್ಣ (ದಿ ಮೈಸೂರು ಕೋಆಪರೇಟಿವ್ ಮಾಜಿ ಅಧ್ಯಕ್ಷ ಎಸ್.ಕೃಷ್ಣ ತಂದೆ) ಸಹ ಕಾರ್ಯದರ್ಶಿ ಎನ್. ಗೋಪಾಲ್‌ರಾವ್, ನಗರಾಭಿವೃದ್ಧಿ ಸಮಿತಿ ಅಧ್ಯಕ್ಷ ಎಸ್.ಲಿಂಗಣ್ಣ, ಬಟ್ಟೆ ವರ್ತಕರ ಸಂಘದ ಅಧ್ಯಕ್ಷ ಕೆ.ಎಸ್.ಸತ್ಯನಾರಾಯಣರಾವ್, ಎಂ.ಆರ್. ಸಿ.ಬಸಪ್ಪ ಮತ್ತಿತರ ಗಣ್ಯರ ಮೇಲೂ ಹಲ್ಲೆ ನಡೆಸಲಾಯಿತು. ಇದರಿಂದ ಸಾಹುಕಾರ್ ಚೆನ್ನಯ್ಯನವರ ತಲೆಗೆ ಪೆಟ್ಟಾಗಿ, ಆತಂಕದ ವಾತಾವರಣ ನಿರ್ಮಾಣವಾಯಿತು. ಸುದ್ದಿ ತಿಳಿದು ಸ್ಥಳಕ್ಕೆ ಧಾವಿಸಿದ ಪೊಲೀಸರು ಲಾಠಿ ಪ್ರಹಾರ ಮಾಡಿ ಉದ್ರಿಕ್ತ ಗುಂಪನ್ನು ಚದುರಿಸಿದರು.



ಸಾಹುಕಾರ್ ಚೆನ್ನಯ್ಯ

ಕಾಂಗ್ರೆಸ್ ನಾಯಕರ ಮೇಲೆ ಹಲ್ಲೆ ನಡೆಸಿದ ಸವರ್ಣೀಯರ ಗುಂಪು ಸಯ್ಯಾಜಿರಾವ್ ರಸ್ತೆಯಿಂದ ಅರಮನೆ ಎದುರಿನ ಪುರಭವನ ಮೈದಾನಕ್ಕೆ ಬಂತು. ಅಲ್ಲಿ ಎ.ಎಸ್. ವೆಂಕಟಸುಬ್ಬಯ್ಯ ಶರ್ಮ ನೇತೃತ್ವದಲ್ಲಿ ಜಯಚಾಮರಾಜೇಂದ್ರ ಒಡೆಯರ್ ಭಾವಚಿತ್ರಕ್ಕೆ ಹಾರಹಾಕಿ ಮಹಾರಾಜರಿಗೆ ಜಯಘೋಷ ಮಾಡಿ, ಕಾಂಗ್ರೆಸ್ ಪಕ್ಷದ ವಿರುದ್ಧ ಘೋಷಣೆ ಕೂಗಿತು. ದಲಿತ ಕುಸ್ತಿ ಪಟುಗಳಿಗೆ ಅವಕಾಶ ನೀಡಬಾರದೆಂದು ಒತ್ತಾಯಿಸಿತು. ಗಲಾಟೆ ವಿಷಯ ತಿಳಿದ ಮಹಾರಾಜರು ಅಂದು ಮಧ್ಯಾಹ್ನ ಅರಮನೆಯೊಳಗೆ ನಡೆಯಬೇಕಿದ್ದ ದಸರಾ ಕುಸ್ತಿಯನ್ನು ರದ್ದುಪಡಿಸಿರುವುದಾಗಿ ಪ್ರಕಟಿಸಿದರು. ಇದರಿಂದ ಗಾಂಧಿನಗರ, ಕೈಲಾಸ್‌ಪುರ, ಆದಿಕರ್ನಾಟಕಪುರದ (ಈಗಿನ ಅಶೋಕಪುರಂ) ಕುಸ್ತಿಪಟುಗಳಿಗೆ ನಿರಾಸೆಯಾಯಿತು.

13ನೇ ಪುಟಕ್ಕೆ...

ಸೊಂಡಿಲಾಡಿಸಿ ಬಂತು ಸಿಂಗರಿಸಿದಾನೆ



ರಾಜವೈಭವದ ಬೆಳಕಿನ ಮಳೆಯಲ್ಲಿ ಗಜರಾಜನ ಗಂಭೀರ ಹೆಜ್ಜೆ ಪ್ರಜಾವಾಣಿ ಚಿತ್ರ: ರಂಜು ಪಿ.

ವಿ. ರಂಗನಾಥ್

ನವರಾತ್ರಿ ಹಬ್ಬಕ್ಕೆ ದೊಡ್ಡ ಇತಿಹಾಸವಿದೆ. ನಮ್ಮ ಅನೇಕ ಪುರಾಣ, ಕಾವ್ಯಗಳಲ್ಲಿ ನವರಾತ್ರಿಯ ವರ್ಣನೆ ಬರುತ್ತದೆ. ಇದು ಕೇವಲ ಹಬ್ಬವಲ್ಲ. ಹಬ್ಬಗಳ ಸಮೂಹ. ಸಂಭ್ರಮದ ದ್ಯೋತಕ. ದಸರಾ ಉತ್ಸವವೆಂದರೆ ಅದು ಜನಸಾಮಾನ್ಯರ ಉತ್ಸವ. ಜನಪದ ಗೀತೆಗಳಲ್ಲಿ ನವರಾತ್ರಿಯ ಬಗ್ಗೆ ದೊಡ್ಡ ಹರವು ಇದೆ. ಅದೇ ರೀತಿ ಹಿಂದಿನ ರಾಜರ ಆಸ್ಥಾನದ ಕವಿಗಳು, ಸ್ವಾತಂತ್ರ್ಯಾನಂತರದ ಭಾರತದ ಕವಿಗಳು, ಈಗಿನ ಆಧುನಿಕ ಕವಿಗಳು ಎಲ್ಲರೂ ತಾವು ಕಂಡಂತೆ, ತಮ್ಮ ಭಾವನೆಗಳಿಗೆ ಹೊಂದುವಂತೆ ಕವಿತೆಗಳನ್ನು ರಚಿಸಿದ್ದಾರೆ. ಅಂದರೆ ದಸರಾ ಉತ್ಸವ ಎಲ್ಲರ ಮನಗಳನ್ನೂ ಗೆದ್ದ ಹಬ್ಬ.

> ಮೈಸೂರು ದಸರಾವನ್ನು ಜಗತ್ತು ಬೆರಗುಗಣ್ಣಿನಿಂದ ನೋಡಿದಂತೆಯೇ ನಮ್ಮ ಕವಿಗಣವೂ ವಿಸ್ಮಯದಿಂದ ಈ ಉತ್ಸವವನ್ನು ತನ್ನ ಕಾವ್ಯದಲ್ಲಿ ಕಂಡರಿಸಿದೆ. ಆದರೆ ದಸರಾ ಕುಸ್ತಿಗೆ ರಕ್ತದ ಕಲೆಯೂ ಅಂಟಿದೆಯಲ್ಲ?!

ದಸರಾ, ನವರಾತ್ರಿ, ಮಹಾನವಮಿ, ಮಾನವಮಿ ಎಂದೆಲ್ಲಾ ಜನಪದರು ಕರೆದಿದ್ದಾರೆ. ಅದಕ್ಕೆ ಸಂಬಂಧಿಸಿದಂತೆ ಜನಪದರಲ್ಲಿ ಕೆಲವು ಪದ್ಯಗಳು ಜನಜನಿತವಾಗಿವೆ. ಅದರಲ್ಲಿ

ಅಶ್ವಯುಜ ಶುದ್ಧ ಮಾನವಮಿ ಬರಲೆಂದು/ ಐಶ್ವರ್ಯ ಸಕಲ ಸಂಪದ ಹೆಚ್ಚಲೆಂದು/ ಈಶ್ವರನ ಕೃಪೆ ನಿಮಗೆ ಸುಖಿಯಾಗಲೆಂದು/ ಶಾಶ್ವತದಿ ಹರಸಿದೆವು ಬಾಲಕರು ಬಂದು

ಎಂದು ಒಂದು ಹರಕೆ ಪದ ಹೇಳುತ್ತದೆ.

ನವರಾತ್ರಿ ಆಚರಣೆಯ ಸಮಯದಲ್ಲಿ ಪ್ರಕೃತಿ ತಣ್ಣಗಿರುತ್ತದೆ. ಬೆಳೆ ಬಂದು ರೈತ ಹರ್ಷಿತನಾಗಿರುತ್ತಾನೆ. ಮಳೆ ಬಂದು ಭೂಮಿ ತಣಿದಿರುತ್ತದೆ. ಇಂತಹ ಸಮಯದಲ್ಲಿ ಭೂಮಿತಾಯಿಯ ಪೂಜೆಯನ್ನು ರೈತರು ವಿಶೇಷವಾಗಿ ಮಾಡುತ್ತಾರೆ. ಅದರಲ್ಲೂ ನವರಾತ್ರಿಯ ಬನ್ನಿ ಪೂಜೆ ವಿಶೇಷ ಮಹತ್ವದ್ದು. ಅದರ ಕುರಿತಾದ ಹಾಡು ಈ ರೀತಿ ಇದೆ.

ಊರ ಸೀಮೆಯ ದಾಟಿ ಕಾಡಗಡಿಯನು ಸೇರಿ/ ಕಾಡ ಸಂಪತ್ತು ತರಬನ್ನಿ/ ಬೆಳೆದ ಬೆಳಸಿಗೆ ಬನ್ನಿ ಭೂಮಿತಾಯಿಗೆ ಬನ್ನಿ/ ನಾಡಸಂಪತ್ತು ಬೆರಿಬನ್ನಿ ಎನ್ನುತ್ತಾರೆ ಜನಪದರು. ಇಲ್ಲಿ 'ಬನ್ನಿ' ಪದವನ್ನು ವಿಶೇಷವಾಗಿ ಬಳಸಲಾಗಿದೆ. ಬನ್ನಿ ಪೂಜೆ ಮಾಡುವುದನ್ನು ಅನೂಚಾನವಾಗಿ ನಡೆಸಿಕೊಂಡು ಬರುತ್ತಿರುವಂತೆ, ಅದೇ ಪದದಿಂದ ಜೀವಮಾನಸಕ್ಕೆ ಸಂದೇಶ ನೀಡುವ ಕ್ರಿಯೆಯನ್ನು ಇಲ್ಲಿ ಕಾಣಬಹುದಾಗಿದೆ.

ಬನ್ನಿಪೂಜೆಯನ್ನು ವಿಶೇಷವಾಗಿ ಉತ್ತರ ಕರ್ನಾಟಕ ಭಾಗದಲ್ಲಿ ಆಚರಿಸಲಾಗುತ್ತದೆ. ಅದನ್ನು ದಿಗ್ವಿಜಯ ಯಾತ್ರೆ ಎಂದೂ ಹೇಳಲಾಗುತ್ತದೆ. ಪಾಂಡವರು ಅಜ್ಞಾತವಾಸ ಆರಂಭಿಸಿದ ದಿನವೂ ಬನ್ನಿಯ ದಿನ. ಹಾಗೂ ಅಜ್ಞಾತವಾಸ ಮುಗಿಸಿ ಪ್ರತ್ಯಕ್ಷರಾದದ್ದೂ ಬನ್ನಿಯ ದಿನವೇ ಎಂಬ ಪ್ರತೀತಿ ಇದೆ.

ಪಾಂಡವರ ಕುರಿತಾದ ಅನೇಕ ಕಥೆಗಳು ಈ ನಾಡಿನಾದ್ಯಂತ ಬಳಕೆಯಲ್ಲಿವೆ. ವನವಾಸ ಕಾಲದಲ್ಲಿ ಅವರು ತಂಗಿದ್ದ ತಾಣಗಳು, ಅಡುಗೆ ಮಾಡಿ ಊಟ ಮಾಡಿದ ಸ್ಥಳ ಇತ್ಯಾದಿ ವಿಷಯಗಳು ಜನಪದರಲ್ಲಿ ಬಹಳ ಬಳಕೆಯಲ್ಲಿವೆ. ಅವರು ಬನ್ನಿಯ ಎಲೆಯಲ್ಲಿ ಎಡೆ ಮಾಡಿ ಊಟ ಮಾಡಿದರು ಎಂಬ ವರ್ಣನೆ ಒಂದು ಕಡೆ ಇದೆ. ಒಂದು ವರ್ಣನೆಯಲ್ಲಿ ಪಾಂಡವರು ವನವಾಸಕ್ಕೆ ತೆರಳಿದ್ದನ್ನು ಬಹಳ ದುಃಖದಿಂದ ಈ ಕೆಳಕಂಡಂತೆ ಹಾಡಲಾಗಿದೆ.

ಕಲ್ಲು ಕಡುಬ ಮಾಡಿ, ಮುಳ್ಳ ಸ್ಯಾಂವಿಗೆ ಮಾಡಿ/ ಬನ್ನಿ ಎಲೆಯಾಗ ಎಡೆಮಾಡಿ | ಪಾಂಡವರು/ ಉಂಡು ಹೋಗ್ಯಾರೋ ವನವಾಸ

ಅವರ ವನವಾಸವನ್ನು ಜನರು ದುಃಖದಿಂದ ನೆನೆಸಿಕೊಳ್ಳುತ್ತಾರೆ. ಅವರು ಕಡುಬು ಮಾಡಿ ಉಂಡಿದ್ದು ಕಲ್ಲು, ಸೇವಿಗೆ ಮಾಡಿ ಬಸಿದದ್ದು ಮುಳ್ಳು ಎಂದು ಪಾಂಡವರಿಗೆ ಬಂದ ವನವಾಸವನ್ನು ಜ್ಞಾಪಿಸಿಕೊಳ್ಳುತ್ತಾರೆ.

ಹೀಗೆ ಪೌರಾಣಿಕ, ಐತಿಹಾಸಿಕ ಹಾಗೂ ಧಾರ್ಮಿಕ ಹಿನ್ನೆಲೆಯನ್ನು ಹೊಂದಿರುವ ಬನ್ನಿಹಬ್ಬ ಹೆಚ್ಚಿನ ಮಹತ್ವ ಪಡೆದುಕೊಂಡಿದೆ. ಈ ಹಬ್ಬವನ್ನು ಅನೇಕ ರೀತಿಯಲ್ಲಿ ಆಚರಿಸಲಾಗುತ್ತದೆ. ಬೆಳದಿಂಗಳಲ್ಲಿ ಬನ್ನಿಯನ್ನು ಮುಡಿದು ಜನರು ಹಾಡಿ, ಕುಣಿದು ಉತ್ಸಾಹ ಮೆರೆಯುತ್ತಾರೆ. ಅಂತಹ ಒಂದು ಸಂದರ್ಭದಲ್ಲಿ ಅವರು ಹಾಡುವ ಹಾಡು ಹೀಗಿದೆ:

ಬನ್ನಿ ಮುಡಿಯೋಣ ಬಾರ ಕೋಲು ಕೋಲ/ ಬನ್ನಿ ತರುವೋಣ ಬಾರ ಕೋಲು ಕೋಲ/ ಹೀಗೆ ಬನ್ನಿಗಿಡದ ಬಗ್ಗೆ ಅಪಾರ ಗೌರವ ಹೊಂದಿರುವ ಜನಪದರು ಹಾಡುಗಳನ್ನು ಕಟ್ಟಿ ಹಾಡಿ ಸಂಭ್ರಮಿಸಿದ್ದಾರೆ.

ಪಾಂಡವರು ವನವಾಸದ ಸಂದರ್ಭದಲ್ಲಿ ಹಂಪಿಗೆ ತಾಗಿಕೊಂಡಿರುವ 'ಧರ್ಮದ ಗುಡ್ಡ'ದಲ್ಲಿ ಕೆಲವು ದಿನ ಉಳಿದುಕೊಂಡಿದ್ದರಂತೆ. ಮುಂದೆ ಅಜ್ಞಾತವಾಸದ ಸಮಯದಲ್ಲಿಯೂ ಪಾಂಡವರು ಈ ಧರ್ಮದ ಗುಡ್ಡದಲ್ಲಿರುವ ಬನ್ನಿಮರದಲ್ಲಿಯೇ ಆಯುಧ ಇಟ್ಟಿದ್ದರೆಂದು, ಆ ಸಮಯದಲ್ಲಿ ಪಾಂಡವರು ಹೀಗೆ ಪ್ರಾರ್ಥಿಸಿದರು ಎಂದು ಜನ ಹೇಳುತ್ತಾರೆ.

'**ಬನ್ನಿಯ ಗಿಡದಾಗ ಬಾಣವಿಟ್ಟವಿ ತಾಯಿ/ ಯಾರು ಬಂದರೂ ಕೊಡಬೇಡ ಬನ್ನಿತಾಯಿ/ ಅರ್ಜುನ ಬಂದರೆ ಕೊಡಬೇಕು**' ಎಂದು ಪ್ರಾರ್ಥಿಸಿ ಬನ್ನಿಗಿಡಕ್ಕೆ ಪೂಜೆ ಮಾಡಿ, ಅಜ್ಞಾತವಾಸದ ನಂತರ ಮತ್ತೆ ಬನ್ನಿಗಿಡಕ್ಕೆ ಪೂಜೆ ಮಾಡಿ, ಶಸ್ತ್ರಾಸ್ತ್ರಗಳನ್ನು ತೆಗೆದುಕೊಂಡು ಕೌರವರನ್ನು ಸೋಲಿಸಿದರು ಎಂದು ಜನ ಹೇಳುತ್ತಾರೆ.

ಇವು ಜನಪದರ ಬಾಯಿಯಲ್ಲಿ ದಸರಾ ಹಾಗೂ ಬನ್ನಿ ಪೂಜೆಗೆ ಸಂಬಂಧಿಸಿದ ವರ್ಣನೆಯಾದರೆ, ದಸರಾ ಉತ್ಸವ ನಮ್ಮ ಹಿಂದಿನ ಕವಿಗಳನ್ನೂ ಕಾಡಿದೆ. ಜನ್ನನ ಯಶೋಧರ ಚರಿತೆಯಲ್ಲಿ ಅಂದು ನಡೆಯುತ್ತಿದ್ದ ಪ್ರಾಣಿಬಲಿಯ ಬಗ್ಗೆ ಮಾಹಿತಿ ದೊರಕುತ್ತದೆ. ಕವಿ ರತ್ನಾಕರವರ್ಣಿ ರಚಿಸಿರುವ 'ಭರತೇಶ ವೈಭವ'ದಲ್ಲಿ ನವರಾತ್ರಿ ಹಬ್ಬದ ವರ್ಣನೆ ಇದೆ. ಒಂದು ಸಂಧಿಗೆ ನವರಾತ್ರಿ ಸಂಧಿ ಎಂದು, ಮತ್ತೊಂದು ಸಂಧಿಯಲ್ಲಿ ಪಟ್ಟಣ ಪಯಣದ ಸಂಧಿ ಎಂದು, ಮತ್ತೊಂದಕ್ಕೆ ದಶಮಿ ಸಂಧಿ ಎಂದು ಕರೆದಿದ್ದು ನವರಾತ್ರಿಯ ವರ್ಣನೆ ಕಾಣಬಹುದಾಗಿದೆ.

14ನೇ ಪುಟಕ್ಕೆ...

'ಹಸಿರು ದೀಪದ, ಒಂಟೆ
ಕಾಣಿಸಿತು ಮೊದಲು
ಬೀದಿಯುದ್ದಕು
ದೀಪಮಾಲೆಗಳು ಹೊಳೆದು
ನೌಪತ್ತು ಕೇಳಿಸಿತು.
ನಡುಗಿತು ನಗಾರಿ
ಕಿಕ್ಕಿರಿದ ಇಕ್ಕೆಲದ
ಚಪ್ಪಾಳೆಗಳಲಿ
ಬಳಿಕ ಆನೆಯ ಬಂಡಿ,
ಕುದುರೆ, ಕಾಲಾಳು
ಹಾಡುತ್ತ ಮುನ್ನಡೆದ
ಗಾಯಕರ ಸಾಲು

-ಕೆ.ಎಸ್.ನರಸಿಂಹಸ್ವಾಮಿ





ಕರಿಮಲೆಯಿಂದ ಜರಿಮಲೆವರೆಗೆ

ಪ್ರಾಚೀನ ದೈವದ ಗುಬ್ಬಗಳು, ಕಣ್ಣು ಹಾಯಿಸಿದಷ್ಟೂ ದೂರ ಸಾಲು, ಸಾಲು ಕೆಂಗುರಿಗಳು, ಕಸೆ ಅಂಗಿ ಹಾಕಿ, ಬೆಳ್ಳಿ ಕಡಗ ತೊಟ್ಟ ಕಲ್ಲಿ ಮೀಸೆಯ ಪುರುಷರು, ಗೊಲ್ಲಕಡಗ ತೊಟ್ಟ ಮಹಿಳೆಯರು, ಮೌಖಿಕ ಕಥನ ಪರಂಪರೆಯ ವಾರಸುದಾರರಾದ ದಳವಾಯಿಗಳು... ಅಬ್ಬಬ್ಬಾ, ಹತ್ತಾರು ಗೊಲ್ಲರ ಹಟ್ಟಿಗಳ ಕದ ತಟ್ಟಿದಾಗ ಅದೆಂತಹ ಸಾಂಸ್ಕೃತಿಕ ಲೋಕ ಕಣ್ಮುಂದೆ ತೆರೆದುಕೊಂಡಿತು. ಅಂತಹ ಯಾತ್ರೆಯ ಒಂದು ಝಲಕ್

ಜಿ.ವಿ. ಆನಂದಮೂರ್ತಿ

ಸಂಸ್ಕೃತಿ ಯಾತ್ರೆ

ಕಾಡುಗೊಲ್ಲ ಸಮುದಾಯದ ಪೂರ್ವಿಕರು ನಿರ್ಮಿಸಿದ್ದ ನಾಗರಿಕತೆಯ ಉಗಮಸ್ಥಾನವಾದ 'ಕರಿಮಲೆ-ಜರಿಮಲೆ' ಸೀಮೆಯಲ್ಲಿ ವ್ಯಾಪಕವಾಗಿ ಹರಡಿಕೊಂಡಿರುವ ಪಾರಂಪರಿಕ ಗೊಲ್ಲರಹಟ್ಟಿಗಳನ್ನು ಸಂದರ್ಶಿಸಲು ಚಳ್ಳಕೆರೆ ಗೋವಿಂದರಾಜು ನನ್ನನ್ನು ಆಹ್ವಾನಿಸಿದರು. ಕತ್ತಲೆಯಲ್ಲಿ ಅಲ್ಲೊಂದು, ಇಲ್ಲೊಂದು ನಕ್ಷತ್ರಗಳನ್ನು ಹುಡುಕಿಕೊಂಡು ನೋಡುತ್ತಿದವನನ್ನು ಒಮ್ಮೆಲೆ ಕರೆತಂದು ನಕ್ಷತ್ರಪುಂಜದ ಮುಂದೆ ನಿಲ್ಲಿಸಿದಂತಾಯಿತು ನನ್ನ ಸ್ಥಿತಿ! ಹಿಂದು-ಮುಂದು ಯೋಚಿಸದೆ ಅವರೊಡನೆ ಹೊರಟುನಿಂತೆ. ಜನಾರಣ್ಯದಿಂದ ದೂರ ಉಳಿದು, ಉದ್ವಿಗ್ನತೆಯಿಲ್ಲದ ಸರಳತೆಗಳೊಂದಿಗೆ, ತಮ್ಮ ಪೂರ್ವಿಕರಿಂದ ಬಳುವಳಿಯಾಗಿ ಬಂದ ಸಾತ್ವಿಕತೆಯಿಂದ ಬಾಳುತ್ತಿರುವ ಹಟ್ಟಿಗಳನ್ನು ನೋಡುವ ತವಕ ನನ್ನೊಳಗೆ ಪುಟಿಯಿತು.

ಮೊಳಕಾಲ್ಮೂರಿನ ತಡಿಯಲ್ಲಿದ್ದ 'ಹೊಸಹಟ್ಟಿ'ಯಿಂದ ಆರಂಭಿಸಿ ಕಾಡುಗೊಲ್ಲರ ಮೂಲಸ್ಥಾನವಾದ 'ಕರಿಮಲೆ-ಜರಿಮಲೆ' ಸೀಮೆಯ ಹತ್ತಾರು ಹಟ್ಟಿಗಳ ಕದ ತಟ್ಟಿ, ಜರಿಮಲೆಯ ಹಸುರು ಹುಲ್ಲುಗಾವಲಿನ ನಡುವೆ ಇದ್ದ ಜುಂಜಪ್ಪನ ಪೂರ್ವಿಕರು ನೆಲೆಗೊಂಡಿದ್ದ 'ಚಿತ್ರದೇವರ ಹಟ್ಟಿ'ಯಲ್ಲಿ ಯಾತ್ರೆ ಕೊನೆಗಾಣಿಸಲು ನಿರ್ಧರಿಸಿದೆವು.

ಹತ್ತಾರು ಸಂಖ್ಯೆಯಲ್ಲಿ ನಮ್ಮನ್ನು ಭೇಟಿಯಾದ ಹಟ್ಟಿಗಳು, ಕಾಡುಗೊಲ್ಲರ ಜೀವನಶೈಲಿ, ಅವರ ಆರ್ಥಿಕ, ಸಾಮಾಜಿಕ ಬದುಕಿನ ವಿವರಗಳನ್ನು, ಮೇವು-ನೀರಿಗೆ ವಲಸೆ ಹೋಗುವ ಸ್ವರೂಪಗಳನ್ನು ಹಾಗೂ ಅವರ ದೈವಗಳಾದ ಚಿತ್ರದೇವರು, ಎತ್ತಪ್ಪ, ಜುಂಜಪ್ಪ ಮತ್ತು ಸ್ಥಳೀಯ ವೀರಗಾರರ ನೆನಪುಗಳಲ್ಲಿ ಆಳವಾಗಿ ಬೇರೂರಿರುವುದನ್ನು ನಮಗೆ ಅರಿವುಗಾಣಿಸಿದವು.

ಮೊಳಕಾಲ್ಮೂರಿನ ಪಶ್ಚಿಮಕ್ಕಿದ್ದ ಹೊಸಹಟ್ಟಿಗೆ ನಾವು ಕಾಲಿಟ್ಟಾಗ, ವಯಸ್ಸಾದ ಮಹಿಳೆಯರು ಮತ್ತು ಜಲ್ಲೆ ಊರಿಕೊಂಡು ನಡೆಯುವ ಹಿರಿಯರು ಹಾಗೂ ಅವರ ಸುತ್ತ ಆಡುತ್ತಿದ್ದ ಮಕ್ಕಳು-ಮರಿಗಳು ಮಾತ್ರ ಹಟ್ಟಿಯಲ್ಲಿದ್ದರು. ಉಳಿದವರೆಲ್ಲಾ ಬಿತ್ತನೆಗಾಗಿ ತಮ್ಮ ತಮ್ಮ ಹೊಲಗಳಿಗೆ ಹೋಗಿದ್ದರು. ಹಟ್ಟಿಯಲ್ಲಿದ್ದ ಚಿತ್ರದೇವರ ಗುಡಿಯ ಪೌಳಿಯ ಕಡೆ ನಾವು ಬಂದಾಗ ನಿಧಾನವಾಗಿ ಹಟ್ಟಿಯ ವಯಸ್ಸಾದ ಮಹಿಳೆಯರೆಲ್ಲ ನಮ್ಮ ಸುತ್ತ ನೆರೆದರು. ಎಲ್ಲರೂ 'ಗೊಲ್ಲಕಡಗ' ತೊಟ್ಟಿದ್ದರು. ಅವರಲ್ಲಿ ಕೆಲವರು ರವಿಕೆ ತೊಟ್ಟಿರಲಿಲ್ಲ. ಎತ್ತ ನೋಡಿದರೂ ಹಟ್ಟಿಯಲ್ಲಿ ಪ್ರಾಯದ ಹುಡುಗರು ಕಾಣಲಿಲ್ಲ! ಕೋಡೊಣಸು, ಬಣ್ಣದ ಕುಚ್ಚು, ಗೆಜ್ಜೆಗಳಿಂದ ಡಿಕಾವಾಗಿ ಸಿಂಗರಿಸಿದ್ದ ಎತ್ತುಗಳನ್ನು ನೋಡಿ ನಮಗೆ ಆಶ್ಚರ್ಯವಾಯಿತು! ಪಾರಂಪರಿಕ ಬೇಸಾಯವನ್ನು ಉಳಿಸಿಕೊಂಡಿರುವ ಅವರನ್ನು ಕುತೂಹಲದಿಂದ ಕೇಳಿದೆವು. 'ನಮ್ಮಲ್ಲಿ ಇದೊಂದು ಸಂಪ್ರದಾಯ. ಬಿತ್ತನೆ ಮಾಡುವಾಗ ಎತ್ತುಗಳನ್ನು ಸಿಂಗರಿಸಿ, ಅವುಗಳಿಗೆ ಪೂಜೆ ಮಾಡಿ ಕೂರಿಗೆಯೊಂದಿಗೆ ಹೊಲಕ್ಕೆ ಹೋಗುತ್ತೇವೆ' ಎಂಬ ಉತ್ತರ ಅವರಿಂದ ಬಂದಿತು.



ಗೊಲ್ಲರ ಹಟ್ಟಿಯ ಸೊಬಗೇ ಬೇರೆ

ಕುದುರುದೇವು ಗೊಲ್ಲರಹಟ್ಟಿಗೆ ನಾವು ತಲೆಯಿಟ್ಟಾಗ ರಾಚುವಂತೆ ಕಂಡಿದ್ದು, ಸಂಜೆಯ ಹೊಂಬಣ್ಣಕ್ಕೆ ಮಿರುಗುತ್ತಿದ್ದ ಚಿತ್ರದೇವರು ಮತ್ತು ಈರನಾಗಣ್ಣನ ಭವ್ಯವಾದ ಆಧುನಿಕ ಗುಡಿಗಳು. ಇದನ್ನು ಅಣುಕಿಸುವಂತೆ ಗುಡಿಯ ಎಡಭಾಗಕ್ಕೆ ಕಾಡುಗೊಲ್ಲರ ಪ್ರಾಚೀನ ಗುಡಿಸಲೊಂದು ಹಾಗೆಯೇ ನಿಂತಿತ್ತು. ವಿದ್ಯುತ್ ಇಲ್ಲದ ಆ ಗುಡಿಸಲ ಮುಂದೆ ಹತ್ತಾರು ಹಸುಗಳನ್ನು ಕಟ್ಟಿದ್ದರು. ಗುಡಿಯ ಮುಂದೆ ಹಿರಿಯ ಯಜಮಾನರು ಕಂಡರು. ಅವರೆಲ್ಲಾ ಕಾಡುಗೊಲ್ಲರ ಪಾರಂಪರಿಕ ಉಡುಗೆಯಲ್ಲೇ ಇದ್ದರು. ಕಲ್ಲಿ ಮೀಸೆ, ಬೆಳ್ಳಿ ಉಂಗುರ, ಮೊಣಕಾಲಿನವರೆಗೆ ಇದ್ದ ಶೆಳ್ಳ, ಬಿಳಿ ಬಣ್ಣದ್ದು ಎಂದು ಕರೆಯಬಹುದಾಗಿದ್ದ ಕಸೆ ಅಂಗಿ, ಕೈಯಲ್ಲಿ ಬೆಳ್ಳಿ ಕಡಗ, ಬಾಯಲ್ಲಿ ತುಳುಕುವ ಎಲೆ ಅಡಕೆ, ನೀಳವಾದ ಕೂದಲು. ಅಚ್ಚ ಕನ್ನಡದ ಸೊಲ್ಲು. ಎಲ್ಲವೂ ಕಾಡುಗೊಲ್ಲರು ಅಚ್ಚಕನ್ನಡದವರು ಎಂಬುದನ್ನು ಹೇಳುವಂತಿದ್ದವು.

ನಮ್ಮ ನಡಿಗೆಯ ಹಾದಿಯ ಮರೆಯಲ್ಲಿ ಹಟ್ಟಿಗಳು ಮಬ್ಬಿನಿಂದ ಗೋಚರಿಸುತ್ತಿದ್ದವು. 'ಕರಿಮಲೆ' ಭಾಗದಲ್ಲಿ ಹೆಚ್ಚಾಗಿ ನಮಗೆ ಕಂಡಿದ್ದು ಕೆಂಗುರಿಗಳೆ! ನನಗೆ ಕೂಡಲೇ ನೆನಪಾಗಿದ್ದು, ದ್ಯೈಮಾರನ ಮಗ, ಜುಂಜಪ್ಪನ ತಂದೆ ಕೆಂಗುರಿ ಮಲ್ಲೇಗೌಡ! ಯಾಕಿರಬಾರದು? ಈ ಕೆಂಗುರಿಗಳನ್ನು ಮೇಯಿಸುವವನನ್ನೇ ಚಿತ್ರದೇವರ ಹಟ್ಟಿಯವರು 'ಕೆಂಗುರಿ ಮಲ್ಲೇಗೌಡ' (ಕೆಂದ + ಕುರಿ = ಕೆಂಗುರಿ) ಎಂದು ಕರೆದಿರಬಹುದು!

ನಮ್ಮನ್ನು ಬಹುವಾಗಿ ಸೆಳೆದಿದ್ದು ಸಣ್ಣಗೊಲ್ಲರಹಟ್ಟಿ. ಅಲ್ಲಿದ್ದ ಪ್ರಾಚೀನ ದೈವದ ಗುಬ್ಬಗಳಾದ ತಿಮ್ಮಪ್ಪ ಮತ್ತು ಈರಣ್ಣನ ಗುಡಿ ಕಾಡುಗೊಲ್ಲರ ಅಸ್ಮಿತೆಯಂತೆ ನಮಗೆ ಗೋಚರಿಸಿದವು. ಸೌಂದರ್ಯದಲ್ಲಿ ಸಾಟಿಯಿಲ್ಲದ ಈ ಎರಡು ಗುಬ್ಬಗಳು ಸಣ್ಣಗೊಲ್ಲರಹಟ್ಟಿಯ ಮುಕುಟದಂತಿವೆ. ಕಾಡುಗೊಲ್ಲರದ್ದು ದೇವಾಲಯ ಸಂಸ್ಕೃತಿಯಲ್ಲ, ಅವರದ್ದು ಗುಬ್ಬಗಳ ಸಂಸ್ಕೃತಿ. ಕಾಡುಗೊಲ್ಲರ ಇತಿಹಾಸದ ಅನೇಕ ಸಂಗತಿಗಳನ್ನು ಈ ಗುಬ್ಬಗಳು ಒಳಗೊಂಡಿವೆ.

ಸಣ್ಣಗೊಲ್ಲರಹಟ್ಟಿಯಿಂದ ಜೋಗಿಕಲ್ಲು ಮಾರ್ಗವಾಗಿ 'ಕರಿಮಲೆ' ಸೀಮೆಯತ್ತ ಹೊರಟೆವು. ನೀಲಿ ಬಣ್ಣದಲ್ಲೇ ಅದ್ದಿ ತಗೆದಂತಿದ್ದ ಸಂಡೂರಿನ ಪರ್ವತಶ್ರೇಣಿ, ಕಣ್ಣು ಹಾಯಿಸಿದ ಕಡೆಯೆಲ್ಲಾ ಭೂಮಿಗೆ ಹಸುರು ಹೊದಿಕೆ ತೊಡಿಸಿದಂತಿದ್ದ ದೃಶ್ಯ ನಮ್ಮನ್ನು ಉತ್ತೇಜಿಸುವಂತಿತ್ತು! ಉಕ್ಕಿ ಹೊಡೆದ ಮೆಕ್ಕೆ ಜೋಳದ ಹೊಲಗಳು, ಹಸುರು ಬಯಲಲ್ಲಿ ಮೇಯುತ್ತಿದ್ದ ಕೆಂಗುರಿ ಹಿಂಡು, ಈ ನಿಸರ್ಗದ ಮಾಧುರ್ಯವನ್ನು ಸವಿಯುತ್ತಾ ಸಂಡೂರಿಗೆ ಸಮೀಪವಿದ್ದ ಕೋಡಿಹಳ್ಳಿ ಗೊಲ್ಲರಹಟ್ಟಿಗೆ ಕಾಲಿಟ್ಟೆವು.

ಜಲ್ಲೆ ಊರಿಕೊಂಡು ನಿಧಾನವಾಗಿ ನಮ್ಮ ಬಳಿಗೆ ಬಂದ ದಳವಾಯಿ ಚಿತ್ತಯ್ಯನವರು, ಸುಮಾರು ಎಂಬತ್ತರ ಗಡಿದಾಟಿದ್ದ ಎತ್ತರವಾದ ಆಳು. ಅವರನ್ನು ನೋಡಿದೊಡನೆ, ಇವರು ಜುಂಜಪ್ಪನ ಹತ್ತಿರದ ಸೋದರ ಸಂಬಂಧಿಯೇ ಇರಬೇಕೆಂದು ನಾನು ಭಾವಿಸಿದೆ. ಅವರ ನಿಲುವು ಕಾಡುಗೊಲ್ಲರ ಪೂರ್ವಿಕರನ್ನೇ ಹೋಲುತ್ತಿತ್ತು! ಈಚೆಗೆ ಅನಾರೋಗ್ಯದಿಂದ ಅವರ ಬೆನ್ನು ತುಸು ಬಾಗಿ, ಧ್ವನಿ ಕುಗ್ಗಿತ್ತು. ಎತ್ತಪ್ಪ, ಜುಂಜಪ್ಪ, ಚಿತ್ತಯ್ಯ, ಸಿದ್ದಯ್ಯ, ರಂಗಪ್ಪ ಹಾಗೂ ಗೌರಸಂದ್ರದ ಮಾರಕ್ಕನನ್ನು ಕುರಿತು ಜನಪದ ಕಾವ್ಯವನ್ನು, ಗದ್ಯ ಕಥನವನ್ನೂ ನಿರಗರ್ಳವಾಗಿ ಹಾಡುತ್ತಾರೆಂದು ನಾವು ಮೊದಲೇ ಮಾಹಿತಿ ಸಂಗ್ರಹಿಸಿದ್ದೆವು. ಮದುವೆ ಕಾರ್ಯಗಳಲ್ಲಿ ಜಾಡಿ (ಕರಿ ಕಂಬಳಿ) ಹಾಸುವುದು, ವೀಳ್ಯೇವು ಎತ್ತುವುದು ನಮ್ಮ ಕುಟುಂಬದ ಕೆಲಸ ಎಂದು ದಳವಾಯಿ ಚಿತ್ತಯ್ಯನವರು ನಮಗೆ ಹೇಳಿದರು. ಅಪಾರವಾದ ಲೋಕಜ್ಞಾನ ಹೊಂದಿದ್ದ ದಳವಾಯಿ ಚಿತ್ತಯ್ಯನವರನ್ನು ಮುಂದಿನ ಮಾತಿಗೆ ಎಳೆಯದೆ ಎತ್ತಪ್ಪನ ಕಥೆಗೆ ಅಣಿಗೊಳಿಸಿದೆವು.



ಇದೇ ನೋಡಿ ಸಾಹೇಬ್ರ ನಮ್ ಬದುಕು

ಸುಮಾರು ಎರಡು ಗಂಟೆಗೂ ಹೆಚ್ಚು ಕಾಲ ನಿರಂತರವಾಗಿ ದಣಿವಿಲ್ಲದೆ ಎತ್ತಪ್ಪನ ಕಥನವನ್ನು ನಿರೂಪಿಸಿದ ದಳವಾಯಿ ಚಿತ್ತಯ್ಯನವರಲ್ಲಿ ಹುದುಗಿದ್ದ ಪ್ರತಿಭೆಯನ್ನು ಕಂಡು ನಾವಂತೂ ಮೂಕರಾದೆವು. ಕಥನದ ನಡುವೆ ಅವರು ಹಾಡುತ್ತಿದ್ದ ತ್ರಿಪದಿಗಳು, ಗಾದೆಗಳು, ಕಥನವನ್ನು ವಿವರಿಸುತ್ತಿದ್ದ ಶೈಲಿ ಇವೆಲ್ಲವೂ ಅವರೊಬ್ಬ ಅಸಾಧಾರಣ ಕಲಾವಿದ ಎಂಬುದನ್ನು ನಿರೂಪಿಸಿದವು. ಇದರ ನಡುವೆ ವಯಸ್ಸಿನ ಭಾರದಿಂದ ಅಚ್ಚಗನ್ನಡದ ಅವರ ನುಡಿಗಳು ಚದುರುತ್ತಿದ್ದವು. ಕೆಲವು ಕಡೆ ಸೊಲ್ಲುಗಳು ಅಸ್ಪಷ್ಟವಾಗುತ್ತಿದ್ದವು. ಅವರು ತಮ್ಮ ನೆನಪಿನ ಶಕ್ತಿಯನ್ನು ಒಗ್ಗೂಡಿಸಿಕೊಂಡು ಶ್ರದ್ಧೆಯಿಂದ ಹೇಳುತ್ತಿದ್ದ ಶೈಲಿಯನ್ನು ನೋಡಿದ ನಮಗೆ ಕನ್ನಡ ಮೌಖಿಕ ಪರಂಪರೆಯ ಹೆಮ್ಮೆಯ ಪ್ರತಿನಿಧಿಯಂತೆ ಕಂಡರು.

ಕೂಡ್ಲಿಗಿಯಿಂದ ಸಮೀಪದಲ್ಲಿದ್ದ ಶಿವಪುರದ ಹಟ್ಟಿಗೆ ನಾವು ಬಂದಾಗ ಸಂಜೆಯ ಹೊನ್ನಿನ ಎಳೆಗಳು ಭೂಮಿಗೆ ಇಳಿಯುತ್ತಿದ್ದವು. ಸುಮಾರು 300 ಮನೆಗಳಿದ್ದ ಹಟ್ಟಿ ಅದು. ರೊಪ್ಪಗಳಲ್ಲಿ ನೂರಾರು ಸಂಖ್ಯೆಯ ಹೂಮರಿಗಳು ತಮ್ಮ ತಾಯಂದಿರು ಬರುವುದನ್ನೇ ಎದುರುನೋಡುತ್ತಿದ್ದವು. ನೋಡುತ್ತಿದ್ದಂತೆಯೇ ನಮ್ಮ ಕಣ್ಣೆದುರೆ ಅಗಾಧವಾದ ಕುರಿಹಿಂಡುಗಳು ಹಟ್ಟಿಯ ಬೀದಿಗಳಲ್ಲಿ ಸಾಗರದ ಅಲೆಗಳಂತೆ ನುಗ್ಗಿ ಬಂದವು. ಇಡೀ ಹಟ್ಟಿ ಕುರಿಹಿಂಡುಗಳಿಂದ ತುಂಬಿಹೋಯಿತು! ಹಟ್ಟಿಯಲ್ಲಿ ಯಾರನ್ನೇ ನೋಡಿದರೂ ಅವರ ಜತೆ ಎರಡು ಎಮ್ಮೆ, ಹಸು, ಎರಡು-ಮೂರು ಕುರಿ-ಮೇಕೆ, ತಲೆಯಮೇಲೆ ಹುಲ್ಲಿನ ಹೊರೆ, ಅದರ ಮೇಲೆ ಬುತ್ತಿ, ಕಂಕಳಲ್ಲಿ ಹಸುಗೂಸುಗಳನ್ನು ಹೊತ್ತ ಹೆಣ್ಣುಮಕ್ಕಳೇ ನಮಗೆ ಕಂಡುಬಂದರು. ಕೃಷಿ ಮತ್ತು ಕುರಿ ಸಾಕಾಣಿಕೆಯೇ ಕಾಡುಗೊಲ್ಲ ಸಮುದಾಯದ ಆರ್ಥಿಕ ಬೆನ್ನೆಲುಬು.

ನಮ್ಮ ಕಾಲುಗಳು ಜರಿಮಲೆಯ ಅಂಚಿನ ಹಟ್ಟಿಗಳ ಕಡೆ ಮುಖಮಾಡಿದವು. ನೆಲಬೊಮ್ಮನಹಳ್ಳಿ ಮತ್ತು ಐನಳ್ಳಿ ಗೊಲ್ಲರಹಟ್ಟಿಗಳೊಂದಿಗೆ ಮಾತನಾಡಿಕೊಂಡು ಬರುತ್ತಿರುವಾಗ, ಈ ಹಟ್ಟಿಗಳಿಗೆ ಕೂಗಳತೆಯಲ್ಲಿದ್ದ ಚೌಡಾಪುರದ ಗೊಲ್ಲರಹಟ್ಟಿ ಬಗ್ಗೆ ಗೆಳೆಯ ಗೋವಿಂದರಾಜು ಕುತೂಹಲಕರ ವಿಷಯ ತಿಳಿಸಿದರು. 'ಏಳೆಂಟು ವರ್ಷಗಳ ಹಿಂದೆ ನಾನು ಚೌಡಾಪುರದ ಗೊಲ್ಲರಹಟ್ಟಿಗೆ ಬಂದಿದ್ದೆ. ವಿಶೇಷವೆಂದರೆ, ಆ ಹಟ್ಟಿಯ ಯಾವ ಗುಡಿಸಿಲಿಗೂ ಬಾಗಿಲೆಂಬುದೇ ಇರಲಿಲ್ಲ! ಎಲ್ಲವೂ ಖುಲ್ಲಂ-ಖುಲ್ಲ. ಇಂತಹ ಅಪರೂಪದ ಹಟ್ಟಿ ಅದು, ಈಗ ಹಟ್ಟಿಗೆ ಬಾಗಿಲನ್ನು ಇಟ್ಟುಕೊಳ್ಳುವ ಮಟ್ಟಕ್ಕೆ ಅವರು ಶ್ರೀಮಂತರಾಗಿದ್ದಾರೆ! ಇದೇ ಇಲ್ಲಿನ ದೊಡ್ಡ ಬದಲಾವಣೆ' ಎಂದರು. ಹೊರಗಿನ ಸಮಾಜದಿಂದ ಏನನ್ನೂ ಅಪೇಕ್ಷಿಸದ ಕಾಡುಗೊಲ್ಲರಹಟ್ಟಿಗಳು ದೋಷವೆನಿಸುವಷ್ಟು ಸ್ವಾಭಿಮಾನ ಮತ್ತು ಆತ್ಮವಿಶ್ವಾಸದಿಂದ ಜೀವಿಸುತ್ತಿವೆ.

(ವಿಸ್ತೃತ ಲೇಖನಕ್ಕೆ ನೋಡಿ: www.prajavani.net)

ಚಿತ್ರಗಳು: ನಿಸರ್ಗ ಗೋವಿಂದರಾಜು ಚಳ್ಳಕೆರೆ



ಶಿವಾಪುರದಲ್ಲಿ ಕಂಡ ಶ್ರಮಜೀವಿ

ರಕ್ತಸಿಕ್ತ ದಸರಾ

12ನೇ ಪುಟದಿಂದ...

ಜಿಲ್ಲಾಧಿಕಾರಿ ಎಸ್.ಸ್ವಾಮಿನಾಥನ್, ಪುರಸಭಾ ಆಯುಕ್ತ ಎನ್.ಲಕ್ಷ್ಮಣ್‌ರಾವ್, ಪೊಲೀಸ್ ಇನ್‌ಸ್ಪೆಕ್ಟರ್ ಜನರಲ್ ಎನ್.ವಿ.ಬಾಬುರೆಡ್ಡಿ, ಜಿಲ್ಲಾ ಎಸ್.ಪಿ ಎಸ್.ಕೃಷ್ಣಮೂರ್ತಿ ಮತ್ತು ನಗರ ಸಿವಿಲ್ ನ್ಯಾಯಾಧೀಶ ಎಂ.ಡಿ.ಶಿವನಂಜಪ್ಪ ಎಲ್ಲಾ ಕುಸ್ತಿ ಪಟುಗಳನ್ನು ಮತ್ತು ಗರಡಿ ಸಂಘದವರನ್ನು ಸಮಾಧಾನಿಸಿ ಕಳುಹಿಸುವಾಗ ಕಿಡಿಗೇಡಿಗಳು ಪರಸ್ಪರ ಕಲ್ಲು ತೂರಾಟ ನಡೆಸಿದ್ದರಿಂದ ಪರಿಸ್ಥಿತಿ ವಿಕೋಪಕ್ಕೆ ತಿರುಗಿತು.

ತಿಳಿಗೇಡಿಗಳು ಬೀದಿಬದಿ ದೀಪಗಳನ್ನು ಹೊಡೆದು ಹಾಕಿದ್ದಲ್ಲದೆ, ಅರಮನೆ ಮುಂಭಾಗದ ಮರದ ಕೊಂಬೆಗಳನ್ನು ಕಿತ್ತು ಪೊಲೀಸ್ ವ್ಯಾನ್‌ಗಳನ್ನು ಧ್ವಂಸಗೊಳಿಸಿದರು. ತಡೆಯಲು ಬಂದ ಪೊಲೀಸರ ಮೇಲೆಯೇ ಮರದ ರೆಂಬೆಗಳಿಂದ ಹಲ್ಲೆ ನಡೆಸಿದರು. ಪೊಲೀಸರು ಅನಿವಾರ್ಯವಾಗಿ ಅರಮನೆ ದಕ್ಷಿಣ ದ್ವಾರದ (ಜೆಎಸ್‌ಎಸ್ ವೃತ್ತ) ಬಳಿ ಗೋಲಿಬಾರ್ ನಡೆಸಿದಾಗ, ಸ್ಥಳದಲ್ಲೇ ಇಬ್ಬರು ಮೃತರಾದರೆ, ಆಸ್ಪತ್ರೆಗೆ ಸಾಗಿಸುವಾಗ ಒಬ್ಬರು ಮತ್ತು ಅಂದು ರಾತ್ರಿಯೇ ಮತ್ತೊಬ್ಬರು ಆಸ್ಪತ್ರೆಯಲ್ಲಿ ಮೃತರಾದರು. 13 ಮಂದಿ ಗಾಯಗೊಂಡರು.

ಕಿಡಿಗೇಡಿಗಳ ಕಲ್ಲುತೂರಾಟದಿಂದ ಅರಮನೆ ಬಂದೋಬಸ್ತ್‌ನಲ್ಲಿದ್ದ ಜಿಲ್ಲಾಧಿಕಾರಿ ಎಸ್.ಸ್ವಾಮಿನಾಥನ್, ಪುರಸಭಾ ಆಯುಕ್ತ ಎನ್. ಲಕ್ಷ್ಮಣ್‌ರಾವ್, ಜಿಲ್ಲಾ ಎಸ್‌ಪಿ ಎಸ್.ಕೃಷ್ಣಮೂರ್ತಿ ಅವರಿಗೂ ಪೆಟ್ಟಾಯಿತು. ಅತ್ತ ಆದಿಕರ್ನಾಟಕಪುರ (ಈಗಿನ ಅಶೋಕಪುರಂ) ಮತ್ತು ಕೆ.ಜಿ.ಕೊಪ್ಪಲು (ಕನ್ನೇಗೌಡನ ಕೊಪ್ಪಲು) ತೊಣಚಿಕೊಪ್ಪಲು ಮತ್ತಿತರ ಭಾಗಗಳಲ್ಲಿ ಕೋಮು ಗಲಭೆಗಳಾದವು. ಅಂದು ರಾತ್ರಿ ಪೊಲೀಸರು ನಿಷೇಧಾಜ್ಞೆ ಹೇರಿ, ಬಂದೋಬಸ್ತ್ ಮಾಡಿದ್ದರು ಸಹ ತೊಣಚಿಕೊಪ್ಪಲು ಮತ್ತು ನಾಚನಹಳ್ಳಿಪಾಳ್ಯದ (ಈಗಿನ ಜೆ.ಪಿ.ನಗರ) ಹೊಲದಲ್ಲಿದ್ದ ರಾಗಿಮೆದೆಗೆ ಕಿಡಿಗೇಡಿಗಳು ಕೊಳ್ಳಿ ಇಟ್ಟು ಭಸ್ಮ ಮಾಡಿದರು. ಹೀಗೆ ಸವರ್ಣೀಯರು ಮತ್ತು ದಲಿತರ ಘರ್ಷಣೆಯಲ್ಲಿ ಸಾರ್ವಜನಿಕರ ಅಪಾರ ಆಸ್ತಿ ನಷ್ಟ ಉಂಟಾಯಿತು.

ಏಕಮಾತ್ರ ಪುತ್ರ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ (1953, ಫೆಬ್ರುವರಿ 20) ಹುಟ್ಟಿದ ವರ್ಷವಾಗಿದ್ದರಿಂದ ಅದ್ದೂರಿಯಾಗಿ ದಸರಾ ಆಚರಿಸಬೇಕೆಂಬ ಮಹಾರಾಜರ ಆಸೆಗೆ ಈ ದುರ್ಘಟನೆ ಅಡ್ಡಿಯಾಯಿತು. ತೀವ್ರವಾಗಿ ನೊಂದಿದ್ದ ಮಹಾರಾಜರು ಆ ವರ್ಷದ ಜಂಬೂ ಸವಾರಿಯನ್ನೂ ರದ್ದುಪಡಿಸಿದರು. ಒಂದು ಒಳ್ಳೆಯ ಕಾರ್ಯದ ಹಿಂದಿನ ಉದ್ದೇಶ ಅರಿಯದ ತಿಳಿಗೇಡಿಗಳಿಂದ 1953ರ ದಸರಾ ಉತ್ಸವ 'ಕರಾಳ ದಸರಾ ಉತ್ಸವ'ವಾಗಿ ಇತಿಹಾಸದ ಪುಟ ಸೇರುವಂತಾಯಿತು. ಪೊಲೀಸರ ಗೋಲಿಬಾರ್‌ನಿಂದ ಮೃತಪಟ್ಟ ನಾಲ್ವರಲ್ಲಿ ಕೆ.ಜಿ.ಕೊಪ್ಪಲಿನ ಲಿಂಗಾಚಾರಿ ಮಗ ಮಹದೇವಯ್ಯ (20) ಮಳವಳ್ಳಿಯ ಚಿಕ್ಕಬಸಪ್ಪನ ಮಗ ಮುದ್ದಬಸಪ್ಪ (25) ಮೈಸೂರಿನ ಕೆ.ಆರ್.ಮೊಹಲ್ಲಾದ ನಾಲಾಬೀದಿಯಲ್ಲಿರುವ ಗೋಪಾಲ್ ಸ್ವಾಮಣ್ಣನವರ ಗರಡಿಯ ಅರಮನೆ ಕುಸ್ತಿ ತೀರ್ಪುಗಾರರೂ ಆದ ಪೈಲ್ವಾನ್ ಗೋಪಾಲ್‌ರಾಜು ಅಲಿಯಾಸ್ ನರಸಿಂಹರಾಜು ಸೇರಿದ್ದರು. ಮತ್ತೊಬ್ಬ ಮೃತರ ಗುರುತು ಪತ್ತೆಯಾಗಲಿಲ್ಲ. ಮಹಾರಾಜ ಶ್ರೀಜಯಚಾಮರಾಜೇಂದ್ರ ಒಡೆಯರ್ ಘಟನೆ ಬಗ್ಗೆ ಆಘಾತವ್ಯಕ್ತಪಡಿಸಿ, ಮೃತರ ಕುಟುಂಬದವರಿಗೆ ಮತ್ತು ಗಾಯಾಳುಗಳಿಗೆ ಪರಿಹಾರ ಧನ ಹಂಚುವಂತೆ ಒಟ್ಟು 3,000 ರೂಪಾಯಿಯನ್ನು ತಮ್ಮ ರಾಜ ಬೊಕ್ಕಸದಿಂದ ನೀಡಿದರು.


ಮಹಾರಾಜರು ಅಂದಿನಿಂದ ಅರಮನೆ ಆವರಣದಲ್ಲಿ ದಸರಾ ಕುಸ್ತಿ ಸ್ಪರ್ಧೆಯನ್ನು ರದ್ದುಪಡಿಸಿದ್ದಲ್ಲದೆ, ಆ ವರ್ಷದ ದಸರಾ ಜಂಬೂ ಸವಾರಿ ಮೆರವಣಿಗೆಯನ್ನು ಸಹ ರದ್ದುಪಡಿಸಿದರು. ಮುಂದಿನ ದಸರಾ ಉತ್ಸವದ ಸಂದರ್ಭದಲ್ಲಿ ಕೇವಲ ಜಗಜಟ್ಟಿ ಕಾಳಗವಾದ 'ವಜ್ರ ಮುಷ್ಟಿ' ಕಾಳಗವನ್ನಷ್ಟೆ ಸಾಂಕೇತಿಕವಾಗಿ ನವರಾತ್ರಿಯ ದುರ್ಗಾಷ್ಟಮಿ ದಿನ ಆಚರಿಸಲು ನಿರ್ಧರಿಸಿದರು. ಆ ಸಂಪ್ರದಾಯ ಈಗಲೂ ಮುಂದುವರೆದುಕೊಂಡು ಬಂದಿದೆ. ಮುಂದೆ ಮೈಸೂರು ಕುಸ್ತಿ ಸಮಿತಿ ಅಧ್ಯಕ್ಷರಾದ ಸಾಹುಕಾರ್ ಚೆನ್ನಯ್ಯನವರು ದೊಡ್ಡಕೆರೆ ಮೈದಾನದಲ್ಲಿ ಶಾಶ್ವತ ಕುಸ್ತಿ ಕ್ರೀಡಾಂಗಣ ನಿರ್ಮಿಸಿ, ಎಲ್ಲಾ ಜಾತಿ ವರ್ಗದವರಿಗೂ ಸಮಾನವಾಗಿ ಸ್ಪರ್ಧಿಸಲು ಅವಕಾಶ ಕಲ್ಪಿಸಿಕೊಟ್ಟರು. ದುಷ್ಟ ಸಂಹಾರದ ವಿಜಯೋತ್ಸವವಾದ ದಸರಾ ಉತ್ಸವ, ದುಷ್ಟ ಪದ್ಧತಿ ನಾಶಕ್ಕೆ ಯತ್ನಿಸಿದಾಗ ರಕ್ತಸಿಕ್ತವಾಗಿದ್ದು ವಿಪರ್ಯಾಸ.

ಮೈಸೂರು ಪುರಸಭೆಯಲ್ಲಿ ಕಾಂಗ್ರೆಸ್ ಹಿನ್ನಡೆ: ಸವರ್ಣೀಯ ಮತ್ತು ದಲಿತ ಕುಸ್ತಿಪಟುಗಳ ಘರ್ಷಣೆ ಮೈಸೂರು ಪುರಸಭಾ ಚುನಾವಣೆ ಮೇಲೂ ಪರಿಣಾಮ ಬೀರಿ, ಕಾಂಗ್ರೆಸ್ ಭಾರಿ ಹಿನ್ನಡೆ ಅನುಭವಿಸಿತು. ರಾಜ್ಯಾಂಗ ರಚನೆಯಾದ ನಂತರ ನಡೆದ ಮೊದಲ ಮೈಸೂರು ಪುರಸಭಾ ಚುನಾವಣೆಯಲ್ಲಿ ಆಡಳಿತರೂಢ ಕಾಂಗ್ರೆಸ್ ಪಕ್ಷ ಒಟ್ಟು 40 ಸ್ಥಾನಗಳಲ್ಲಿ 16 ಸ್ಥಾನ ಗಳಿಸಿ ಹಿನ್ನಡೆ ಅನುಭವಿಸಿತ್ತು. ❖

ಮುನ್ನೋಟ 10-10-2021 ರಿಂದ 16-10-2021

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಪದಬಂಧ 2708



ಮೇಲಿನಿಂದ ಕೆಳಕ್ಕೆ

1. ಯಾವ ಕಷ್ಟವೂ ಅರಿಯದ ಒಳ್ಳೆಯ ಮಗ 4
2. ಕತ್ತರಿಸಿ ಜೋಡಿಸಿ ಮನಸ್ಸಿನಲ್ಲಿ ಕಳವಳ ಗೊಂದಲ 4
3. ಆಂಜನೇಯನ ಅಮ್ಮ ಹಚ್ಚಿದ ಕಾಡಿಗೆ 3
5. ಕಸ್ತೂರಿ ಕಾಸಿಗೆ ಕೊಂಡ ಪೀಪಿ 3
7. ಈ ಕಾಲದ ಯುಗಪರುಷನ ವರ್ಚಸ್ಸಿನ ಪರಿಣಾಮ 5
8. ಕಾವ್ಯ ಸೃಷ್ಟಿಕರ್ತನಿಗೆ ಮನಃ ಪೂರ್ವಕ ನಮಸ್ಕಾರ 5
9. ಶಿವ ಮಾಡುವ ಮಹಾನ್ ಪ್ರಯತ್ನ 5
10. ಒಳ್ಳೆಯ ಪರಿಮಳಕ್ಕೆ ಐಶ್ವರ್ಯದ ಲೇಪ 5
15. ದೇವರ ದರ್ಶನದ ನಂತರ ಸಾಲಿನಿಲ್ಲಿ ನಿಂತರೆ ಇದು ಸಿಗುತ್ತೆ 3
16. ಅಗ್ನಿಮಿತ್ರನ ಸಖಿ 4
18. ವೀರ ಮಹಾಸತಿಯ ಹೆಸರಿನಲ್ಲಿ ಶಾಸನ ಶಿಲೆ 4
19. ಮತ್ತೆ ಮತ್ತೆ ಕಾಡುವ ಕಳೆದು ಹೋದ ಕ್ಷಣಗಳು 3

ಎಡದಿಂದ ಬಲಕ್ಕೆ

1. ನೆಮ್ಮದಿ ಸಂತೋಷಗಳನ್ನು ಉಂಟುಮಾಡುವವ 5
3. ಇದು ನೇರವಾದುದಲ್ಲ ಸೊಟ್ಟ ಸೊಟ್ಟಗಿರುವುದು 4
4. ನಾಲಿಗೆಗೆ ಹಿತವಾದ ಜೇನಿನಂತ ಮಧುರ ನುಡಿ 4
6. ಇಲ್ಲೇ ಅನುಭವಿಸಬೇಕಾದ ಸ್ವರ್ಗ ಮತ್ತು ಅದರ ವ್ಯತಿರಿಕ್ತ ಸ್ಥಿತಿ 5
9. ಕಣ್ಮನ ತುಂಬುವ ಹಚ್ಚನೆಯ ಸಂಪತ್ತಿನ ಸೊಬಗು 5
11. ನೀತಿಗೆ ಹೆಸರಾದ ಪಾಂಡು ಸೋದರ 3
12. ನಾಟಕದ ಹಾಸ್ಯಮಯ ತುಣುಕು 4
13. ಸ್ವಲ್ಪ ಸುಧಾರಿಸಿಕೊಂಡು ಮೇಲೇಳು 4
14. ಮಹಮದೀಯ ವೈದ್ಯ ಹಿಂದು ಮುಂದು 3
15. ಮೇಲೆಕ್ಕೆ ಏರುತ್ತಾ ಹೋಗುವುದಕ್ಕೆ ಮರ್ಯಾದೆಯ ಅಳತೆ 5
17. ಎಲ್ಲರಿಗೂ ಸಮವಾಗಿ ಹಂಚುವ ಸ್ತುತಿ ಕಾರ್ಯ 5
20. ಮಂದವಾದ ಕರ್ಣ 4
21. ಅನೆಗಳ ಸಮೂಹ 4
22. ಬಿಸಿಲು ಮಳೆಯ ನಡುವೆ ಬೆಳಕಿನಾಟದ ಬಣ್ಣವೇಳರ ಧನಸ್ಸು 5


ಪದಬಂಧ ಉತ್ತರ -2707

ಮೇಲಿಂದ ಕೆಳಕ್ಕೆ

1. ಗುಮಾನಿ 2.ಯವನಿಕ 3.ವಿನೂತನ 4.ಪಿಟಿಪಿಟಿ 5.ರಕ್ಕಸ 6.ಜನಪದ 10.ಕೋತಿನ್ಯಾಯ 12.ಮಾನಹಾನಿ 14.ರಸಾಯನ 16.ವರುಣ 17.ಕಪಿಧ್ವಜ 18.ರಜಪೂತ 19.ಕಲಿಯುಗ 22.ಭೋಜನ

ಎಡದಿಂದ ಬಲಕ್ಕೆ

1. ಗುರುರಾಯ 3.ವಿಶ್ವವ್ಯಾಪಿ 5.ರಜನಿಜ 7.ನಿಶ್ಚಿತ 8.ನಡುಕ 9.ನವಕೋಟಿ 11.ಸಮಾರೋಪ 13.ದಶಾವತಾರ 15.ಸಾವಯವ 17.ಕನಿಕರ 19.ಕಷಾಯ 20.ಜಗಲಿ 21.ನಭೋಗಣ 23.ಜಲಪಾತ 24.ಗರ್ವಾನನ



ಕಥೆ

2021ರ ನೊಬೆಲ್ ಸಾಹಿತ್ಯ ಪುರಸ್ಕಾರ ಪಡೆದ ಆಫ್ರಿಕನ್ ಸಾಹಿತಿ **ಅಬ್ದುಲ್ ರಜಾಕ್ ಗುರ್ನಾ** ಅವರ ಕಥೆ

ಪಂಜರಗಳು

ಕನ್ನಡಕ್ಕೆ: ಜೆ.ಬಾಲಕೃಷ್ಣ

'ತುಪ್ಪ' ಎಂದಳಾಕೆ ಸುದೀರ್ಘವೆನ್ನಿಸಿದ ಮೌನದ ನಂತರ. 'ಒಂದು ಶಿಲ್ಲಿಂಗ್' ಎಂದು ಹೇಳುತ್ತ ಅರ್ಧ ಪಕ್ಕಕ್ಕೆ ತಿರುಗಿದಳು, ಅವನನ್ನು ನೋಡುವುದೇ ಆಕೆಗೆ ಕಿರಿಕಿರಿಯಾಗುವಂತೆ. ಆಕೆಯ ದೇಹದ ಸುತ್ತ ಬಟ್ಟೆಯೊಂದನ್ನು ಸುತ್ತಿಕೊಂಡು ಕಂಕುಳ ಕೆಳಗೆ ಸಿಕ್ಕಿಸಿಕೊಂಡಿದ್ದಳು. ಆ ಸುತ್ತಿಕೊಂಡ ಹತ್ತಿಯ ಬಟ್ಟೆ ಮೃದುವಾಗಿತ್ತು, ಆಕೆಯ ಸುಂದರ ದೇಹದ ಚಹರೆ ಅದರಲ್ಲಿ ಎದ್ದು ಕಾಣುತ್ತಿತ್ತು. ಆಕೆಯ ಭುಜಗಳು ಬೆತ್ತಲಾಗಿದ್ದು ಮಬ್ಬು ಬೆಳಕಲ್ಲಿ ಹೊಳೆಯುತ್ತಿದ್ದವು. ಆಕೆಯ ಕೈಯಿಂದ ಬಟ್ಟಲು ಪಡೆದ ಹಮೀದ್ ಬಾಗಿ ತುಪ್ಪದ ಡಬ್ಬದಿಂದ ಒಂದು ಸೌಟು ತುಪ್ಪ ತೆಗೆದು ತುಂಬಿದ. ಅವನಿಗೆ ಇದ್ದಕ್ಕಿದ್ದಂತೆ ತಾನು ಒಬ್ಬಂಟಿಯೆನ್ನಿಸಿತು ಹಾಗೂ ಅರಿವಿಲ್ಲದ ವೇದನೆ ಕಾಡತೊಡಗಿತು. ಆಕೆಗೆ ಬಟ್ಟಲು ಹಿಂದಿರುಗಿಸಿದಾಗ ಆಕೆ ಅವನೆಡೆಗೆ ಎಲ್ಲೋ ನೋಡುವಂತೆ ನೋಡಿದಳು, ಆಕೆಯ ನೋಟ ದೂರ ನೆಟ್ಟಂತಿತ್ತು ಮತ್ತು ಬಳಲಿದಂತಿತ್ತು.

ಆಕೆ ಹದಿಹರೆಯದವಳೆಂದು ಅವನಿಗನ್ನಿಸಿತು- ದುಂಡನೆ ಸಣ್ಣ ಮುಖ ಮತ್ತು ತೆಳ್ಳನೆ ಕುತ್ತಿಗೆ. ಮರುಮಾತಿಲ್ಲದೆ ಆಕೆ ಹಿಂದಿರುಗಿ ಬಿರಬಿರನೆ ಹೆಜ್ಜೆ ಹಾಕುತ್ತಾ ರಸ್ತೆಯ ಆ ಬದಿಗಿದ್ದ ದೊಡ್ಡ ಕಾಂಕ್ರೀಟ್ ಕೊರಕಲು ದಾಟಿ ಕತ್ತಲಲ್ಲಿ ಮರೆಯಾದಳು. ಅವಳು ಹೋಗುವುದನ್ನೇ ನೋಡುತ್ತಿದ್ದ ಹಮೀದ್ ಆ ಕತ್ತಲಲ್ಲಿ ಎಚ್ಚರಿಕೆಯಿಂದಿರುವಂತೆ ಆಕೆಗೆ ಕೂಗಿ ಹೇಳಬೇಕೆನ್ನಿಸಿತು. ಆ ಕತ್ತಲಲ್ಲಿ ಏನೂ ಅವಿತಿಲ್ಲವೆಂದು ಆಕೆಗೆ ಅಷ್ಟು ಖಾತರಿಯೇ? ಜೋರಾಗಿ ಕೂಗಿ ಆಕೆಗೆ ಎಚ್ಚರಿಕೆ ಕೊಡಬೇಕೆಂದು ಅವನಿಗರಿವಿಲ್ಲದೆ ಕೂಗಿದ, ಆದರೆ ಅವನ ಗಂಟಲಿನಿಂದ ಕ್ಷೀಣ ಗೊಗ್ಗರು ಧ್ವನಿ ಹೊರ ಬಂದಿತಷ್ಟೆ. ಆಕೆಯೂ ಏನಾದರೂ ಆ ಕಡೆಯಿಂದ ಕಿರುಚಬಹುದೇ ಎಂದು ಕಾಯುತ್ತಿದ್ದ, ಆದರೆ ಆಕೆ ಕತ್ತಲಲ್ಲಿ ಮರೆಯಾದಂತೆ ಆಕೆಯ ಚಪ್ಪಲಿಗಳ ಪಟ ಪಟ ಸದ್ದು ಮಾತ್ರ ಕೇಳಿಸಿತಷ್ಟೆ ಅವನಿಗೆ. **ಮುಂದೆ?**

ಮೊಬೈಲ್‌ನಲ್ಲಿ ಪೂರ್ಣ ಕಥೆ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.

https://www.prajavani.net/short-story

ಕವನ

ವಸುಂಧರಾ ಕದಲೂರು
ಬರೆದ ಕವನ
ಒಳಪ್ರಜ್ಞೆಯ ಪ್ರಶ್ನೆಗಳು...

ಮೊಬೈಲ್‌ನಲ್ಲಿ ಕವನ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.

https://www.prajavani.net/poetry

ಒಳ-ಹೊರಕಥನಗಳ ವಿಶಿಷ್ಟ ಸಂಕಥನ

ರಘುನಾಥ ಚ.ಹ.

ವಿಮರ್ಶೆ

ಮೂರ್ನಾಲ್ಕು ದಶಕಗಳ ಕಾಲ ಕಥೆಯನ್ನೋ ಕವಿತೆಯನ್ನೋ ನಿರಂತರವಾಗಿ ಬರೆದುಕೊಂಡು ಬಂದ ನಂತರವೂ ಬರಹಗಾರನೊಬ್ಬ ಬರವಣಿಗೆಗೆ ಸಂಬಂಧಿಸಿದಂತೆ ತನ್ನದೇ ಆದ ಮೀಮಾಂಸೆಯೊಂದನ್ನು ಸ್ಪಷ್ಟವಾಗಿ ಕಟ್ಟಿಕೊಳ್ಳುವುದು ಅಪರೂಪ. ಬರವಣಿಗೆ ಯಾಂತ್ರಿಕ ಪ್ರಕ್ರಿಯೆಯಾದಾಗ ಅಥವಾ ಸಾಹಿತ್ಯೇತರ ಪ್ರೇರಣೆಗಳೇ ಬರವಣಿಗೆಗೆ ಮುಖ್ಯವಾದಾಗ ಲೇಖಕ ತನ್ನದೇ ಆದ 'ಸಾಹಿತ್ಯ ಸಿದ್ಧಾಂತ'ವೊಂದನ್ನು ಕಟ್ಟಿಕೊಳ್ಳುವುದು ಕಷ್ಟ. ಆದರೆ, ಬರವಣಿಗೆಯನ್ನು ತಮ್ಮ ಬದುಕಿನ ಅವಿಭಾಜ್ಯ ಭಾಗವೆಂದು ಭಾವಿಸಿದ ಎಲ್ಲ ಪ್ರಮುಖ ಬರಹಗಾರರೂ ಸಹಜವಾಗಿಯೇ ತಮ್ಮದೇ ಆದ ಮೀಮಾಂಸೆಯೊಂದನ್ನು ರೂಪಿಸಿಕೊಂಡಿರುತ್ತಾರೆ. ಪ್ರಜ್ಞಾಪೂರ್ವಕವಾಗಿಯೋ ಅಪ್ರಜ್ಞಾಪೂರ್ವಕವಾಗಿಯೋ ರೂಪುಗೊಂಡ ಇಂಥ ಮೀಮಾಂಸೆಗಳು, ಲೇಖಕನಿಗೆ ತನ್ನನ್ನು ತಾನು ಸ್ಪಷ್ಟಪಡಿಸಿಕೊಳ್ಳುವ ವಿಧಾನ ಆಗಿರುವಂತೆಯೇ ಸಾಹಿತ್ಯ ವಿದ್ಯಾರ್ಥಿಗಳಿಗೆ ಕೃತಿಕಾರ-ಕೃತಿಯನ್ನು ಅರ್ಥೈಸಿಕೊಳ್ಳಲು ಕೈದೀವಿಗೆಗಳೂ ಆಗುತ್ತವೆ. ಅಂಥದೊಂದು ನುಡಿದೀಪ ಶ್ರೀಧರ ಬಳಗಾರರ 'ಮೊಳದಷ್ಟು ಹೂವು'.

ಕನ್ನಡ ಕಥಾಲೋಕದಲ್ಲಿ ಹೆದ್ದಾರಿಯಂತಿರುವ ಉತ್ತರಕನ್ನಡ ಜಿಲ್ಲೆಯ ಪ್ರಮುಖ ಕಥೆಗಾರರಲ್ಲಿ ಶ್ರೀಧರ ಬಳಗಾರರೂ ಒಬ್ಬರು. ಕಥೆ-ಕಾದಂಬರಿಗಳ ಮೂಲಕ ಕನ್ನಡದ ಕಥನ ಪರಂಪರೆಯನ್ನು ಸೂಕ್ಷ್ಮಗೊಳಿಸುತ್ತಾ ಬಂದಿರುವ ಅವರು, 'ಮೊಳದಷ್ಟು ಹೂವು' ಕೃತಿಯ ಮೂಲಕ ಒಟ್ಟುಗೂಡಿಸಿರುವ ವಿಚಾರಗಳು ಕೂಡ ಅವರ ಕಥಾದಾರಿಯಲ್ಲಿ ಅರಳಿರುವ ಹೂವುಗಳೇ ಆಗಿವೆ.

ಮೂರು ಭಾಗಗಳಲ್ಲಿ ಜೋಡಿಸಲಾಗಿರುವ ಇಲ್ಲಿನ ಬರಹಗಳನ್ನು - ವಿಚಾರ, ವಿಮರ್ಶೆ ಹಾಗೂ ವ್ಯಕ್ತಿತ್ವ ಎಂದು ಅನುಕೂಲಕ್ಕಾಗಿ ವಿಂಗಡಿಸಬಹುದಾದರೂ ಎಲ್ಲ ಬರಹಗಳಲ್ಲಿ ಏಕಸೂತ್ರವಾಗಿ ಕೆಲಸ ಮಾಡಿರುವ ಮನಸು ನಿತ್ಯ ಕುತೂಹಲಿ ಸಾಹಿತ್ಯ ವಿದ್ಯಾರ್ಥಿಯದು. ಬರಹವೊಂದು ಮೂಡುವ ಬಗೆ ಹೇಗೆ ಎಂದು ಚಿಂತಿಸುವ ಈ ಮನಸ್ಸು, ಬರವಣಿಗೆಯ ಮೂಲಕ ಲೇಖಕ ಕಂಡುಕೊಳ್ಳುವ ಅರಿವು ಹಾಗೂ ಆ ಅರಿವಿನ ಮಾರ್ಗದಲ್ಲಿ ಓದುಗರನ್ನು ಸಹಪಯಣಿಗರನ್ನಾಗಿ ಮಾಡಿಕೊಳ್ಳುವ ಸಾಧ್ಯತೆಗಳ ಬಗ್ಗೆ ಆಸಕ್ತವಾದುದು.

ಈ ಕೃತಿ ಒಂದೇ ಬಗೆಯ ಹೂಗಳಿಂದ ಕೂಡಿದ ಹೆಣಿಗೆಯಲ್ಲ; ಹಲ ಬಗೆಯ ಹೂಗಳು ಸೇರಿ ಸೊಗಯಿಸಿದ ಮೊಳ. ಬರವಣಿಗೆಯ ಬೆರಗನ್ನು ಹಲವು ರೂಪಗಳಲ್ಲಿ ಚರ್ಚಿಸಿದಂತೆಯೇ, ಸಾಹಿತ್ಯದ ಸಖ್ಯ ಭಾವಲೋಕದ ಮೇಲೆ ಉಂಟುಮಾಡುವ ಪರಿಣಾಮಗಳನ್ನೂ ಕೃತಿ ಚರ್ಚಿಸುತ್ತದೆ. 'ಒಂದು ಕಥೆಯ ವೃತ್ತಾಂತ', 'ಹಲವು ಹೆಸರುಗಳ ಒಂದು ನದಿ', 'ಬರೆಯುತ್ತ ಅರಿಯುವ ಬೆರಗು', 'ಕಪಾಟಿನ ಹ್ಯಾಂಗರಿಗೆ ನೇತಾಡುವ ನೆರಳುಗಳು', 'ಹತ್ತು ಕಥೆಗಳ ಗಂಟನ್ನು ಬಿಚ್ಚುತ್ತ', 'ಗಂಧಶಾಲಿ ಭತ್ತ ಮತ್ತು ಅದರ ಕಂಪಿನ ಕತೆಗಳು' - ಇವೆಲ್ಲ ಬರಹಗಳು ಬಳಗಾರರು ತಮ್ಮನ್ನು ಅರಿಯುವ ಪ್ರಯತ್ನದ ರಚನೆಗಳಾಗಿರುವಂತೆಯೇ ಸೃಜನಶೀಲ ಬರವಣಿಗೆಯ ಲೋಕಕ್ಕೆ ಬರಹಗಾರನೊಬ್ಬ ಎದುರಾಗುವ ಕಥನಗಳಾಗಿಯೂ ಕುತೂಹಲದಿಂದ ಓದಿಸಿಕೊಳ್ಳುತ್ತವೆ. ಚಿತ್ತಾಲ ಹಾಗೂ ಅನಂತಮೂರ್ತಿ ಕೃತಿಯುದ್ದಕ್ಕೂ ಅಲ್ಲಲ್ಲಿ ಎದುರಾಗುತ್ತಾ ಹೋಗುವುದು, ಬಳಗಾರರ ಮೇಲೆ ಇರಬಹುದಾದ ಅವರಿಬ್ಬರ ಪ್ರಭಾವಕ್ಕಿಂತಲೂ ಹೆಚ್ಚಾಗಿ, ಬರಹಗಾರರ ಜಗತ್ತು ಒಂದರೊಳಗೊಂದು ಹೆಣೆದುಕೊಂಡಿರುವ ವಿಸ್ಮಯವನ್ನೂ ಎದೆಯಿಂದ ಎದೆಗೆ ಜರುಗುವ ಸೃಜನಶೀಲ ಜೀವಸಂಚಾರವನ್ನೂ ತೋರುವಂತಿದೆ.

ಬರವಣಿಗೆಯ ವಿಸ್ಮಯವನ್ನು ದಾಟಿ ಲೋಕದ ದಂದುಗಗಳತ್ತಲೂ ಬರಹಗಾರರ ಕಣ್ಣು ಹರಿದಿರುವುದಕ್ಕೆ ಉದಾಹರಣೆಯಂತಿರುವ 'ಬರ ಮತ್ತು ನವಿಲು', 'ಹರಿಯಲಿ ಚಿತ್ತ ಸಹಜ ಕೃಷಿಯತ್ತ' ಬಗೆಯ ಬರಹಗಳು, ಸಂವೇದನಾಶೀಲ ಲೇಖಕನೊಬ್ಬ ಹೊಂದಿರಬೇಕಾದ ಸಮಕಾಲೀನತೆಯ ಕಣ್ಣು ಕರುಳಿನ ರಚನೆಗಳಾಗಿವೆ.

ಒಳನೋಟಗಳಿಂದ, ಕುತೂಹಲಕರ ವ್ಯಾಖ್ಯಾನಗಳಿಂದ ಗಮನಸೆಳೆಯುವ ಬಳಗಾರರ ಕೆಲವು ಬರಹಗಳು, ಈವರೆಗಿನ ನಮ್ಮ ಗ್ರಹಿಕೆಗಳನ್ನು ಪುನರ್ ಪರಿಶೀಲಿಸಿಕೊಳ್ಳಲು ಒತ್ತಾಯಿಸುತ್ತವೆ.



ಪು: 280 ₹250

ಮೊಳದಷ್ಟು ಹೂವು
ಲೇ: ಶ್ರೀಧರ ಬಳಗಾರ
ಪ್ರ: ನಿವೇದಿತ ಪ್ರಕಾಶನ, ಬೆಂಗಳೂರು.
ಫೋನ್:9448733323.

'ಪಂಪ ಪಥ' ಲೇಖನ, 'ಅಖಂಡ ಕನ್ನಡ ದೇಶವನ್ನು ಕಟ್ಟಲು ಅಗತ್ಯವಾದ ದರ್ಶನ'ವನ್ನು ಪಂಪನ ಭಾರತದಲ್ಲಿ ಕಾಣಬಹುದೆಂದು ಹೇಳುವ ಮೂಲಕ, ಪಂಪನ ಹೊಸಓದಿಗೆ ಪ್ರೇರೇಪಿಸುವಂತಿದೆ. ರಾಜಪ್ರಭುತ್ವದ ಅಪಾಯ ಮತ್ತು ಭೋಗಾತಿಶಯದ ವಿಕಾರವನ್ನು ತನ್ನ ಕಾವ್ಯದಲ್ಲಿ ಅದ್ಭುತವಾಗಿ ನಿರ್ವಹಿಸಿದ ಪಂಪ, 'ವಿಕ್ರಮಾರ್ಜುನ ವಿಜಯ'ದಲ್ಲಿ ಮಾಡಿಕೊಂಡ ನಾಯಕತ್ವದ ಬದಲಾವಣೆಗೆ, 'ಸಾಮಂತನಾದ ಅರಿಕೇಸರಿಯಲ್ಲಿ ಸಾಮ್ರಾಜ್ಯ ಸ್ಥಾಪನೆಯ ಕೆಚ್ಚನ್ನು ಮೂಡಿಸಿ ಅಂದಿನ ಅರಾಜಕತೆಯನ್ನು ಹೋಗಲಾಡಿಸಬೇಕಿತ್ತಲ್ಲವೇ?' ಎಂದು ಲೇಖಕರು ಅರ್ಥೈಸಿರುವುದು ಕುತೂಹಲಕರವಾಗಿದೆ.

'ಮಹಾತ್ಮ ಗಾಂಧಿ ಮತ್ತು ಮಹಿಳಾ ಸಬಲೀಕರಣ' ಲೇಖನದಲ್ಲಿ - ಹೆಣ್ಣಿನ ಗುಣಗಳನ್ನು ಒಳಗೊಳ್ಳುವ ಮೂಲಕ ಗಾಂಧೀಜಿಯ ವ್ಯಕ್ತಿತ್ವ ಹರಳುಗಟ್ಟಿದ್ದನ್ನು ಗುರ್ತಿಸುವ ಬಳಗಾರರು, 'ಭಾರತದ ಬಿಡುಗಡೆ ಸ್ತ್ರೀ ವಿಮೋಚನೆಯಿಂದ ಮಾತ್ರ ಸಾಧ್ಯ' ಎನ್ನುವ ಗಾಂಧಿ ನಂಬಿಕೆಯನ್ನು ಎತ್ತಿತೋರಿಸುತ್ತಾರೆ. ಮಹಿಳಾ ವಿಮೋಚನೆಯನ್ನು ಭಾರತದಲ್ಲಿ ತಮ್ಮ ಆಳ್ವಿಕೆಗೆ ಕಾರಣಗಳಲ್ಲೊಂದಾಗಿ ನೀಡಿದ ಬ್ರಿಟಿಷ್ ಪ್ರಭುತ್ವದ ವಿರುದ್ಧದ ಚಳವಳಿಯಲ್ಲಿ ಮಹಿಳೆಯರನ್ನು ತೊಡಗಿಸಿದ ಗಾಂಧಿ, 'ಭಾರತವನ್ನು ಸಾಂಸ್ಕೃತಿಕವಾಗಿ ಬೆತ್ತಲಾಗಿಸಲು ಬಂದ ವಸಾಹತುಶಾಹಿಗಳಿಗೆ ಪ್ರತಿರೋಧವಾಗಿ ಮಹಿಳೆಯರ ಕೈಗೆ ಚರಕವನ್ನು ಕೊಟ್ಟು ಸಮಾನತೆಯ ವಸ್ತ್ರವನ್ನು ನೇಯಿಸಿದ್ದು ಸ್ತ್ರೀಲೋಕದ ಘನತೆಗೆ ಒಂದು ಮಾದರಿ' ಎಂದು ವಿಶ್ಲೇಷಿಸಿರುವುದು ವಿಶೇಷವಾಗಿದೆ.

'ಹನೇಹಳ್ಳಿಗೆ ಹೀಗೆ ಬನ್ನಿ' ಹಾಗೂ 'ಶ್ರೀ ಸಂಸಾರಿ' ರುಚಿಕಟ್ಟಾದ ಪ್ರಬಂಧವನ್ನು ಓದಿದ ಅನುಭವ ಕೊಡುವ ರಚನೆಗಳು. ಯಶವಂತ ಚಿತ್ತಾಲರ ಕಥೆ-ಕಾದಂಬರಿಯಲ್ಲಿನ ಪಾತ್ರಗಳನ್ನು ಹನೇಹಳ್ಳಿಯಲ್ಲಿ ಲೇಖಕ ಮುಖಾಮುಖಿಯಾಗುವ ಕಲ್ಪನೆಯೇ ಸೊಗಸಾದುದು. ಹನೇಹಳ್ಳಿಯ ನೋಟದಿಂದಾಗಿ, ಕನ್ನಡದ ಸುಪ್ರಸಿದ್ಧ ಲೇಖಕರ ಊರುಕೇರಿಗಳಿಗೂ ಇಂಥ 'ಪ್ರವಾಸ ಕಥನ'ದ ಭಾಗ್ಯ ಒದಗಬೇಕೆಂದು ಓದುಗನಿಗೆ ಅನ್ನಿಸಿದರೆ ಆಶ್ಚರ್ಯವೇನಿಲ್ಲ.

ಸಾಹಿತ್ಯ ವಿದ್ಯಾರ್ಥಿಗಳಿಗೆ, ವಿಶೇಷವಾಗಿ ಕಥನ-ಕಾವ್ಯದ ಬಗ್ಗೆ ಆಸಕ್ತಿಯುಳ್ಳ ಯುವ ಬರಹಗಾರರಿಗೆ 'ಮೊಳದಷ್ಟು ಹೂವು' ಕೃತಿ ಪಠ್ಯದಂತೆ ಆಕರವಾಗಬಲ್ಲದು. ಪ್ರತೀ ಲೇಖಕನ ಬರವಣಿಗೆಯ ದಾರಿ ಭಿನ್ನವಾಗಿ ಇರಬಹುದಾದರೂ, ಆ ದಾರಿಯಲ್ಲಿ ಕಾಣುವ ಹಸಿರು, ಹೂವು, ಗಿಡಗಂಟಿಗಳ ಕೊರಳುಗಳಿಂದ ಮೂಡುವ ಹಾಡು ಭಿನ್ನವೇನಲ್ಲ. ಆ ನೋಟವನ್ನು ಅರಿಯುವ ಪ್ರಯತ್ನದಲ್ಲಿ, ಬಳಗಾರರ ಹೂವಿನ ಮೊಳ ಹಾಕುವಿಕೆ ಸಹೃದಯರನ್ನೂ ಒಳಗೊಳ್ಳುವಂತಹದ್ದು. 'ಶ್ರೀ ಸಂಸಾರಿ' ಬರಹದಲ್ಲಿ, ಸಮುದ್ರ ನೋಡಿ ವಾಪಸ್ಸಾಗುವಾಗ ಕವಿ ಎಚ್.ಎಸ್. ವೆಂಕಟೇಶಮೂರ್ತಿ 'ಆತ್ಮ ಸ್ನಾನವಾದಂತಾಯ್ತು' ಎಂದು ಉದ್ಗರಿಸಿದರೆ, ಕಥೆಗಾರ ಬಳಗಾರರು 'ಚಂದ್ರನನ್ನು ಮನೆಗೆ ಕರೆದುಕೊಂಡು ಹೋಗೋಣ' ಎಂದು ಪ್ರತಿಕ್ರಿಯಿಸುತ್ತಾರೆ. ಮಾತಿಗೆ ನಿಲುಕದ ಈ ಸುಖ-ಸಂತೋಷದ ಅನುಭೂತಿ 'ಮೊಳದಷ್ಟು ಹೂವು' ಕೃತಿಯ ಸಖ್ಯದಲ್ಲಿ ಸಹೃದಯರದೂ ಆಗುತ್ತದೆ.

ಸಿನಿ ಮಾಯಾಲೋಕದಲ್ಲಿ ಹಗುರ ವಿಹಾರ



ಪು: 208 ₹200

ಸಿನಿ ಮಾಯಾಲೋಕ
ಲೇ: ಎನ್. ಸಂಧ್ಯಾರಾಣಿ
ಪ್ರ: ಸಾವಣ್ಣಾ
ಸಂ:9036312786
www.sawannabooks.com

ಕನ್ನಡದ ಬಹುತೇಕ ಸಿನಿಕರ್ಮಿಗಳಿಗೆ ಬರವಣಿಗೆ ಅಥವಾ ಸಾಹಿತ್ಯ ಎನ್ನುವುದು ಮುಖ್ಯ ಎಂದು ಅನಿಸಿಲ್ಲ ಎಂಬುದು ಎಷ್ಟು ಸತ್ಯವೋ, ಕನ್ನಡದ ಬಹುತೇಕ ಸಾಹಿತಿಗಳು ಸಿನಿಮಾ ಮಾಧ್ಯಮವನ್ನು ನಿರ್ಲಕ್ಷ್ಯದಿಂದ ನೋಡುತ್ತಾರೆ ಎಂಬುದೂ ಅಷ್ಟೇ ಸತ್ಯ. ಹಾಗಾಗಿಯೇ ಇರಬೇಕು, ಕನ್ನಡದಲ್ಲಿ ಸಿನಿಮಾ ಕುರಿತು ಸಾಹಿತ್ಯ ಬಹಳೇ ಅನ್ನುವಷ್ಟು ಕಡಿಮೆ. ಹಾಗೊಮ್ಮೆ ಬಂದಿರುವ ಕೆಲವೇ ಕೆಲವು ಒಳ್ಳೆಯ ಪುಸ್ತಕಗಳ ಬಗ್ಗೆ ಚರ್ಚೆ ನಡೆದಿದ್ದು ಇಲ್ಲವೇ ಇಲ್ಲ ಎನ್ನುವಷ್ಟು ಅಪರೂಪ.

ಎನ್. ಸಂಧ್ಯಾರಾಣಿ ಅವರು ಬರೆದಿರುವ 'ಸಿನಿ ಮಾಯಾಲೋಕ' ಪುಸ್ತಕ ಈ ದೃಷ್ಟಿಯಿಂದ ಗಮನಾರ್ಹ ಕೃತಿಯಾಗಿದೆ. ಇವು ಸಿನಿಮಾದ ಬಗೆಗಿನ ಪ್ರೀತಿಯಿಂದ, ಆ ಪ್ರೀತಿಯನ್ನು ಇತರರಿಗೂ ಹಂಚುವ ಉದ್ದೇಶದಿಂದ ಹುಟ್ಟಿಕೊಂಡ ಬರಹಗಳು. ಇದನ್ನು ಬರೆದಿದ್ದು 'ಲೇಖಕಿ' ಎನ್ನುವುದನ್ನೂ ಒತ್ತಿ ಹೇಳಲೇಬೇಕು.


ಒಟ್ಟು ಮೂವತ್ತು ಸಿನಿಮಾಗಳ ಕುರಿತಾದ ಬರಹಗಳು ಇಲ್ಲಿವೆ. ವಿಮರ್ಶೆಯಾಗಲಿ, ಸಿನಿಮಾ ಪ್ರಕಾರದ ಗಂಭೀರ ಮೌಲ್ಯಮಾಪನವಾಗಲಿ ಈ ಬರಹಗಳ ಉದ್ದೇಶ ಅಲ್ಲ. ಯಾವುದೋ ಒಳ್ಳೆಯ ಸಿನಿಮಾ ನೋಡಿ ಬಂದಾಗ ಮನೆಯಲ್ಲಿ ಎಲ್ಲರ ಎದುರೂ ಆ ಸಿನಿಮಾದ ಕುರಿತು ಹೇಳುತ್ತೇವಲ್ಲ, ಆ ಆಪ್ತಧಾಟಿಯಲ್ಲಿ ಈ ಬರಹಗಳಿವೆ. ಹಾಗಾಗಿಯೇ ಲೇಖಕಿಗೆ ನಿರ್ದೇಶಕನ ಇಂಗಿತ ಏನಿರಬಹುದು ಎಂಬ ಕುತೂಹಲದಷ್ಟೇ ಸಿನಿಮಾದ ಕಥೆಯೂ ಮುಖ್ಯ. ತಾಂತ್ರಿಕ ಅಂಶಗಳು, ನಟನೆ, ನಿರೂಪಣಾ ಕ್ರಮ ಇಂಥ ಸಿನಿಮಾ ವ್ಯಾಕರಣಕ್ಕಿಂತ ಎಲ್ಲ ಎಲ್ಲೆಗಳ ಮೀರಿ ಮನಸೊಳಗೆ ಇಳಿಯುವ ಸನ್ನಿವೇಶಗಳು ಮುಖ್ಯ.

ಲೇಖಕಿ ಮುನ್ನುಡಿಯಲ್ಲಿಯೇ ಹೇಳಿಕೊಂಡಂತೆ, ಸಿನಿಮಾಗಳನ್ನು ಭೇದವಿಲ್ಲದೆ ನೋಡುವ ಗುಣ ಈ ಬರಹಗಳಲ್ಲಿಯೂ ಎದ್ದು ಕಾಣುತ್ತದೆ. ಹಾಗಾಗಿಯೇ '96'ನಂಥ ವ್ಯಾಪಾರಿ ಗೆಲುವಿನ ಸಿನಿಮಾವನ್ನೂ, ಅಸ್ಗರ್ ಫರ್ಹಾದಿಯ ಸಿನಿಮಾಗಳನ್ನೂ ಅಷ್ಟೇ ಉತ್ಸುಕತೆಯಿಂದ ಎದುರಾಗಲು ಸಾಧ್ಯವಾಗಿದೆ. ಎಲ್ಲ ಬಗೆಯ ಸಿನಿಮಾಗಳನ್ನೂ ಅವರು ನೋಡುವುದು ಕಾವ್ಯದ ಕಣ್ಣಿನಿಂದಲೇ ಎನ್ನುವುದಕ್ಕೆ ಇಲ್ಲಿನ ಬರಹಗಳ ಶೀರ್ಷಿಕೆಯೇ ಪುರಾವೆಯೊದಗಿಸುತ್ತದೆ.

'ಈ ಬರಹಗಳ ಜೊತೆಯಲ್ಲಿ ನನ್ನ ಬದುಕಿನ ಒಂದು ಭಾಗವನ್ನೂ ಕೊಡುತ್ತಿದ್ದೇನೆ. ದಯವಿಟ್ಟು ಒಪ್ಪಿಸಿಕೊಳ್ಳಿ...' ಎಂಬ ಲೇಖಕಿಯ ಮಾತು ಅವರ ಸಿನಿಮಾ ಪ್ರೀತಿಯನ್ನು ಎತ್ತಿತೋರಿಸುವಂತಿದೆ. ಈ ಭಾಗದಲ್ಲಿ ಕನ್ನಡ ಸಿನಿಮಾಗಳ ಪಾಲನ್ನೂ ಸೇರಿಸಿ ಕೊಟ್ಟಿದ್ದರೆ ಅದರ ಸೊಬಗು ಇನ್ನಷ್ಟು ಹೆಚ್ಚುತ್ತಿತ್ತು.

ಮೊದಲ ಓದು

ದಿವಾನ್ ಪೂರ್ಣಯ್ಯ ಜೀವನಕಥನ



ಪು: 192 ₹195

ದಿವಾನ್ ಪೂರ್ಣಯ್ಯ
ಮೈಸೂರು ರಾಜ್ಯದ ಮೊದಲ ದಿವಾನರು
ಲೇ: ಎಂ.ಎನ್.ಸುಂದರರಾಜ್
ಪ್ರ: ಅಂಕಿತ ಪುಸ್ತಕ
ಸಂ: 080-26617100/26617755

ಹೈದರಾಲಿ, ಟಿಪ್ಪು ಸುಲ್ತಾನ್ ಹಾಗೂ ನಂತರದಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರಿಗೂ ದಿವಾನರಾಗಿ ನೇಮಕಗೊಂಡು, ಆಧುನಿಕ ಮೈಸೂರಿನ ರೂವಾರಿ ಎಂದೆನಿಸಿಕೊಂಡಿದ್ದ ಪೂರ್ಣಯ್ಯ ಅವರ ಕುರಿತು ಸ್ವಾರಸ್ಯಕರವಾದ ಮಾಹಿತಿಗಳನ್ನೊಳಗೊಂಡ ಕೃತಿ 'ದಿವಾನ್ ಪೂರ್ಣಯ್ಯ-ಮೈಸೂರು ರಾಜ್ಯದ ಮೊದಲ ದಿವಾನರು'.

ನಿವೃತ್ತ ಆಂಗ್ಲ ಉಪನ್ಯಾಸಕ ಎಂ.ಎನ್. ಸುಂದರರಾಜ್ ಅವರು ಈ ಕೃತಿಯ ಲೇಖಕ. ತಮಿಳುನಾಡಿನ ಕೊಯಮತ್ತೂರು ಜಿಲ್ಲೆಯಲ್ಲಿ ಹುಟ್ಟಿ, ಶ್ರೀರಂಗಪಟ್ಟಣಕ್ಕೆ ವಲಸೆ ಬಂದು ಗುಮಾಸ್ತನಾಗಿ ದುಡಿದು ನಂತರ, ಹೈದರಾಲಿ ಆಡಳಿತದಲ್ಲಿ ಅರ್ಥಸಚಿವರಾಗಿ ನಂತರ ದಿವಾನರಾಗಿ ಮೈಸೂರಿನ ರಾಜಕೀಯ ಇತಿಹಾಸದಲ್ಲಿ ತಮ್ಮದೇ ಛಾಪು ಮೂಡಿಸಿದ್ದ ಪೂರ್ಣಯ್ಯ ಅವರ ಜೀವನ ಮತ್ತು ಸಾಧನೆಗಳ ಕಿರುಪರಿಚಯ ಈ ಕೃತಿಯಲ್ಲಿದೆ. 'ಮೈಸೂರು ರಾಜ್ಯದ ಪ್ರಾಮುಖ್ಯತೆ' ಎಂಬ ಅಧ್ಯಾಯದ ಮುಖಾಂತರ ಕೃತಿ ಆರಂಭವಾಗುತ್ತದೆ. ಇದರಲ್ಲಿ ಮೈಸೂರು ರಾಜ್ಯ ರೂಪುಗೊಂಡ ರೀತಿ, ಒಡೆಯರ್ ಮನೆತನದ ಆಳ್ವಿಕೆ, ಸ್ವತಂತ್ರ ರಾಜ್ಯವಾಗಿ ಹೊರಹೊಮ್ಮಿದ ಬಗೆಯ ವಿವರವಿದೆ. ನಂತರದಲ್ಲಿ ಹೈದರಾಲಿಯ ಸಾಮ್ರಾಜ್ಯ ವಿಸ್ತರಣೆ, ಹೈದರಾಲಿ ಸಾವನ್ನು ರಹಸ್ಯವಾಗಿಟ್ಟು ಟಿಪ್ಪುವಿಗೆ ಅಧಿಕಾರ ಹಸ್ತಾಂತರ, ಮೈಸೂರು ರಾಜ್ಯಕ್ಕೆ ಪೂರ್ಣಯ್ಯನವರು ನೀಡಿದ ಕೊಡುಗೆ ಸೇರಿ ಪೂರ್ಣಯ್ಯ ಅವರ ಜೀವನ ಚರಿತ್ರೆಯ ವಿವರವನ್ನೂ ಕೃತಿ ಹೊಂದಿದೆ.


ಮಾಹಿತಿಯ ಜೊತೆಗೆ ಸ್ವಾರಸ್ಯಕರ ವಿಷಯಗಳೂ ಈ ಕೃತಿಯಲ್ಲಿವೆ. ಉದಾಹರಣೆಗೆ, ಸಾಂಕ್ರಾಮಿಕ ರೋಗ ತಡೆಗಟ್ಟಲು ಚುಚ್ಚುಮದ್ದನ್ನು ತೆಗೆದುಕೊಳ್ಳಲು ಜನ ಹಿಂದೇಟು ಹಾಕುತ್ತಿದ್ದ ಸಂದರ್ಭದಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರೇ ಸ್ವತಃ ಮೊದಲು ಚುಚ್ಚುಮದ್ದು ಹಾಕಿಸಿಕೊಂಡ ಘಟನೆ, ಯಳಂದೂರಿನಲ್ಲಿರುವ ದಿವಾನ್ ಪೂರ್ಣಯ್ಯ ಅವರ ಬಂಗಲೆಯ ಕುರಿತು ಜನರಲ್ಲಿದ್ದ ಮೂಢನಂಬಿಕೆ ಇವುಗಳಲ್ಲಿ ಕೆಲವು. ಪೂರ್ಣಯ್ಯ ಟಿಪ್ಪುವಿಗೆ ದ್ರೋಹ ಎಸಗಿದ್ದರೇ ಎನ್ನುವುದು ಇಂದಿಗೂ ಸಾಕಷ್ಟು ಚರ್ಚೆಗೆ ಗ್ರಾಸವಾಗಿರುವ ವಿಷಯ. ಈ ವಿಷಯವನ್ನೂ ಪ್ರತ್ಯೇಕ ಅಧ್ಯಾಯದಲ್ಲಿ ಲೇಖಕರು ಪ್ರಸ್ತಾಪಿಸಿದ್ದಾರೆ. ಟಿಪ್ಪುವಿಗೆ ಪೂರ್ಣಯ್ಯ ದ್ರೋಹ ಬಗೆದಿರಲಾರರು ಎಂಬುದಕ್ಕೆ ಹಲವು ನಿದರ್ಶನಗಳನ್ನು ಇಲ್ಲಿ ಸುಂದರರಾಜ್ ಉಲ್ಲೇಖಿಸಿದ್ದಾರೆ.

ಶರಣ ಸಾಹಿತ್ಯದ ವಿರಾಟ್ ದರ್ಶನ

ಶರಣ ಸಾಹಿತ್ಯದಲ್ಲಿ 'ಮಾಸ್ಟರ್' ಎನ್ನುವಂತಹ ಪಾಂಡಿತ್ಯ ಹೊಂದಿದ್ದ ಷಣ್ಮುಖಯ್ಯ ಅಕ್ಕೂರಮಠ ಅವರು ನಮ್ಮನ್ನು ಅಗಲುವ ಮುನ್ನ ಬಿಟ್ಟುಹೋದ ಮಹತ್ವದ ಕೃತಿಗಳೆಂದರೆ ಅವರ ಸಮಗ್ರ ಸಾಹಿತ್ಯದ ಎರಡು ಸಂಪುಟಗಳು. ಈ ಕೃತಿಗಳಲ್ಲಿರುವ ಲೇಖನಗಳು ಅವರ ಮೂರೂವರೆ ದಶಕಗಳ ಅಧ್ಯಯನದ ಫಲ. ಸಂಸ್ಕೃತ ವಿದ್ವಾಂಸರೂ ಆಗಿದ್ದ ಅಕ್ಕೂರಮಠ ಅವರು ವಚನ ಸಾಹಿತ್ಯದ ಕುರಿತು ನಡೆಸಿದ ಸಂಶೋಧನೆ, ಮಾಡಿದ ಅನುಸಂಧಾನ ಅತ್ಯಂತ ಮಹತ್ವಪೂರ್ಣವಾದುದು. ಶೂನ್ಯ ಸಂಪಾದನೆಯ ಮೇಲೆ ಅವರು ಮಠಗಳಲ್ಲಿ ತಿಂಗಳುಪರ್ಯಂತ ಪ್ರವಚನ ನೀಡುತ್ತಿದ್ದುದನ್ನೂ ಹಲವರು ಬಲ್ಲರು. ಅಂತಹ ಅಧ್ಯಯನದ ಹಿನ್ನೆಲೆಯ ಇಲ್ಲಿನ ಲೇಖನಗಳು ಚಿಂತನಾತ್ಮಕ ಹಾಗೂ ಸಂಶೋಧನಾತ್ಮಕ ನೆಲೆಗಳನ್ನು ಹಿಡಿದಿರುವುದು ಎದ್ದು ಕಾಣುತ್ತದೆ.

'ವರ್ಣ-ಜಾತಿ: ವಚನಕಾರರ ಪರಿಕಲ್ಪನೆ', 'ಶರಣರ ಸಾಮಾಜಿಕ ಚಿಂತನೆ', 'ಶರಣರು ವೈದಿಕ ಸಂಸ್ಕೃತಿಯ ವಿರೋಧಿಗಳೇ?' 'ಅಲ್ಲಮನ 'ಪ್ರಭುಗೀತ' ಅವಲೋಕನ', 'ಶರಣ-ಸೂಫಿ-ಝೆನ್' 'ಅರೇಬಿಯಾದ ವಿರಾಗಿಣಿ ರಾಬಿಯಾ ಜೀವನ ಮತ್ತು ಸಂದೇಶ' - ಮೊದಲ ಸಂಪುಟದಲ್ಲಿರುವ ಲೇಖನಗಳ ಈ ಶೀರ್ಷಿಕೆಗಳೇ ಅಕ್ಕೂರಮಠರ ಚಿಂತನೆಯ ದಿಕ್ಕನ್ನು ತೋರಿಸುವಂತಿವೆ.

ಎರಡನೇ ಸಂಪುಟ ವೀರಶೈವ ಧರ್ಮ ಮತ್ತು ಸಂಸ್ಕೃತಿಗೆ ಸಂಬಂಧಿಸಿದ್ದಾಗಿದೆ. ವೀರಶೈವವನ್ನು ಒಂದು ಧರ್ಮವಾಗಿ ಶಾಸ್ತ್ರೀಯ ರೀತಿಯಲ್ಲಿ ಅಧ್ಯಯನ ನಡೆಸಿ ಬರೆದ ಲೇಖನಗಳು ಇದರಲ್ಲಿವೆ. ಮಠಗಳ ಪರಿಕಲ್ಪನೆ, ಇಷ್ಟಲಿಂಗ ದೀಕ್ಷೆ, ಧಾರ್ಮಿಕ ಆಚರಣೆಗಳಲ್ಲಿ ಕಂಡುಬರುವ ಅಸಂಗತಗಳು, ಜಂಗಮರು ಮತ್ತು ಸತ್ಯಾಗ್ರಹ ಹೀಗೆ ಇಲ್ಲಿನ ಚರ್ಚೆಯ ಹರವು ಬಲು ದೊಡ್ಡದು. ಧರ್ಮ-ದರ್ಶನಶಾಸ್ತ್ರ, ಸಮಾಜ-ಸಮಾಜಶಾಸ್ತ್ರದ ಗಂಭೀರ ಅಧ್ಯಯನಕಾರರಾಗಿದ್ದ ಅಕ್ಕೂರಮಠ ಅವರು, ಸಾಹಿತ್ಯಕೇಂದ್ರಿತ ಬರಹಗಳಲ್ಲಿ ದರ್ಶನಶಾಸ್ತ್ರವನ್ನು ಹದವಾಗಿ ಬೆರೆಸಿಕೊಟ್ಟಿದ್ದಾರೆ. ಅವರು ಈಗಿಲ್ಲದಿದ್ದರೂ ಈ ಬೃಹತ್ ಸಂಪುಟಗಳ ಮೂಲಕ ಓದುಗರೊಂದಿಗೆ ಸದಾ ಇರಲಿದ್ದಾರೆ.



ಅಕ್ಕೂರಮಠರ ಸಮಗ್ರ ಸಾಹಿತ್ಯ

ಸಂಪುಟ-1	ಸಂಪುಟ-2
ಪುಟಗಳು: 492	ಪುಟಗಳು: 738
ಬೆಲೆ: 500	ಬೆಲೆ: 500


ಎರಡೂ ಕೃತಿಗಳ
ಲೇ: ಷಣ್ಮುಖಯ್ಯ ಅಕ್ಕೂರಮಠ
ಪ್ರ: ಅನುಪಮ ಪ್ರಕಾಶನ
ಸಂ: 9449625025

ತೆಪರೇಸಿ ತಿನಿಸಿದ 'ಚುರುಮುರಿ'

ರಾಜಕೀಯ ವಿಡಂಬನೆಗಳು ಪತ್ರಿಕೆಗಳಲ್ಲಿ ಇಲ್ಲವೇ ಇಲ್ಲ ಎನ್ನುವಷ್ಟು ಅಪರೂಪವಾಗಿವೆ. ಸಾಹಿತ್ಯದ ಅಂತಹ ಅಪರೂಪದ ಪ್ರಭೇದದ ವಾರಸುದಾರರಲ್ಲಿ ಬಿ.ಎನ್. ಮಲ್ಲೇಶ್ ಕೂಡ ಒಬ್ಬರು. 'ಪ್ರಜಾವಾಣಿ'ಯಲ್ಲಿ ಅವರು ಬರೆದ ವಿಡಂಬನಾತ್ಮಕ ಬರಹಗಳ ಗುಚ್ಛ ತೆಪರೇಸಿ ರಿಟರ್ನ್ಸ್. ಇಲ್ಲಿನ ಬರಹಗಳು ವರ್ತಮಾನದ ವಿದ್ಯಮಾನಗಳಿಗೆ ಸ್ಪಂದನಾತ್ಮಕವಾಗಿ ರಚಿತವಾಗಿದ್ದರೂ ಕಾಲದ ಚೌಕಟ್ಟಿನ ಆಚೆಗೂ ಅವುಗಳು ಉಸಿರಾಡಬಲ್ಲವು. ಅಂತೆಯೇ ಆ ಬರಹಗಳ ಗುಚ್ಛ ಪುಸ್ತಕದ ರೂಪದಲ್ಲಿ ಈಗ ಓದುಗರ ಕೈಯಲ್ಲಿದೆ.

ಮಲ್ಲೇಶ್ ಅವರಿಗೆ ರಂಗಭೂಮಿ ಹಿನ್ನೆಲೆ ಇದೆ. ಪತ್ರಕರ್ತರಾಗಿ ಕೆಲಸ ಮಾಡಿದ ಅನುಭವವೂ ಇದೆ. ವಿಡಂಬನಾತ್ಮಕ ಬರವಣಿಗೆ ಅವರಿಗೆ ಕರಗತವಾಗಲು ಈ ಎರಡೂ ಕೌಶಲಗಳು ನೆರವಿಗೆ ಬಂದಿವೆ. ತೀಕ್ಷ್ಣತೆ ಇಲ್ಲಿನ ಬರಹಗಳ ಪ್ರಧಾನ ಲಕ್ಷಣ. ತಮ್ಮ ಇರುವಿನ ಗುರುತು ಹಾಕುವ ಪಂಚ್‌ಗಳು ಮುಖದ ಮೇಲೆ ನಗೆಯ ಗೆರೆಗಳನ್ನು ಮೂಡಿಸುವಲ್ಲಿ ಸಫಲವಾಗುವ ಜತೆಗೆ ಚಿಂತನೆಗೂ ಹಚ್ಚುತ್ತವೆ.

ಒಮ್ಮೆ ಪತ್ರಕರ್ತ, ಮತ್ತೊಮ್ಮೆ ಪೊಲೀಸ್ ಪೇದೆ, ಮಗದೊಮ್ಮೆ ರಾಜಕಾರಣಿ ಮತ್ತು ಇನ್ನೊಮ್ಮೆ ಗುಜರಿ ವ್ಯಾಪಾರಿ, ಕೊನೆಗೆ ಪೆದ್ದ ಅಬ್ಬೇಪಾರಿ... ಹೀಗೆ ನಾನಾ ಅವತಾರ ಎತ್ತಿ ಬರುವ ತೆಪರೇಸಿ ಸಾಮಾನ್ಯ ಜನರ ಪ್ರತಿನಿಧಿ. ವ್ಯಂಗ್ಯ ವಿಡಂಬನೆಯಿಂದ ಎಂಥವರನ್ನೂ ನಗಿಸಬಲ್ಲ. ಆತನ ಸಾಹಸಗಳನ್ನು ಜನ 'ಚುರುಮುರಿ'ಯಂತೆ ಸವಿಯಲು ಸಾಧ್ಯ.



ಪು: 200 ₹230

ತೆಪರೇಸಿ ರಿಟರ್ನ್ಸ್
'ಪ್ರಜಾವಾಣಿ'ಯ ವಿನೋದ ಅಂಕಣ ಬರಹಗಳು
ಲೇ: ಬಿ.ಎನ್. ಮಲ್ಲೇಶ್
ಪ್ರ: ಬಹುರೂಪಿ
ಸಂ: 7019182729

ಸೊಂಡಿಲಾಡಿಸಿ ಬಂತು ಸಿಂಗರಿಸಿದಾನೆ

12ನೇ ಪುಟದಿಂದ...

ಯದುಕುಲದ ಅರಸ ಶ್ರೀ ಕಂಠೀರವ ನರಸರಾಜ ಒಡೆಯರ್ ಕಾಲದಲ್ಲಿ ಅವರ ಆಸ್ಥಾನದಲ್ಲಿದ್ದ ಕವಿ ಗೋವಿಂದ ವೈದ್ಯ. ಆತನು 'ಕಂಠೀರವ ನರಸರಾಜ ವಿಜಯ' ಎಂಬ ಮಹಾಕಾವ್ಯ ರಚಿಸಿದ್ದಾನೆ. ಕಾವ್ಯ ರಚನೆಯ ಸಮಯ ಸುಮಾರು 1648 ಎಂದು ಕಂಡುಬರುತ್ತದೆ. ಈ ಮಹಾಕಾವ್ಯದಲ್ಲಿ ಒಟ್ಟು 26 ಸಂಧಿಗಳಿದ್ದು ಅದರಲ್ಲಿ ದಸರೆಯ ಸಂಭ್ರಮದ ವರ್ಣನೆ ಕಾಣಸಿಗುತ್ತದೆ. ಪುರ ಶೃಂಗಾರ ಸಂಧಿ, ಮಹಾನವಮಿ ಒಡ್ಡೋಲಗ, ವಿಜಯದಶಮಿ ಜಂಬೂಸವಾರಿ ಇವುಗಳ ಸವಿವರಣಾತ್ಮಕ ವಿವರಗಳಿವೆ.

ಇದರಿಂದ ಆ ಕಾಲದ ದಸರಾ ಉತ್ಸವದ ಸಾಕಷ್ಟು ಮಾಹಿತಿಗಳು ನಮಗೆ ಲಭ್ಯವಾಗುತ್ತವೆ. ವಿಜಯದಶಮಿ ಜಂಬೂಸವಾರಿ ಹೇಗಿರುತ್ತಿತ್ತು ಎಂಬುದಕ್ಕೆ ಒಂದು ಪದ್ಯವನ್ನು ಗಮನಿಸಬಹುದು.

**ಧಾರಿಣೀಶ್ವರನರಮನೆ
ಬಾಗಿಲಿಂ ಜಂಬಿ/
ಸಾರಿ ಮಂಟಪ
ಪರಿಯಂತ/ ಮೇರೆಯಿಲ್ಲದ ರತ್ನತೋರಣ
ಕುರುಜುಗಳ್/ ಸೇರಿ ಕಟ್ಟಿದುವರ್ತಿಯಲಿ.**

ಮೈಸೂರು ದೊರೆ ಕೃಷ್ಣರಾಜೇಂದ್ರರವರ ಆಸ್ಥಾನದಲ್ಲಿದ್ದ ಕವಿ ನೂರೊಂದಯ್ಯ. ಆತ 'ಸೌಂದರ ಕಾವ್ಯ' ರಚಿಸಿದ್ದಾನೆ. ಇದು 1740ರ ಸುಮಾರಿನಲ್ಲಿ ರಚಿತವಾದಂತಹುದು. ಇದರಲ್ಲಿ ಆಗಿನ ನವರಾತ್ರಿ ಉತ್ಸವದ ಬಗ್ಗೆ ಬಹಳಷ್ಟು ವಿವರಣೆಗಳು ಲಭ್ಯವಾಗುತ್ತವೆ. ಅದರಲ್ಲಿನ ಒಂದು ಪದ್ಯ ನವರಾತ್ರಿಗೆ ಸಂಬಂಧಿಸಿದ್ದು ಈ ಕೆಳಕಂಡಂತಿದೆ.

**ಆ ಕಾಲದೊಳಗೆ ಮಹರ್ನೌಮಿ ಹಬ್ಬವು
ಲೋಕವಾಳುವರ್ತಿ ನೋಡ
ಬೇಕೆಂಬ ತೆರದಿ ಲಕ್ಷ್ಮೀಕರದೊಳು ಶುಭ ಸಾಕಾರಗೂಡಿ ಸಂಭ್ರಮದಿ
ನವಯೌವನದೊಳು ನವರಾತ್ರಿ ಹಬ್ಬವು ನವಕುಶಲರ ನೋಡುವರೆ
ನವಚಿತ್ರದರ್ತಿ ಭೂಪಾಲ ಭುಜಕೀರ್ತಿ
ನವರಸ ತೋರಿ ಪೇಳುವೆನು**

ದೊರೆ ಚಿಕ್ಕದೇವರಾಜ ಒಡೆಯರ್ ಕಾಲದಲ್ಲಿದ್ದ ಕವಿ ತಿರುಮಲಾರ್ಯ 'ಚಿಕ್ಕದೇವರಾಜ ವಿಜಯ' ಎಂಬ ಕೃತಿ ರಚಿಸಿದ್ದಾನೆ. ಇದರಲ್ಲಿ ಆಗಿನ ಆಡಳಿತದ ವಿವರ ಲಭಿಸುತ್ತದೆ.

ಕನ್ನಡ ಸಾಹಿತ್ಯ ಲೋಕದಲ್ಲಿ ಬಿ.ಎಂ. ಶ್ರೀಕಂಠಯ್ಯನವರದು ಅಗ್ರಗಣ್ಯ ಹೆಸರು. ಅವರ 'ಇಂಗ್ಲಿಷ್ ಗೀತೆಗಳು' ಕಾವ್ಯ ಸಂಕಲನ ಹೊಸ ಸಾಹಿತ್ಯ ಪ್ರಾಕಾರವನ್ನೇ ಸೃಷ್ಟಿ ಮಾಡಿತು. ಅವರ 'ಇಂಗ್ಲಿಷ್ ಗೀತೆಗಳು' ಕವನ ಸಂಕಲನದಲ್ಲಿ ಮೈಸೂರಿನ ಬಗ್ಗೆ ನಾಲ್ವಡಿ ಕೃಷ್ಣರಾಜ ಒಡೆಯರ್ ಬಗ್ಗೆ, 'ಮೈಸೂರು ಮಕ್ಕಳು' ಎಂಬ ಶೀರ್ಷಿಕೆಯಲ್ಲಿ ಉತ್ತಮ ಭಾವನೆಗಳನ್ನು ವ್ಯಕ್ತಪಡಿಸಿದ್ದಾರೆ.

ನಿಮ್ಮ ನಾಡಾವುದು?
ಮೈಸೂರು,
ನಿಮ್ಮೂರಾವುದು?
ಮೈಸೂರು,
ಕನ್ನಡದ ಕಣ್ಣದು,
ಮೈಸೂರು,
ನಾಲುಮಡಿ ಕೃಷ್ಣನ
ಮೈಸೂರು.



ಕವಿ ಕೆ.ಎಸ್.ನರಸಿಂಹಸ್ವಾಮಿಯವರು ದಸರೆ ಕುರಿತಾಗಿ ಹೀಗೆ ಹೇಳುತ್ತಾರೆ. ಇದು ಸಂಭಾಷಣೆ ರೂಪದಲ್ಲಿರುವುದು ವಿಶೇಷ. ಇದು ಮೊಮ್ಮಗಳೊಡನೆ ನಡೆಸುವ ಸಂವಾದ:

'ಹಸಿರು ದೀಪದ, ಒಂಟೆ ಕಾಣಿಸಿತು ಮೊದಲು/ ಬೀದಿಯುದ್ದಕು ದೀಪಮಾಲೆಗಳು ಹೊಳೆದು/ ನೌಪತ್ತು ಕೇಳಿಸಿತು. ನಡುಗಿತು ನಗಾರಿ/ ಕಿಕ್ಕಿರಿದ ಇಕ್ಕೆಲದ ಚಪ್ಪಾಳೆಗಳಲಿ/ ಬಳಿಕ ಆನೆಯ ಬಂಡಿ, ಕುದುರೆ, ಕಾಲಾಳು/ ಹಾಡುತ್ತ ಮುನ್ನಡೆದ ಗಾಯಕರ ಸಾಲು/ ಬಂತು ಓಲಗದೊಡನೆ ಬಳುಕುತ್ತ ಮೇನ/ ತಂಗಾಳಿಯಲಿ ತೇಲಿಬಂತು ತಿಲ್ಲಾನ'

'ಮುಂದೇನು ಬಂತೆಂದು ಕೇಳಿದಳು ಚೆಲುವೆ/ ಒಂದೆರಡು ಮಳೆಯ ಹನಿ ಬಿತ್ತೆಂದು ನುಡಿದೆ/ ಸೊಂಡಿಲಾಡಿಸಿ ಬಂತು ಸಿಂಗರಿಸಿದಾನೆ/ ಮಹಡಿಯಂಚಿಗೆ ಸರಿದು ನೋಡಿದೆನು ವಾಸಿ / ಚಿನ್ನದಂಬಾರಿಯಲಿ ದೊರೆ ಬಂದ, ಬಂದ/ ಉಕ್ಕಿದುದು ಎಲ್ಲರೆದೆಯೊಳಗೆ ಆನಂದ'

ಉಳಿದಂತೆ ಹಲವು ಕವಿಗಳು ದಸರೆಯ ಬಗ್ಗೆ ಈ ಕೆಳಕಂಡಂತೆ ವರ್ಣಿಸಿದ್ದಾರೆ.

ದೇವಲೋಕ ಭರತಖಂಡ ಎರಡೂ ನನ್ನದಾದಲ್ಲಿ/ ದೇವಲೋಕವ ಬಿಟ್ಟು ಕೊಡುವೆ ದೇವತೆಗಳಿಗೆ/ ನಾ ಬಾಳುವೆ ಭರತ ಖಂಡದಲ್ಲಿ/ ಅಮರಾವತಿ ಮೈಸೂರು ಎರಡೂ ನನ್ನದಾದಲ್ಲಿ/ ಅಮರಾವತಿಯ ದಾನವನೀಯುವೆ ದೇವೇಂದ್ರನಿಗೆ/ ಬಾಳುವೆ ಮುದ್ದು ಮೈಸೂರಿನಲ್ಲಿ / ಎನ್ನಿಸುವಷ್ಟು ಆಗಗೊಳಿಸಯ್ಯ ಮಾವಿನ ಕೆರೆ ರಂಗಯ್ಯ - ಎಂದು ಬರೆಯುತ್ತಾರೆ ಎಸ್.ವಿ. ರಂಗಣ್ಣ.

ನವರಾತ್ರಿಯ ನವಧಾತ್ರಿಯ/ ಈ ಶಾಮಲ ವನಧಿಯಲಿ/ ಹಸಿರಾದುದು ಕವಿಯಾತ್ಮಂ ರಸಪಾನ ಸ್ನಾನದಲಿ - ಎನ್ನುವುದು ಕುವೆಂಪು ನುಡಿ.

ಪ್ರಜಾತಂತ್ರದಲ್ಲೀಗ ಜನತೆಯ ದಸರೆ. ಹೊಸ ತಾರ/ ತಮ್ಮ ಸೌಧಕ್ಕಿನ್ನೂ ಅಸ್ತಿಭಾರವೇ ಬಿದ್ದಿಲ್ಲ ಸಿಕ್ಕಾಪಟ್ಟೆ/ ಸಿಕ್ಕುಸಿಕ್ಕುಗಳಲ್ಲಿ ಸಿಕ್ಕಿಕೊಂಡಿರುವ ಪುರುಷಾರ್ಥ ಸಂಕಟದಲ್ಲಿ/ ಪಶುಬಲದ ನುಗ್ಗಾಟ; ಮನುಷ್ಯ ಮುಖವಾಡ/ ತೊಟ್ಟ ಮಹಿಷಾಸುರರು ಹೆಜ್ಜೆಹೆಜ್ಜೆಗೆ, ಹೆಣ್ಣುಗಳ ಕಂಡು/ ಬಾಯ್ಬಾಯ್ಬಿಡುವ ಬರೀ ದಂಡಪಿಂಡದ ದಂಡು/ ಜೊಲ್ಲು ಸುರಿಸುವ ಶುನಕ/ ಹುಡುಕುತ್ತಲೇ ಇದೆ ಬೀದಿಯುದ್ದಕ್ಕೂ ತಿಂಡಿಯ ತುಣುಕ/ ನಡೆದಾಡುತ್ತಲಿವೆ ಹುಚ್ಚೆದ್ದ ಗಲ್ಲಿಗಲ್ಲಿ ಮಣಕ; ಎಂಜಲೆಲೆಗಾಗಿ ಹೋರಾಡುತ್ತಲಿವೆ ಅಗೋ ಹೋರಿ, ತಿರುಕ -ಎಂದು ಹಾಡಿದ್ದಾರೆ ಗೋಪಾಲಕೃಷ್ಣ ಅಡಿಗ.

ಕನ್ನಂಬಾಡಿಯ ಬೃಂದಾ / ವನವೇ ನೋಟಕೆ ಚೆಂದಾ / ಮಿಂಚಿನ ದೀಪಗಳಿಂದಾ ಜಂಬೂಸವಾರಿಯೊಂದೇ ಸಾಕೈ/ ಸುರಪನು ನೀನೇ ಎನಲು / ಜಯಹೇ ಜಯಹೇ ಜಯಹೇ / ಜಯಜಯ ಜಯಹೇ ಜಯ ಹೇ / ಜಯಜಯ ಜಯಹೇ - ನಾಲ್ವಡಿ ಕೃಷ್ಣ ನೃಪಾಲ

ನಾಗೀಶ್ವರಿ ಶಾಸ್ತ್ರಿ ಅವರ ಸಂಗ್ರಹದಲ್ಲಿ ಈ ಪದ್ಯವನ್ನು ಕಾಣಬಹುದು.

ಅಂಬಾರಿಯೆಡೆಯಿಂದ ಕುಡಿನೋಟ ಚಿಮ್ಮಿಸುತ/ ರಾಯ ತಲೆದೂಗಿಹನು ಕಂಗಳಲೆ ನುಡಿಯಿಸುತ - ಎಂದು ಪದ್ಯ ಕಟ್ಟಿದ್ದಾರೆ ಸಿಪಿಕೆ. ಮಹಿಶೂರ ರಾಜರವರ ಮೆರವಣಿಗೆಯ ವೈಖರಿ/ ನೋಡೆ ಲಕ್ಷಗಟ್ಲೆ ಜನರು ಸಾಲುಗಟ್ಟಿ ನಿಲುವರು ಎಂದು ಎಂಬಾರ್ ಶ್ರೀನಿವಾಸಾಚಾರ್ಯ ಹೇಳಿದರೆ, ರಾಜ ಸತ್ತರೂ/ ರಾಜ ಸಿಂಹಾಸನ ಮೆರೆಸುತ್ತಿದ್ದೇವೆ/ ಅಣಕಕ್ಕೆ ಅಣಕವ ಜೋಡಿಸಿ ಅಣಕವಾಗುತ್ತಿದ್ದೇವೆ ಎಂದಿದ್ದಾರೆ ಮಳಲಿ ವಸಂತಕುಮಾರ್.

ಹೀಗೆ ದಸರಾ ಉತ್ಸವ ಜನರ ಮನದಲ್ಲಿ ವೈಭವದಿಂದ ಕಂಗೊಳಿಸಿದರೆ, ಹಿಂದಿನ ಕಾಲದ ಕವಿಗಳು ಹಾಗೂ ಈಗಿನ ಕಾಲದ ಹಲವಾರು ಕವಿಗಳು ದಸರಾವನ್ನು ತಮ್ಮದೇ ದೃಷ್ಟಿಕೋನದಲ್ಲಿ ನೋಡಿ ಕವನ ರಚಿಸಿದ್ದಾರೆ. ಇಂದಿಗೂ ದಸರಾ ಸಮಯದಲ್ಲಿ ಮೈಸೂರಿನಲ್ಲಿ ಕವಿಗೋಷ್ಠಿ ನಡೆಯುತ್ತದೆ. ದಸರಾ ಕುರಿತಾದ ಹಲವು ಕವನಗಳು ಪ್ರವಾಹದೋಪಾದಿಯಲ್ಲಿ ಹರಿದುಬರುತ್ತವೆ.



ಅರಮನೆ ಆವರಣದಲ್ಲಿ ಗಜಮಜ್ಜನ ಚಿತ್ರ: ಬಿ.ಆರ್.ಸವಿತಾ

ಮಜ ಮಜ ಮಜಕೂರ

• ಎಂ.ಎಸ್.ಪೂಜಾರ

• ಕಲೆ-ಪರಿಕಲ್ಪನೆ: ಸುರೇಶ್ ಆರ್. ಅರ್ಕಸಾಲಿ

ಭಾರತೀಯ ಅಂಚೆ



ಭಾರತದಲ್ಲಿ ಅಂಚೆ ವ್ಯವಸ್ಥೆಯ ಆರಂಭದ ದಿನಗಳು ಹೀಗಿದ್ದವು. ಅಂಚೆ ಪತ್ರಗಳನ್ನು ಹೊತ್ತ ಅಂಚೆಯಣ್ಣ ಊರಿನಿಂದ ಊರಿಗೆ ನಡೆದು ಹೋಗಿ ಪತ್ರಗಳನ್ನು ವಿತರಿಸುತ್ತಿದ್ದ



ಲಕೋಟೆ ಅಥವಾ ಕಾರ್ಡ್‌ನಲ್ಲಿ ಬರೆದ ಪತ್ರಗಳನ್ನು ಅಲ್ಲಲ್ಲಿ ಇರಿಸಲಾದ ಅಂಚೆ ಪೆಟ್ಟಿಗೆಗೆ ಹಾಕುವ ವ್ಯವಸ್ಥೆಯನ್ನು ಜಾರಿಗೆ ತರಲಾಯಿತು. ಅಲ್ಲಲ್ಲಿ ಪೆಟ್ಟಿಗೆಗಳನ್ನು ಇಡಲಾಯಿತು



ಅಂಚೆ ಪೆಟ್ಟಿಗೆಗೆ ಹಾಕಲಾದ ಪತ್ರಗಳನ್ನು ಅಂಚೆಯಣ್ಣ ಪ್ರತಿದಿನ ನಿಗದಿತ ವೇಳೆಯಲ್ಲಿ ಬಂದು ಸಂಗ್ರಹಿಸಿ, ಬಟವಾಡೆಗಾಗಿ ಒಯ್ಯುವುದು ಈ ವ್ಯವಸ್ಥೆಯ ಭಾಗವಾಯಿತು



ಅಂಚೆ ಪೆಟ್ಟಿಗೆಯಿಂದ ಸಂಗ್ರಹಗೊಂಡ ಪತ್ರಗಳನ್ನು ಅಂಚೆ ಕಚೇರಿಯಲ್ಲಿ ಆಯಾ ಊರಿನ ವಿಳಾಸದ ಅನ್ವಯ ವಿಂಗಡಿಸಿ ಬಟವಾಡೆ ಮಾಡುವ ಪರಿಪಾಟ ಆರಂಭಿಸಲಾಯಿತು



ಪತ್ರ ರವಾನೆಗೆ ಶುಲ್ಕದ ಸಲುವಾಗಿ ಪತ್ರಗಳ ಮೇಲೆ ಅಂಚೆ ಚೀಟಿ ಅಂಟಿಸಲಾಗುತ್ತದೆ. ಅಂಚೆ ಚೀಟಿಯ ಚಿತ್ರಗಳು ದೇಶದ ಅಸ್ಮಿತೆ, ಸಾಂಸ್ಕೃತಿಕ ದಾಖಲೆಗಳೂ ಆಗಿವೆ



ಪ್ರಸ್ತುತ ಭಾರತೀಯ ಅಂಚೆ ಇಲಾಖೆ ಉಳಿತಾಯ ಖಾತೆ, ಹಣಕಾಸು ಸೇವೆಯ ಕ್ಷೇತ್ರಗಳಿಗೂ ಇಳಿದು ತನ್ನ ಮಜಲುಗಳನ್ನು ವಿಸ್ತರಿಸಿದೆ

ಗಣಿತದಲ್ಲಿ ಗರ್ದಿ ಗಮ್ಮತ್ತು

ವರ್ಗ ಸಂಖ್ಯಾ ವಿನೋದ

66 x 66

ಒಂದೇ ಅಂಕಿಯುಳ್ಳ ಸಂಖ್ಯೆಗಳಾದರೆ ಅವುಗಳ ವರ್ಗ ಸಂಖ್ಯೆ ಕಂಡು ಹಿಡಿಯುವ ಗೋಖಲೆ ವಿಧಾನ

ಉದಾಹರಣೆಗೆ: 66, 88, 44, 666, 555, 777... ಇಂಥ ಸಂಖ್ಯೆಗಳ ವರ್ಗ ಸಂಖ್ಯೆಯನ್ನು ಹೀಗೂ ಕಂಡು ಹಿಡಿಯಬಹುದು.

ಉದಾ: 66^2

ವಿವರಣೆ: **66 x 66**

ಇಲ್ಲಿ ನೀವು ಕೊಟ್ಟ ಮೂಲ ಅಂಕಿಯ ವರ್ಗ ಸಂಖ್ಯೆಯನ್ನು ಅಂದರೆ **6 x 6 = 36**ನ್ನು ಎರಡು ಬಾರಿ ಬರೆದುಕೊಳ್ಳಿ. (ಮೂರು ಅಂಕಿಗಳಿದ್ದರೆ ಮೂರು ಬಾರಿ. ಹೀಗೆ ಎಷ್ಟು ಅಂಕಿಗಳಿವೆಯೋ ಅಷ್ಟು ಬಾರಿ ಬರೆದುಕೊಳ್ಳಿ)

ಹಂತ 1

36 36 - ಇದರ ತಲೆಯ ಮೇಲೆ ಮತ್ತೊಂದು 36ನ್ನು ಚಿತ್ರದಲ್ಲಿ ತೋರಿಸಿದಂತೆ ಬರೆದುಕೊಂಡು ಮೂರು ಸಂಖ್ಯೆಗಳನ್ನು ಕೂಡಿಸಿದಾಗ ಉತ್ತರ ಸಿದ್ಧ.

ಮಾದರಿ 1

```
   36
+ 3636
   36
 ----
 4356 ಉತ್ತರ
```

ಮಾದರಿ -2

666^2

666 x 666

			3	6		
		3	6	3	6	
+	3	6	3	6	3	6
		3	6	3	6	
			3	6		
	4	4	3	5	5	6 ಉತ್ತರ

ಅದಲು ಬದಲು ಕಂಚಿ ಕದಲು...

ಇಲ್ಲಿರುವ ಪದಗಳ ಅಕ್ಷರಗಳನ್ನು ಬಳಸಿಕೊಂಡು ಅಷ್ಟೇ ಅಕ್ಷರಗಳ ಬೇರೊಂದು ಪದ ರಚಿಸಬಲ್ಲಿರಾ?

1. ಆಯಾನಕಾಶ = ____________
2. ತಕ್ಕಬಲೆ = ____________
3. ನಕುಲಮಾವ = ____________
4. ರವಿ ಚಾ ಬಿಟ್ಟ = ____________

ಪದ ಹಿಗ್ಗು

ಇಲ್ಲಿ ಕೊಟ್ಟಿರುವ ಮಧ್ಯದ ಅಕ್ಷರಕ್ಕೆ ಮೇಲಿನ ಪಟ್ಟಿಯ ಪದವನ್ನು ಹಿಗ್ಗಿಸಿ ಆಚೀಚೆ ತುಂಬಿದರೆ ಮೂರು ಅಕ್ಷರದ ಪದವಾಗುತ್ತದೆ ಹೊಂದಿಸಿ.

1. ಕರಿ 2. ಅಲೆ 3. ಕತೆ 4. ತಲಾ
5. ಕಸ 6. ಜೀನ 7. ಕುತ್ತು 8. ಸಾರ

1.		ವಿ	
2.		ಬ	
3.		ವಿ	
4.		ಬ	
5.		ಕ್ಕ	
6.		ತ್ತ	
7.		ಪ್ಪ	
8.		ವ	

ಟ್ವೆಂಟಿ – 20 ಮ್ಯಾಚ್

ಪದಗಳಿಗೆ ಅರ್ಥ ಹೊಂದಿಸಿ

1.	ಹೆರಳು	A.	ನದಿ
2.	ಬೆರಳು	B.	ಉಸುಕು
3.	ಕೊರಳು	C.	ಕಂಠ
4.	ಸರಳು	D.	ಜಡೆ
5.	ಮರಳು	E.	ಸಾರ
6.	ತಿರುಳು	F.	ಹೋಗು
7.	ಕೆರಳು	G.	ಭೂಮಿ
8.	ತೆರಳು	H.	ರಾತ್ರಿ
9.	ಹೊರಳು	I.	ಹೊಲಸು
10.	ಇರುಳು	J.	ಪೀಕು
11.	ಇಳೆ	K.	ಹೊಸದಲ್ಲದ
12.	ಬೆಳೆ	L.	ಸ್ವಚ್ಛ ಮಾಡು (ನೀರಿನಿಂದ)
13.	ಕೊಳೆ	M.	ಸಿಟ್ಟಿಗೇಳು
14.	ಹೊಳೆ	N.	ಎಲುಬು
15.	ತೊಳೆ	O.	ಒಂದು ಹಣ್ಣಿನ ಗಿಡ
16.	ಬೇಳೆ	P.	ದ್ವಿದಳ ಧಾನ್ಯದ ಹೋಳು
17.	ವೇಳೆ	Q.	ಸಮಯ
18.	ಬಾಳೆ	R.	ತಿರುಗು
19.	ಹಳೆ	S.	ಕೈ ಮುಂದಿರುವ ಅಂಗ
20.	ಮೂಳೆ	T.	ಕಬ್ಬಿಣದ ಸಲಾಕೆ

ಶಬ್ದಗಳೊಡನೆ ಸರಸ

ಇಲ್ಲಿ ಕೊಟ್ಟಿರುವ ಅನುಸ್ವಾರದ ಆಚೆ ಈಚೆ ಒಂದೇ ಅಕ್ಷರ ಸೇರಿಸಿ ತಿರುಚುಳಿ ಮುರುಚುಳಿ ಪದ ರಚಿಸಿ?

ಉದಾ: ದ್ವಂದ್ವ = ಎರಡು ರೀತಿಯ

1. __ಂ__ ಎರಡು ರೀತಿಯ
2. __ಂ__ ಆದಿಕವಿ
3. __ಂ__ ವ್ಯಸನ
4. __ಂ__ ಆಡಂಬರ, ಪೋಲು
5. __ಂ__ ಪಕ್ಷಿಯ ಕೊಕ್ಕು
6. __ಂ__ ರಣಹದ್ದು
7. __ಂ__ ಒಬ್ಬ ಸಾಹಿತಿಯ ಕಾವ್ಯನಾಮ



ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಕಳೆದ ಸಂಚಿಕೆಯ ಸರಿ ಉತ್ತರಗಳು

ಪದ ಹಿಗ್ಗು

1. ಸವತಿ 2. ಸಜಾತಿ 3. ಅಥಣಿ 4. ನಗರ 5. ಕಟ್ಟಡ 6. ಬಳ್ಳಾರಿ 7. ಅಯ್ಯಪ್ಪ 8. ಕೊಪ್ಪಳ

ಶಬ್ದಗಳೊಡನೆ ಸರಸ

1. ಮಾಗಡಿ 2. ಅಂಗಡಿ 3. ಗೊಂಗಡಿ 4. ನೆಗಡಿ 5. ಬುಗಡಿ 6. ಸೀಗಡಿ

ಅದಲು ಬದಲು ಕಂಚಿ ಕದಲು

1. ಮನನ ಮಾಡು 2. ಸಮಯ ಪಾಲನೆ 3. ಅಕ್ಕನ ಮಗಳು 4. ಹಳೆ ಕನ್ನಡಕ

ಟ್ವೆಂಟಿ -20 ಮ್ಯಾಚ್

1-I	2-B	3-J	4-G	5-K
6-F	7-L	8-E	9-M	10-D
11-N	12-C	13- O	14-H	15-P
16-R	17-Q	18-A	19-T	20-S

ತಿದ್ದುಪಡಿ

(ಟ್ವೆಂಟಿ-20 ಮ್ಯಾಚ್‌ನಲ್ಲಿ J ಮುಂದಿನ ಮಾಹಿತಿ ರೇಡಿಯಂ ಕಂಡು ಹಿಡಿದವರು ಎಂದಾಗಬೇಕಿತ್ತು)

ಅದಲು ಬದಲು ಕಂಚಿ ಕದಲು... 3ನೇ ಪ್ರಶ್ನೆಯಲ್ಲಿ ಅಳುಮಗನಕ್ಕು ಬದಲು ಅಳುಮಗನಕ್ಕ ಎಂದು ಓದಿಕೊಳ್ಳಬೇಕು

ಸರಿ ಉತ್ತರ ನೀಡಿದ ಆಯ್ದ ಮೂವರು ಪುಟಾಣಿಗಳು



ಅನಿಲ್ ಹಾದಿಮನಿ
ರಡ್ಡೇರನಾಗನೂರು (ನರಗುಂದ)



ಸಾತ್ವಿಕ್ ಇ.ವಿ.,
ದಾವಣಗೆರೆ



ಸಿಂಚನಾ ತಳವಾರ
ಬೆಂಗಳೂರು

ಸರಿ ಉತ್ತರ ಮುಂದಿನ ವಾರ

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಮೂವರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಟ್ವೆಂಟಿ-20 ಮ್ಯಾಚ್ ಮತ್ತು ಪುಟಾಣಿ ಪದಬಂಧದ ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು.

ಉತ್ತರ ಕಳುಹಿಸಲು ಇ- ಮೇಲ್ ವಿಳಾಸ:

majakoora@prajavani.co.in

‘ಸೊಗಸುಗಾ ಮೃದಂಗ ತಾಳಮು...’

ಉಮಾ ಅನಂತ್



> ಲಯವಾದ್ಯ ಮೃದಂಗದ ಘನ ವಿದ್ವಾಂಸ ಎ.ವಿ. ಆನಂದ್ ಅವರು ನಾಲ್ಕು ತಲೆಮಾರಿನ ಸಂಗೀತ ದಿಗ್ಗಜರಿಗೆ ಮೃದಂಗ ಪಕ್ಕವಾದ್ಯ ಸಹಕಾರ ನೀಡಿದ ಅಗ್ಗಳಿಕೆ ಉಳ್ಳವರು. ಮೈಸೂರು ದಸರಾದಲ್ಲಿ ಈ ಬಾರಿ ‘ರಾಜ್ಯ ಸಂಗೀತ ವಿದ್ವಾನ್’ ಪುರಸ್ಕಾರಕ್ಕೆ ಭಾಜನರಾದ ಆನಂದ್ ತಮ್ಮ ನಾದ ತಪಸ್ಸಿನ ಹರವನ್ನು ‘ಭಾನುವಾರದ ಪುರವಣಿ’ಯೊಂದಿಗೆ ಹಂಚಿಕೊಂಡಿದ್ದಾರೆ.

ಸಂಗೀತ

‘ಸೊಗಸುಗಾ ಮೃದಂಗ ತಾಳಮು...’ ಎಂದು ಸಂತ ತ್ಯಾಗರಾಜರು ಅವನದ್ಧ ವಾದ್ಯ ಮೃದಂಗ ನಾದ ಕುರಿತಾಗಿ ಸೊಗಸಾದ ಕೃತಿಯೊಂದನ್ನು ರಚಿಸಿದ್ದಾರೆ. ಇಪ್ಪತ್ತೆರಡನೆ ಮೇಳಕರ್ತ ರಾಗ ‘ಖರಹರಪ್ರಿಯ’ದಲ್ಲಿ ಜನ್ಯವಾಗಿರುವ ‘ಶ್ರೀರಂಜಿನಿ’ ರಾಗದಲ್ಲಿ ರಚಿಸಿದ ಈ ಕೃತಿ ‘ಮೃದಂಗ ಲಯ ಇದ್ದರೇ ಸಂಗೀತ ಸೊಗಸು’ ಎಂಬುದನ್ನು ಧ್ವನಿಸುತ್ತದೆ. ಈ ಮಾತನ್ನೇ ಮುಂದುವರಿಸಿ ‘ಮೃದಂಗ ಸಹಕಾರಕ್ಕೆ ವಿದ್ವಾನ್ ಎ.ವಿ. ಆನಂದ್ ಅವರು ಇದ್ದರೇ ಸಂಗೀತ ಕಛೇರಿ ಸೊಗಸು’ ಎಂಬಷ್ಟು ಲಯವಾದ್ಯಕ್ಕೆ ಅನ್ವರ್ಥನಾಮವಾಗಿದ್ದಾರೆ ಈ ಹಿರಿಯ ಮೃದಂಗ ವಾದಕ. ಹೀಗಾಗಿಯೇ, ಸಂಗೀತ ದಿಗ್ಗಜರಾಗಿದ್ದ ಪಿಟೀಲು ಚೌಡಯ್ಯ, ಚೆಂಬೈ ವೈದ್ಯನಾಥ ಭಾಗವತರ್, ಕೊಳಲು ಮಾಂತ್ರಿಕ ಟಿ.ಆರ್. ಮಹಾಲಿಂಗಂ, ವೈಣಿಕ ಎಚ್.ಎಸ್. ದೊರೆಸ್ವಾಮಿ ಅಯ್ಯಂಗಾರ್, ಚಿಟ್ಟಿಬಾಬು, ಡಿ.ಕೆ. ಪಟ್ಟಮ್ಮಾಳ್, ಎಂ.ಎಲ್ ವಸಂತಕುಮಾರಿ, ಬಾಲಮುರಳಿಕೃಷ್ಣ ಮುಂತಾದವರು ತಮ್ಮ ಕಛೇರಿಗಳಿಗೆ ಆನಂದ್ ಅವರ ಮೃದಂಗ ಸಹಕಾರವನ್ನೇ ಬಯಸುತ್ತಿದ್ದರು.

ಸುಮಾರು ನಾಲ್ಕು ತಲೆಮಾರುಗಳ ವಿದ್ವಾಂಸರ ಗಾಯನ ವಾದನಗಳಿಗೆ ಮೃದಂಗ ಸಹಕಾರ ನೀಡಿ ಬೆರಗುಗೊಳಿಸಿದ ಅಗ್ಗಳಿಕೆ ಇರುವ ಈ ಹಿರಿಯ ಕಲಾವಿದರ ತನಿಯಾವರ್ತನಕ್ಕೆ ಕಿವಿಯಾನಿಸಿ ಕೇಳುವವರ ಸಂಖ್ಯೆ ಅಸಂಖ್ಯವಾಗಿತ್ತು. ಲಯವಾದ್ಯದಲ್ಲಿ ಅಸಾಧಾರಣ ಕೈಚಳಕ, ತಾಳದಲ್ಲಿ ಹಿಡಿತ, ತನಿಯಲ್ಲಿ ಕೌಶಲ, ನುಡಿಸಾಣಿಕೆಯಲ್ಲಿ ಬೆರಗು, ಕೇಳ್ಮೆಗೆ ಸೊಬಗು, ‘ಮನೋಧರ್ಮ’ದಲ್ಲಿ ಸರಿಸಾಟಿ ಇಲ್ಲದ ಅದ್ಭುತ ಕಲಾವಿದರಾಗಿ ಬೆಳೆದವರು ಸದ್ಯ ಎಂಬತ್ತಾರರ ಹರೆಯದ ವಿದ್ವಾನ್ ಆನಂದ್.

1950ರ ದಶಕದಲ್ಲಿ ನಡೆಯುತ್ತಿದ್ದ ಬಹುತೇಕ ಎಲ್ಲ ದಿಗ್ಗಜರ ಕಛೇರಿಗಳಿಗೆ ಆನಂದ್ ಅವರೇ ಮೃದಂಗದ ಕೇಂದ್ರಬಿಂದು. ಪಿಟೀಲು ಚೌಡಯ್ಯನವರಿಗೆ ತಮ್ಮ ಹನ್ನೊಂದನೇ ವಯಸ್ಸಿನಲ್ಲೇ ಮೃದಂಗ ಸಾಥಿ ನೀಡಿದ ಆನಂದ್ ಅವರನ್ನು ಆ ಕಛೇರಿಯನ್ನೊಮ್ಮೆ ಮೆಲುಕು ಹಾಕಿಕೊಳ್ಳಿ ಎಂದಾಗ ಹೇಳಿದ್ದಿಷ್ಟು.

‘ಅದು ಅನಂತ ಚತುರ್ದಶಿಯ ದಿನ. ನಮ್ಮ ಮನೆಯಲ್ಲಿ ಪೂಜಾ ಕಾರ್ಯಕ್ರಮ ನಡೆಯುತ್ತಿತ್ತು. ಅಂದು ಆಕಸ್ಮಿಕವಾಗಿ ಪಿಟೀಲು ಚೌಡಯ್ಯನವರು ನಮ್ಮ ಮನೆಗೆ ಬಂದರು. ಪೂಜೆಯ ನಂತರ ಸಂಗೀತ ಸೇವೆ ಇತ್ತು. ಚೌಡಯ್ಯನವರು ಪಿಟೀಲು ಕೈಗೆತ್ತಿಕೊಂಡರು. ಅವರಿಗೆ ಮೃದಂಗ ನುಡಿಸಲು ಸದಾ ಮೃದಂಗ ವಾದಕ ಎಂ.ಎಲ್. ವೀರಭದ್ರಯ್ಯ ಅವರೇ ಬೇಕು. ಆದರೆ ಈ ಕಛೇರಿಯಲ್ಲಿ ಅವರಿಲ್ಲದ ಕಾರಣ ಆನಂದನೇ ನುಡಿಸಲಿ ಎಂಬ ಅಭಿಪ್ರಾಯ ಬಂತು. ಹಾಗೆ ನಾನೇ ಸುಮಾರು ಒಂದೂವರೆ ಗಂಟೆ ಪಿಟೀಲು ಕಛೇರಿಗೆ ಪಕ್ಕವಾದ್ಯ ನುಡಿಸಿ ಚೌಡಯ್ಯನವರಿಂದ ಬೆನ್ನು ತಟ್ಟಿಸಿಕೊಂಡೆ. ಈ ಸೌಭಾಗ್ಯ ನನ್ನದಾದ ನಂತರ ದಿಗ್ಗಜರಿಗೆಲ್ಲ ಮೃದಂಗ ನುಡಿಸುವ ಅವಕಾಶ ತಾನಾಗಿ ಒದಗಿ ಬಂತು.’

ಶಾಸ್ತ್ರೀಯ ಸಂಗೀತದಲ್ಲಿ ಘಟಾನುಘಟಿಗಳಾದ ಚೆಂಬೈ, ಟಿ.ಆರ್. ಮಹಾಲಿಂಗಂ, ಡಿ.ಕೆ. ಪಟ್ಟಮ್ಮಾಳ್, ಎಂಎಲ್‌ವಿ ಅವರಂಥವರು ಆನಂದ್ ಅವರ ನುಡಿಸಾಣಿಕೆಯನ್ನು ಕೊಂಡಾಡುವವರೇ ಆಗಿದ್ದರು. ಇವರ ಪಕ್ಕವಾದ್ಯವೇ ಬೇಕು ಎಂಬ ಬೇಡಿಕೆಯನ್ನೂ ಇಡುತ್ತಿದ್ದರು. ಇದು ಆನಂದ್ ಅವರ ನುಡಿಸಾಣಿಕೆಯ ಹೆಚ್ಚುಗಾರಿಕೆಯೂ ಆಯಿತು.

ಮುಂದೆ 1980ರ ದಶಕದಲ್ಲಿ ಆನಂದ್, ವೀಣೆ ದೊರೆಸ್ವಾಮಿ ಅಯ್ಯಂಗಾರ್ ಅವರೊಡಗೂಡಿ ಅಮೆರಿಕ, ಇಂಗ್ಲೆಂಡ್, ಸಿಂಗಪುರ, ಮಲೇಷ್ಯಾ ಮುಂತಾದ ದೇಶಗಳಿಗೆ ಹೋಗಿ ಸರಣಿ ಕಛೇರಿ ನೀಡಿದರು. ಜೊತೆಗೆ ಮೃದಂಗದ ಬಗ್ಗೆ ಪ್ರಾತ್ಯಕ್ಷಿಕೆ, ಉಪನ್ಯಾಸಗಳನ್ನೂ ನೀಡಿ ವಿದೇಶದಲ್ಲೂ ಲಯವಾದ್ಯದ ರುಚಿವರ್ಧನೆ ಮಾಡಿದರು.

ಸ್ವಾತಂತ್ರ್ಯಪೂರ್ವದಿಂದಲೂ ಮೃದಂಗನಾದಕ್ಕೆ ಆತುಕೊಂಡು ಇಂದಿನವರೆಗೂ ಲಯವಾದ್ಯದಲ್ಲಿ ತನ್ಮಯತೆ, ತಪಸ್ಸು ಮಾಡಿಕೊಂಡು ಬಂದಿರುವ ಆನಂದ್, ತಾವು ಕಲಿತ ಗುರು–ಶಿಷ್ಯ ಪರಂಪರೆಯ ಕ್ರಮ, ಇಂದಿನ ಸಂಗೀತ ಕಲಿಕಾ ಪದ್ಧತಿ ಎರಡನ್ನೂ ಸನಿಹದಿಂದ ಕಂಡವರು.

‘ಅಂದಿನ ಪಾಠ ಕ್ರಮದಲ್ಲಿ ಬಹಳ ಕಟ್ಟುನಿಟ್ಟು ಇತ್ತು. ಅಂದಿನ ಪಾಠವನ್ನು ಮರುದಿನ ಯಥಾವತ್ ಒಪ್ಪಿಸಲೇಬೇಕಿತ್ತು. ದಿನಕ್ಕೆ ಎಳೆಂಟು ಗಂಟೆ ನಿರಂತರ ಅಭ್ಯಾಸ ನಡೆಯುತ್ತಿತ್ತು. ಹೀಗಾಗಿ ವಾದ್ಯದಲ್ಲಿ, ನುಡಿಸಾಣಿಕೆಯಲ್ಲಿ ಪಕ್ವವಾಗಲು ಸಾಧ್ಯವಾಗುತ್ತಿತ್ತು. ಇಂದು ಮಕ್ಕಳಿಗೆ ಬೇರೆ ಬೇರೆ ಆಕರ್ಷಣೆ ಇದೆ, ಸಂಗೀತ ಜಗತ್ತು ಬದಲಾಗಿದೆ. ಮಕ್ಕಳಲ್ಲೂ ಸಂಗೀತ ತಪಸ್ಸು ಮಾಡುವ ಮನೋಭಾವ ಇಲ್ಲ, ಸಮಯವೂ ಇಲ್ಲ. ಪಾಠ ಹೇಳಿಕೊಡುವ ಹೆಚ್ಚಿನ ಗುರುಗಳಲ್ಲೂ ಬದ್ಧತೆ ಕಡಿಮೆಯಾಗಿದೆ’ ಎಂಬ ಕೊರಗು ಆನಂದ್ ಅವರದು.

ಶಾಸ್ತ್ರೀಯ ಸಂಗೀತದಲ್ಲಿ ಗಾಯನವೇ ಇರಲಿ, ವಾದನವೇ ಇರಲಿ ಒಬ್ಬೊಬ್ಬ ಕಲಾವಿದರದ್ದು ಒಂದೊಂದು ರೀತಿಯ ಮನೋಧರ್ಮ. ಇವರೆಲ್ಲರನ್ನೂ ಹೊಂದಾಣಿಕೆ ಮಾಡಿಕೊಂಡು ಮೃದಂಗ ನುಡಿಸೋದು ಹೇಗೆ?

ಆನಂದ್ ಹೀಗೆ ಹೇಳುತ್ತಾರೆ...

‘ನಮ್ಮ ಸಂಸ್ಕಾರ, ಸಾಧನೆ ಮೇಲೆ ಮನೋಧರ್ಮ ಅಡಗಿದೆ. ಸಂಗೀತದಲ್ಲಿ ‘ಸಂಗತಿ’ಗಳನ್ನು ಎಲ್ಲರೂ ಒಂದೇ ಥರ ಹಾಡುವುದಿಲ್ಲ. ಕೀರ್ತನೆಯಲ್ಲಿ ಸಾಹಿತ್ಯ ಒಂದೇ ಆದರೂ ಹಾಡುವ ಶೈಲಿ ಬೇರೆ ಬೇರೆ. ಇವರನ್ನು ಅನುಸರಿಸಿ ನುಡಿಸುವ ಜಾಣ್ಮೆ ಪಕ್ಕವಾದ್ಯಗಾರರಿಗೆ ಇದ್ದರೆ ಆತ ಗೆದ್ದಂತೆಯೇ. ಭಾವಕ್ಕೆ ಅನುಗುಣವಾಗಿ ಲಯವನ್ನು ಕಾಪಾಡಿಕೊಳ್ಳಬೇಕಾದದ್ದು ಕಲಾವಿದರ ಕರ್ತವ್ಯ ಹಾಗೂ ಧರ್ಮ. ತನಿಯಾವರ್ತನದಲ್ಲಿ ತನಿ ಬಿಟ್ಟಾಗ ರಂಜನೀಯವಾಗಿ ನುಡಿಸುವ ಕಲೆಗಾರಿಕೆಯೂ ಇರಬೇಕು. ಆಗ ಒಬ್ಬ ಪಕ್ಕವಾದ್ಯಗಾರ ಪರಿಪೂರ್ಣ ಎನಿಸುತ್ತಾನೆ’.

ಲಯವಾದ್ಯಕ್ಕಾಗಿ ಗಾನ ಕಲಾಭೂಷಣ, ಸಂಗೀತ ಕಲಾರತ್ನ, ಕರ್ನಾಟಕ ಕಲಾಶ್ರೀ, ಲಯಕಲಾ ನಿಪುಣ ಮೊದಲಾದ ಪ್ರತಿಷ್ಠಿತ ಪ್ರಶಸ್ತಿಗಳನ್ನು ಮುಡಿಗೇರಿಸಿದ ಆನಂದ್ ಇದೀಗ ‘ರಾಜ್ಯ ಸಂಗೀತ ವಿದ್ವಾನ್ ಪ್ರಶಸ್ತಿ’ಯ ಕಿರೀಟ ಏರಿಸಿಕೊಂಡಿದ್ದಾರೆ.

‘ಪ್ರಶಸ್ತಿ ಬಹಳ ಖುಷಿ ತಂದಿದೆ. ಎಷ್ಟೋ ಅರ್ಹರಿಗೆ ಇನ್ನೂ ಈ ಸೌಭಾಗ್ಯ ಒದಗಿಬಂದಿಲ್ಲ. ನಾನು 50ರ ದಶಕದಿಂದಲೂ ಖ್ಯಾತನಾಮರಿಗೆ ನುಡಿಸಿದರೂ ಈಗ ಪುರಸ್ಕರಿಸಲಾಗುತ್ತಿದೆ. ನಾನು ಯಾವತ್ತೂ ಪ್ರಶಸ್ತಿಯನ್ನು ಅರಸಿಕೊಂಡು ಹೋಗಿಲ್ಲ. ಈಗ ಅದೇ ನನ್ನನ್ನು ಹುಡುಕಿಕೊಂಡು ಬಂದಿರುವುದನ್ನು ಸಂತೋಷವಾಗಿ ಸ್ವೀಕರಿಸುತ್ತೇನೆ’ ಎನ್ನುತ್ತಾರೆ ಆನಂದ್.

ಕೋವಿಡ್ ಪತ್ತೆ ಮಾಡುವ ಶ್ವಾನ!



ವಾಸನೆ ಗ್ರಹಿಸುವುದರಲ್ಲಿ ಶ್ವಾನಗಳಿಗಿಂತ ಮಿಗಿಲಿಲ್ಲ ಎನ್ನುವ ಮಾತಿದೆ. ಆದ್ದರಿಂದಲೇ ಪೊಲೀಸ್ ಪಡೆಗಳ ಅವಿಭಾಜ್ಯ ಅಂಗವಾಗಿವೆ ಶ್ವಾನದಳಗಳು. ಶ್ವಾನದಳವಿಲ್ಲದೆ ಬಾಂಬ್ ಪತ್ತೆ ಮಾಡುವುದು ಕಷ್ಟ ಎನ್ನುವಷ್ಟು ಅವುಗಳ ನಾಸಿಕ ಚುರುಕಾಗಿದೆ. ಅಂತಹ ಚುರುಕು ನಾಸಿಕದ ಶ್ವಾನಗಳು ಈಗ ಕೋವಿಡ್ ಪೀಡಿತರನ್ನು ಪತ್ತೆ ಮಾಡಲು ಬಳಕೆ ಆಗುತ್ತಿವೆ ಎಂದರೆ ನಂಬುತ್ತೀರಾ? ನಂಬಲೇಬೇಕು.

ಕಾಂಬೋಡಿಯಾದಲ್ಲಿ ಅಂತಹ ಪ್ರಯತ್ನ ನಡೆದಿದೆ. ಇಲ್ಲಿ ಇನ್ನುಮುಂದೆ ಶ್ವಾನದಳದಿಂದ ಕೋವಿಡ್ ಪೀಡಿತರನ್ನು ಪತ್ತೆ ಮಾಡಲಾಗುವುದಂತೆ! ಅಂದರೆ ರೋಗಲಕ್ಷಣ ಇದ್ದವರು ಇನ್ನು ಶ್ವಾನದ ಮುಂದೆ ಹೋಗಿ ನಿಲ್ಲಬೇಕು. ಮುಂದಿನ ದಿನಗಳಲ್ಲಿ ಜನ ಸೇರುವ ದೊಡ್ಡ ಕಾರ್ಯಕ್ರಮಗಳು, ಸ್ಟೇಡಿಯಂಗಳಲ್ಲಿ ಶ್ವಾನದಳವನ್ನು ಕೋವಿಡ್ ಪತ್ತೆ ಪರೀಕ್ಷೆಗೆ ಬಳಸುವ ಸಾಧ್ಯತೆ ಇದೆ ಎಂದೂ ಹೇಳಲಾಗಿದೆ.